ಭಾನುವಾರ, ಜನವರಿ 25, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 25 | ಪುಟ 20

• www.prajavani.net prajavani.net prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ

ಸ್ಕ್ಯಾನ್ ಮಾಡಿ



ಭಾರತಕ್ಕೆ ಜಯ
ಆರ್.ಎಸ್.ಅಂಬರೀಶ್ ಅವರು ಯುವ ವಿಶ್ವಕಪ್ ಟೂರ್ನಿಯ ಪಂದ್ಯದಲ್ಲಿ ನ್ಯೂಜಿಲೆಂಡ್ ವಿರುದ್ಧ 4 ವಿಕೆಟ್ ಪಡೆದರು. ಭಾರತ ಡಿಎಲ್‌ಎಸ್ ಆಧಾರದಲ್ಲಿ 7 ವಿಕೆಟ್‌ಗಳಿಂದ ಜಯ ಸಾಧಿಸಿತು

ಹಟ್ಟಿ: ಚಿನ್ನ ಉತ್ಪಾದನೆ ಕುಸಿತ 6

ರೆಡ್ಡಿ ಮನೆಗೆ ಬೆಂಕಿ; ರೀಲ್ಸ್‌ಗಾಗಿ ಕೃತ್ಯ 3A

ಪ್ರತಿಜೀವಕಗಳೇ ಜೀವಕ್ಕೆ ಕುತ್ತು

ಸೂಪರ್ ಬಗ್‌ಗಳ ಸ್ಫೋಟದ ಕೇಂದ್ರಬಿಂದುವಾಗಲಿರುವ ಭಾರತ • ಕರ್ನಾಟಕದಿಂದ ಮಾದರಿ ಕಾರ್ಯತಂತ್ರ

• ಭೀಮಸೇನ ಚಳಗೇರಿ

ಒಳನೋಟ

ಬೆಂಗಳೂರು: 30 ವರ್ಷದ ರೋಹನ್‌ಗೆ (ಹೆಸರು ಬದಲಾಯಿಸಲಾಗಿದೆ) ಉಸಿರಾಟದ ಸೋಂಕು ಕಾಣಿಸಿಕೊಂಡಿತು. ವೈದ್ಯರನ್ನು ಭೇಟಿ ಮಾಡಿದಾಗ, ಅವರು ಸಿಪ್ರೊಫ್ಲಾಕ್ಸಾಸಿನ್ ಎಂಬ ಆ್ಯಂಟಿಬಯೋಟಿಕ್ ನೀಡಿದರು. ವೈದ್ಯರ ಶಿಫಾರಸಿನಂತೆ 7 ದಿನಗಳ ಕಾಲ ಈ ಆ್ಯಂಟಿಬಯೋಟಿಕ್ ತೆಗೆದುಕೊಂಡರೂ ಸೋಂಕು ಕಡಿಮೆಯಾಗಲಿಲ್ಲ. ಆಗ ರೋಹನ್ ಮತ್ತೊಬ್ಬ ವೈದ್ಯರ ಬಳಿ ಹೋದಾಗ ಅವರು ಅಜಿತ್ರೊಮೈಸಿನ್ ಎಂಬ ಬೇರೆ ಆ್ಯಂಟಿಬಯೋಟಿಕ್ ಶಿಫಾರಸು ಮಾಡಿದರು. ಆಗಲೂ ಕೂಡ ರೋಹನ್ ಆರೋಗ್ಯದಲ್ಲಿ ಯಾವುದೇ ಸುಧಾರಣೆ ಕಂಡುಬರಲಿಲ್ಲ.

ಬಳಿಕ, ರೋಹನ್ ಅವರ ಕಫವನ್ನು ಪರೀಕ್ಷೆಗೆ ಒಳಪಡಿಸಲಾಯಿತು. ಉಸಿರಾಟದ ಸೋಂಕಿಗೆ ಕಾರಣವಾಗಿದ್ದ ಬ್ಯಾಕ್ಟೀರಿಯಾ ಈ ಎರಡೂ ಆ್ಯಂಟಿಬಯೋಟಿಕ್‌ಗಳಿಗೆ ಪ್ರತಿರೋಧ ಬೆಳೆಸಿಕೊಂಡಿರುವ ಅಂಶ ಪ್ರಯೋಗಾಲಯದ ವರದಿಯಿಂದ ಗೊತ್ತಾಯಿತು.

ರೋಹನ್ ಪ್ರಕರಣ ಅವಲೋಕಿಸಿದಾಗ, ಬ್ಯಾಕ್ಟೀರಿಯಾಗಳು ಆ್ಯಂಟಿಬಯೋಟಿಕ್‌ಗಳಿಗೆ ಪ್ರತಿರೋಧ ಬೆಳೆಸಿಕೊಂಡ ಕಾರಣ ಅವರ ಆರೋಗ್ಯ ಮತ್ತಷ್ಟು ಹದಗೆಟ್ಟಿತು. ಆಗ ಅವರಿಗೆ ಇನ್ನೂ ಪ್ರಬಲ ಆ್ಯಂಟಿಬಯೋಟಿಕ್‌ಗಳನ್ನು ನೀಡಬೇಕಾಯಿತು ಎಂಬುದು ಅರಿವಾಯಿತು. ಸಮಯಕ್ಕೆ ಸರಿಯಾಗಿ ಹೆಚ್ಚಿನ ಪರೀಕ್ಷೆಗಳು ಮತ್ತು ಶಕ್ತಿಯುತ ಆ್ಯಂಟಿಬಯೋಟಿಕ್‌ನಿಂದಾಗಿ ಜೀವ ಉಳಿಯಿತು.



ಇಂತಹ ಪ್ರಕರಣಗಳಲ್ಲಿ ಚಿಕಿತ್ಸೆಗೆ ತಗಲುವ ವೆಚ್ಚ ಹೆಚ್ಚಾಗುತ್ತದೆ. ಸಾಮಾನ್ಯ ಆ್ಯಂಟಿಬಯೋಟಿಕ್‌ಗಳಿಗೆ ಪ್ರತಿರೋಧ ಬೆಳೆಸಿಕೊಂಡಿರುವ ಬ್ಯಾಕ್ಟೀರಿಯಾಗಳಿಂದ ಬೇರೆಯವರಿಗೂ ಸೋಂಕು ಹರಡುವ ಸಾಧ್ಯತೆಯೂ ಹೆಚ್ಚಾಗಲಿದೆ.

ಈ ಪ್ರಕರಣ ಒಂದು ಉದಾಹರಣೆ ಮಾತ್ರ. ಒಬ್ಬ ವ್ಯಕ್ತಿಯನ್ನು ಬಾಧಿಸುವ ಈ ತೊಂದರೆ ಕ್ರಮೇಣ ಸಮುದಾಯ ಮಟ್ಟದ ಸಮಸ್ಯೆಯಾಗಿ ಪರಿವರ್ತನೆಗೊಳ್ಳುವುದು ಖಚಿತ ಎಂದು ತಜ್ಞರು ಎಚ್ಚರಿಸುತ್ತಾರೆ.

ನಮ್ಮ ಪರಿಸರದಲ್ಲಿ ಲಕ್ಷಾಂತರ ಬ್ಯಾಕ್ಟೀರಿಯಾಗಳಿವೆ. ಅವುಗಳಲ್ಲಿ ಕೆಲವು ಮಾರಕ ಹಾಗೂ ಇನ್ನೂ ಕೆಲವು ಒಳ್ಳೆಯ ಬ್ಯಾಕ್ಟೀರಿಯಾಗಳೂ ಇವೆ. ತಜ್ಞರ ಶಿಫಾರಸು ಇಲ್ಲದೆ ಆ್ಯಂಟಿಬಯೋಟಿಕ್‌ಗಳ ಅಸಮರ್ಪಕ ಬಳಕೆಯಿಂದ ಒಂದೆಡೆ ಬ್ಯಾಕ್ಟೀರಿಯಾಗಳು ಕೆಲ ಸಾಮಾನ್ಯ ಔಷಧಗಳಿಗೆ ಪ್ರತಿರೋಧ ಬೆಳೆಸಿಕೊಳ್ಳುತ್ತಿದ್ದರೆ, ಮತ್ತೊಂದೆಡೆ ಮನುಷ್ಯನ ಪಾಲಿಗೆ ಒಳ್ಳೆಯವು ಎನಿಸಿರುವ ಬ್ಯಾಕ್ಟೀರಿಯಾಗಳು ನಾಶವಾಗುತ್ತಿವೆ. ಈ ಎರಡೂ ಸಂದರ್ಭಗಳಲ್ಲಿ ತೊಂದರೆ ತಪ್ಪಿದ್ದಲ್ಲ. ಇದು ಈಗ ಜಗತ್ತನ್ನೇ ಕಾಡುತ್ತಿರುವ ಬೃಹತ್ ಸಮಸ್ಯೆಯಾಗಿ ಪರಿಣಮಿಸಿದೆ.

4

ಡಬ್ಲ್ಯುಎಚ್‌ಒ ವರದಿ ಹೇಳುವುದೇನು?

- 2023ರಲ್ಲಿ ಬ್ಯಾಕ್ಟೀರಿಯಾ ಸೋಂಕಿನ ಪ್ರಕರಣಗಳ ಪೈಕಿ ಪ್ರತಿ 6ರಲ್ಲಿ 1 ಪ್ರಕರಣದಲ್ಲಿ ಪ್ರತಿರೋಧ ಕಂಡುಬಂದಿದೆ
- ರೋಗಕಾರಕಗಳು ಹಾಗೂ ಆ್ಯಂಟಿಬಯೋಟಿಕ್‌ಗಳು ಒಟ್ಟುಗೂಡಿದ ಪರಿಣಾಮ ಪ್ರತಿರೋಧದ ಪ್ರಮಾಣದಲ್ಲಿ ಶೇ 40ರಷ್ಟು ಹೆಚ್ಚಳ
- ಜಗತ್ತಿನಲ್ಲಿ ಆ್ಯಂಟಿಬಯೋಟಿಕ್ ಪ್ರತಿರೋಧ ಪ್ರಮಾಣದಲ್ಲಿ ಪ್ರತಿವರ್ಷ ಶೇ 5ರಿಂದ ಶೇ 15ರಷ್ಟು ಹೆಚ್ಚಳ ಕಂಡುಬರುತ್ತಿದೆ
- ಆ್ಯಂಟಿಬಯೋಟಿಕ್ ಪ್ರತಿರೋಧದಿಂದಾಗಿ ಜಗತ್ತಿನಲ್ಲಿ 2021ರಲ್ಲಿ 14 ಲಕ್ಷ ಜನರು ಮೃತಪಟ್ಟಿದ್ದಾರೆ

ವಿಐಎಸ್‌ಎಲ್ ಪುನಶ್ಚೇತನಕ್ಕೆ ₹5,000 ಕೋಟಿ

ಭದ್ರಾವತಿ (ಶಿವಮೊಗ್ಗ): ಇಲ್ಲಿನ ವಿಶ್ವೇಶ್ವರಾಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ (ವಿಐಎಸ್‌ಎಲ್) ಪುನಶ್ಚೇತನಕ್ಕೆ ₹5,000 ಕೋಟಿ ಅನುದಾನ ನೀಡಲು ಭಾರತೀಯ ಉಕ್ಕು ಪ್ರಾಧಿಕಾರ (ಎಸ್‌ಎಐಎಲ್) ನಿರ್ಧರಿಸಿದೆ. ಕಾರ್ಖಾನೆಯ ಪುನಶ್ಚೇತನಕ್ಕೆ ಪ್ರಧಾನಿ ನರೇಂದ್ರ ಮೋದಿ ಕೂಡ ಒಪ್ಪಿಗೆ ಸೂಚಿಸಿದ್ದಾರೆ ಎಂದು ಕೇಂದ್ರ ಉಕ್ಕು, ಬೃಹತ್ ಕೈಗಾರಿಕೆ ಸಚಿವ ಎಚ್.ಡಿ. ಕುಮಾರಸ್ವಾಮಿ ಘೋಷಿಸಿದರು.

5

ಚಿನಕುರುಳಿ — ಪ್ರಕಾಶ್ ಶೆಟ್ಟಿ



ಭಾರತದ ಮೇಲೆ ಹೆಚ್ಚುವರಿ ಸುಂಕ ಇಳಿಕೆಯ ಮುನ್ಸೂಚನೆ

ಸುಂಕ ತೆರವಿಗೆ 'ಮಾರ್ಗ'

ನವದೆಹಲಿ (ಪಿಟಿಐ): ರಷ್ಯಾದಿಂದ ಕಚ್ಚಾ ತೈಲ ಖರೀದಿಯ ಕಾರಣಕ್ಕೆ ಅಮೆರಿಕವು ಭಾರತದ ಸರಕುಗಳ ಮೇಲೆ ಹೇರಿರುವ ಶೇಕಡ 25ರಷ್ಟು ಸುಂಕವನ್ನು ಇಲ್ಲವಾಗಿಸಲು 'ಮಾರ್ಗ ಇದೆ' ಎಂದು ಅಮೆರಿಕದ ಹಣಕಾಸು ಸಚಿವ ಸ್ಕಾಟ್ ಬೆಸೆಂಟ್ ಹೇಳಿದ್ದಾರೆ.



ಭಾರತವು ಈಗ ರಷ್ಯಾದಿಂದ ಕಚ್ಚಾ ತೈಲ ಖರೀದಿಸುವುದು ತಗ್ಗಿದೆ ಎಂದು ಬೆಸೆಂಟ್ ಹೇಳಿದ್ದಾರೆ. ಈ ಹೇಳಿಕೆಯ ಮೂಲಕ ಬೆಸೆಂಟ್ ಅವರು ಭಾರತದ ಮೇಲೆ ಅಮೆರಿಕ ಹೇರಿರುವ ಸುಂಕವು ಇಳಿಕೆಯಾಗುವ ಸಾಧ್ಯತೆಯನ್ನು ಸೂಚ್ಯವಾಗಿ ತಿಳಿಸಿದ್ದಾರೆ.

ಡೊನಾಲ್ಡ್ ಟ್ರಂಪ್ ಅವರು ಅಮೆರಿಕದ ಅಧ್ಯಕ್ಷರಾದ ನಂತರದಲ್ಲಿ, ಭಾರತದಿಂದ ಆಮದು ಆಗುವ ಸರಕುಗಳಿಗೆ ಶೇಕಡ 50ರಷ್ಟು ಸುಂಕ ವಿಧಿಸಿದ್ದಾರೆ. ಈ ಪೈಕಿ ಶೇ 25ರಷ್ಟು 'ಪ್ರತಿಸುಂಕ'ದ ರೀತಿಯಲ್ಲಿದೆ. ಇನ್ನುಳಿದ ಶೇ 25ರಷ್ಟು ಸುಂಕವನ್ನು, ಭಾರತವು ರಷ್ಯಾದಿಂದ ಕಚ್ಚಾ ತೈಲ ಖರೀದಿಸುತ್ತಿದೆ ಎಂಬ ಕಾರಣಕ್ಕೆ ಹೇರಲಾಗಿದೆ.

ಭಾರತದ ಮೇಲೆ ಸುಂಕ ಹೇರಿದ ಕ್ರಮವು 'ಯಶಸ್ವಿಯಾಗಿದೆ' ಎಂದು ಬೆಸೆಂಟ್ ಅವರು ಶುಕ್ರವಾರ ಹೇಳಿದ್ದಾರೆ. 'ರಷ್ಯಾದಿಂದ ಕಚ್ಚಾ ತೈಲ ಖರೀದಿಸುವುದಕ್ಕೆ ನಾವು ಭಾರತದ ಮೇಲೆ ಶೇ 25ರಷ್ಟು ಸುಂಕ ಹೇರಿದೆವು. ಭಾರತದ ತೈಲ ಸಂಸ್ಕರಣಾ ಕಂಪನಿಗಳು ರಷ್ಯಾದಿಂದ ಕಚ್ಚಾ ತೈಲ ಖರೀದಿಸುವುದು ತೀವ್ರವಾಗಿ ಕಡಿಮೆ ಆಯಿತು. ಹೀಗಾಗಿ ಅದೊಂದು ಯಶಸ್ಸು. ಸುಂಕ ಈಗಲೂ ಮುಂದುವರಿದಿದೆ' ಎಂದು ಅವರು ಸಂದರ್ಶನವೊಂದರಲ್ಲಿ ವಿವರಿಸಿದ್ದಾರೆ.

ಭಾರತದ ಮೇಲೆ ಸುಂಕ ಹೇರದೆ ಇರುವುದಕ್ಕಾಗಿ ಬೆಸೆಂಟ್ ಅವರು ಯುರೋಪಿನ ದೇಶಗಳನ್ನು ಟೀಕಿಸಿದ್ದಾರೆ. 'ಬಹಳ ಗುಣವಂತರಂತೆ ತೋರಿಸಿಕೊಳ್ಳುವ ನಮ್ಮ ಯುರೋಪಿನ ಸ್ನೇಹಿತರು ಅದನ್ನು ಮಾಡಲು (ಭಾರತದ ವಿರುದ್ಧ ಸುಂಕ ವಿಧಿಸಲು) ಒಪ್ಪಲಿಲ್ಲ. ಏಕೆಂದರೆ ಅವರಿಗೆ ಭಾರತದ ಜೊತೆ ದೊಡ್ಡ ವ್ಯಾಪಾರ ಒಪ್ಪಂದಕ್ಕೆ ಸಹಿ ಹಾಕಬೇಕಿತ್ತು' ಎಂದು ಬೆಸೆಂಟ್ ಹೇಳಿದ್ದಾರೆ.

6

ರಾಜ್ಯಪಾಲರ ಮುಂದೆ ಮತ್ತೆ 'ಭಾಷಣ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಮಾಣೆಕ್ ಷಾ ಪರೇಡ್ ಮೈದಾನದಲ್ಲಿ ಜ.26ರಂದು ನಡೆಯುವ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ರಾಜ್ಯ ಸರ್ಕಾರ ಸಿದ್ಧಪಡಿಸಿರುವ ಭಾಷಣವನ್ನು ಪೂರ್ಣ ಪ್ರಮಾಣದಲ್ಲಿ ಓದುತ್ತಾರೆಯೇ ಎಂಬ ಚರ್ಚೆ ನಡೆದಿದೆ.



ಥಾವರಚಂದ್ ಗೆಹಲೋತ್

ಜಂಟಿ ಅಧಿವೇಶನಕ್ಕಾಗಿ ರಾಜ್ಯ ಸರ್ಕಾರ ಸಿದ್ಧಪಡಿಸಿದ್ದ ಭಾಷಣದಲ್ಲಿ ಕೇಂದ್ರ ಸರ್ಕಾರವನ್ನು ಟೀಕಿಸುವ ಅಂಶಗಳು ಇದ್ದವು ಎನ್ನುವ ಕಾರಣಕ್ಕೆ ಅಧಿವೇಶನಕ್ಕೆ ಬರಲು ರಾಜ್ಯಪಾಲರು ಮೊದಲು ನಿರಾಕರಿಸಿದ್ದರು. ಕಾನೂನು ಸಚಿವ ಎಚ್.ಕೆ.ಪಾಟೀಲ ನೇತೃತ್ವದ ನಿಯೋಗವು, ರಾಜ್ಯಪಾಲರನ್ನು ಭೇಟಿಯಾಗಿ ಮನವೊಲಿಸಲು ಯತ್ನಿಸಿತ್ತು.

'ಕೇಂದ್ರದಿಂದ ರಾಜ್ಯಕ್ಕೆ ಅನ್ಯಾಯವಾಗುತ್ತಿದೆ, ನ್ಯಾಯಯುತ ಪಾಲು ಕೊಡುತ್ತಿಲ್ಲ ಹಾಗೂ ಕೇಂದ್ರದ ಯೋಜನೆಗಳನ್ನು ಟೀಕಿಸುವ ಕೆಲ ಸಾಲುಗಳನ್ನು ತೆಗೆದು ಹಾಕಬೇಕು' ಎಂಬ ರಾಜ್ಯಪಾಲರ ಸೂಚನೆಗೆ ರಾಜ್ಯ ಸರ್ಕಾರ ಸಮ್ಮತಿಸಿರಲಿಲ್ಲ.

3A

₹19.46 ಕೋಟಿ ಮೌಲ್ಯದ ಆಸ್ತಿ: ಇ.ಡಿ ಮುಟ್ಟುಗೋಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಜಿನಿಯರಿಂಗ್ ಸೀಟ್ ಬ್ಲಾಕಿಂಗ್ ದಂಧೆ ಪ್ರಕರಣದಲ್ಲಿ ನಗರದ ಬಿಎಂಎಸ್ ಶೈಕ್ಷಣಿಕ ಟ್ರಸ್ಟ್‌ನ ಟ್ರಸ್ಟಿಗಳಿಗೆ ಸೇರಿದ ₹19.46 ಕೋಟಿ ಮೌಲ್ಯದ ಸ್ವತ್ತುಗಳನ್ನು ಜಾರಿ ನಿರ್ದೇಶನಾಲಯವು (ಇ.ಡಿ) ಶನಿವಾರ ಮುಟ್ಟುಗೋಲು ಹಾಕಿಕೊಂಡಿದೆ.

ಸೀಟ್ ಬ್ಲಾಕಿಂಗ್

ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ದೂರಿನಡಿಯಲ್ಲಿ ಮಲ್ಲೇಶ್ವರ ಮತ್ತು ಹನುಮಂತನಗರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಎಫ್‌ಐಆರ್ ಆಧಾರದಲ್ಲಿ, ಇ.ಡಿಯು ತನಿಖೆ ಆರಂಭಿಸಿತ್ತು. 2025ರ ಜೂನ್ 25 ಮತ್ತು 26ರಂದು ಬಿಎಂಎಸ್‌ಇಟಿಯ ವಿವಿಧ ಕಾಲೇಜುಗಳು, ಟ್ರಸ್ಟಿಗಳು ಮತ್ತು ಹಲವು ಮಧ್ಯವರ್ತಿಗಳ ಮನೆಗಳಲ್ಲಿ ಶೋಧ ನಡೆಸಿತ್ತು.

'ಸಂಸ್ಥೆಯು ಸರ್ಕಾರಿ ಕೋಟಾದ ಸೀಟ್‌ಗಳಿಗೆ ಹೆಚ್ಚಿನ ಶುಲ್ಕ ವಸೂಲಿ ಮತ್ತು ಮಧ್ಯವರ್ತಿಗಳ ಮೂಲಕ ಹತ್ತು ಪಟ್ಟಿಗೂ ಹೆಚ್ಚು ಮೊತ್ತಕ್ಕೆ ಸೀಟ್‌ಗಳನ್ನು ಮಾರಾಟ ಮಾಡಿರುವುದು ಪತ್ತೆಯಾಗಿತ್ತು' ಎಂದು ಇ.ಡಿ ಮಾಹಿತಿ ನೀಡಿದೆ.

5



ಹುಬ್ಬಳ್ಳಿಯ ಮಂಟೂರು ರಸ್ತೆಯಲ್ಲಿ ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ (ಪಿಎಂಎವೈ) ನಿರ್ಮಿಸಿರುವ 42,345 ಮನೆಗಳ ಬೀಗದ ಕೀ ಗಳನ್ನು ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಫಲಾನುಭವಿಗಳಿಗೆ ವಿತರಿಸಿದರು. ವಸತಿ ಸಚಿವ ಜಮೀರ್ ಅಹಮದ್ ಖಾನ್, ಕೊಳೆಗೇರಿ ಅಭಿವೃದ್ಧಿ ಮಂಡಳಿ ಅಧ್ಯಕ್ಷ, ಶಾಸಕ ಪ್ರಸಾದ ಅಬ್ಬಯ್ಯ ಉಪಸ್ಥಿತರಿದ್ದರು – ಪ್ರಜಾವಾಣಿ ಚಿತ್ರ

ಸುದ್ದಿ 3A

ಸಮೀಕ್ಷೆ ಪೂರ್ಣ: ರಾಜ್ಯದಲ್ಲಿ ಈ ಸಮುದಾಯದವರ ಸಂಖ್ಯೆ 10,365

ಲಿಂಗತ್ವ ಅಲ್ಪಸಂಖ್ಯಾತರಿಗೆ ಪ್ರತ್ಯೇಕ ಮಂಡಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದಲ್ಲಿ 10,365 ಲಿಂಗತ್ವ ಅಲ್ಪಸಂಖ್ಯಾತರು ಇದ್ದು, ಅವರ ಅಭಿವೃದ್ಧಿಗೆ 'ಲಿಂಗತ್ವ ಅಲ್ಪಸಂಖ್ಯಾತರ ಕ್ಷೇಮಾಭಿವೃದ್ಧಿ ಮಂಡಳಿ' ಸ್ಥಾಪಿಸುವಂತೆ ಸಮೀಕ್ಷಾ ವರದಿ ಶಿಫಾರಸು ಮಾಡಿದೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ಲಿಂಗತ್ವ ಅಲ್ಪಸಂಖ್ಯಾತರ ಸ್ಥಿತಿಗತಿ ಅವಲೋಕನಕ್ಕಾಗಿ 2025–26ನೇ ಸಾಲಿನಲ್ಲಿ ಸಮೀಕ್ಷೆ ಕೈಗೊಂಡಿತ್ತು. ರಾಜ್ಯದ ಎಲ್ಲ 31 ಜಿಲ್ಲೆಗಳಲ್ಲೂ ಕೈಗೊಂಡಿದ್ದ ಸಮೀಕ್ಷಾ ವರದಿಯನ್ನು ರಾಜ್ಯ ಸರ್ಕಾರಕ್ಕೆ ಶನಿವಾರ ಸಲ್ಲಿಸಲಾಗಿದೆ.

ಲಿಂಗತ್ವ ಅಲ್ಪಸಂಖ್ಯಾತರು ಎದುರಿಸುವ ಸಮಸ್ಯೆಗಳಾದ ಭಯ, ಅವಮಾನ, ಲಿಂಗ ತಾರತಮ್ಯ, ಸಾಮಾಜಿಕ ತಾರತಮ್ಯ, ಖಿನ್ನತೆ, ಆತ್ಮಹತ್ಯಾ ಪ್ರವೃತ್ತಿಗಳಿಂದ ಅವರನ್ನು ಹೊರತರಲು, ಕಿರುಕುಳಕ್ಕೆ ಒಳಗಾಗುವುದನ್ನು ತಪ್ಪಿಸಲು, ಸಮಾಜದಿಂದ ದೂರ ಉಳಿದಿರುವ ಅವರಿಗೆ ನೆಲೆ ಕಲ್ಪಿಸುವುದು ಹಾಗೂ ಅವರನ್ನು ಮುಖ್ಯವಾಹಿನಿಗೆ ತರುವುದು ಸಮೀಕ್ಷೆಯ ಮೂಲ ಉದ್ದೇಶವಾಗಿದೆ.

ಉದ್ಯೋಗ ಮತ್ತು ಶಿಕ್ಷಣ ಮೀಸಲಾತಿ ಒದಗಿಸಲು ಸಮುದಾಯದ ಜನಸಂಖ್ಯೆ, ಶೈಕ್ಷಣಿಕ ಮಟ್ಟ, ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಗಳ ಖಚಿತ ಮಾಹಿತಿ ಸರ್ಕಾರದ ಬಳಿ ಇರಲಿಲ್ಲ. ಮಾಹಿತಿ ಕೊರತೆಯು ಸಾಮಾಜಿಕ ನ್ಯಾಯ ಸ್ಥಾಪನೆ ಹಾಗೂ ಸಬಲೀಕರಣಕ್ಕೆ ಅಡ್ಡಿಯಾಗಿತ್ತು.

3A

ಪ್ರಮುಖ ಶಿಫಾರಸುಗಳು

- ವಸತಿನಿಲಯಗಳಲ್ಲಿ ಲಿಂಗತ್ವ ಅಲ್ಪಸಂಖ್ಯಾತರ ದಾಖಲಾತಿಗೆ ಆದ್ಯತೆ ನೀಡಬೇಕು
- ಮಕ್ಕಳಿಗೆ ವಿದ್ಯಾರ್ಥಿವೇತನ ನೀಡಲು ಪ್ರತ್ಯೇಕ ಯೋಜನೆ ರೂಪಿಸಬೇಕು
- ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ತೆಗೆದುಕೊಳ್ಳಲು ಸೂಕ್ತ ತರಬೇತಿ ಕೊಡಬೇಕು
- ಆರೋಗ್ಯ, ಉದ್ಯೋಗ ಮತ್ತು ಕೌಶಲ ಅಭಿವೃದ್ಧಿಗೆ ಪ್ರತ್ಯೇಕ ತರಬೇತಿ ನೀಡಬೇಕು
- ಮನೆಗಳಿಲ್ಲದವರಿಗೆ ವಸತಿ ಸೌಲಭ್ಯ, ಮೂಲ ಸೌಕರ್ಯ ಒದಗಿಸಬೇಕು
- ಸರ್ಕಾರಿ ಸೌಲಭ್ಯಗಳನ್ನು ಆದ್ಯತೆಯ ಮೇರೆಗೆ ಕಲ್ಪಿಸಬೇಕು
- ದೌರ್ಜನ್ಯ ತಡೆಗಟ್ಟಲು ಪೊಲೀಸರ ಸಹಯೋಗದಲ್ಲಿ ಸೂಕ್ತ ಕ್ರಮ ಜರುಗಿಸಬೇಕು





ಲಿಂಗತ್ವ ಅಲ್ಪಸಂಖ್ಯಾತರ ನಿಖರ ಮಾಹಿತಿ ಸಂಗ್ರಹಿಸುವುದಕ್ಕಾಗಿ ಮೂಲಹಂತದ ಸಮೀಕ್ಷೆ ನಡೆಸಲಾಗಿತ್ತು. ಈಗ ಬಂದಿರುವ ವರದಿ ಆಧರಿಸಿ ಸರ್ಕಾರ ಸೂಕ್ತ ಕ್ರಮಗಳನ್ನು ಕೈಗೊಳ್ಳಲಿದೆ

ಲಕ್ಷ್ಮಿ ಹೆಬ್ಬಾಳಕರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ

ಸೂರ್ಯೋದಯ: 6:46 ಸೂರ್ಯಾಸ್ತ : 6:17 ಚಂದ್ರೋದಯ: ಬೆ. 10:30 ಚಂದ್ರಾಸ್ತ: ರಾ. 11:30 | ಶನಿವಾರದ ಉಷ್ಣಾಂಶ : ಗರಿಷ್ಠ 26° ಕನಿಷ್ಠ 17°

ಭಾನುವಾರದ ಉಷ್ಣಾಂಶ 27° ಗರಿಷ್ಠ 17° ಕನಿಷ್ಠ | ಸೋಮವಾರ 29° : 16° | ಮಂಗಳವಾರ 26° : 16° | ಬುಧವಾರ 30° : 16°

ಭಾನುವಾರ • ಜನವರಿ 25, 2026

ಪ್ರಜಾವಾಣಿ

ಹವಾಮಾನ ಮುನ್ಸೂಚನೆ: ನಗರದಲ್ಲಿ ಮಂಜು ಮುಸುಕಿದ ವಾತಾವರಣ ಇರಲಿದೆ

ಕೆಪೆಕ್: ಉತ್ಪನ್ನಗಳ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೆನರ್ಜಿ ಎಕ್ಸ್‌ಪೋಸರ್ಸ್ ಆ್ಯಂಡ್ ಇವೆಂಟ್ಸ್ ಇತ್ತೀಚೆಗೆ ತ್ರಿಪುರ ವಾಸಿನಿ ಅರಮನೆ ಮೈದಾನದಲ್ಲಿ ಜನವರಿ 20ರಿಂದ 22ರವರೆಗೆ ನಡೆದ ಆಹಾರ ಮತ್ತು ಪಾನೀಯಗಳಿಗೆ ರಾಷ್ಟ್ರೀಯ ವಾಣಿಜ್ಯ ಮೇಳದಲ್ಲಿ ಪ್ರಧಾನ ಮಂತ್ರಿ ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ (ಪಿಎಂಎಫ್‌ಎಂಇ) ಯೋಜನೆಯ 10 ಫಲಾನುಭವಿಗಳ ಉತ್ಪನ್ನಗಳನ್ನು ಪ್ರದರ್ಶಿಸಲಾಗಿತ್ತು.

‘ಪಿಎಂಎಫ್‌ಎಂಇ ಯೋಜನೆಯ ಉದ್ದಿಮೆದಾರರಿಗೆ ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಉತ್ತಮ ಮಾರುಕಟ್ಟೆ ಸಂಪರ್ಕ ಕಲ್ಪಿಸುವ ಉದ್ದೇಶ ಈ ಮೇಳದಲ್ಲಿ ಕೆಪೆಕ್‌ನ ಮಳಿಗೆಯನ್ನು ಸ್ಥಾಪಿಸಲಾಗಿತ್ತು.

ಇಲ್ಲಿ ಸಿರಿಧಾನ್ಯ ಆಧಾರಿತ ಉತ್ಪನ್ನಗಳು, ಸಾಂಬಾರು ಪದಾರ್ಥಗಳು, ಎಣ್ಣೆ ಬೀಜ ಆಧಾರಿತ ಉತ್ಪನ್ನಗಳು, ಮಕ್ಕಳ ಆಹಾರ, ಕಡಲೆಕಾಯಿ, ಏಕದಳ, ದ್ವಿದಳ ಧಾನ್ಯಗಳ,



ಸಿ.ಎನ್. ಶಿವಪ್ರಕಾಶ್

ಬೇಕರಿ, ತೆಂಗು ಆಧಾರಿತ ಉತ್ಪನ್ನಗಳು, ಬಿಸ್ಕತ್ತು, ಐಸ್‌ಕ್ರೀಮ್ ಮತ್ತು ಬೆಲ್ಲ ಆಧಾರಿತ ಉತ್ಪನ್ನಗಳನ್ನು ಪ್ರದರ್ಶಿಸಲಾಗಿತ್ತು’ ಎಂದು ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮದ (ಕೆಪೆಕ್) ವ್ಯವಸ್ಥಾಪಕ ನಿರ್ದೇಶಕ ಸಿ.ಎನ್. ಶಿವಪ್ರಕಾಶ್ ಅವರು ತಿಳಿಸಿದ್ದಾರೆ.

ಗಣರಾಜ್ಯೋತ್ಸವಕ್ಕೆ ಪರೇಡ್ ಮೈದಾನ ಸಿದ್ಧ

ಜ.26ರ ಬೆಳಿಗ್ಗೆ 9ಕ್ಕೆ ರಾಜ್ಯಪಾಲರಿಂದ ಗೌರವರಕ್ಷೆ ಸ್ವೀಕಾರ, ರಾಜ್ಯದ ಜನರಿಗೆ ಸಂದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕಬ್ಬನ್ ರಸ್ತೆಯಲ್ಲಿರುವ ಫೀಲ್ಡ್ ಮಾರ್ಷಲ್ ಮಾಣೆಕ್ ಷಾ ಪರೇಡ್ ಮೈದಾನದಲ್ಲಿ ರಾಜ್ಯಮಟ್ಟದ ಗಣರಾಜ್ಯೋತ್ಸವಕ್ಕೆ ಸರ್ವ ಸಿದ್ಧತೆಯಾಗಿದ್ದು, ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಸೋಮವಾರ ಗೌರವರಕ್ಷೆ ಸ್ವೀಕರಿಸಿ, ಸಂದೇಶ ನೀಡಲಿದ್ದಾರೆ.

ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತ ಮಹೇಶ್ವರ್ ರಾವ್, ಬೆಂಗಳೂರು ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್, ಬೆಂಗಳೂರು ನಗರ ಜಿಲ್ಲಾಧಿಕಾರಿ ಜಿ. ಜಗದೀಶ್ ಅವರು ಗಣರಾಜ್ಯೋತ್ಸವ ಪೂರ್ವಭಾವಿ ಸಿದ್ಧತೆಗಳು ಹಾಗೂ ಕಾರ್ಯಕ್ರಮದ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾಹಿತಿ ನೀಡಿದರು.

ಸೋಮವಾರ ಬೆಳಿಗ್ಗೆ 9 ಗಂಟೆಗೆ ಧ್ವಜಾರೋಹಣ ಮಾಡುತ್ತಾರೆ. ಗೌರವರಕ್ಷೆ ಸ್ವೀಕರಿಸಿ, ನಾಡಿನ ಜನತೆಗೆ ಗಣರಾಜ್ಯೋತ್ಸವದ ಸಂದೇಶ ನೀಡುತ್ತಾರೆ. ಪಥಸಂಚಲನ, ಶಾಲಾ ಮಕ್ಕಳು ಸಾಂಸ್ಕೃತಿಕ ಕಾರ್ಯಕ್ರಮ ನೀಡಲಿದ್ದಾರೆ. ಇದಾದ ನಂತರ, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ವಿಜೇತರಿಗೆ, ರಾಜ್ಯಪಾಲರು ಬಹುಮಾನ ವಿತರಿಸಲಿದ್ದಾರೆ ಎಂದು ಮಹೇಶ್ವರ್ ರಾವ್ ತಿಳಿಸಿದರು.

ಗಣರಾಜ್ಯೋತ್ಸವ ಕಾರ್ಯಕ್ರಮವನ್ನು ನಾಗರಿಕರು ವೀಕ್ಷಿಸಲು, ಆನ್‌ಲೈನ್ ಮೂಲಕ 2000 ಇ-ಪಾಸ್‌ಗಳನ್ನು ವಿತರಿಸಲಾಗಿದೆ. ಅದಲ್ಲದೆ, 2000 ಪ್ರತ್ಯೇಕ ಪಾಸ್‌ಗಳನ್ನೂ ನೀಡಲಾಗಿದೆ. ಗಣ್ಯರಿಗೆ 3000 ಪಾಸ್, ಆಡಳಿತಾಧಿಕಾರಿಗಳು, ಮಾಧ್ಯಮದವರಿಗೆ 3200 ಪಾಸ್ ವಿತರಿಸಲಾಗಿದೆ ಎಂದು ಮಾಹಿತಿ ನೀಡಿದರು.

ಪಥಸಂಚಲನ: ತಮಿಳುನಾಡು ರಾಜ್ಯ ಪೊಲೀಸ್ ತಂಡ ಸೇರಿದಂತೆ ಸೇನೆ, ವಾಯುಸೇನೆ, ಸಿಆರ್‌ಪಿಎಫ್ ಮಹಿಳಾ, ಸ್ಕೌಟ್ಸ್- ಗೈಡ್ಸ್, ಎನ್‌ಸಿಸಿ, ಸೇವಾದಳಗಳಿಂದ ಕವಾಯತು, ಬ್ಯಾಂಡ್ ನಡೆಸಿಕೊಡಲಿದ್ದರೆ. 37 ತುಕಡಿಗಳಲ್ಲಿ ಸುಮಾರು 1,100 ಮಂದಿ ಭಾಗವಹಿಸಲಿದ್ದಾರೆ ಎಂದು ಸೀಮಾಂತ್‌ಕುಮಾರ್ ಸಿಂಗ್ ಅವರು ತಿಳಿಸಿದರು.

ಮೈದಾನದ ಸುತ್ತಮುತ್ತ ಭದ್ರತೆ ಮತ್ತು ಸುರಕ್ಷತೆಗೆ 100 ಸಿಸಿಟಿವಿ ಕ್ಯಾಮೆರಾ, ನಾಲ್ಕು ಬ್ಯಾಗ್ ಸ್ಕ್ಯಾನರ್ ವ್ಯವಸ್ಥೆ ಕಲ್ಪಿಸಲಾಗಿದೆ. ಆಂಬುಲೆನ್ಸ್, ವೈದ್ಯಕೀಯ ಸಿಬ್ಬಂದಿ ಸ್ಥಳದಲ್ಲಿರಲಿದ್ದಾರೆ ಎಂದು ಮಾಹಿತಿ ನೀಡಿದರು.

1400 ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ

ಗೀತಾ ಭತ್ತದ್ ಮತ್ತು ತಂಡದವರಿಂದ ನಾಡಗೀತೆ ಹಾಗೂ ರೈತಗೀತೆ ಗಾಯನ ನಡೆಯಲಿದ್ದು, ಬೆಂಗಳೂರು ಪಶ್ಚಿಮ ನಗರ ಪಾಲಿಕೆ ವ್ಯಾಪ್ತಿಯ ಹೇರೋಹಳ್ಳಿಯ ಸಂಯುಕ್ತ ಪದವಿ ಪೂರ್ವ ಕಾಲೇಜಿನ 650 ಮಕ್ಕಳಿಂದ ‘ಸಂಕ್ರಾಂತಿ ಸಂಭ್ರಮ’ ನಡೆಯಲಿದೆ. ಬಾಗಲಗುಂಟೆ ಸರ್ಕಾರಿ ಪ್ರೌಢ ಶಾಲೆಯ 750 ಮಕ್ಕಳು ‘ಭಾರತದ ಏಕೀಕರಣ ಮತ್ತು ನವ ಭಾರತ’ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ. ಪೊಲೀಸ್ ಇಲಾಖೆ ವತಿಯಿಂದ ‘ಕರ್ನಾಟಕ ಪೊಲೀಸ್ ಸಾಮೂಹಿಕ ವಾದ್ಯಮೇಳ’ ನಡೆಯಲಿದೆ.



ಮಾಣೆಕ್ ಷಾ ಪರೇಡ್ ಮೈದಾನದಲ್ಲಿ ಶಾಲಾ ಮಕ್ಕಳು ಸಾಂಸ್ಕೃತಿಕ ಕಾರ್ಯಕ್ರಮದ ತಾಲೀಮು ನಡೆಸಿದರು ಪ್ರಜಾವಾಣಿ ಚಿತ್ರ

ಸಂಚಾರ ಮಾರ್ಗ ಬದಲು

ಜ.26ರ ಬೆಳಿಗ್ಗೆ 8.30ರಿಂದ 10.30ರವರೆಗೆ ಕಬ್ಬನ್ ರಸ್ತೆಯಲ್ಲಿ ಬಿಆರ್‌ವಿ ಜಂಕ್ಷನ್‌ನಿಂದ ಕಾಮರಾಜ ರಸ್ತೆ ಜಂಕ್ಷನ್‌ವರೆಗಿನ ಎರಡೂ ದಿಕ್ಕುಗಳಲ್ಲಿ ವಾಹನ ಸಂಚಾರ ನಿರ್ಬಂಧಿಸಲಾಗಿದೆ.

ಇನ್‌ಫೆಂಟ್ರಿ ರಸ್ತೆಯಲ್ಲಿ ಮಣಿಪಾಲ್ ಸೆಂಟರ್ ಕಡೆಗೆ ಸಂಚರಿಸುವ ವಾಹನಗಳು ಇನ್‌ಫೆಂಟ್ರಿ ರಸ್ತೆ- ಸಫೀನಾ ಪ್ಲಾಜಾ, ಎಡ ತಿರುವು ಪಡೆದು ಮೈನ್‌ಗಾರ್ಡ್ ರಸ್ತೆ- ಆಲೀಸ್ ವೃತ್ತ- ಡಿಸ್ಪೆನ್ಸರಿ ರಸ್ತೆ- ಕಾಮರಾಜ ರಸ್ತೆ ಮತ್ತು ಡಿಕನ್ಸನ್ ರಸ್ತೆ ಜಂಕ್ಷನ್‌ನಲ್ಲಿ ಬಲ ತಿರುವು ಪಡೆದು ಕಾಮರಾಜ ರಸ್ತೆ- ಕಬ್ಬನ್ ರಸ್ತೆ ಮತ್ತು ಕಾಮರಾಜ ರಸ್ತೆ ಜಂಕ್ಷನ್‌ನಲ್ಲಿ ಎಡಕ್ಕೆ ತಿರುವು ಪಡೆದು, ಕಬ್ಬನ್ ರಸ್ತೆ ಮೂಲಕ ಮಣಿಪಾಲ್ ಸೆಂಟರ್ ಕಡೆಗೆ ಸಾಗಬಹುದು.

ಸೆಂಟ್ರಲ್ ಸ್ಟ್ರೀಟ್, ಅನಿಲ್‌ಕುಂಬ್ಳೆ ವೃತ್ತದಿಂದ ಶಿವಾಜಿನಗರ ಬಸ್ ನಿಲ್ದಾಣದವರೆಗೆ; ಕಬ್ಬನ್ ರಸ್ತೆ, ಸಿಟಿಒ ವೃತ್ತದಿಂದ ಕೆ.ಆರ್. ರಸ್ತೆ- ಕಬ್ಬನ್ ರಸ್ತೆ ಜಂಕ್ಷನ್‌ವರೆಗೆ; ಎಂ.ಜಿ ರಸ್ತೆ, ಅನಿಲ್‌ಕುಂಬ್ಳೆ ವೃತ್ತದಿಂದ ಕ್ವೀನ್ಸ್ ರಸ್ತೆವರೆಗೆ ವಾಹನ ನಿಲುಗಡೆಯನ್ನು ನಿಷೇಧಿಸಲಾಗಿದೆ.

ಇಂದು ‘ಮಾಹೆಥಾನ್ 2026’ ಓಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹಸಿರಿಗಾಗಿ ಓಡಿ, ಸ್ವಚ್ಛಂದವಾಗಿ ಉಸಿರಾಡಿ’ ಎಂಬ ಧ್ಯೇಯದೊಂದಿಗೆ ಮಣಿಪಾಲ್ ಅಕಾಡೆಮಿ ಆಫ್ ಹೈಯರ್ ಎಜುಕೇಶನ್ (ಮಾಹೆ) ವಿಶ್ವವಿದ್ಯಾಲಯವು ಜ.25ರಂದು ‘ಮಾಹೆಥಾನ್ 2026’ ಓಟ ಹಮ್ಮಿಕೊಂಡಿದೆ.

‘ಪ್ರಜಾವಾಣಿ’ ಮತ್ತು ‘ಡೆಕ್ಕನ್ ಹೆರಾಲ್ಡ್’ ಮಾಧ್ಯಮ ಸಹಯೋಗದಲ್ಲಿ, ಆಕ್ಸಿಸ್ ಬ್ಯಾಂಕ್ ಸಹಕಾರದೊಂದಿಗೆ 'ಮಾಹೆಥಾನ್ 2026'ರಲ್ಲಿ 21.1 ಕಿ.ಮೀ. ಹಾಫ್ ಮ್ಯಾರಥಾನ್, 10 ಕಿ.ಮೀ, 5 ಕಿ.ಮೀ ಮತ್ತು 3 ಕಿ.ಮೀ ಫನ್ ರನ್ ಸೇರಿದಂತೆ ವಿವಿಧ ವಿಭಾಗಗಳಲ್ಲಿ ಸ್ಪರ್ಧೆ ನಡೆಯಲಿದೆ.

ಯಲಹಂಕದಲ್ಲಿರುವ ಮಾಹೆ ಬೆಂಗಳೂರು ಕ್ಯಾಂಪಸ್‌ನಲ್ಲಿ ಆರಂಭವಾಗುವ ಓಟವು ಅಲ್ಲೇ ಮುಕ್ತಾಯಗೊಳ್ಳಲಿದೆ. ಅಂತರರಾಷ್ಟ್ರೀಯ ಮಾನದಂಡಗಳಿಗೆ ಅನುಗುಣವಾದ ‘ಎಐಎಂಎಸ್ ಪ್ರಮಾಣೀಕೃತ’ ಮಾರ್ಗದಲ್ಲಿ ಓಟ ನಡೆಯಲಿದೆ. ನುರಿತ ಓಟಗಾರರು, ಹವ್ಯಾಸಿ ಓಟಗಾರರು ಭಾಗವಹಿಸಲಿದ್ದಾರೆ.

‘ಮಾಹೆಥಾನ್ 2026 ಕೇವಲ ಓಟವಷ್ಟೇ ಅಲ್ಲ, ಇದೊಂದು ಆಂದೋಲನ. ಆರೋಗ್ಯ, ಸುಸ್ಥಿರತೆ ಮತ್ತು ಪರಿಸರ ಕಾಳಜಿಯ ಅಡಿ ಸಾವಿರಾರು ಓಟಗಾರರನ್ನು ಒಗ್ಗೂಡಿಸುವ ಮೂಲಕ ಪ್ರಜ್ಞಾವಂತ ಸಮಾಜ ನಿರ್ಮಿಸುವತ್ತ ಅರ್ಥಪೂರ್ಣ ಹೆಜ್ಜೆ ಇಡುತ್ತಿದ್ದೇವೆ’ ಎಂದು ಸಮ ಕುಲಪತಿ ಮಧು ವೀರರಾಘವನ್ ತಿಳಿಸಿದರು.

ವಿದ್ಯಾರ್ಥಿಗಳು, ಕಾರ್ಪೊರೇಟ್ ಉದ್ಯೋಗಿಗಳು ಸೇರಿ ಆಸಕ್ತರು ನೋಂದಾಯಿಸಿಕೊಳ್ಳಬಹುದು. ವಿವರಗಳು ಮತ್ತು ನೋಂದಣಿಗೆ ವೆಬ್‌ಸೈಟ್ https://www.mahethon.in/ ಭೇಟಿ ನೀಡಬಹುದು ಅಥವಾ ಈ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಬಹುದು.

5 ಸ್ಟಾರ್ಟ್‌ಅಪ್‌ಗಳಿಗೆ ಬಹುಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತ್ಯಾಜ್ಯ, ವಾಯುಮಾಲಿನ್ಯ, ಪ್ಲಾಸ್ಟಿಕ್ ಸೇರಿದಂತೆ ಹಲವು ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಸೂಚಿಸಿದ ಐದು ಸ್ಟಾರ್ಟ್‌ಅಪ್‌ಗಳನ್ನು ಅಂತಿಮವಾಗಿ ಆಯ್ಕೆ ಮಾಡಿದ್ದು, ತಲಾ ₹25 ಲಕ್ಷ ಬಹುಮಾನ ಘೋಷಿಸಲಾಯಿತು.

ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಸಹಯೋಗದಲ್ಲಿ ಅನ್‌ಬಾಕ್ಸಿಂಗ್ ಬಿಎಲ್‌ಆರ್ ಆಯೋಜಿಸಿದ್ದ ‘ನಮ್ಮ ಬೆಂಗಳೂರು ಚಾಲೆಂಜ್’ ಸ್ಪರ್ಧೆಯ ವಿಜೇತ ಐದು ತಂಡಗಳನ್ನು ಶನಿವಾರ ನಡೆದ ಸಮಾರಂಭದಲ್ಲಿ ಘೋಷಿಸಲಾಯಿತು.

ಆಯ್ಕೆಯಾದ ಐದು ಸ್ಟಾರ್ಟ್‌ಅಪ್‌ಗಳು: ಕಾರ್ಬನ್ ಕ್ರಾಫ್ಟ್ ಡಿಸೈನ್ ಸ್ಟಾರ್ಟ್‌ಅಪ್ (ಕೈಗಾರಿಕಾ ತ್ಯಾಜ್ಯಗಳ ಮರು ಬಳಕೆಯಿಂದ ಕಾರ್ಬನ್ ಬ್ಲಾಕ್ ತಯಾರಿಕೆ), ಸತಿಕ್ಯೂ ಕಾಂಕ್ರೀಟ್ ತಯಾರಕ ಸ್ಟಾರ್ಟ್‌ಅಪ್ (ಕಡಿಮೆ ಇಂಗಾಲ ಬಿಡುಗಡೆ ಮಾಡುವ ಮುಂದಿನ ಪೀಳಿಗೆಯ ಸಿಮೆಂಟ್ ಬೈಂಡರ್‌ಗಳ ಅಭಿವೃದ್ಧಿ), ಟೆಲ್ಲಸ್ ಹ್ಯಾಬಿಟಟ್ ಸ್ಟಾರ್ಟ್‌ಅಪ್ (ಕೊಳಚೆ ನೀರುಗಳ ಶುದ್ಧೀಕರಣ, ಮರುಬಳಕೆ), ಗೋ ಡು ಗುಡ್ ಸ್ಟಾರ್ಟ್‌ಅಪ್ (ಆಹಾರ ಪ್ಯಾಕೇಜಿಂಗ್‌ನಲ್ಲಿ ಪ್ಲಾಸ್ಟಿಕ್ ಪದರಗಳನ್ನು ಸಸ್ಯ ಆಧಾರಿತ ಲೇಪನಗೊಳಿಸುವುದು, ಆರೋಗ್ಯಕ್ಕೆ ಲಾಭದಾಯಕ) ಸನ್‌ಬರ್ಡ್ ಸ್ಟ್ರಾ ಸ್ಟಾರ್ಟ್‌ಅಪ್ (ತೆಂಗಿನ ಎಲೆಗಳಿಂದ ಸ್ಟ್ರಾ ತಯಾರಿಕೆ, ಬಳಕೆ ನಂತರ ಗೊಬ್ಬರವಾಗಲಿದೆ).



ಸ್ಪರ್ಧೆಯಲ್ಲಿ ವಿಜೇತ ಟೆಲ್ಲಸ್ ಹ್ಯಾಬಿಟಟ್ ಸ್ಟಾರ್ಟ್‌ಅಪ್ ತಂಡಕ್ಕೆ ₹25 ಲಕ್ಷ ಬಹುಮಾನದ ಚೆಕ್ ಅನ್ನು ಎಂ. ಮಹೇಶ್ವರರಾವ್ ವಿತರಿಸಿದರು

ಅನ್‌ಬಾಕ್ಸಿಂಗ್ ಬಿಎಲ್‌ಆರ್‌ನ ಅಧ್ಯಕ್ಷ ಮತ್ತು ಸಹ-ಸಂಸ್ಥಾಪಕ ಪ್ರಶಾಂತ್ ಪ್ರಕಾಶ್ ಮಾತನಾಡಿ, ‘ಉದ್ಯಾನ ನಗರಿ ಬೆಂಗಳೂರು ಆಧುನೀಕರಣಗೊಳ್ಳುತ್ತಿದ್ದಂತೆ ಹವಾಮಾನ ಒತ್ತಡಕ್ಕೆ ಒಳಗಾಗಿ ಹಲವಾರು ಸಮಸ್ಯೆ ಎದುರಿಸುತ್ತಿದೆ. ಈ ಸಮಸ್ಯೆಗೆ ಶಾಶ್ವತ ಪರಿಹಾರ ಹುಡುಕಲು ನಮ್ಮ ಬೆಂಗಳೂರು ಚಾಲೆಂಜ್ ಅನ್ನು ಪ್ರತಿವರ್ಷ ಆಯೋಜಿಸಲಾಗುತ್ತಿದೆ’ ಎಂದರು.

ಅನ್‌ಬಾಕ್ಸಿಂಗ್ ಬಿಎಲ್‌ಆರ್‌ನ ಸಹ-ಸಂಸ್ಥಾಪಕಿ ಜಿ ಸಿಇಒ ಮಾಲಿನಿ ಗೋಯಲ್, ಕಾರ್ಯಕ್ರಮದಲ್ಲಿ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತ ಎಂ. ಮಹೇಶ್ವರ ರಾವ್, ಸೋಶಿಯಲ್ ಆಲ್ಫಾ ಸಂಸ್ಥಾಪಕ ಮನೋಜ್ ಕುಮಾರ್, ಬಿಐಎಎಲ್ ಸಿಇಒ ಹರಿಮರಾರ್ ಪಾಲ್ಗೊಂಡಿದ್ದರು.

> **ಬೆಂಗಳೂರು ರಸ್ತೆ ಗುಂಡಿ, ತ್ಯಾಜ್ಯ ನಿರ್ವಹಣೆ ಸೇರಿದಂತೆ ಹಲವು ಸಮಸ್ಯೆ ಎದುರಿಸುತ್ತಿದೆ. ಇಂತಹ ಸ್ಟಾರ್ಟ್‌ಅಪ್‌ಗಳು ಹೊರಬಂದು, ಸಮಸ್ಯೆಗೆ ಪರಿಹಾರ ಸೂಚಿಸುವುದಕ್ಕೆ ನಮ್ಮ ಹೃತ್ಪೂರ್ವಕ ಸ್ವಾಗತವಿದೆ**
> **ಎಂ. ಮಹೇಶ್ವರರಾವ್,** ಮುಖ್ಯ ಆಯುಕ್ತ, ಗ್ರೇಟರ್ ಬೆಂಗಳೂರು ಪ್ರಾಧಿಕಾರ

ಹ್ಯಾಪಿನೆಸ್ ಪೆರೇಡ್ ಇಂದು

ಬೆಂಗಳೂರು: ಸಂಚಾರ ಪೊಲೀಸರ ಸಹಯೋಗದೊಂದಿಗೆ ನಗರದಲ್ಲಿ ಹ್ಯಾಪಿನೆಸ್ ಪರೇಡ್ ‘ಹ್ಯಾಪಿ ಎಐಆರ್’ ಜ.25ರಂದು ಮ.12ರಿಂದ ನಡೆಯಲಿದೆ.

ಮಧ್ಯಾಹ್ನ 12ಕ್ಕೆ ಹಳೆಯ ವಿಮಾನ ನಿಲ್ದಾಣ ರಸ್ತೆಯ ಕೆಂಪ್ ಫೋರ್ಟ್ ಮಾಲ್‌ನಲ್ಲಿ ಪ್ರಾರಂಭವಾಗಲಿದೆ. ಮ. 12.45ಕ್ಕೆ ಇಂದಿರಾನಗರ, ಮ. 2.40ಕ್ಕೆ ಬ್ರಿಗೇಡ್ ರಸ್ತೆ, ಸಂಜೆ 4.25ಕ್ಕೆ ಎಂ.ಜಿ ರಸ್ತೆಗಳಲ್ಲಿ ಪರೇಡ್ ಸಾಗಲಿದೆ ಎಂದು ಸಂಘಟಕರು ತಿಳಿಸಿದ್ದಾರೆ.

ಮಾರ್ಚ್ 30ಕ್ಕೆ ಮತದಾರರ ಅಂತಿಮ ಪಟ್ಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐದು ನಗರ ಪಾಲಿಕೆಗಳ ಸಾರ್ವತ್ರಿಕ ಚುನಾವಣೆಗೆ ವಾರ್ಡ್‌ವಾರು ಮತದಾರರ ಪಟ್ಟಿ ತಯಾರಿಸುವ ವೇಳಾಪಟ್ಟಿಯನ್ನು ಮತ್ತೆ ಪರಿಷ್ಕರಿಸಿರುವ ರಾಜ್ಯ ಚುನಾವಣಾ ಆಯೋಗ, ಮಾರ್ಚ್ 15ರ ಬದಲು ಮಾರ್ಚ್ 30ರಂದು ಮತದಾರ ಅಂತಿಮ ಪಟ್ಟಿ ಪ್ರಕಟಿಸಲು ನಿರ್ಧರಿಸಿದೆ.

ಈಗಾಗಲೇ ಚಾಲ್ತಿಯಲ್ಲಿರುವ ವಿಧಾನಸಭೆ ಮತದಾರರ ಪಟ್ಟಿಗೆ ಹೆಸರು ಸೇರ್ಪಡೆ, ತೆಗೆದುಹಾಕಲು ಹಾಗೂ ಆಕ್ಷೇಪಣೆಗೆ ನಮೂನೆಗಳಿದ್ದು, ಗ್ರೇಟರ್ ಬೆಂಗಳೂರು ಆಡಳಿತ ಮತದಾರರ ನೋಂದಣಿ ನಿಯಮಗಳಿಗಿಂತ ಭಿನ್ನವಾಗಿವೆ. ಹೀಗಾಗಿ, ತತ್ಕಾಲದಲ್ಲಿ ಲಭ್ಯವಿರುವ ವಿಧಾನಸಭೆ ಮತದಾರರ ಪಟ್ಟಿಯನ್ನು ಅಳವಡಿಸಿಕೊಂಡು, ನಗರ ಪಾಲಿಕೆಗಳಿಗೆ ವಾರ್ಡ್‌ವಾರು ಮತದಾರರ ಪಟ್ಟಿ ತಯಾರಿಸುವುದು ಸೂಕ್ತ ಎಂದು ಕರಡು ಮತದಾರರ ಪಟ್ಟಿಯನ್ನು ಪ್ರಕಟಿಸಿದ (ಜ.19) ನಂತರ ನಡೆದ ಜಿಲ್ಲಾ ಚುನಾವಣಾಧಿಕಾರಿಗಳ ಸಭೆಯಲ್ಲಿ ಅಭಿಪ್ರಾಯ ವ್ಯಕ್ತವಾಯಿತು.

ರಾಜಕೀಯ ಪಕ್ಷಗಳ ಪ್ರತಿನಿಧಿಗಳೂ, ಜಿಬಿಎ ಅಧಿಕಾರಿಗಳ ಅಭಿಪ್ರಾಯದಂತೆ ‘ಗ್ರೇಟರ್ ಬೆಂಗಳೂರು ಆಡಳಿತ ನಿಯಮ- 2025ರ ನಿಯಮ 30 ಅನ್ನು ಯಥಾವತ್ತಾಗಿ ಅಳವಡಿಸಿಕೊಂಡು ವಾರ್ಡ್‌ವಾರು ಮತದಾರರ ಪಟ್ಟಿ ತಯಾರಿಸಲು ಪರಿಷ್ಕೃತ ವೇಳಾಪಟ್ಟಿಯನ್ನು ನಿಗದಿಪಡಿಸಲಾಗಿದೆ ಎಂದು ಚುನಾವಣಾ ಆಯೋಗದ ಸುತ್ತೋಲೆ ತಿಳಿಸಿದೆ.


ವೇಳಾಪಟ್ಟಿ: ಮತದಾರರ ಕರಡು ಪಟ್ಟಿಯಲ್ಲಿರುವ ಮತದಾರರನ್ನು ಜ.22ರಿಂದ 31ರವರೆಗೆ ಮತಗಟ್ಟೆ ಅಧಿಕಾರಿಗಳು ಗುರುತಿಸುವುದು. ಪುನರಾವರ್ತನೆ ಮತ್ತು ವಿಧಾನಸಭೆವಾರು ಮತದಾರರ ಪಟ್ಟಿಯೊಂದಿಗೆ ವಾರ್ಡ್‌ವಾರು ಮತದಾರರ ಪಟ್ಟಿಯನ್ನು ಫೆ. 1ರಿಂದ 9ರವರೆಗೆ ತಾಳೆ ಮಾಡುವುದು. ಫೆ.10ರಿಂದ 17ರವರೆಗೆ ಪೂರಕ ಪಟ್ಟಿ-1 ಸಿದ್ಧಪಡಿಸುವುದು, ಫೆಬ್ರುವರಿ 18ರಿಂದ 22ರವರೆಗೆ ಇ-ರೋಲ್ ತಯಾರಿಕೆ, ಫೆ.23ರಿಂದ ಫೆ.27ರವರೆಗೆ ಅಂತಿಮ ಚೆಕ್‌ಲಿಸ್ಟ್ ಮುದ್ರಣ, ಫೆ.28ರಿಂದ ಮಾರ್ಚ್ 4ರವರೆಗೆ ಚೆಕ್‌ಲಿಸ್ಟ್ ಪರಿಶೀಲನೆ, ಮಾರ್ಚ್ 5ರಿಂದ 9ರವರೆಗೆ ಸಾಫ್ಟ್‌ವೇರ್‌ನಲ್ಲಿ ಮ್ಯಾಟ್ರಿಕ್ಸ್ ಅಳವಡಿಕೆ, ಮಾರ್ಚ್ 12ರಿಂದ 16ರವರೆಗೆ ಇ-ರೋಲ್ ಮುದ್ರಣ, ಮಾರ್ಚ್ 17ರಿಂದ 29ರವರೆಗೆ ಅಂತಿಮ ಮತದಾರರ ಪಟ್ಟಿಯನ್ನು ಮುದ್ರಕರಿಂದ ಪಡೆಯುವುದು, ಮಾರ್ಚ್ 30ರಂದು ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸುವುದು.

ಮುಖ್ಯಾಂಶಗಳು

- ಐದು ನಗರ ಪಾಲಿಕೆಗಳ ಸಾರ್ವತ್ರಿಕ ಚುನಾವಣೆ
- ವಾರ್ಡ್‌ವಾರು ಮತದಾರರ ಪಟ್ಟಿ ಪರಿಷ್ಕರಣೆ

ನಿಧನ ವಾರ್ತೆ

ಉಮಾರಾಣಿ



ಬೆಂಗಳೂರು: ಚಿತ್ರನಿರ್ದೇಶಕ, ಲೇಖಕ ಎನ್.ಎಸ್. ಶಂಕರ್ ಅವರ ಪತ್ನಿ ಉಮಾರಾಣಿ (62) ಶನಿವಾರ ನಿಧನರಾದರು.

ಅನಾರೋಗ್ಯದಿಂದ ಬಳಲುತ್ತಿದ್ದ ಅವರು ಒಂದು ವರ್ಷದಿಂದ ಕಿದ್ವಾಯಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಅವರಿಗೆ ಪತಿ ಶಂಕರ್ ಹಾಗೂ ಮಗ ರಾಹುಲ್ ಇದ್ದಾರೆ. ಸಂಜೆ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.

ಉಮಾರಾಣಿ ಅವರ ತಂದೆ ಎಲ್. ಎಚ್. ಬಾಲಕೃಷ್ಣ ಅವರು ಮೈಸೂರು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿದ್ದರು. 1996ರಲ್ಲಿ ಚಾಮರಾಜನಗರ ಲೋಕಸಭಾ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದರು.

ತಾಜಾ ಹಣ್ಣು, ಅಣಬೆ ಆಕರ್ಷಣೆ

ರೈತ ಸಂತೆ: ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಿಂದ ಆಯೋಜನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೈತರು ಬೆಳೆದ ಕಲ್ಲಂಗಡಿ, ಹಲಸು, ಸಪೋಟ, ಪೌಷ್ಟಿಕಾಂಶಗಳಿಂದ ಸಮೃದ್ಧವಾಗಿರುವ ಮಿಲ್ಕಿ ಅಣಬೆ ಹಾಗೂ ನಾಟಿಕೋಳಿ ಮೊಟ್ಟೆಗಳು ಸೇರಿದಂತೆ ಮೌಲ್ಯವರ್ಧಿತ ಉತ್ಪನ್ನಗಳು ರೈತ ಸಂತೆಯಲ್ಲಿ ಸಾರ್ವಜನಿಕರನ್ನು ಸೆಳೆದವು.

ಜಿಕೆವಿಕೆ ಆವರಣದಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಶನಿವಾರ ಆಯೋಜಿಸಿದ್ದ ವರ್ಷದ ಮೊದಲ ರೈತ ಸಂತೆಯಲ್ಲಿ ಹೂವು, ಹಣ್ಣು, ತೆಂಗಿನ ಕಾಯಿ, ತರಕಾರಿಗಳ ಮಾರಾಟ ಜೋರಾಗಿತ್ತು. ಬಿಳಿಬಣ್ಣ ದಪ್ಪಕಾಂಡ ಮತ್ತು ರುಚಿಕರವಾದ ತಾಜಾ ಮಿಲ್ಕಿ ಅಣಬೆಗಳು ರಾಸಾಯನಿಕ ಮುಕ್ತವಾಗಿದ್ದು, ರೈತರು ಸ್ವಯಂ ಬೆಳೆಸಿ ನೇರವಾಗಿ ಗ್ರಾಹಕರಿಗೆ ಮಾರಾಟ ಮಾಡಿದರು. ಇದರಿಂದ ರೈತರಿಗೆ ಉತ್ತಮ ಆದಾಯ ದೊರೆಯುವುದರ ಜೊತೆಗೆ ಗ್ರಾಹಕರಿಗೆ ಗುಣಮಟ್ಟದ ಅಣಬೆಗಳು ದೊರೆತವು.

'ಸ್ವಚ್ಛ ಪರಿಸರದಲ್ಲಿ ರಾಸಾಯನಿಕ ಹಾಗೂ ಕೃತಕ ಆಹಾರವಿಲ್ಲದೇ ಬೆಳೆಸಿದ ದೇಶಿ ಕೋಳಿಗಳ ನಾಟಿ ಮೊಟ್ಟೆಗಳಿಗೆ ಹೆಚ್ಚು ಬೇಡಿಕೆ ಇತ್ತು. ಈ ಮೊಟ್ಟೆಗಳು ಪ್ರೋಟೀನ್, ವಿಟಮಿನ್‌ಗಳ ಜೊತೆಗೆ ಖನಿಜಾಂಶಗಳಿಂದ ಸಮೃದ್ಧವಾಗಿದ್ದು, ಮಕ್ಕಳು, ಗರ್ಭಿಣಿಯರು ಹಾಗೂ ವೃದ್ಧರ ಆರೋಗ್ಯಕ್ಕೆ ಬಹಳ ಉಪಯುಕ್ತವಾಗಿವೆ' ಎಂದು ವಿಶ್ವವಿದ್ಯಾಲಯದ ಸಿಬ್ಬಂದಿ ತಿಳಿಸಿದರು.


ತಾಜಾ ಸಪೋಟ ಹಣ್ಣುಗಳ ಖರೀದಿಯಲ್ಲಿ ತೊಡಗಿರುವ ಸಾರ್ವಜನಿಕರು

ವಿಶ್ವವಿದ್ಯಾಲಯ ಅಭಿವೃದ್ಧಿಪಡಿಸಿದ ಬಿತ್ತನೆ ಬೀಜಗಳು, ಸಿರಿಧಾನ್ಯಗಳ ಮೌಲ್ಯವರ್ಧಿತ ಉತ್ಪನ್ನಗಳು, ಸಾವಯವ ಉತ್ಪನ್ನಗಳು, ವಿವಿಧ ಸಸ್ಯಾಭಿವೃದ್ಧಿ ಸಾಮಗ್ರಿಗಳು, ಪ್ರಮುಖವಾಗಿ ತೋಟಗಾರಿಕಾ ಬೆಳೆಗಳಾದ ಹಣ್ಣುಗಳಾದ ಮಾವು, ನೇರಳೆ, ಹಲಸು, ಸುಗಂಧ ಮತ್ತು ಔಷಧೀಯ ಸಸ್ಯಗಳು, ಜೈವಿಕ ಗೊಬ್ಬರಗಳು ಕೃಷಿ ಯಂತ್ರೋಪಕರಣಗಳು ಖರೀದಿಗೆ ಅವಕಾಶ ನೀಡಲಾಗಿತ್ತು. ಮಕ್ಕಳು ಎತ್ತಿನ ಬಂಡಿಯ ಸವಾರಿ ಮಾಡಿದರು. ಸಂತೆಯ ಅಂಗಳದಲ್ಲಿ ವಿವಿಧ ಜಾನುವಾರುಗಳು ಗಮನ ಸೆಳೆದವು.

ದಿಶಾ ಸಮಿತಿಗೆ ಕೆ.ವಿ.ನಾಗರಾಜ್ ನಾಮನಿರ್ದೇಶನ


ಕೆ.ವಿ. ನಾಗರಾಜ್

ಕೆ.ಆರ್.ಪುರ: ಬೆಂಗಳೂರು ನಗರ ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿಗೆ (ದಿಶಾ) ಮಹದೇವಪುರ ಕ್ಷೇತ್ರದಿಂದ ಕಿತ್ತಗನೂರಿನ ಕೆ.ವಿ.ನಾಗರಾಜ್ ಅವರು ನಾಮನಿರ್ದೇಶನಗೊಂಡಿದ್ದಾರೆ.

ಕೇಂದ್ರ ಸರ್ಕಾರದ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಉದ್ದೇಶದಿಂದ ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿ ರಚಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ವೇಮನ, ಹೇಮರೆಡ್ಡಿ ಮಲ್ಲಮ್ಮ ಸಂದೇಶ ಇಂದಿಗೂ ಪ್ರಸ್ತುತ: ಮಂಜುಳಾ ಲಿಂಬಾವಳಿ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಮಹಾಯೋಗಿ ವೇಮನ ಮತ್ತು ಮಹಾಸಾಧ್ವಿ ಹೇಮರೆಡ್ಡಿ ಮಲ್ಲಮ್ಮ ಅವರು ಜಾತಿ ಭೇದ ತೊರೆದು ಸಮಾಜ ಒಗ್ಗಟ್ಟಾಗಿ ಬದುಕಬೇಕು ಎಂಬ ಸಂದೇಶವನ್ನು ಸಾರಿದವರು ಎಂದು ಶಾಸಕಿ ಮಂಜುಳಾ ಲಿಂಬಾವಳಿ ಹೇಳಿದರು.

ಮಹದೇವಪುರ ಕ್ಷೇತ್ರದ ದೊಡ್ಡಕನ್ನೆಲ್ಲಿಯ ಶ್ರೀವೇಮನ ಕ್ರೀಡಾಂಗಣದಲ್ಲಿ ಹಮ್ಮಿಕೊಂಡಿದ್ದ ವೇಮನ ಹಾಗೂ ಹೇಮರೆಡ್ಡಿ ಮಲ್ಲಮ್ಮ ಅವರ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಮಾಜದಲ್ಲಿ ಸಾಮರಸ್ಯ ಮತ್ತು ಮಾನವೀಯ ಮೌಲ್ಯಗಳನ್ನು ಬೆಳೆಸಲು ತಮ್ಮ ಸಂಪೂರ್ಣ ಜೀವನವನ್ನೇ ಸಮಾಜಕ್ಕೆ ಅರ್ಪಿಸಿದ ಮಹಾನ್ ವ್ಯಕ್ತಿತ್ವಗಳು. ಇವರಿಬ್ಬರು ತಮ್ಮ ವಚನಗಳ ಮೂಲಕ ಜನಮನಗಳಲ್ಲಿ ಉಳಿದಿದ್ದಾರೆ ಎಂದರು.


ಶಾಸಕಿ ಮಂಜುಳಾ ಲಿಂಬಾವಳಿ ಅವರು ಶ್ರೀವೇಮನ ಹಾಗೂ ಹೇಮರೆಡ್ಡಿ ಮಲ್ಲಮ್ಮ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು

ಮಾಜಿ ರಾಜ್ಯಸಭಾ ಸದಸ್ಯ ಕೆ.ಸಿ. ರಾಮಮೂರ್ತಿ ಮಾತನಾಡಿ, 'ವೇಮನ ಜನಸಾಮಾನ್ಯರ ಭಾಷೆಯಲ್ಲಿ ಜೀವನದ ಸತ್ಯ, ನೈತಿಕತೆ, ಸಮಾನತೆ ಮತ್ತು ಮಾನವೀಯ ಮೌಲ್ಯಗಳನ್ನು ಸಾರಿದವರು ಎಂದು ತಿಳಿಸಿದರು.

ಮಾಜಿ ಶಾಸಕ ಅರವಿಂದ ಲಿಂಬಾವಳಿ, ವಿಧಾನ ಪರಿಷತ್ ಸದಸ್ಯ ಎಚ್.ಎಸ್. ಗೋಪಿನಾಥ ರೆಡ್ಡಿ, ನಗರ ಮಂಡಲ ಅಧ್ಯಕ್ಷ ಶ್ರೀಧರ ರೆಡ್ಡಿ, ಗ್ರಾಮಾಂತರ ಮಂಡಲ ಅಧ್ಯಕ್ಷ ಎಚ್.ಎಸ್. ಪಿಳ್ಳಪ್ಪ, ರಾಜ್ಯ ಬಿಜೆಪಿ ಪರಿಷತ್ ಸದಸ್ಯ ಎಲ್. ರಾಜೇಶ್, ಮನೋಹರರೆಡ್ಡಿ, ಪ್ರದೀಪ್ ಕುಮಾರ್ ಭಾಗವಹಿಸಿದ್ದರು.

‘ಬಿಜೆಪಿ ಆಳ್ವಿಕೆಯಿಂದ ಸಂವಿಧಾನಕ್ಕೆ ಧಕ್ಕೆ’

42,345 ಮನೆಗಳ ಹಂಚಿಕೆ, ಹಕ್ಕುಪತ್ರಗಳ ವಿತರಣಾ ಸಮಾರಂಭದಲ್ಲಿ ಖರ್ಗೆ ಹೇಳಿಕೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಕೊಳೆಗೇರಿ ಪ್ರದೇಶಗಳ ನಿರ್ಮೂಲನೆಗೆ ಕ್ರಮ
- ಬಡವರ ಕಲ್ಯಾಣಕ್ಕಾಗಿ ಯೋಜನೆಗಳ ಅನುಷ್ಠಾನ

ಹುಬ್ಬಳ್ಳಿ: ‘ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಜನರ ಹಕ್ಕುಗಳನ್ನು ಕಸಿದುಕೊಳ್ಳುವ ಕಾನೂನುಗಳನ್ನು ರೂಪಿಸುತ್ತಿದೆಯೇ ಹೊರತು ಜನಪರವಾದ ಕಾನೂನುಗಳನ್ನಲ್ಲ’ ಎಂದು ರಾಜ್ಯಸಭಾ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಆರೋಪಿಸಿದರು.

ಇಲ್ಲಿನ ಮಂಟೂರು ರಸ್ತೆಯಲ್ಲಿ ಶನಿವಾರ ವಸತಿ ಇಲಾಖೆ ಮತ್ತು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ನಡೆದ 42,345 ಮನೆಗಳ ಹಂಚಿಕೆ ಮತ್ತು ಹಕ್ಕುಪತ್ರಗಳ ವಿತರಣಾ ಸಮಾರಂಭದಲ್ಲಿ ಮಾತನಾಡಿದ ಅವರು, ‘ಕೇಂದ್ರ ಸರ್ಕಾರವು ಸಂವಿಧಾನ ಆಶಯಕ್ಕೆ ವಿರುದ್ಧವಾಗಿ ಆಡಳಿತ ನಡೆಸುತ್ತಿದೆ. ಇದರಿಂದ ಪ್ರಜಾಪ್ರಭುತ್ವ ವ್ಯವಸ್ಥೆಗೆ ಧಕ್ಕೆಯಾಗಲಿದೆ’ ಎಂದರು.

‘ಮನರೇಗಾ’ ಯೋಜನೆಯಲ್ಲಿದ್ದ ಉತ್ತಮ ಅಂಶಗಳು ಸೇರಿ ಎಲ್ಲವನ್ನೂ ಕಿತ್ತು ಹಾಕಿ, ವಿಬಿ–ಜಿ ರಾಮ್ ಜಿ ಯೋಜನೆಯನ್ನಾಗಿ ಮಾಡಿರುವ ಕೇಂದ್ರ ಸರ್ಕಾರವು ಬಡವರಿಗೆ ಇನ್ನಷ್ಟು ಸಂಕಷ್ಟಗಳನ್ನು ತಂದಿದೆ’ ಎಂದರು.

‘ಕಾಂಗ್ರೆಸ್ ಮತ್ತು ಇತರೆ ಪಕ್ಷಗಳು ಆಡಳಿತವಿರುವ ರಾಜ್ಯಗಳ ರಾಜ್ಯಪಾಲರಿಗೆ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳಿಗೆ ಸಹಕರಿಸದಂತೆ, ಕಡತಗಳಿಗೆ ಸಹಿ ಹಾಕದಂತೆ ಸೂಚಿಸುತ್ತಿದೆ. ಈ ಬಗ್ಗೆ ರಾಜ್ಯಪಾಲರನ್ನೇ ಕೇಳಿದರೆ, ‘ನಮಗೆ ಕೇಂದ್ರದ ಸೂಚನೆಯಿದೆ’ ಎಂದು ಅಸಹಾಯಕತೆ ವ್ಯಕ್ತಪಡಿಸುತ್ತಾರೆ’ ಎಂದರು.

ಆರ್ಥಿಕವಾಗಿ ದಿವಾಳಿಯಾಗಿಲ್ಲ: ‘ಗ್ಯಾರಂಟಿ ಯೋಜನೆಗಳಿಗೆ ಎರಡು ವರ್ಷಗಳಲ್ಲಿ ನಮ್ಮ ಸರ್ಕಾರ ₹1.16 ಲಕ್ಷ ಕೋಟಿ ಹಣ ಖರ್ಚು ಮಾಡಿದೆ. ವ್ಯಕ್ತಿ ತಲಾ ಆದಾಯದಲ್ಲಿ (ಪಿಸಿಐ) ನಮ್ಮ ರಾಜ್ಯ ದೇಶದಲ್ಲೇ ಮೊದಲ ಸ್ಥಾನದಲ್ಲಿದೆ. ಆದರೆ, ಸರ್ಕಾರ ಆರ್ಥಿಕವಾಗಿ ದಿವಾಳಿಯಾಗಿದೆ ಎಂದು ಬಿಜೆಪಿಯವರು ಅಪಪ್ರಚಾರ ಮಾಡುತ್ತಾರೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

‘ಪ್ರತಿ ವರ್ಷ 3 ಲಕ್ಷ ಮನೆಗಳನ್ನು ನಿರ್ಮಿಸಿ ಅರ್ಹರಿಗೆ ಹಂಚಿಕೆ ಮಾಡುತ್ತೇವೆ ಎಂಬ ಭರವಸೆ ನೀಡಿದ್ದೆವು. ಅದರಂತೆ 2013–18ರ ಅವಧಿಯಲ್ಲಿ ನಾವು 14.58 ಲಕ್ಷ ಮನೆಗಳನ್ನು ನಿರ್ಮಿಸಿ ಹಂಚುವ ಮೂಲಕ ವಸತಿ ಕ್ರಾಂತಿಯನ್ನು ಮಾಡಿದ್ದೇವೆ. ಬಿಜೆಪಿಯವರು ತಾವು ಆಡಳಿತ ನಡೆಸಿದ 2018–23ರ ಅವಧಿಯಲ್ಲಿ 5ಲಕ್ಷ ಮನೆಗಳನ್ನು ಮಾತ್ರ ನಿರ್ಮಿಸಿದರು’ ಎಂದರು.

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಸಚಿವರಾದ ಜಮೀರ್ ಅಹಮದ್ ಖಾನ್, ಸಂತೋಷ ಲಾಡ್, ಎಚ್.ಕೆ.ಪಾಟೀಲ, ಕೆ.ಎಚ್. ಮುನಿಯಪ್ಪ, ಸತೀಶ ಜಾರಕಿಹೊಳಿ, ಎಚ್.ಸಿ.ಮಹದೇವಪ್ಪ, ಕೊಳೆಗೇರಿ ಅಭಿವೃದ್ಧಿ ಮಂಡಳಿ ಅಧ್ಯಕ್ಷ, ಶಾಸಕ ಪ್ರಸಾದ ಅಬ್ಬಯ್ಯ, ವಿಧಾನ ಪರಿಷತ್ ಸರ್ಕಾರಿ ಮುಖ್ಯ ಸಚೇತಕ ಸಲೀಂ ಅಹ್ಮದ್, ಶಾಸಕ ಕೋನರೆಡ್ಡಿ ಹಾಗೂ ಪ್ರಮುಖರು ಹಾಜರಿದ್ದರು.


ಹುಬ್ಬಳ್ಳಿಯ ಮಂಟೂರು ರಸ್ತೆಯಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಜನರು ಪಾಲ್ಗೊಂಡಿದ್ದರು

ಕಟೌಟ್ ಬಿದ್ದು ಮೂವರಿಗೆ ಗಾಯ

ಸಮಾರಂಭದ ವೇದಿಕೆಗೆ ತೆರಳುವ ಮಾರ್ಗದ ಅಕ್ಕಪಕ್ಕದಲ್ಲಿ ನಿಲ್ಲಿಸಿದ್ದ ಬೃಹತ್ ಕಟೌಟ್‌ಗಳು ಬಿದ್ದು, ಬ್ಯಾಹಟ್ಟಿಯ ಶಂಕರ ಹಡಪದ, ಗಂಗಾಧರ ನಗರದ ಶಾಂತಾ ಕ್ಯಾರಕಟ್ಟಿ ಮತ್ತು ಧಾರವಾಡದ ಮಂಜುನಾಥ ಕುಲಕರ್ಣಿ ಅವರಿಗೆ ಗಾಯಗಳಾದವು. ಅವರನ್ನು ತಕ್ಷಣವೇ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಯಿತು.

ಆಸ್ಪತ್ರೆಗೆ ಭೇಟಿ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವರಾದ ಜಮೀರ್ ಅಹಮದ್ ಖಾನ್, ಸಂತೋಷ ಲಾಡ್ ಮತ್ತಿತರರು, ಗಾಯಾಳುಗಳ ಆರೋಗ್ಯಸ್ಥಿತಿಯನ್ನು ವಿಚಾರಿಸಿದರು. ಘಟನೆ ಕುರಿತು ವಿಷಾದ ವ್ಯಕ್ತಪಡಿಸಿದ ಸಿದ್ದರಾಮಯ್ಯ, ‘ಗಾಯಾಳುಗಳು ಸಂಪೂರ್ಣ ಗುಣಮುಖರಾಗುವವರೆಗೆ ಉಚಿತವಾಗಿ ಅಗತ್ಯ ಚಿಕಿತ್ಸೆ ಹಾಗೂ ಔಷಧಿ ಸೌಲಭ್ಯ ಕಲ್ಪಿಸಿ’ ಎಂದು ಅಧಿಕಾರಿಗಳಿಗೆ ಸೂಚಿಸಿದರು.

> **ಸಂವಿಧಾನ ರಕ್ಷಿಸುವ ಮತ್ತು ಪ್ರಜಾಪ್ರಭುತ್ವ ಉಳಿಸುವ ನಿಟ್ಟಿನಲ್ಲಿ ನಮ್ಮ ಹೋರಾಟಕ್ಕೆ ನೀವೆಲ್ಲರೂ ಕೈಜೋಡಿಸಬೇಕು**
> **ಮಲ್ಲಿಕಾರ್ಜುನ ಖರ್ಗೆ,** ವಿರೋಧ ಪಕ್ಷದ ನಾಯಕ, ರಾಜ್ಯಸಭಾ

> **ಮಹದಾಯಿ ಯೋಜನೆ ಅನುಷ್ಠಾನಕ್ಕೆ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು ಪರಿಸರ ಇಲಾಖೆಯಿಂದ ಅನುಮತಿ ಕೊಡಿಸಲಿ. ಕೃಷ್ಣಾ ಮೇಲ್ದಂಡೆ ಯೋಜನೆಗೆ ಕೇಂದ್ರ ಸರ್ಕಾರವು ₹5,300 ಕೋಟಿ ಹಣ ಕೊಡಲಿ**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

ಶಿಷ್ಟಾಚಾರ ಉಲ್ಲಂಘನೆ ಆರೋಪ: ಬಿಜೆಪಿ ಪ್ರತಿಭಟನೆ

‘ಮನೆಗಳ ಹಂಚಿಕೆ ಸಮಾರಂಭಕ್ಕೆ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಮತ್ತು ಬಿಜೆಪಿ ಶಾಸಕರನ್ನು ಆಹ್ವಾನಿಸದೆ ಶಿಷ್ಟಾಚಾರ ಉಲ್ಲಂಘಿಸಿದೆ’ ಎಂದು ಆರೋಪಿಸಿ ರಾಜ್ಯ ಸರ್ಕಾರ ವಿರುದ್ಧ ಬಿಜೆಪಿ ಮುಖಂಡರು ಮತ್ತು ಕಾರ್ಯಕರ್ತರು ಶನಿವಾರ ದುರ್ಗದಬೈಲ್ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು.

ವಿಧಾನಸಭೆ ವಿರೋಧಪಕ್ಷದ ಉಪನಾಯಕ ಅರವಿಂದ ಬೆಲ್ಲದ ಮಾತನಾಡಿ, ‘ಪ್ರಧಾನಮಂತ್ರಿ ಆವಾಸ ಯೋಜನೆಯಡಿ ಮನೆಗಳನ್ನು ನಿರ್ಮಿಸಲಾಗಿದೆ. ಆದರೆ, ಕಾಂಗ್ರೆಸ್ ಸರ್ಕಾರವು ಈ ಯೋಜನೆ ತನ್ನದೆಂದು ಜನರ ದಾರಿ ತಪ್ಪಿಸುತ್ತಿದೆ. ಬಿಜೆಪಿ ಸರ್ಕಾರದ ಅವಧಿಯಲ್ಲಿ ಬಡವರಿಗೆ ನೀಡಲು 1.30 ಲಕ್ಷ ಮನೆ ನಿರ್ಮಾಣಕ್ಕೆ ಭೂಮಿಪೂಜೆ ನೆರವೇರಿಸಲಾಗಿತ್ತು. ಆದರೆ, ಕಾಂಗ್ರೆಸ್ ಸರ್ಕಾರವು ಅನುದಾನ ಕೊರತೆಯ ನೆಪವೊಡ್ಡಿ 42 ಸಾವಿರ ಮನೆ ನಿರ್ಮಿಸಿದೆ. ಬಡವರ ಮೇಲೆ ಕಾಂಗ್ರೆಸ್‌ನದ್ದು ಡೋಂಗಿ ಪ್ರೀತಿ’ ಎಂದು ಟೀಕಿಸಿದರು.

ಶಾಸಕರಾದ ಮಹೇಶ ಟೆಂಗಿನಕಾಯಿ, ಎಂ.ಆರ್. ಪಾಟೀಲ, ವಿಧಾನ ಪರಿಷತ್ ಸದಸ್ಯ ಪ್ರದೀಪ ಶೆಟ್ಟರ್ ಮತ್ತು ಪ್ರಮುಖರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಸುದ್ದಿ 2 ನಿಮಿಷ

ಬೆದರಿಕೆ ಪ್ರಕರಣ: ರಾಜೀವ್ ಗೌಡ ಜಾಮೀನು ಅರ್ಜಿ ವಜಾ

ಚಿಂತಾಮಣಿ: ಶಿಡ್ಲಘಟ್ಟದ ನಗರಸಭೆ ಪೌರಾಯುಕ್ತೆ ಅಮೃತಾಗೌಡ ಅವರಿಗೆ ಧಮ್ಕಿ ಹಾಕಿ ತಲೆಮರೆಸಿಕೊಂಡಿರುವ ಕಾಂಗ್ರೆಸ್ ಮುಖಂಡ ರಾಜೀವ್ ಗೌಡ ಅವರ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಇಲ್ಲಿಯ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಶನಿವಾರ ವಜಾಗೊಳಿಸಿದೆ.

ರಾಜೀವ್ ಗೌಡ ಜ.17ರಂದು ವಕೀಲರ ಮೂಲಕ ನಿರೀಕ್ಷಣಾ ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದರು. ಅರ್ಜಿ ವಿಚಾರಣೆ ನಡೆಸಿದ್ದ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ಪ್ರಭಾರ ನ್ಯಾಯಾಧೀಶ ಕಾಂತರಾಜು ಜ. 22ರಂದು ವಿಚಾರಣೆ ಮುಗಿಸಿ, 24ರಂದು ತೀರ್ಪು ಕಾಯ್ದಿರಿಸಿದ್ದರು.

ರಾಜೀವ್ ಗೌಡ ಪರ ವಿವೇಕ ರೆಡ್ಡಿ ವಾದ ಮಂಡಿಸಿದರೆ, ಸರ್ಕಾರಿ ಅಭಿಯೋಜಕಿ ಸುಮತಿ ಶಾಂತಾ ಮೇರಿ ಜಾಮೀನು ಅರ್ಜಿ ವಿರೋಧಿಸಿ ವಾದ ಮಾಡಿದ್ದರು. ಪೌರಾಯುಕ್ತೆ ಜಿ. ಅಮೃತ ಗೌಡ ಅವರು ರಾಜೀವ್ ಗೌಡ ವಿರುದ್ಧ ಶಿಡ್ಲಘಟ್ಟ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದರು. ದೂರಿನ ಆಧಾರದ ಮೇಲೆ ಪೊಲೀಸರು ಬಿಎನ್‌ಎಸ್ ಸೆಕ್ಷನ್ 132, 224, 352, 351(3) ಮತ್ತು 56ರ ಅಡಿ ಎಫ್‌ಐಆರ್ ದಾಖಲಿಸಿದ್ದರು.

ಬಂಧನದಿಂದ ತಪ್ಪಿಸಿಕೊಳ್ಳಲು ರಾಜೀವ್ ತಲೆ ಮರೆಸಿಕೊಂಡಿದ್ದು, ವಕೀಲರ ಮೂಲಕ ನಿರೀಕ್ಷಣಾ ಜಾಮೀನಿಗೆ ಅರ್ಜಿ ಸಲ್ಲಿಸಿದ್ದರು.

ಬಾಕಿ ತೆರಿಗೆ ಪಾವತಿಗೆ ಒತ್ತಾಯ ಪುರಸಭೆ ಮುಖ್ಯಾಧಿಕಾರಿ ಧರಣಿ



ಮಳವಳ್ಳಿ (ಮಂಡ್ಯ ಜಿಲ್ಲೆ): ‘ಬಾಕಿ ಉಳಿಸಿಕೊಂಡಿರುವ ₹55 ಲಕ್ಷ ತೆರಿಗೆ ಪಾವತಿಸಬೇಕು’ ಎಂದು ಒತ್ತಾಯಿಸಿ ಪಟ್ಟಣದ ರೋಟರಿ ವಿದ್ಯಾಸಂಸ್ಥೆ ಮುಂಭಾಗ ಪುರಸಭೆ ಅಧಿಕಾರಿ ಎಂ.ಸಿ. ನಾಗರತ್ನ ಹಾಗೂ ಸಿಬ್ಬಂದಿ ಶನಿವಾರ ಧರಣಿ ನಡೆಸಿದರು.

‘12 ವರ್ಷಗಳಿಂದ ಕಟ್ಟಡ ಶುಲ್ಕ ಪಾವತಿಸಿಲ್ಲ. ಇದುವರೆಗೂ ₹8 ಲಕ್ಷ ತೆರಿಗೆಯನ್ನಷ್ಟೇ ಪಾವತಿಸ ಲಾಗಿದೆ. ಬಾಕಿ ತೆರಿಗೆ ಕಟ್ಟುವಂತೆ ಹಲವು ನೋಟಿಸ್ ನೀಡಿದ್ದರೂ, ಸಂಸ್ಥೆ ನಿರ್ಲಕ್ಷ್ಯ ತೋರಿದೆ’ ಎಂದು ಮುಖ್ಯಾಧಿಕಾರಿ ತಿಳಿಸಿದರು.

‘ತೆರಿಗೆ ಪಾವತಿಸುವಂತೆ ಸೂಚಿಸಲು ಸಿಬ್ಬಂದಿ ಶಾಲೆಗೆ ತೆರಳಿದಾಗ ಸಂಸ್ಥೆಯಿಂದ ಸಮರ್ಪಕ ಉತ್ತರ ಬಂದಿಲ್ಲ. ಸಿಬ್ಬಂದಿಗೆ ಸಂಬಳ ನೀಡಲು ಆಗಿಲ್ಲ. ಮಕ್ಕಳ ಹಿತ ದೃಷ್ಟಿಯಿಂದ ಶಾಲೆಗೆ ಬೀಗ ಹಾಕದೇ ತೆರಿಗೆ ಕಟ್ಟುವಂತೆ ಆಗ್ರಹಿಸಲಾಗುತ್ತಿದೆ’ ಎಂದರು.

‘ಸಂಸ್ಥೆಗೆ ನೋಟಿಸ್ ಬಂದಿಲ್ಲ, ಬಂದಿದ್ದರೆ ಆಡಳಿತ ಮಂಡಳಿಯೊಂದಿಗೆ ಚರ್ಚಿಸಿ ತೀರ್ಮಾನಿಸಲಾಗುವುದು’ ಎಂದು ಅಧ್ಯಕ್ಷ ಹಬಿ ಉಲ್ಲಾ ಖಾನ್ ಪ್ರತಿಕ್ರಿಯಿಸಿದರು.

ಹೆಣ್ಣು ಮಗು ಮಾರಾಟ: ಐವರ ಬಂಧನ

ಪ್ರಜಾವಾಣಿ ವಾರ್ತೆ



ಚಾಮರಾಜನಗರ: ಆರು ತಿಂಗಳ ಹೆಣ್ಣು ಮಗುವನ್ನು ₹50 ಸಾವಿರಕ್ಕೆ ಮಾರಾಟ ಮಾಡಿದ ಆರೋಪದ ಮೇರೆಗೆ ಪೋಷಕರು ಸೇರಿ ಐವರನ್ನು ಬಂಧಿಸಿ, ಮಗುವನ್ನು ರಕ್ಷಿಸಲಾಗಿದೆ.

ಮಗುವನ್ನು ಮಾರಾಟ ಮಾಡಿದ್ದ ಇಲ್ಲಿನ ರಾಮಸಮುದ್ರದ ದಂಪತಿ, ಮಗುವನ್ನು ಪಡೆದಿದ್ದ ಹಾಸನ ಜಿಲ್ಲೆ ಅರಕಲಗೂಡು ತಾಲ್ಲೂಕಿನ ಕೊಣನೂರಿನ ದಂಪತಿ ಹಾಗೂ ಮೈಸೂರಿನ ಚೆಲುವಾಂಬ ಆಸ್ಪತ್ರೆಯ ಡಿ ಗ್ರೂಪ್ ನೌಕರರಾದ ಮಧ್ಯವರ್ತಿ ಶಾಂತಾ ಬಂಧಿತರು. ‘ಜುಲೈ 26ರಂದು ಜಿಲ್ಲಾಸ್ಪತ್ರೆಯಲ್ಲಿ ಜನಿಸಿದ ಬಳಿಕ ದಂಪತಿ ಬಳಿ ಮಗು ಕಾಣದ ಬಗ್ಗೆ ದೂರು ಬಂದ ಮೇರೆಗೆ ವಿಚಾರಣೆ ನಡೆಸಲಾಯಿತು. ಆಗ ಪ್ರಕರಣ ಬೆಳಕಿಗೆ ಬಂತು’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಮುತ್ತುರಾಜ್ ತಿಳಿಸಿದರು.

‘ಮಗು ಆರೋಗ್ಯದಿಂದಿದ್ದು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವಶಕ್ಕೆ ಒಪ್ಪಿಸಲಾಗಿದೆ. ಹೆಚ್ಚುವರಿ ಎಸ್‌ಪಿ ಎಂ.ಎನ್.ಶಶಿಧರ್, ಡಿವೈಎಸ್‌ಪಿ ಸ್ನೇಹ ರಾಜ್ ಮಾರ್ಗದರ್ಶನದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಇನ್‌ಸ್ಪೆಕ್ಟರ್ ಎಂ.ಜಗದೀಶ್, ಪಿಎಸ್‌ಐ ಆರ್.ಮಂಜುನಾಥ್ ಪಾಲ್ಗೊಂಡಿದ್ದರು. ತಂಡಕ್ಕೆ ಬಹುಮಾನ ನೀಡಲಾಗುವುದು’ ಎಂದರು.

ಕಂಬಕ್ಕೆ ಕಟ್ಟಿ ದಲಿತ ಮಹಿಳೆಗೆ ಥಳಿತ ಮೂವರ ಬಂಧನ

ಪ್ರಜಾವಾಣಿ ವಾರ್ತೆ



ಹನೂರು (ಚಾಮರಾಜನಗರ ಜಿಲ್ಲೆ): ತಾಲ್ಲೂಕಿನ ದೊಮ್ಮನ ಗದ್ದೆ ಸಮೀಪದ ಜಿ.ಆರ್ ನಗರ ಗ್ರಾಮದಲ್ಲಿ ದಲಿತ ಮಹಿಳೆಯನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ, ಕಂಬಕ್ಕೆ ಕಟ್ಟಿ ಥಳಿಸಿದ ಆರೋಪದ ಮೇರೆಗೆ ಸೆಲ್ವಿ ಮಂಜು ಮತ್ತು, ಅಂಗಮುತ್ತು ಎಂಬುವವರನ್ನು ರಾಮಪುರ ಪೊಲೀಸರು ಶನಿವಾರ ಬಂಧಿಸಿದ್ದಾರೆ. ಕಣ್ಣಮ್ಮ ಹಲ್ಲೆಗೊಳಗಾದವರು. ಹಲ್ಲೆಯ ಫೋಟೊ, ವಿಡಿಯೊಗಳು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದ್ದವು.

‘ತನ್ನ ಜಮೀನಿನಲ್ಲಿ ಬೆಳೆದಿದ್ದ ಹುರುಳಿಯನ್ನು ಸೆಲ್ವಿಯವರ ಜಾನುವಾರುಗಳು ಮೇಯ್ದು, ತುಳಿದು ನಾಶ ಮಾಡಿವೆ ಎಂದು ರಾಮಪುರ ಪೊಲೀಸ್ ಠಾಣೆಗೆ ಕಣ್ಣಮ್ಮ ದೂರು ನೀಡಿದ್ದರು. ಈ ಸಂಬಂಧ ಠಾಣೆಗೆ ಬರುವಂತೆ ಪೊಲೀಸರು ಆರೋಪಿಗೆ ಸೂಚಿಸಿದ್ದರು.

‘ನಾನು ದೂರು ನೀಡಿದ ಬಳಿಕ ಸೆಲ್ವಿ ಮತ್ತು ಸಂಗಡಿಗರು ಮನೆಯಲ್ಲಿದ್ದ ನನ್ನನ್ನು ಹಾಗೂ ನನ್ನ ಮಗ ಪೆರುಮಾಳ್‌ನನ್ನು ಎಳೆದು ಹೊರತಂದು, ಜಾತಿ ಬಳಸಿ ಅವಾಚ್ಯ ಶಬ್ದಗಳಿಂದ ನಿಂದಿಸಿದರು. ಕಂಬಕ್ಕೆ ಕಟ್ಟಿ ಥಳಿಸಿದರು’ ಎಂದು ಕಣ್ಣಮ್ಮ ಮತ್ತೆ ದೂರು ನೀಡಿದ್ದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮುತ್ತುರಾಜ್ ಅವರು ರಾಮಪುರ ಠಾಣೆ ಮತ್ತು ಗ್ರಾಮಕ್ಕೆ ಭೇಟಿ ನೀಡಿದ್ದರು.

ಭರತ್ ರೆಡ್ಡಿಯದ್ದೇ ಕೃತ್ಯ, ಶಾಸಕನಿಗೆ ಸಿ.ಎಂ ರಕ್ಷಣೆ: ಜನಾರ್ದನ ರೆಡ್ಡಿ ಆರೋಪ

ರೆಡ್ಡಿ ಮನೆಗೆ ಬೆಂಕಿ; ರೀಲ್ಸ್‌ಗಾಗಿ ಕೃತ್ಯ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ‘ರೀಲ್ಸ್, ಫೋಟೊ ಚಿತ್ರೀಕರಣಕ್ಕಾಗಿ ‘ಜಿ ಸ್ಕ್ವೇರ್’ ಬಡಾವಣೆಯಲ್ಲಿರುವ ಜನಾರ್ದನ ರೆಡ್ಡಿ ಪತ್ನಿ ಅರುಣಾ ಒಡೆತನದ ಮಾದರಿ ಮನೆಗೆ (ಮಾಡಲ್ ಹೌಸ್) ಬಂದಿದ್ದ ಗುಂಪು ಹೊತ್ತಿಸಿದ ಬೆಂಕಿಯಿಂದ ಅವಘಡ ಸಂಭವಿಸಿದೆ. ಪ್ರಕರಣ ಸಂಬಂಧ ಕಾನೂನು ಸಂಘರ್ಷಕ್ಕೆ ಒಳಗಾದ ಆರು ಮಂದಿ ಸೇರಿ ಒಟ್ಟು ಎಂಟು ಜನರನ್ನು ಬಂಧಿಸಲಾಗಿದೆ’ ಎಂದು ಬಳ್ಳಾರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸುಮನ್ ಪೆನ್ನೇಕರ್ ತಿಳಿಸಿದರು.

ಘಟನಾ ಸ್ಥಳಕ್ಕೆ ಶನಿವಾರ ಭೇಟಿ ನೀಡಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಸುಹೇಲ್ (18) ಮತ್ತು ಸುರೇಶ್ (32) ಎಂಬುವರನ್ನು ಬಂಧಿಸಲಾಗಿದೆ. ರೀಲ್ಸ್, ಫೋಟೊಗಾಗಿ ಈ ಹುಡುಗರ ಗುಂಪು ಆಗಾಗ ಈ ಮನೆಗೆ ಬರುತ್ತಿತ್ತು. ಗುಂಪಿನಲ್ಲಿದ್ದ ಇಬ್ಬರು ಕಾನೂನು ಸಂಘರ್ಷಕ್ಕೊಳಗಾದವರು ಮನೆಯಲ್ಲಿದ್ದ ವಸ್ತುವೊಂದಕ್ಕೆ ಬೆಂಕಿ ಹೊತ್ತಿಸಿದ್ದಾರೆ. ಅದು ಇಡೀ ಮನೆಗೆ ವ್ಯಾಪಿಸಿದೆ’ ಎಂದರು.

₹1.25 ಕೋಟಿ ನಷ್ಟ: ಮನೆಯಲ್ಲಿ ಟಿ.ವಿ, ಕುರ್ಚಿ, ಸೋಫಾ ಸೆಟ್, ಕಿಚನ್ ಸೆಟ್ ಎ.ಸಿ, ಫ್ರಿಡ್ಜ್, ಪಿ.ಒ.ಪಿ ವಸ್ತುಗಳು, ಮರದ ಬಾಗಿಲುಗಳು ಸೇರಿ ಒಟ್ಟು ₹1.25 ಕೋಟಿ ನಷ್ಟವಾಗಿದೆ ಎಂದು ಜಿ ಸ್ಕ್ವೇರ್ ಬಡಾವಣೆಯ ಸೈಟ್ ಎಂಜಿನಿಯರ್ ಬಳ್ಳಾರಿ ಗ್ರಾಮೀಣ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಇದನ್ನು ಆಧರಿಸಿ ಪೊಲೀಸರು ಶುಕ್ರವಾರ ರಾತ್ರಿಯೇ ಎಫ್‌ಐಆರ್ ದಾಖಲು ಮಾಡಿದ್ದಾರೆ.


ಬೆಂಕಿಗೆ ಆಹುತಿಯಾದ ಮಾದರಿ ಮನೆಗೆ ಶನಿವಾರ ಎಸ್‌ಪಿ ಸುಮನ್ ಪೆನ್ನೇಕರ್ ಮತ್ತು ಪೊಲೀಸರು ಭೇಟಿ ನೀಡಿ, ಪರಿಶಿಲಿಸಿದರು

ಭರತ್ ರೆಡ್ಡಿ ಕೃತ್ಯ: ‘ಮನೆಗೆ ಬೆಂಕಿ ಬಿದ್ದ ಕೃತ್ಯದಲ್ಲಿ ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಕೈವಾಡವಿದೆ. ಇದೇ ಮನೆಯಲ್ಲಿ ಕಳ್ಳತನವಾದ ಬಗ್ಗೆ ನಾಲ್ಕು ತಿಂಗಳ ಹಿಂದೆ ದೂರು ನೀಡಿದಾಗ, ಆರೋಪಿಗಳನ್ನು ಭರತ್ ರೆಡ್ಡಿ ಮತ್ತು ಎಎಸ್‌ಪಿ ರವಿಕುಮಾರ್ ರಕ್ಷಿಸಿದ್ದರು’ ಎಂದು ಶಾಸಕ ಜನಾರ್ದನ ರೆಡ್ಡಿ ಆರೋಪಿಸಿದರು.

‘ರೀಲ್ಸ್ ಮಾಡಲು ಬಂದವರು ಬೆಂಕಿ ಇಟ್ಟಿದ್ದಾರೆ ಎಂದರೆ ನಂಬಲು ಸಾಧ್ಯವೇ? ಬಂಧನಕ್ಕೆ ಒಳಗಾದವರ ವೈದ್ಯಕೀಯ ಪರೀಕ್ಷೆ ಮಾಡಿಸಬೇಕು. ಅವರು ಗಾಂಜಾ ಸೇವಿಸಿದ್ದು ಬಹಿರಂಗವಾಗುತ್ತದೆ. ಶಾಸಕ ಭರತ್ ರೆಡ್ಡಿಯಂತಹ ಕ್ರಿಮಿನಲ್‌ಗಳನ್ನು ಮುಖ್ಯಮಂತ್ರಿ ರಕ್ಷಣೆ ಮಾಡುತ್ತಾರೆ’ ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

> **ತಾವು ಏನು ಮಾಡುತ್ತಿದ್ದೇವೆ ಎಂಬುದರ ಅರಿವಿಲ್ಲದೇ ಗುಂಪಿನಲ್ಲಿದ್ದ ಇಬ್ಬರು ಈ ಕೃತ್ಯವೆಸಗಿದ್ದಾರೆ. ಅದು ದೊಡ್ಡ ಮಟ್ಟದ ಅಗ್ನಿ ಅವಘಡಕ್ಕೆ ಕಾರಣವಾಗಿದೆ**
> **ಡಾ. ಪಿ.ಎಸ್ ಹರ್ಷ,** ಐಜಿಪಿ

> **ಜನಾರ್ದನ ರೆಡ್ಡಿ ಅವರ ಲೇಔಟ್‌ನಲ್ಲಿ ಯಾವುದೇ ಭದ್ರತೆ, ಸಿಸಿಟಿವಿಯೂ ಇರಲಿಲ್ಲ. ಇಂಥ ವ್ಯವಸ್ಥೆ ಮಾಡಿಕೊಳ್ಳುವ ಜವಾಬ್ದಾರಿ ಅವರದ್ದೂ ಆಗಿರುತ್ತದೆ. ಮನೆಯಲ್ಲಿ ಯಾವುದೇ ವಸ್ತುಗಳು ಇರಲಿಲ್ಲ**
> **ಸುಮನ್ ಪೆನ್ನೇಕರ್,** ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

ನದಿಗೆ ತ್ಯಾಜ್ಯ ₹ 10 ಸಾವಿರ ದಂಡ

ಖಾನಾಪುರ (ಬೆಳಗಾವಿ ಜಿಲ್ಲೆ): ಮಲಪ್ರಭಾ ನದಿಯಲ್ಲಿ ಈಚೆಗೆ ಬಟ್ಟೆ, ಹಾಸಿಗೆ ಸೇರಿದಂತೆ ತ್ಯಾಜ್ಯ ಎಸೆದ ವ್ಯಕ್ತಿಯೊಬ್ಬರಿಂದ ಸ್ಥಳೀಯ ಪಟ್ಟಣ ಪಂಚಾಯತಿಯವರು ₹ 10 ಸಾವಿರ ದಂಡ ವಸೂಲಿ ಮಾಡಿದ್ದಾರೆ.

ತಾಲ್ಲೂಕಿನ ತೀರ್ಥಕುಂಡೆ ಗ್ರಾಮದ ವ್ಯಕ್ತಿಯೊಬ್ಬರು ತಮ್ಮ ಮನೆಯ ಹಾಸಿಗೆ, ಬಟ್ಟೆ ಮತ್ತಿತರ ತ್ಯಾಜ್ಯವನ್ನು ತಮ್ಮ ವಾಹನದಲ್ಲಿ ತಂದು ಪಟ್ಟಣದ ಹೊರವಲಯದ ಮಲಪ್ರಭಾ ನದಿ ಸೇತುವೆಯಿಂದ ನದಿಗೆ ಎಸೆದು ತೆರಳಿದ್ದರು. ‘ಪೊಲೀಸರ ನೆರವಿನಿಂದ ಆ ವ್ಯಕ್ತಿಯನ್ನು ಪತ್ತೆ ಮಾಡಿ, ದಂಡ ವಸೂಲಿ ಮಾಡಲಾಯಿತು. ಮುಂದಿನ ದಿನಗಳಲ್ಲಿ ನದಿಯನ್ನು ಮಲಿನಗೊಳಿಸುವವರಿಗೆ ಇದು ಪಾಠ ಆಗಲಿದೆ’ ಎಂದು ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಸಂತೋಷ ಕುರಬೆಟ್, ಆರೋಗ್ಯ ನಿರೀಕ್ಷಕ ಪ್ರೇಮಾನಂದ ನಾಯ್ಕ ಹೇಳಿದ್ದಾರೆ.

ಬೀದರ್‌ನಲ್ಲಿ ಮೂರು ದಿನಗಳ ಪುಸ್ತಕ ಸಂತೆಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೀದರ್: ವೀರಲೋಕ ಬುಕ್ಸ್, ಭಾಲ್ಕಿ ಹಿರೇಮಠ ಸಂಸ್ಥಾನ ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಹಯೋಗದೊಂದಿಗೆ ಹಮ್ಮಿಕೊಂಡಿರುವ ಮೂರು ದಿನಗಳ ಪುಸ್ತಕ ಸಂತೆಗೆ ನಗರದಲ್ಲಿ ಶನಿವಾರ ಚಾಲನೆ ನೀಡಲಾಯಿತು.

ರಾಜ್ಯದ ವಿವಿಧ ಭಾಗದ ಸಾಹಿತಿಗಳು, ಪ್ರಕಾಶಕರು, ಓದುಗರು ಸಾಕ್ಷಿಯಾದ ಕಾರ್ಯಕ್ರಮಕ್ಕೆ ಸಾಹಿತಿ ಬರಗೂರು ರಾಮಚಂದ್ರಪ್ಪ ಚಾಲನೆ ನೀಡಿದರು. ‘ಜನರಲ್ಲಿ ಪುಸ್ತಕ ಅಭಿರುಚಿ ಬೆಳೆಸಲು ಪುಸ್ತಕ ಸಂತೆ ಸಹಕಾರಿಯಾಗಲಿದೆ’ ಎಂದರು. ‘ಮೂರು ವರ್ಷಗಳಿಂದ ರಾಜ್ಯ ಸರ್ಕಾರ ಗ್ರಂಥಾಲಯ ಇಲಾಖೆ ಮೂಲಕ ಸಗಟು ಪುಸ್ತಕಗಳನ್ನು ಖರೀದಿಸಿಲ್ಲ. ಇದು ಕಾಲಕಾಲಕ್ಕೆ ನಡೆಯುತ್ತಿರಬೇಕು. ಬಜೆಟ್‌ನಲ್ಲಿಯೇ ಇದಕ್ಕೆ ವಿಶೇಷ ಅನುದಾನ ಇರಿಸಬೇಕು. ರಾಜ್ಯದಲ್ಲಿ 6,804 ಗ್ರಂಥಾಲಯಗಳಿವೆ. ಆದರೆ, ಅವುಗಳಿಗೆ ಪುಸ್ತಕ ಪೂರೈಸುವ ಇಚ್ಛಾಶಕ್ತಿಯನ್ನು ಸರ್ಕಾರ ತೋರಿಸಬೇಕಿದೆ’ ಎಂದು ಒತ್ತಿ ಹೇಳಿದರು. ವೀರಲೋಕ ಬುಕ್ಸ್‌ನ ವೀರಕಪುತ್ರ ಶ್ರೀನಿವಾಸ ಮಾತನಾಡಿ, ‘ಪುಸ್ತಕ ಖರೀದಿಸಿ, ಓದುವ ಸಂಸ್ಕೃತಿ ಬೆಳೆಸುವ ಉದ್ದೇಶದಿಂದ ಬೆಂಗಳೂರಿನಿಂದ ಹೊರಗೆ ಮೊದಲಬಾರಿಗೆ ಪುಸ್ತಕ ಸಂತೆ ಆಯೋಜಿಸಲಾಗಿದೆ’ ಎಂದರು.

‘ನಾವು ಯಾವುದೇ ಕಾರ್ಯಕ್ರಮಗಳಿಗೆ ಹೋದರೆ ಅಲ್ಲಿ ಪುಸ್ತಕಗಳನ್ನು ಉಡುಗೊರೆಯಾಗಿ ಕೊಡುವ ಸಂಪ್ರದಾಯ ಬೆಳೆಸಿಕೊಳ್ಳಬೇಕು. ನನಗೆ ಪುಸ್ತಕಗಳ ಮಹತ್ವ ತಿಳಿದ ನಂತರ ಇದನ್ನೇ ಮಾಡುತ್ತಿರುವೆ’ ಎಂದು ಸಿನಿಮಾ ನಟ ಪ್ರೇಮ್ ಹೇಳಿದರು.

ಪೌರಾಡಳಿತ ಸಚಿವ ರಹೀಂ ಖಾನ್, ಶಾಸಕ ಡಾ.ಶೈಲೇಂದ್ರ ಕೆ. ಬೆಲ್ದಾಳೆ, ಬಸವಕಲ್ಯಾಣ ಅನುಭವ ಮಂಟಪದ ಅಧ್ಯಕ್ಷ ಬಸವಲಿಂಗ ಪಟ್ಟದ್ದೇವರು, ಹುಲಸೂರು ಗುರುಬಸವೇಶ್ವರ ಸಂಸ್ಥಾನ ಮಠದ ಶಿವಾನಂದ ಸ್ವಾಮೀಜಿ, ಸಂತೆಯ ಆಯೋಜಕ ಗುರುನಾಥ ರಾಜಗೀರಾ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸುರೇಶ ಚನಶೆಟ್ಟಿ, ನಟರಾದ ಪ್ರೇಮ್, ಸುಚೇಂದ್ರಪ್ರಸಾದ್, ಅಶ್ವತ್ಥ, ಸುಲಕ್ಷಾ ಕೈರಾ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಸಂತೋಷ್ ಹಾನಗಲ್, ಬಾಬುರಾವ್ ಮಲ್ಕಾಪುರೆ ಪಾಲ್ಗೊಂಡಿದ್ದರು.

> **ಈ ರೀತಿಯ ಪುಸ್ತಕ ಸಂತೆಗಳ ಆಯೋಜನೆಗೆ ಸರ್ಕಾರದಿಂದ ಅಗತ್ಯ ಸಹಕಾರ, ನೆರವು ನೀಡಲಾಗುವುದು. ಜಿಲ್ಲೆಯ ಎಲ್ಲ ಶಾಲೆಗಳು, ಗ್ರಾಮ ಪಂಚಾಯಿತಿಗಳಲ್ಲಿ ಪುಸ್ತಕ ಖರೀದಿಸಲು ಅಧಿಕಾರಿಗಳಿಗೆ ಸೂಚಿಸುವೆ**
> **ಈಶ್ವರ ಬಿ. ಖಂಡ್ರೆ,** ಪರಿಸರ, ಅರಣ್ಯ ಮತ್ತು ಜೀವಿಶಾಸ್ತ್ರ ಸಚಿವ



ಬೀದರ್‌ನಲ್ಲಿ ಶನಿವಾರ ಆರಂಭಗೊಂಡ ವೀರಲೋಕ ಪುಸ್ತಕ ಸಂತೆಯಲ್ಲಿ ಜನರು ಪುಸ್ತಕ ಖರೀದಿಸಿದರು ಚಿತ್ರ: ಲೋಕೇಶ ಬಿರಾದಾರ

ದೃಶ್ಯ ಹಂಚಿಕೆ ಮೂವರ ಬಂಧನ

ಕಾರವಾರ: ಇಲ್ಲಿನ ಖಾಸಗಿ ಆಸ್ಪತ್ರೆ ಸಿಬ್ಬಂದಿ ರಾಜೀವ ಪಿಕಳೆ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಅಂಕೋಲಾ ಠಾಣೆ ಪೊಲೀಸರು ಮೂವರನ್ನು ಶನಿವಾರ ಬಂಧಿಸಿದ್ದಾರೆ.

ಕಾರವಾರ ತಾಲ್ಲೂಕಿನ ವೈಲವಾಡ ಗ್ರಾಮದವರಾದ ಅನಿಲ ನಾಯ್ಕ, ಹರಿಶ್ಚಂದ್ರ ನಾಯ್ಕ, ಸುಭಾಶ ನಾಯ್ಕ ಬಂಧಿತ ಆರೋಪಿಗಳು. ಆಸ್ಪತ್ರೆಯಲ್ಲಿ ಔಷಧ ವಿಭಾಗ ನಿರ್ವಹಣೆ ಮಾಡುತ್ತಿದ್ದ ರಾಜೀವ ಪಿಕಳೆ ಅವಧಿ ಮೀರಿದ ಔಷಧ ನೀಡಿದ್ದಾರೆಂದು ವ್ಯಕ್ತಿಯೊಬ್ಬರು ತರಾಟೆಗೆ ತೆಗೆದುಕೊಂಡಿದ್ದ ದೃಶ್ಯ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿತ್ತು. ಇದರಿಂದ ಮನನೊಂದು ಅವರು ಆತ್ಮಹತ್ಯೆ ಮಾಡಿಕೊಂಡಿದ್ದರು.

ರಾಜ್ಯಪಾಲರ ಮುಂದೆ ಮತ್ತೆ ‘ಭಾಷಣ’

ಒಂದನೇ ಪುಟದಿಂದ...

ಹಾಗಾಗಿ, ಜಂಟಿ ಅಧಿವೇಶನಕ್ಕೆ ಹಾಜರಾದರೂ ಭಾಷಣದ ಮೊದಲ ಹಾಗೂ ಕೊನೆಯ ಸಾಲುಗಳನ್ನಷ್ಟೇ ಓದಿದ್ದ ರಾಜ್ಯಪಾಲರು ನಿರ್ಗಮಿಸಿದ್ದರು. ನಂತರ ನಡೆದ ಬೆಳವಣಿಗೆಗಳು, ಭಾಷಣದ ಮೊಟಕು ವಿಚಾರ ಉಭಯ ಸದನಗಳಲ್ಲೂ ಆಡಳಿತ–ವಿರೋಧ ಪಕ್ಷಗಳ ನಡುವೆ ವಾಗ್ವಾದಕ್ಕೆ ಕಾರಣವಾಗಿ ಎರಡನೇ ದಿನದ ಕಲಾಪ ಕೋಲಾಹಲದಲ್ಲೇ ಅಂತ್ಯವಾಗಿತ್ತು.

ಗಣರಾಜ್ಯೋತ್ಸವ ಭಾಷಣವನ್ನೂ ರಾಜ್ಯ ಸರ್ಕಾರವೇ ಸಿದ್ಧಪಡಿಸುತ್ತದೆ. ಲೋಕಭವನಕ್ಕೆ ಕಳುಹಿಸಿರುವ ಭಾಷಣದಲ್ಲಿ ಕೇಂದ್ರ ಸರ್ಕಾರದ ಕೆಲ ಯೋಜನೆಗಳು, ಅನುದಾನ ಹಂಚಿಕೆಯ ತಾರತಮ್ಯದ ವಿಷಯಗಳನ್ನು ಉಲ್ಲೇಖ ಮಾಡಲಾಗಿದೆ ಎಂದು ಗೊತ್ತಾಗಿದೆ. ಅಂತಹ ಅಂಶಗಳನ್ನು ಕೈಬಿಟ್ಟು ಭಾಷಣ ಅಂತಿಮಗೊಳಿಸುವಂತೆ ತಮ್ಮ ಸಿಬ್ಬಂದಿಗೆ ರಾಜ್ಯಪಾಲರು ಸೂಚಿಸಿದ್ದಾರೆ ಎಂದು ತಿಳಿದು ಬಂದಿದೆ.

ಸಂವಿಧಾನದ ನಿಯಮಗಳ ಪ್ರಕಾರ ಜಂಟಿ ಅಧಿವೇಶನದಲ್ಲಿ ರಾಜ್ಯ ಸರ್ಕಾರ ಸಿದ್ಧಪಡಿಸಿದ ಭಾಷಣವನ್ನು ರಾಜ್ಯಪಾಲರು ಓದುವುದು ಕಡ್ಡಾಯ. ಅವರು ಭಾಷಣದ ಮೊದಲ ಹಾಗೂ ಕೊನೆಯ ಸಾಲುಗಳನ್ನು ಓದಿದರೂ ಅದನ್ನು ಪೂರ್ಣ ಓದಲಾಗಿದೆ ಎಂದೇ ಸದನ ಅಂಗೀಕರಿಸುತ್ತದೆ. ನಂತರ ರಾಜ್ಯಪಾಲರ ಭಾಷಣಕ್ಕೆ ಆಡಳಿತ–ವಿರೋಧ ಪಕ್ಷಗಳ ಸದಸ್ಯರು ವಂದನಾ ನಿರ್ಣಯ ಸಲ್ಲಿಸುತ್ತಾರೆ. ಚರ್ಚೆ ಮಾಡುತ್ತಾರೆ. ಆದರೆ, ಗಣರಾಜ್ಯೋತ್ಸವ ಸಮಾರಂಭದಲ್ಲಿ ರಾಜ್ಯ ಸರ್ಕಾರ ಸಿದ್ಧಪಡಿಸಿದ ಭಾಷಣವನ್ನೇ ಓದಬೇಕು ಎಂಬ ಯಾವ ನಿಯಮಗಳೂ ಇಲ್ಲ. ಹಾಗಾಗಿ, ರಾಜ್ಯಪಾಲರು ಸರ್ಕಾರ ಸಿದ್ಧಪಡಿಸಿದ ಭಾಷಣದಲ್ಲಿ ಕೇಂದ್ರದ ವಿರುದ್ಧದ ಅಂಶಗಳನ್ನು ಕೈಬಿಟ್ಟು ಓದುತ್ತಾರಾ, ಪೂರ್ಣ ಭಾಷಣ ಮಾಡುತ್ತಾರಾ ಎಂಬ ಚರ್ಚೆಗಳು ಬಿರುಸುಗೊಂಡಿವೆ.

ಲಿಂಗತ್ವ ಅಲ್ಪಸಂಖ್ಯಾತರಿಗೆ ಪ್ರತ್ಯೇಕ ಮಂಡಳಿ

ಒಂದನೇ ಪುಟದಿಂದ...

ವಿವಿಧ ಇಲಾಖೆಗಳ ಯೋಜನೆಗಳಲ್ಲಿ ಈ ವರ್ಗದವರ ಕಲ್ಯಾಣಕ್ಕೆ ಮೂಲ ದತ್ತಾಂಶ ಒದಗಿಸಲು ಸಮೀಕ್ಷೆ ಹಮ್ಮಿಕೊಳ್ಳಲಾಗಿತ್ತು. ಸಾಮಾಜಿಕ ಸ್ಥಿತಿಗತಿ, ಶೈಕ್ಷಣಿಕ ಮಾಹಿತಿ, ವಾಸ ಸ್ಥಳ, ವಲಸೆ ಮಾಹಿತಿ, ಕುಟುಂಬದವರಿಂದ ಸ್ವೀಕಾರ, ಕುಟುಂಬದ ಮೇಲಿನ ಅವಲಂಬನೆ, ಉದ್ಯೋಗ ಮತ್ತು ಆದಾಯ, ಸರ್ಕಾರಿ ಸೌಲಭ್ಯಗಳನ್ನು ಪಡೆದಿರುವ ವಿವರ, ಮನೆ, ನಿವೇಶನ ಹಾಗೂ ಕೃಷಿ ಭೂಮಿ ಹೊಂದಿರುವ ಮಾಹಿತಿ, ಶಸ್ತ್ರ ಚಿಕಿತ್ಸೆಗೊಳಗಾದ ಮಾಹಿತಿ, ಆರೋಗ್ಯದ ಸ್ಥಿತಿಗತಿ, ವಾಸದ ಮನೆಗಳು ಹಾಗೂ ಮೂಲ ಸೌಕರ್ಯಗಳ ಮಾಹಿತಿಯನ್ನು ಸಮೀಕ್ಷೆಯಲ್ಲಿ ಕಲೆಹಾಕಲಾಗಿದೆ.

ಹೆಚ್ಚು ಲಿಂಗತ್ವ ಅಲ್ಪಸಂಖ್ಯಾತರು ಇರುವ ಜಿಲ್ಲೆಗಳು

ಜಿಲ್ಲೆ	ಸಂಖ್ಯೆ
ವಿಜಯಪುರ	1,428
ಚಿಕ್ಕಬಳ್ಳಾಪುರ	1,252
ಬೆಂಗಳೂರು	757
ಕೋಲಾರ	638
ಬೆಳಗಾವಿ	618

ಅಂಕಿ ಅಂಶಗಳು
- **10,365** ರಾಜ್ಯದಲ್ಲಿನ ಲಿಂಗತ್ವ ಅಲ್ಪಸಂಖ್ಯಾತರು
- **10,250** 18 ವರ್ಷ ಮೇಲ್ಪಟ್ಟವರು
- **115** 18 ವರ್ಷ ಒಳಗಿನವರು

ಪರ್ಯಾಯ ಜನಪರ ಶಿಕ್ಷಣ ನೀತಿಗಾಗಿ ‘ಜನ ಸಂಸತ್ತು’ ಕಾರ್ಯಕ್ರಮದಲ್ಲಿ ಸುಖದೇವ್ ಥೋರಟ್

‘ತರ್ಕಹೀನ ಅವೈಜ್ಞಾನಿಕ ಪಠ್ಯಕ್ರಮ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ಜ್ಞಾನ ವ್ಯವಸ್ಥೆಯ ಹೆಸರಿನಲ್ಲಿ ತರ್ಕಹೀನ ಅವೈಜ್ಞಾನಿಕ ಪಠ್ಯಕ್ರಮವನ್ನು ಕೇಂದ್ರ ಸರ್ಕಾರ ರೂಪಿಸುತ್ತಿದೆ. ರಾಜ್ಯ ಸರ್ಕಾರಗಳೊಂದಿಗೆ ಚರ್ಚಿಸದೇ ಅಪ್ರಜಾತಾಂತ್ರಿಕವಾಗಿ ರಾಷ್ಟ್ರೀಯ ಶಿಕ್ಷಣ ನೀತಿ–2020 ಜಾರಿ ಮಾಡಿದೆ ಎಂದು ವಿಶ್ವವಿದ್ಯಾಲಯ ಧನ ಸಹಾಯ ಆಯೋಗದ (ಯುಜಿಸಿ) ಮಾಜಿ ಅಧ್ಯಕ್ಷ ಸುಖದೇವ್ ಥೋರಟ್ ಹೇಳಿದರು.

ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿ (ಎಐಎಸ್‌ಇಸಿ) ಶನಿವಾರ ಹಮ್ಮಿಕೊಂಡಿದ್ದ ಎನ್‌ಇಪಿ–2020ಕ್ಕೆ ಪರ್ಯಾಯ ಜನಪರ ಶಿಕ್ಷಣ ನೀತಿಗಾಗಿ ‘ಜನ ಸಂಸತ್ತು’ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಧರ್ಮ ನಿರಪೇಕ್ಷ ತತ್ವದಡಿ ಬೋಧನೆ ಇರಬೇಕು. ಯಾವುದೋ ಒಂದು ಧರ್ಮಕ್ಕೆ ಸೀಮಿತವಾಗಿರ ಬಾರದು ಎಂದು ಸಂವಿಧಾನದ 28ನೇ ವಿಧಿ ಹೇಳುತ್ತದೆ. ದೇಶದಲ್ಲಿ ಕನ್ನಡ, ತೆಲುಗು, ತಮಿಳು ಸೇರಿದಂತೆ ಅನೇಕ ಭಾಷಾ ಬೋಧನಾ ಕಾಲೇಜುಗಳಿವೆ. ಅಲ್ಲಿ ಭಾಷೆಗೆ ಸಂಬಂಧಿಸಿದ ಅಧ್ಯಯನಗಳಿವೆ. ಆದರೆ, ಸಂಸ್ಕೃತ ಕಾಲೇಜುಗಳು, ಮಹಾವಿದ್ಯಾಲಯಗಳು ಮಾತ್ರ ಧರ್ಮ ನಿರಪೇಕ್ಷ ನಿಯಮವನ್ನು ಉಲ್ಲಂಘಿಸುತ್ತಿವೆ. ಭಾಷೆಯ ಜೊತೆಗೆ ಧರ್ಮವನ್ನೂ ಬೋಧಿಸುತ್ತಿದೆ ಎಂದು ಆರೋಪಿಸಿದರು.

1990ರ ನಂತರದ ಖಾಸಗೀಕರಣದಿಂದಾಗಿ ಶೈಕ್ಷಣಿಕ ಅಸಮಾನತೆ ಹೆಚ್ಚುತ್ತಿದೆ. ಸುಮಾರು ಶೇ 67 ಸಂಸ್ಥೆಗಳು ಸ್ವಯಂ-ಹಣಕಾಸು ಮತ್ತು ಖಾಸಗಿ ಸಂಸ್ಥೆಗಳಾಗಿ ಮಾರ್ಪಟ್ಟಿವೆ. ಹೆಚ್ಚುತ್ತಿರುವ ಶೈಕ್ಷಣಿಕ ಶುಲ್ಕದಿಂದಾಗಿ, ಶೇ 22ರಷ್ಟು ಬಡ ವಿದ್ಯಾರ್ಥಿಗಳು ಅರ್ಧದಲ್ಲಿಯೇ ಶಿಕ್ಷಣ ಮೊಟಕುಗೊಳಿಸುತ್ತಿದ್ದಾರೆ. ಸಾರ್ವಜನಿಕ ಶಿಕ್ಷಣ, ಸಾರ್ವತ್ರಿಕ ಶಿಕ್ಷಣ ಎಂಬುದು ಮರೀಚಿಕೆಯಾಗುತ್ತಿದೆ ಎಂದು ತಿಳಿಸಿದರು.

ಮಾಜಿ ಸಂಸದ ಜವಾಹರ್ ಸರ್ಕಾರ್ ಮಾತನಾಡಿ, ಶಿಕ್ಷಣದಲ್ಲಿ ಕೇಂದ್ರೀಕರಣ, ಕಾರ್ಪೊರೇಟೀಕರಣ, ಕೋಮುವಾದ ಮತ್ತು ಭ್ರಷ್ಟಾಚಾರವನ್ನು ತುರುಕಲು ರಾಷ್ಟ್ರೀಯ ಶಿಕ್ಷಣ ನೀತಿ–2020ಅನ್ನು ಜಾರಿಗೆ ತಂದಿದೆ. ಇದರ ವಿರುದ್ಧ ನಿರಂತರ ಹೋರಾಟ ಅಗತ್ಯ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ವಿವಿಧ ಗೋಷ್ಠಿ: ಜನಪರ ಶಿಕ್ಷಣ ನೀತಿಗಾಗಿ ವಿವಿಧ ಗೋಷ್ಠಿಗಳು ನಡೆದವು. ಎಐಎಸ್‌ಇಸಿ ಅಧ್ಯಕ್ಷ ಪ್ರಕಾಶ್ ಎನ್., ಸ್ವಾಗತ ಸಮಿತಿ ಅಧ್ಯಕ್ಷ ಮುರಿಗೆಪ್ಪ, ಶಿಕ್ಷಣ ತಜ್ಞರಾದ ಅರುಣಕುಮಾರ್, ಆದಿತ್ಯ ಮುಖರ್ಜಿ, ನಿರಂಜನಾರಾಧ್ಯ ವಿ.ಪಿ, ಆರ್. ಮಹಾಲಕ್ಷ್ಮೀ, ಎ.ಎಚ್. ರಾಜಾಸಾಬ್, ಫ್ರಾನ್ಸಿಸ್ ಅಸ್ಸಿಸಿ, ಅಲ್ಮೇಡಾ, ಜವಾಹರ್ ನೇಸನ್, ಮಹಾಬಲೇಶ್ವರ ರಾವ್ ಸಹಿತ ಅನೇಕರು ಭಾಗವಹಿಸಿದ್ದರು.


ಜನಪರ ಶಿಕ್ಷಣ ನೀತಿಗಾಗಿ ‘ಜನ ಸಂಸತ್ತು’ ಕಾರ್ಯಕ್ರಮದಲ್ಲಿ ನಿರಂಜನಾರಾಧ್ಯ ವಿ.ಪಿ., ಧ್ರುವಜ್ಯೋತಿ ಮುಖ್ಯೋಪಾಧ್ಯಾಯ, ರಾಮ್ ಪುನಿಯಾನಿ, ಸುಖದೇವ್ ಥೋರಟ್, ಪ್ರಕಾಶ್ ಎನ್. ಶಾ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಶತಮಾನಕ್ಕೂ ಹಳೆಯ ಸಿದ್ಧಾಂತ ಪ್ರತಿಪಾದನೆ: ಪುನಿಯಾನಿ

‘ಕೇಂದ್ರ ಸರ್ಕಾರವು ಸಾಮಾಜಿಕ ಅಸಮಾನತೆಯನ್ನು ಆಳಗೊಳಿಸಲು ಮತ್ತು ಸಾಂವಿಧಾನಿಕ ಹಕ್ಕುಗಳನ್ನು ಹತ್ತಿಕ್ಕಲು ಹವಣಿಸುತ್ತಿರುವ ಶತಮಾನದಷ್ಟು ಹಳೆಯದಾದ ರಾಜಕೀಯ ಸಿದ್ಧಾಂತವನ್ನು ಪ್ರತಿನಿಧಿಸುತ್ತಿದೆ’ ಎಂದು ಐಐಟಿ ಮುಂಬೈನ ನಿವೃತ್ತ ಪ್ರಾಧ್ಯಾಪಕ ರಾಮ್ ಪುನಿಯಾನಿ ಹೇಳಿದರು.

‘ವೈಜ್ಞಾನಿಕ ಮನೋಭಾವ ಮತ್ತು ತರ್ಕಬದ್ಧ ಚಿಂತನೆಯ ಮೇಲೆ ವ್ಯವಸ್ಥಿತವಾಗಿ ದಾಳಿ ಮಾಡುತ್ತಿದೆ’ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು. ‘ಗುಣಮಟ್ಟದ ಶಿಕ್ಷಣವನ್ನು ಉಳ್ಳವರಿಗಾಗಿ ಮೀಸಲಿಡುತ್ತಾ, ಸಾರ್ವಜನಿಕ ಶಾಲೆಗಳನ್ನು ಮುಚ್ಚುತ್ತಿದೆ ಮತ್ತು ಸಾವಿರಾರು ಶಿಕ್ಷಕರ ಹುದ್ದೆಗಳನ್ನು ಖಾಲಿ ಉಳಿಸುತ್ತಿದೆ. ಪಠ್ಯಪುಸ್ತಕಗಳಿಂದ ಕಾಲಾನುಕ್ರಮ ಕೋಷ್ಟಕ ಮತ್ತು ವಿಕಾಸವಾದದ ಸಿದ್ಧಾಂತವನ್ನು ತೆಗೆದು ಹಾಕುತ್ತಿದೆ. ಸ್ಥಾಪಿತ ವೈಜ್ಞಾನಿಕ ಅಡಿಪಾಯಗಳನ್ನು ಕುಗ್ಗಿಸಿ, ಅದರ ಬದಲಿಗೆ ಅವೈಜ್ಞಾನಿಕ ಗುರುಕುಲ ಮಾದರಿಯನ್ನು ಹೇರುತ್ತಿದೆ’ ಎಂದು ವಿಶ್ಲೇಷಿಸಿದರು.

ಘನತ್ಯಾಜ್ಯ ನಿಯಮಿತಕ್ಕೆ ಲಾಭ

ಕಸ ಗುತ್ತಿಗೆ: ಕ್ಷೇತ್ರವಾರು 33 ಪ್ಯಾಕೇಜ್‌ಗಳ ಟೆಂಡರ್ ಪ್ರಕ್ರಿಯೆ ಅಂತಿಮ

• ಆರ್. ಮಂಜುನಾಥ್



ಬೆಂಗಳೂರು: ಗ್ರೇಟರ್ ಬೆಂಗಳೂರು ವ್ಯಾಪ್ತಿಯಲ್ಲಿ ತ್ಯಾಜ್ಯ ನಿರ್ವಹಣೆಗಾಗಿ ಅಂತಿಮಗೊಳ್ಳುವ 33 ಪ್ಯಾಕೇಜ್ ಗುತ್ತಿಗೆಯಿಂದ ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತಕ್ಕೆ (ಬಿಎಸ್‌ಡಬ್ಲ್ಯುಎಂಎಲ್) ಆರ್ಥಿಕವಾಗಿ ಲಾಭವಾಗುವ ನಿರೀಕ್ಷೆ ಇದೆ.

2022ರಿಂದ ಹೊಸ ತ್ಯಾಜ್ಯ ಗುತ್ತಿಗೆ ನೀಡುವ ಪ್ರಕ್ರಿಯೆಯ ಅನುಷ್ಠಾನ ಹಲವು ಕಾರಣಗಳಿಂದ ವಿಳಂಬ ಗತಿಯಲ್ಲೇ ಇದೆ. ಹೈಕೋರ್ಟ್ ಮಧ್ಯಪ್ರವೇಶದಿಂದ 89 ಪ್ಯಾಕೇಜ್ ಈಗ 33 ಪ್ಯಾಕೇಜ್‌ಗಳಾಗಿದ್ದು, ಇದು ಅಂತಿಮವಾದರೆ ಬಿಎಸ್ ಡಬ್ಲ್ಯುಎಂಎಲ್‌ಗೆ ನೂರಾರು ಕೋಟಿ ಉಳಿತಾಯವಾಗಲಿದೆ.

ಬಿಬಿಎಂಪಿ ಅಸ್ತಿತ್ವದಲ್ಲಿದ್ದಾಗ ಅದರ ವ್ಯಾಪ್ತಿಯಲ್ಲಿ ತ್ಯಾಜ್ಯ ನಿರ್ವಹಣೆಗೆ 89 ಪ್ಯಾಕೇಜ್ ನಿಗದಿಪಡಿಸಿ, ₹541 ಕೋಟಿ ಟೆಂಡರ್ ಮೊತ್ತ ನಿಗದಿಪಡಿಸಲಾಗಿತ್ತು. ಇದಕ್ಕೆ ಬಿಡ್ ಸಲ್ಲಿಕೆಯಾದಾಗ, ಶೇಕಡ 18ರಿಂದ ಶೇ 60ರಷ್ಟು ಹೆಚ್ಚು ಮೊತ್ತಕ್ಕೆ ಬಿಡ್ ಆಗಿತ್ತು. ಸರಾಸರಿ ಶೇ 43ರಷ್ಟು ಹೆಚ್ಚಳವಾಗಿತ್ತು. ಕೆಲವು ತಾಂತ್ರಿಕ ಸಮಸ್ಯೆಗಳಿಂದ ಗುತ್ತಿಗೆದಾರರು ಹೈಕೋರ್ಟ್ ಮೆಟ್ಟಿಲೇರಿದ್ದರು. ಕೊನೆಗೆ, 33 ಪ್ಯಾಕೇಜ್‌ಗಳಲ್ಲಿ ಟೆಂಡರ್ ಕರೆಯುವುದಾಗಿ ಸರ್ಕಾರ ಹೇಳಿತ್ತು.

ಅದರಂತೆ, ಜಿಬಿಎ ವ್ಯಾಪ್ತಿಯ 27 ವಿಧಾನಸಭೆ ಕ್ಷೇತ್ರಗಳಲ್ಲಿ 21 ವಿಧಾನಸಭಾ ಕ್ಷೇತ್ರಗಳಿಗೆ ಒಂದು ಪ್ಯಾಕೇಜ್ ನಿಗದಿಪಡಿಸಲಾಗಿದೆ. ಬೆಂಗಳೂರು ದಕ್ಷಿಣ, ದಾಸರಹಳ್ಳಿ, ಮಹದೇವಪುರ, ಕೆ.ಆರ್. ಪುರ, ಯಶವಂತಪುರ, ರಾಜರಾಜೇಶ್ವರಿ ನಗರ ವಿಧಾನಸಭೆ ಕ್ಷೇತ್ರಗಳಿಗೆ ತಲಾ ಎರಡು ಪ್ಯಾಕೇಜ್ ನಿಗದಿಪಡಿಸಲಾಗಿದೆ. ಒಟ್ಟಾರೆ ₹544.91 ಕೋಟಿ ಎಂದು ಅಂದಾಜಿಸಿ ಟೆಂಡರ್ ಆಹ್ವಾನಿಸಲಾಯಿತು. ಸುಮಾರು ₹591 ಕೋಟಿಗೆ

ಅಂಕಿ ಅಂಶಗಳು

₹544.91 ಕೋಟಿ
33 ಪ್ಯಾಕೇಜ್‌ನಲ್ಲಿ ತ್ಯಾಜ್ಯ ವಿಲೇವಾರಿಗೆ ಟೆಂಡರ್‌ನಲ್ಲಿದ್ದ ವಾರ್ಷಿಕ ಮೊತ್ತ

₹591 ಕೋಟಿ
33 ಪ್ಯಾಕೇಜ್‌ನಲ್ಲಿ ಗುತ್ತಿಗೆದಾರರ ಒಟ್ಟಾರೆ ಬಿಡ್

₹586 ಕೋಟಿ
ಪ್ರಸ್ತುತ 5 ನಗರ ಪಾಲಿಕೆಯಲ್ಲಿ ವೆಚ್ಚವಾಗುತ್ತಿರುವ ಮೊತ್ತ

ಬಿಡ್ ಆಗಿದೆ. ಹೀಗಾಗಿ, ಕಳೆದ ಬಾರಿಗಿಂತ ಈ ಬಿಡ್ ಅತ್ಯಂತ ಕಡಿಮೆಯಾಗಿದ್ದು, ಅತ್ಯಾಧುನಿಕ ವಾಹನಗಳನ್ನು ಒಳಗೊಂಡು ಕಾರ್ಯನಿರ್ವಹಿಸುವ ವ್ಯವಸ್ಥೆ ಜಾರಿಯಾಗಲಿದೆ ಎಂದು ಬಿಎಸ್‌ಡಬ್ಲ್ಯುಎಂಎಲ್ ಮೂಲಗಳು ತಿಳಿಸಿವೆ.

ಒಂದು ಪ್ಯಾಕೇಜ್‌ನಲ್ಲಿ ಶೇ 23ರಷ್ಟು ಕಡಿಮೆ ಬಿಡ್ ದಾಖಲಾಗಿದ್ದರೆ, ಇನ್ನೊಂದು ಬಿಡ್‌ನಲ್ಲಿ ಶೇ 28ರಷ್ಟು ಅಧಿಕವಾಗಿ ಬಿಡ್ ಮಾಡಲಾಗಿದೆ. ಇಷ್ಟಾದರೂ, ಘನತ್ಯಾಜ್ಯ ವಿಲೇವಾರಿಗೆ ಪ್ರಸ್ತುತ ವೆಚ್ಚ ಮಾಡುತ್ತಿರುವ ಮೊತ್ತಕ್ಕಿಂತ ಕೆಲವೇ ಕೋಟಿ ಹೆಚ್ಚಾಗುವ ನಿರೀಕ್ಷೆ ಇದೆ. ಅಲ್ಲದೆ, ಗುತ್ತಿಗೆ ಮೊತ್ತ ಏಳು ವರ್ಷ ಒಂದೇ ಇರಲಿದೆ. ಗುತ್ತಿಗೆ ಷರತ್ತಿನಂತೆ (2.7.6) ಎರಡನೇ ವರ್ಷದಿಂದ ಕಾಂಪ್ಯಾಕ್ಟರ್ ಬಳಕೆ ನಿಲ್ಲಿಸಿ, ಆಟೊ ಟಿಪ್ಪರ್‌ಗಳಿಂದ ಕಸ ನೇರವಾಗಿ ಎರಡನೇ ಹಂತದ ತ್ಯಾಜ್ಯ ನಿರ್ವಹಣೆ ಘಟಕಕ್ಕೆ ತಲುಪಿಸಬೇಕು. ಹೀಗಾಗಿ, ಎರಡನೇ ವರ್ಷದಿಂದ, ಕಾಂಪ್ಯಾಕ್ಟರ್‌ಗಳನ್ನು ಬಳಸುವುದನ್ನು ನಿಲ್ಲಿಸಿದರೆ, ಅದರ ನಿರ್ವಹಣೆಯ ಸುಮಾರು ₹110 ಕೋಟಿ ಹಣವೂ ಬಿಎಸ್‌ಡಬ್ಲ್ಯುಎಂಎಲ್‌ಗೆ ಉಳಿಯಲಿದೆ. ಹೀಗಾಗಿ, ಹೊಸ ಪ್ಯಾಕೇಜ್ ಆರ್ಥಿಕವಾಗಿ ಲಾಭದಾಯಕವಾಗಲಿದೆ ಎನ್ನಲಾಗಿದೆ.

ಐದು ಪ್ಯಾಕೇಜ್‌ನಲ್ಲಷ್ಟೇ ಗೊಂದಲ!

ಹೆಬ್ಬಾಳ, ಮಹಾಲಕ್ಷ್ಮಿ ಲೇಔಟ್, ಬಸವನಗುಡಿ, ದಾಸರಹಳ್ಳಿ–2, ಮಹದೇವಪುರ–1 ಪ್ಯಾಕೇಜ್‌ಗಳನ್ನು ಅಂತಿಮಗೊಳಿಸುವಲ್ಲಿ ಗೊಂದಲ ಮೂಡಿದೆ. ಈ ಬಗ್ಗೆ ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರಿಗೆ ಅಪೀಲು ಸಲ್ಲಿಸಲಾಗಿದೆ. ಒಂದೇ ಕಂಪನಿ ಎರಡು ಹೆಸರಿನಲ್ಲಿ ಎರಡು ಪ್ಯಾಕೇಜ್‌ಗಳಲ್ಲಿ ಭಾಗವಹಿಸಿದ್ದರೂ ಅದಕ್ಕೆ ಟೆಂಡರ್ ಪ್ರಕ್ರಿಯೆಯಲ್ಲಿ ಮನ್ನಣೆ ನೀಡಲಾಗಿದೆ. ಇದರಿಂದ ಅರ್ಹ ಗುತ್ತಿಗೆದಾರರಿಗೆ ಅನ್ಯಾಯವಾಗುತ್ತಿರುವ ಬಗ್ಗೆ ದೂರು ಸಲ್ಲಿಸಲಾಗಿದೆ.

‘ಈ ಐದು ಪ್ಯಾಕೇಜ್‌ಗಳನ್ನು ಹೊರತುಪಡಿಸಿದರೆ ಉಳಿದ ಪ್ಯಾಕೇಜ್‌ಗಳು ಬಹುತೇಕ ಅಂತಿಮಗೊಂಡಿವೆ. ಕೆಲವು ಗುತ್ತಿಗೆದಾರರು ಅವರಿಗೆ ಅರ್ಹತೆ ಇಲ್ಲ ಎಂಬ ಅರಿವಿದ್ದರೂ ಸುಖಾಸುಮ್ಮನೆ ಅಪೀಲು ಸಲ್ಲಿಸಿ, 33 ಪ್ಯಾಕೇಜ್ ಅಂತಿಮಗೊಳ್ಳದಂತೆ ತಡೆಯಲು ಯತ್ನಿಸುತ್ತಿದ್ದಾರೆ. ಹೊಸ ವಾಹನಗಳನ್ನು ನಿಯೋಜಿಸದೆ, ಹಳೆಯ ವಾಹನಗಳಲ್ಲೇ ಹಳೇ ಪದ್ಧತಿಯಲ್ಲೇ ಗುತ್ತಿಗೆ ಮುಂದುವರಿಸುವ ಹುನ್ನಾರ ಅವರದ್ದಾಗಿದೆ’ ಎಂದು ಗುತ್ತಿಗೆದಾರರು ದೂರಿದರು.

ಬಹುತೇಕ ಅಂತಿಮ: ಕರೀಗೌಡ



ಕರೀಗೌಡ

‘27 ವಿಧಾನಸಭೆ ಕ್ಷೇತ್ರಗಳಿಗೆ 33 ಪ್ಯಾಕೇಜ್‌ಗಳ ಟೆಂಡರ್ ಬಹುತೇಕ ಅಂತಿಮಗೊಂಡಿದೆ. ಕೆಲವರು ಅಪೀಲು ಹಾಕಿಕೊಂಡಿದ್ದು, ಜನವರಿ ಅಂತ್ಯದೊಳಗೆ ಅವು ಇತ್ಯರ್ಥವಾಗಲಿವೆ. ಎಲ್1ಗೆ ಎಲ್ಲ ರೀತಿಯಲ್ಲಿಯೂ ಅರ್ಹತೆ ಇದ್ದಾಗ ಅವರನ್ನೇ ಆಯ್ಕೆ ಮಾಡಬೇಕು. ಆದರೂ, ಎಲ್2 ಅವರು ಅಪೀಲು ಹಾಕಿದ್ದಾರೆ, ಇವೆಲ್ಲ ನಿಲ್ಲುವುದಿಲ್ಲ. ಹೊಸ ಪ್ಯಾಕೇಜ್‌ಗಳು ಅನುಷ್ಠಾನಗೊಂಡರೆ ನಗರದಲ್ಲಿ ಕಸ ಸಮಸ್ಯೆ ಬಹುತೇಕ ಬಗೆಹರಿಯಲಿದೆ’ ಎಂದು ಬಿಎಸ್ ಡಬ್ಲ್ಯುಎಂಎಲ್‌ನ ಸಿಇಒ ಕರೀಗೌಡ ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

ಸ್ವದೇಶಿ ದೃಷ್ಟಿಕೋನ ಮುಖ್ಯ: ಯದುವೀರ

ಪ್ರಜಾವಾಣಿ ವಾರ್ತೆ

ಕೆಂಗೇರಿ: ಸ್ವದೇಶಿ ದೃಷ್ಟಿಕೋನದಲ್ಲಿ ವಿಕಸಿತ ಭಾರತ ನಿರ್ಮಾಣವಾಗಬೇಕು. ಈ ನಿಟ್ಟಿನಲ್ಲಿ ಭಾರತೀಯ ಪರಂಪರೆಯ ನಿಜ ದರ್ಶನ ನೀಡುವ ಶಿಕ್ಷಣ ವ್ಯವಸ್ಥೆ ನಮ್ಮದಾಗಬೇಕು ಎಂದು ಮೈಸೂರು–ಕೊಡಗು ಕ್ಷೇತ್ರದ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅಭಿಪ್ರಾಯಪಟ್ಟರು.

ಯೂನಿವರ್ಸಲ್ ಸಮೂಹ ಸಂಸ್ಥೆಯ ಸಂಸ್ಥಾಪನಾ ದಿನಾಚರಣೆ ಹಾಗೂ ರಜತ ಮಹೋತ್ಸವದಲ್ಲಿ ಅವರು ಮಾತನಾಡಿದರು.

ಪ್ರಧಾನಿ ನರೇಂದ್ರ ಮೋದಿ ಅವರ ದೂರದೃಷ್ಟಿಯೊಡನೆ ಭಾರತವು ಎಲ್ಲಾ ರಂಗಗಳಲ್ಲೂ ಪ್ರಗತಿ ಸಾಧಿಸುತ್ತಿದೆ. ಈ ವಿಕಾಸ ಪರ್ವವು ದೇಶದ ಭವ್ಯ ಪರಂಪರೆ, ಸಂಸ್ಕೃತಿಯನ್ನು ಇಮ್ಮಡಿಗೊಳಿಸುವಂತೆ ಇರಬೇಕು. ಸ್ವಂತಿಕೆ, ಸ್ವಾಭಿಮಾನ ಉದ್ದೀಪನಗೊಳಿಸುವಂತಿರಬೇಕು. ಹೀಗಾಗಿ ಸ್ವತಂತ್ರ ಪೂರ್ವದ ಮೆಕಾಲೆ ಶಿಕ್ಷಣ ನೀತಿ ಪರಿಷ್ಕರಿಸುವ ಅಗತ್ಯತೆಯಿದೆ ಎಂದು ಹೇಳಿದರು.



ಯೂನಿವರ್ಸಲ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಸಂಸ್ಥಾಪನಾ ದಿನ ಸಮಾರಂಭದಲ್ಲಿ ಶಿಕ್ಷಕರನ್ನು ಸನ್ಮಾನಿಸಲಾಯಿತು. ಎಂಆರ್‌ಜಿ ಸಮೂಹ ಸಂಸ್ಥೆಯ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಕೆ. ಪ್ರಕಾಶ ಶೆಟ್ಟಿ, ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಬೆಂಗಳೂರು ದಕ್ಷಿಣ ವಲಯ ಆಯುಕ್ತ ಕೊಟ್ರಸ್ವಾಮಿ ಎಂ., ಅನ್ನ ಕುರುಂಗಾ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್ ನಿರ್ದೇಶಕ ಅಶೋಕ್ ಚನ್ನೇಗೌಡ, ಯೂನಿವರ್ಸಲ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್ ಸಂಸ್ಥೆಯ ಅಧ್ಯಕ್ಷ ಆರ್. ಉಪೇಂದ್ರ ಶೆಟ್ಟಿ ಪಾಲ್ಗೊಂಡಿದ್ದರು

ಕಾನೂನು ರೂಪಿಸುವುದು ಶಾಸಕಾಂಗದ ಕಾರ್ಯ. ಆದರ ಯಶಸ್ಸು ಹಾಗೂ ಸೋಲು ಅಧಿಕಾರಿ ವರ್ಗದ ಮೇಲೆ ನಿಂತಿದೆ. ನಿಷ್ಠಾವಂತ ಅಧಿಕಾರಿಗಳಿಂದಲೇ ಮೈಸೂರು ಸಂಸ್ಥಾನ ಇಂದಿಗೂ ಜನ ಮನ್ನಣೆಸಗಳಿಸಿದೆ ಎಂದರು.

ಯೂನಿವರ್ಸಲ್ ಸಮೂಹ ಸಂಸ್ಥೆಯ ಚೇರ್ಮನ್ ಆರ್. ಉಪೇಂದ್ರ ಶೆಟ್ಟಿ ಮಾತನಾಡಿ, ತ್ಯಾಗ ಹಾಗೂ ಪರಿಶ್ರಮದ ಫಲವಾಗಿ ಯೂನಿವರ್ಸಲ್ ಸಂಸ್ಥೆ ಹೆಮ್ಮರವಾಗಿ ಬೆಳೆದಿದೆ. ಇಲ್ಲಿನ 8000ಕ್ಕೂ ಹೆಚ್ಚು ವಿದ್ಯಾರ್ಥಿಗಳು ಅಧಿಕಾರಿಗಳಾಗಿ ದೇಶದಾದ್ಯಂತ ಕಾರ್ಯ ನಿರ್ವಹಿಸುತ್ತಿದ್ದಾರೆ ಎಂದು ಸ್ಮರಿಸಿದರು. ಇದೇ ವೇಳೆ ಶಿಕ್ಷಣ ಕ್ಷೇತ್ರದಲ್ಲಿ ಅಮೋಘ ಸೇವೆ ಸಲ್ಲಿಸಿದ 10 ಶಿಕ್ಷಕರನ್ನು ಸನ್ಮಾನಿಸಲಾಯಿತು.

ವೇಮನ ಸಹಕಾರಿ ಸಂಘಕ್ಕೆ ನಿರ್ದೇಶಕರ ಆಯ್ಕೆ

ಯಲಹಂಕ: ಯಲಹಂಕ ಉಪನಗರದಲ್ಲಿರುವ ಮಹಾಯೋಗಿ ವೇಮನ ಸೌಹಾರ್ದ ಪತ್ತಿನ ಸಹಕಾರಿ ಸಂಘಕ್ಕೆ ಮುಂದಿನ ಐದು ವರ್ಷಗಳ ಅವಧಿಗೆ ನಿರ್ದೇಶಕ ಸ್ಥಾನಕ್ಕೆ ಸ್ಪರ್ಧಿಸಿದ್ದ ಎಲ್ಲಾ 15 ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಾಮಾನ್ಯ ವರ್ಗದ ಅಭ್ಯರ್ಥಿಗಳಾಗಿ ಸಿ.ಆರ್.ಜಯಪ್ಪ ರೆಡ್ಡಿ, ಎಸ್.ಜಿ.ನರಸಿಂಹಮೂರ್ತಿ, ಎಂ.ಮೋಹನ್‌ಕುಮಾರ್, ರತ್ನಮ್ಮ ಮುನಿರೆಡ್ಡಿ, ರಾಜಣ್ಣ.ಎಚ್, ರಾಜಣ್ಣ.ಟಿ, ಸತೀಶ್.ಕೆ.ವಿ, ಎಸ್.ಎನ್.ಸಂಪತ್‌ಕುಮಾರ್, ಟಿ.ವೆಂಕಟರಾಮರೆಡ್ಡಿ ಆಯ್ಕೆಯಾದರು.

ಹಿಂದುಳಿದ ಪ್ರವರ್ಗ(ಎ) ಸ್ಥಾನಕ್ಕೆ ಕೆ.ಜಿ.ರಾಮಕೃಷ್ಣಯ್ಯ, ಹಿಂದುಳಿದ ಪ್ರವರ್ಗ (ಬಿ)-ಟಿ.ಎನ್.ಶ್ರೀನಿವಾಸ್, ಪರಿಶಿಷ್ಟ ಜಾತಿ ಮೀಸಲು-ನರಸಿಂಹಮೂರ್ತಿ.ಜಿ, ಪರಿಶಿಷ್ಟ ಪಂಗಡ-ಸಿ.ಶ್ರೀನಿವಾಸ್, ಮಹಿಳಾ ಮೀಸಲು-ನೀತಾ.ಎಂ.ಎನ್ ರೆಡ್ಡಿ ಹಾಗೂ ಸುಜಾತ.ಜಿ ಸಂಪಂಗಿರೆಡ್ಡಿ ಆಯ್ಕೆಯಾಗಿದ್ದಾರೆ. ನೂತನ ನಿರ್ದೇಶಕರನ್ನು ಶಾಸಕ ಎಸ್.ಆರ್.ವಿಶ್ವನಾಥ್ ಅಭಿನಂದಿಸಿದರು. ವೇಮನ ಸಹಕಾರಿ ಸಂಘದ ಮಾಜಿ ಅಧ್ಯಕ್ಷ ಎಂ.ಮುನಿರೆಡ್ಡಿ, ಬಿಜೆಪಿ ಮುಖಂಡರಾದ ಅಲೋಕ್ ವಿಶ್ವನಾಥ್, ಎಸ್.ಎನ್.ರಾಜಣ್ಣ, ಆವಲಹಳ್ಳಿ ಕೇಶವಮೂರ್ತಿ, ಅದ್ದೆ ವಿಶ್ವನಾಥಪುರ ಮಂಜುನಾಥ್, ಎಸ್.ಜಿ.ಪ್ರಶಾಂತ್‌ರೆಡ್ಡಿ ಉಪಸ್ಥಿತರಿದ್ದರು.



ಆಯ್ಕೆಯಾದ ನಿರ್ದೇಶಕರನ್ನು ಶಾಸಕ ಎಸ್.ಆರ್.ವಿಶ್ವನಾಥ್ ಅಭಿನಂದಿಸಿದರು



ಶ್ರೀತ್ಯಾಗರಾಜ ಸಹಕಾರ ಬ್ಯಾಂಕಿನ 2024–2025ನೇ ಸಾಲಿನ ರಾಜ್ಯ ಪ್ರಶಸ್ತಿಯನ್ನು ಜನತಾ ಸೇವಾ ಕೋ ಅಪರೇಟಿವ್ ಬ್ಯಾಂಕಿನ ಅಧ್ಯಕ್ಷ ಎಚ್.ಸಿ. ಗೋಪಾಲ್ ಅವರಿಗೆ ಕಾನೂನು ಮತ್ತು ಸಂಸದೀಯ ಸಚಿವ ಎಚ್.ಕೆ.ಪಾಟೀಲ ಪ್ರದಾನ ಮಾಡಿದರು

‘ಗ್ರಾ.ಪಂ.ಗೆ ಗಾಂಧಿ ಹೆಸರಿಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು:ರಾಜ್ಯದ ಎಲ್ಲ ಗ್ರಾಮ ಪಂಚಾಯತಿ ಕಚೇರಿಗಳಿಗೆ ಮಹಾತ್ಮ ಗಾಂಧಿ ಹೆಸರಿಡಿ ಎಂದು ಒತ್ತಾಯಿಸಿ ಕೆಪಿಸಿಸಿ ಉಪಾಧ್ಯಕ್ಷ ವಿ.ಎಸ್.ಉಗ್ರಪ್ಪ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದಾರೆ.

2014ರಲ್ಲಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಎನ್‌ಡಿಎ ಸರ್ಕಾರ ಬಂದ ನಂತರ ಮಹಾತ್ಮ ಗಾಂಧಿ ಅವರ ಹೆಸರನ್ನು ತೊಡೆದುಹಾಕುವ ಕೃತ್ಯಗಳು ನಡೆಯುತ್ತಲೇ ಇವೆ ಎಂದು ಅವರು ಆಪಾದಿಸಿದ್ದಾರೆ.

‘ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ’ಯನ್ನು ಪ್ರಧಾನಿ ಮೋದಿ ಅವರ ಸರ್ಕಾರವು ರದ್ದುಪಡಿಸಿದೆ. ಗಾಂಧೀಜಿ ಹಂತಕ ಗೋಡ್ಸೆ ಮತ್ತು ಆರ್‌ಎಸ್‌ಎಸ್‌ನ ಸಿದ್ಧಾಂತಗಳನ್ನು ಜಾರಿಗೆ ತರುವ ರಹಸ್ಯ ಕಾರ್ಯಸೂಚಿಯ ಭಾಗವಾಗಿ ಹೀಗೆ ಮಾಡಿದೆ’ ಎಂದು ಆರೋಪಿಸಿದ್ದಾರೆ.

‘ಬಿಜೆಪಿಯ ಈ ಹುನ್ನಾರಕ್ಕೆ ಉತ್ತರ ನೀಡಬೇಕಿದೆ. ಜನಮಾನಸದಲ್ಲಿ ಗಾಂಧೀಜಿ ಹೆಸರು ಉಳಿಯುವಂತೆ ಮಾಡಬೇಕಿದೆ’ ಎಂದು ಒತ್ತಾಯಿಸಿದ್ದಾರೆ.

ಸಂಸ್ಥೆಯ ಕಾರ್ಯನಿರ್ವಹಣೆ ಬಗ್ಗೆ ತಜ್ಞರ ತಂಡ ಶ್ಲಾಘನೆ

ಜಯದೇವಕ್ಕೆ ಏಮ್ಸ್ ವೈದ್ಯರ ತಂಡ ಭೇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಗೆ ಭೇಟಿ ನೀಡಿದ ನವದೆಹಲಿಯ ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆಯ (ಏಮ್ಸ್) ವೈದ್ಯರ ತಂಡ, ಜಯದೇವ ಸಂಸ್ಥೆಯಲ್ಲಿನ ವೈದ್ಯಕೀಯ ವ್ಯವಸ್ಥೆಗೆ ಮೆಚ್ಚುಗೆ ವ್ಯಕ್ತಪಡಿಸಿದೆ.

ಐವರು ವೈದ್ಯಕೀಯ ತಜ್ಞರನ್ನು ಒಳಗೊಂಡ ತಂಡವು, ಸಂಸ್ಥೆಯಲ್ಲಿನ ಚಿಕಿತ್ಸಾ ಸೇವೆಗಳು, ಆಡಳಿತ ವ್ಯವಸ್ಥೆ, ರೋಗಿಯ ಆರೈಕೆ ಕ್ರಮಗಳು ಮತ್ತು ಗುಣಮಟ್ಟದ ಮಾನದಂಡಗಳನ್ನು ಪರಿಶೀಲನೆ ನಡೆಸಿತು. ಹೊರರೋಗಿ ಹಾಗೂ ಒಳರೋಗಿ ವಿಭಾಗ, ಪ್ರಯೋಗಾಲಯ, ವಾರ್ಡ್‌ಗಳು, ಹೃದಯ ಶಸ್ತ್ರಚಿಕಿತ್ಸಾ ವಿಭಾಗ ಸೇರಿ ವಿವಿಧ ವಿಭಾಗಗಳಿಗೆ ಭೇಟಿ ನೀಡಿ, ಮಾಹಿತಿ ಪಡೆದುಕೊಂಡಿತು.



ಜಯದೇವ ಸಂಸ್ಥೆ ವ್ಯವಸ್ಥೆ ಪರಿಶೀಲಿಸಿದ ಏಮ್ಸ್ ವೈದ್ಯರ ತಂಡ

‘ಜಾಗತಿಕ ಮನ್ನಣೆ ಪಡೆದಿರುವ ಜಯದೇವ ಹೃದ್ರೋಗ ಸಂಸ್ಥೆಯ ಕೆಲವು ಕಾರ್ಯವಿಧಾನಗಳನ್ನು ಏಮ್ಸ್‌ನಲ್ಲಿ ಅಳವಡಿಸಿಕೊಳ್ಳಲಾಗುವುದು. ಏಮ್ಸ್‌ನಲ್ಲಿ ರೊಬೋಟಿಕ್ ಮತ್ತು ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಅಳವಡಿಸಿಕೊಳ್ಳಲಾಗಿದೆ. ಹೀಗಾಗಿ, ಏಮ್ಸ್ ವತಿಯಿಂದ ಜಯದೇವ ಸಂಸ್ಥೆಯ ತಜ್ಞರಿಗೆ ತರಬೇತಿ ನೀಡುವ ಮೂಲಕ, ತಂತ್ರಜ್ಞಾನ ವಿನಿಮಯ ಮಾಡಿಕೊಳ್ಳಲು ನಾವು ಸಿದ್ಧರಿದ್ದೇವೆ. ಮುಂದಿನ ದಿನಗಳಲ್ಲಿ ಏಮ್ಸ್ ಮತ್ತು ಜಯದೇವ ಜಂಟಿಯಾಗಿ ಸಂಶೋಧನೆ ನಡೆಸಲಿವೆ’ ಎಂದು ಏಮ್ಸ್ ನಿರ್ದೇಶಕ ಡಾ. ಶ್ರೀನಿವಾಸ್ ಮದ್ದೂರು ತಿಳಿಸಿದರು.

ಜಯದೇವ ಸಂಸ್ಥೆ ನಿರ್ದೇಶಕ ಡಾ.ಬಿ. ದಿನೇಶ್, ‘ನಮ್ಮ ಸಂಸ್ಥೆಯ ವೈದ್ಯರ ತಂಡವನ್ನು ಏಮ್ಸ್‌ಗೆ ಕಳುಹಿಸಲಾಗುವುದು. ಅಲ್ಲಿನ ಕಾರ್ಯವೈಖರಿ ಮತ್ತು ನಿರ್ವಹಣೆಯ ಬಗ್ಗೆ ವೈದ್ಯರ ತಂಡ ತಿಳಿದುಕೊಂಡು ಬರಲಿದೆ’ ಎಂದರು.

ಏಮ್ಸ್ ವೈದ್ಯರ ತಂಡದಲ್ಲಿದ್ದ ಡಾ. ಮಹೇಶ್, ಕನಿಕಾ ಜೈನ್, ಅಕ್ಷಯ್ ಕುಮಾರ್, ಡಾ. ವಿವೇಕ್ ತಂಡನ್ ಅವರು ಜಯದೇವ ಸಂಸ್ಥೆಯ ವ್ಯವಸ್ಥೆ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಆತ್ಮಹತ್ಯೆಗೆ ಯತ್ನಿಸಿದ ವೈದ್ಯ

ವಿಧಾನಸೌಧದ ಮುಂದೆ ಘಟನೆ: ಪೊಲೀಸರಿಂದ ಕಿರುಕುಳ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಅಕ್ರಮವಾಗಿ ನೆಲಸಿರುವ ಬಾಂಗ್ಲಾದೇಶ ನಾಗರಿಕರ ಸ್ಥಳಗಳ ಕುರಿತು ಮಾಹಿತಿ ನೀಡಿದ ಕಾರಣ ಸೋಲದೇವನಹಳ್ಳಿ ಪೊಲೀಸರು ಕಿರುಕುಳ ನೀಡುತ್ತಿದ್ದಾರೆ ಎಂದು ಆರೋಪಿಸಿ ವಿಧಾನಸೌಧದ ಎದುರು ಶನಿವಾರ ವೈದ್ಯರೊಬ್ಬರು ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದಾರೆ.

ಕರ್ತವ್ಯನಿರತ ಪೊಲೀಸರು ತಕ್ಷಣ ಡಾ. ನಾಗೇಂದ್ರ ಶಿರೂರ್ (38) ಅವರ ಕೈಯಲ್ಲಿದ್ದ ವಿಷದ ಬಾಟಲಿಯನ್ನು ಕಸಿದುಕೊಂಡು, ಬೌರಿಂಗ್ ಆಸ್ಪತ್ರೆಗೆ ದಾಖಲಿಸಿದರು. ಸದ್ಯ ಆರೋಗ್ಯವಾಗಿದ್ದಾರೆ ಎಂದು ವೈದ್ಯರು ತಿಳಿಸಿದ್ದಾರೆ.

ನಾಗೇಂದ್ರ ಶಿರೂರ್ ಅವರು ಎಲೆಕ್ಟ್ರಾನಿಕ್ ಸಿಟಿಯ ಸಾಯಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಆಯುರ್ವೇದ ವೈದ್ಯರಾಗಿದ್ದು, ಹಿಂದೂ ಜಾಗರಣಾ ವೇದಿಕೆ ಮತ್ತು ರಾಷ್ಟ್ರ ರಕ್ಷಣಾ ಪಡೆಯ ಕಾರ್ಯಕರ್ತರಾಗಿದ್ದಾರೆ.

‘ನಗರದಲ್ಲಿ ಅಕ್ರಮವಾಗಿ ನೆಲಸಿರುವ ಬಾಂಗ್ಲಾದೇಶ ನಾಗರಿಕರ ಸ್ಥಳಗಳನ್ನು ಪತ್ತೆ ಹಚ್ಚಿ ಪೊಲೀಸರ ಗಮನಕ್ಕೆ ತರುತ್ತಿದ್ದೆ. ಆದರೆ ಪೊಲೀಸರೇ ನನಗೆ ಕಿರುಕುಳ ನೀಡಲು ಆರಂಭಿಸಿದರು. ನಿತ್ಯ 15ರಿಂದ 20ಕ್ಕೂ ಹೆಚ್ಚು ಪೊಲೀಸರು ಮನೆ ಬಾಗಿಲಿಗೆ ಬಂದು ಕಿರುಕುಳ ನೀಡುತ್ತಿದ್ದರು. ಈ ವಿಚಾರಕ್ಕೆ ನನ್ನ ಮೇಲೆ ಹಲ್ಲೆ ನಡೆಸಲಾಗಿದೆ. ಅಲ್ಲದೇ ನನ್ನ ಕುಟುಂಬದವರಿಗೂ ಹಿಂಸೆ ನೀಡಿದ್ದಾರೆ’ ಎಂದು ನಾಗೇಂದ್ರ ಅವರು ವಿಷ ಸೇವನೆಗೂ ಮುನ್ನ ಆರೋಪಿಸಿದ್ದರು.

‘ಅಕ್ರಮವಾಗಿ ವಾಸವಾಗಿರುವವರನ್ನು ಹೊರ ಕಳುಹಿಸಲು ಹೋರಾಟ ಮಾಡಲು ಮುಂದಾಗಿದ್ದೇ ತಪ್ಪಾ’ ಎಂದು ನಾಗೇಂದ್ರ ವಿಷ ಕುಡಿಯಲು ಮುಂದಾದರು ಎಂದು ಸ್ಥಳದಲ್ಲಿದ್ದವರು ತಿಳಿಸಿದ್ದಾರೆ.

ರಾಷ್ಟ್ರ ರಕ್ಷಣಾ ಪಡೆ ಪುನೀತ್ ಕೆರೆಹಳ್ಳಿ ಜೊತೆ ಓಡಾಡುತ್ತಿದ್ದ ನಾಗೇಂದ್ರ ಅವರು ಇತ್ತೀಚೆಗೆ ಬಾಂಗ್ಲಾದೇಶದ ವಲಸಿಗರ ಬಗ್ಗೆ ಮಾಹಿತಿ ನೀಡಿದ್ದರು. ಇದೇ ವಿಚಾರಕ್ಕೆ ಪುನೀತ್ ಕೆರೆಹಳ್ಳಿ ಮತ್ತು ನಾಗೇಂದ್ರಪ್ಪ ಮೇಲೆ ಪ್ರಕರಣ ದಾಖಲಾಗಿತ್ತು.

ಈ ಘಟನೆ ಬೆನ್ನಲ್ಲೇ ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿರುವ ಸೋಲದೇವನಹಳ್ಳಿ ಪೊಲೀಸ್ ಸಬ್ ಇನ್‌ಸ್ಪೆಕ್ಟರ್, ‘ನಾಗೇಂದ್ರ ವಿರುದ್ಧ ಪ್ರಕರಣ ದಾಖಲಾಗಿದ್ದು, ಸರ್ಕಾರಿ ಅಧಿಕಾರಿಗಳು ತಮ್ಮ ಕಾನೂನುಬದ್ಧ ಕರ್ತವ್ಯಗಳನ್ನು ನಿರ್ವಹಿಸುವುದನ್ನು ತಡೆಯಲು ಆತ್ಮಹತ್ಯೆಗೆ ಯತ್ನಿಸಿದ್ದಾರೆ’ ಎಂದು ಹೇಳಿದ್ದಾರೆ. ಇದು ಭಾರತೀಯ ನ್ಯಾಯ ಸಂಹಿತೆಯ ಕಲಂ 226ರ ಅಡಿ ಶಿಕ್ಷಾರ್ಹ ಅಪರಾಧವಾಗಿದೆ.



ವಿಧಾನಸೌಧ ಎದುರು ಆತ್ಮಹತ್ಯೆಗೆ ಯತ್ನಿಸಿದ ವೈದ್ಯನನ್ನು ರಕ್ಷಿಸಿದ ಪೊಲೀಸರು

‘ಬಾಂಗ್ಲಾ ವಲಸಿಗರಿಗೆ ಸರ್ಕಾರದ ಬೆಂಬಲ’

‘ರಾಜ್ಯದಲ್ಲಿ ವ್ಯಾಪಕವಾಗಿರುವ ಅಕ್ರಮ ಬಾಂಗ್ಲಾ ವಲಸಿಗರ ಜಾಲವನ್ನು ಬಯಲಿಗೆಳೆದಿದ್ದಕ್ಕಾಗಿ ಡಾ. ನಾಗೇಂದ್ರ ಅವರಿಗೆ ಪೊಲೀಸರು ಕಿರುಕುಳ ನೀಡುತ್ತಿದ್ದಾರೆ. ವಿಧಾನಸೌಧದ ಮುಂದೆಯೇ ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿರುವ ಘಟನೆ ಕಾಂಗ್ರೆಸ್ ಸರ್ಕಾರ ಅಕ್ರಮ ವಲಸಿಗರಿಗೆ ಪರೋಕ್ಷವಾಗಿ ಬೆಂಬಲ ನೀಡುತ್ತಿರುವುದಕ್ಕೆ ಸಾಕ್ಷಿಯಾಗಿದೆ’ ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರು ‘ಎಕ್ಸ್’ನಲ್ಲಿ ಆರೋಪಿಸಿದ್ದಾರೆ.

‘ಒಂದೆಡೆ ದೇಶದ ಭದ್ರತೆಗೆ ಸವಾಲಾಗಿರುವ ಅಕ್ರಮ ವಲಸಿಗರನ್ನು ಪತ್ತೆ ಹಚ್ಚುವಲ್ಲಿ ಗೃಹ ಇಲಾಖೆ ಸಂಪೂರ್ಣ ವಿಫಲವಾಗಿದೆ. ಮತ್ತೊಂದೆಡೆ, ಜವಾಬ್ದಾರಿಯುತ ನಾಗರಿಕರು ಈ ಅಕ್ರಮಗಳನ್ನು ಎತ್ತಿ ತೋರಿಸಿದರೆ ಅವರನ್ನು ಗುರಿಯಾಗಿಸಿಕೊಂಡು, ಕಿರುಕುಳ ಕೊಟ್ಟು ಜೈಲಿಗೆ ಅಟ್ಟಲಾಗುತ್ತಿದೆ. ಪುನೀತ್ ಕೆರೆಹಳ್ಳಿಯಂತಹ ಕಾರ್ಯಕರ್ತರ ಬಂಧನವೇ ಇದಕ್ಕೆ ಸಾಕ್ಷಿ’ ಎಂದು ತಿಳಿಸಿದ್ದಾರೆ.

‘ಪೊಲೀಸ್ ಇಲಾಖೆಯ ಕರ್ತವ್ಯವನ್ನೇ ಜನ ಸಾಮಾನ್ಯರು ಮಾಡುತ್ತಿರುವಾಗ ಅವರಿಗೆ ರಕ್ಷಣೆ ನೀಡುವ ಬದಲು ಪೊಲೀಸರ ಮೂಲಕ ಕಿರುಕುಳ ಕೊಡಿಸುತ್ತಿರುವುದು ಯಾವ ನ್ಯಾಯ’ ಎಂದು ಗೃಹ ಸಚಿವ ಜಿ.ಪರಮೇಶ್ವರ ಅವರನ್ನು ಪ್ರಶ್ನಿಸಿದ್ದಾರೆ.

ಅಧಿಕಾರಿ ಹೆಸರಿನಲ್ಲಿ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿಯವರ ಜಂಟಿ ಕಾರ್ಯದರ್ಶಿ ಎಂ.ರಾಮಯ್ಯ ಅವರ ಹೆಸರು ಹಾಗೂ ಹುದ್ದೆ ಬಳಸಿಕೊಂಡು ಲಕ್ಷಾಂತರ ರೂಪಾಯಿ ವಂಚಿಸಿದ್ದ ಆರೋಪಕ್ಕೆ ಸಂಬಂಧಿಸಿದಂತೆ ಆರೋಪಿಯನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಮೈಸೂರು ಜಿಲ್ಲೆಯ ನಂಜನಗೂಡಿನ ಕೆ.ಸಿ.ಜಗದೀಶ್ ಎಂಬುವವರನ್ನು ಬಂಧಿಸಲಾಗಿದ್ದು, ತಲೆಮರೆಸಿಕೊಂಡಿರುವ ಇತರೆ ಆರೋಪಿಗಳಿಗೆ ಶೋಧ ಕಾರ್ಯ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಜೆಎಸ್‌ಎಸ್ ವಿಜ್ಞಾನ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ವೆಂಕಟೇಶ್ ಮುತ್ತಣ್ಣ ಅವರಿಗೆ ಕೆಪಿಎಸ್‌ಸಿ ಸದಸ್ಯ ಸ್ಥಾನ ಕೊಡಿಸುವುದಾಗಿ ಎಂ.ರಾಮಯ್ಯ ಅವರ ಹೆಸರು ಬಳಸಿಕೊಂಡು 2023ರ ಸೆಪ್ಟೆಂಬರ್‌ನಿಂದ 2025ರ ಏಪ್ರಿಲ್‌ವರೆಗೆ ಹಣ ಪಡೆದುಕೊಂಡು ವಂಚಿಸಿದ್ದಾರೆ ಎಂದು ದೂರು ನೀಡಲಾಗಿತ್ತು.

ಪ್ರಕರಣ ದಾಖಲಿಸಿಕೊಂಡ ಪೊಲೀಸರು, ಬಾತ್ಮೀದಾರರ ಮಾಹಿತಿ ಆಧರಿಸಿ ಆರೋಪಿಯನ್ನು ಬಂಧಿಸಿ, ವಿಚಾರಣೆಗೆ ಒಳಪಡಿಸಿದ್ದಾರೆ.

ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ: ಕಾನ್‌ಸ್ಟೆಬಲ್ ಬಂಧನ

ಅಪರಾಧ ಸುದ್ದಿ

ಬೆಂಗಳೂರು: ಪಿಯುಸಿ ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದ ಮೇಲೆ ಪೊಲೀಸ್ ಕಾನ್‌ಸ್ಟೇಬಲ್‌ನನ್ನು ಉಪ್ಪಾರಪೇಟೆ ಠಾಣೆ ಪೊಲೀಸರು ಬಂಧಿಸಿದ್ದಾರೆ. ಆರ್.ಟಿ.ನಗರ ಠಾಣೆಯ ಕಾನ್‌ಸ್ಟೆ ಬಲ್ ಯಮುನ ನಾಯಕ್ (32) ಬಂಧಿತ. ‘ಕೆಲ ದಿನಗಳ ಹಿಂದೆ ಸ್ವಾತಂತ್ರ್ಯ ಉದ್ಯಾನಕ್ಕೆ ಭದ್ರತೆಗೆ ನಿಯೋಜನೆಗೊಂಡಿದ್ದ ಕಾನ್‌ಸ್ಟೇಬಲ್, ಪಿಯುಸಿ ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ ನೀಡಿದ್ದ. ಈ ಸಂಬಂಧ ವಿದ್ಯಾರ್ಥಿನಿ ನೀಡಿದ ದೂರಿನ ಮೇರೆಗೆ ಆರೋಪಿಯ ವಿರುದ್ಧ ಪೋಕ್ಸೊ ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ಹೇಳಿದರು. ಈ ಸಂಬಂಧ ಉಪ್ಪಾರಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಂಚಾರ ನಿಯಮ ಉಲ್ಲಂಘನೆ: 8,941 ಪ್ರಕರಣ ದಾಖಲು

ಬೆಂಗಳೂರು: ನಗರದಲ್ಲಿ ಸಂಚಾರ ನಿಯಮ ಪಾಲನೆ ಹಾಗೂ ಏಕಮುಖ ರಸ್ತೆ ಸಂಚಾರ ಮಾಡಿದ್ದವರ ವಿರುದ್ಧ ಟ್ರಾಫಿಕ್ ಪೊಲೀಸರು ವಿಶೇಷ ಕಾರ್ಯಾಚರಣೆ ನಡೆಸಿ, 8,941 ಪ್ರಕರಣ ದಾಖಲಿಸಿದ್ದಾರೆ.

ಸಾರ್ವಜನಿಕ ಸುರಕ್ಷತಾ ಸಂಚಾರ ಗಮನದಲ್ಲಿಟ್ಟುಕೊಂಡು ಜ. 21, 22 ಮತ್ತು 23 ರಂದು ವಿವಿಧ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಕಾರ್ಯಾಚರಣೆ ನಡೆಸಿ, ವಾಹನ ಸವಾರರಿಗೆ ದಂಡ ಹಾಕಿದ್ದಾರೆ. ಶುಕ್ರವಾರ ಬೆಳಿಗ್ಗೆ 7 ರಿಂದ 10ರವರೆಗೆ ನಡೆಸಿದ್ದ ತಪಾಸಣಾ ಸಂದರ್ಭದಲ್ಲಿ 26 ಶಾಲಾ ವಾಹನ ಚಾಲಕರ ವಿರುದ್ಧ ಐಎಂವಿ ಕಾಯ್ದೆಯಡಿ ಪ್ರಕರಣ ದಾಖಲಿಸಿದ್ದಾರೆ. 5,110 ಶಾಲಾ ವಾಹನಗಳ ತಪಾಸಣೆ ನಡೆಸಿದ್ದಾರೆ.

ಟಿ–1 ಮುಂಭಾಗ ಪಿಕ್‌ಅಪ್‌ಗೆ ಹೊಸ ಆ್ಯಪ್

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್–1ರ ಮುಂಭಾಗದ ಕರ್ಬ್ ಸೈಡ್‌ನಲ್ಲಿ ಆಗಮನ ದ್ವಾರದಿಂದ ಹೊರಬರುವ ಪ್ರಯಾಣಿಕರನ್ನು ನೇರವಾಗಿ ಹತ್ತಿಸಿಕೊಂಡು ಹೋಗಲು ಅಗ್ರಿಗೇಟರ್ ಕಂಪನಿಗಳಿಗೆ ಸೇರದ ಹಳದಿ ಬೋರ್ಡ್ ಖಾಸಗಿ ಟ್ಯಾಕ್ಸಿಗಳಿಗೆ ಹೊಸ ಮೊಬೈಲ್ ಆ್ಯಪ್ ಸಿದ್ಧಪಡಿಸಲಾಗುತ್ತಿದೆ.

ಕಳೆದ ಡಿಸೆಂಬರ್‌ನಲ್ಲಿ ವಿಮಾನ ನಿಲ್ದಾಣದ ಮುಂಭಾಗದಲ್ಲಿ ವಾಹನಗಳ ದಟ್ಟಣೆ ಕಡಿಮೆ ಮಾಡುವ ಉದ್ದೇಶದಿಂದ ಖಾಸಗಿ ಟ್ಯಾಕ್ಸಿಗಳನ್ನು ಟರ್ಮಿನಲ್‌ನಿಂದ ಸುಮಾರು ಒಂದು ಕಿಲೋಮೀಟರ್ ದೂರದಲ್ಲಿರುವ ಪಿ3 ಹಾಗೂ ಪಿ4 ಪಾರ್ಕಿಂಗ್ ಪ್ರದೇಶಗಳಿಗೆ ಸ್ಥಳಾಂತರಿಸಲಾಗಿತ್ತು.

ಇದರಿಂದ ಟರ್ಮಿನಲ್–1ಕ್ಕೆ ಆಗಮಿಸುವ ಪ್ರಯಾಣಿಕರು ಲಗೇಜ್ ಹೊತ್ತು ದೂರ ನಡೆದು ಹೋಗಿ ಟ್ಯಾಕ್ಸಿ ಹತ್ತಬೇಕಾದ ಪರಿಸ್ಥಿತಿ ನಿರ್ಮಾಣವಾಗಿತ್ತು.

ಈ ಕ್ರಮಕ್ಕೆ ವಿರೋಧ ವ್ಯಕ್ತಪಡಿಸಿ ಖಾಸಗಿ ಟ್ಯಾಕ್ಸಿ ಚಾಲಕರು ಹಲವು ದಿನಗಳ ಕಾಲ ಪ್ರತಿಭಟನೆ ನಡೆಸಿದ್ದರು.

‘ಆರ್.ಆರ್. ನಗರದಲ್ಲಿ ಲ್ಯಾಂಬೋರ್ಗಿನಿ ವೇಗವಾಗಿ ಹೋಗಲು ಸಾಧ್ಯವೇ?’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜರಾಜೇಶ್ವರಿ ನಗರದಲ್ಲಿನ ಸಂಚಾರ ದಟ್ಟಣೆ ಗಮನಿಸಿದರೆ ಈ ಪ್ರದೇಶದಲ್ಲಿ ಲ್ಯಾಂಬೋರ್ಗಿನಿಯಂತಹ ಕಾರನ್ನು ಹೇಗೆ ತಾನೇ ವೇಗವಾಗಿ ಚಲಾಯಿಸಲು ಸಾಧ್ಯ’ ಎಂದು ಆಶ್ಚರ್ಯ ವ್ಯಕ್ತಪಡಿಸಿರುವ ಹೈಕೋರ್ಟ್, ಅಜಾಗರೂಕತೆ ಮತ್ತು ನಿರ್ಲಕ್ಷ್ಯದಿಂದ ಲ್ಯಾಂಬೋರ್ಗಿನಿ ಕಾರು ಓಡಿಸಿದ ಆರೋಪಕ್ಕೆ ಸಂಬಂಧಿಸಿದಂತೆ ವ್ಯಕ್ತಿಯೊಬ್ಬರ ವಿರುದ್ಧ ದಾಖಲಾಗಿರುವ ಪ್ರಕರಣಕ್ಕೆ ಮಧ್ಯಂತರ ತಡೆ ನೀಡಿದೆ.

‘ನನ್ನ ವಿರುದ್ಧದ ಪ್ರಕರಣ ರದ್ದುಪಡಿಸಬೇಕು’ ಎಂದು ಕೋರಿ ಸಿ.ವಿ. ರಾಮನ್ ನಗರದ ಬಿ.ಆರ್.ಚಿರಂತನ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ಪ್ರತಿವಾದಿ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಆದೇಶಿಸಲಾಗಿದ್ದು ವಿಚಾರಣೆಯನ್ನು ಫೆಬ್ರುವರಿ 6ಕ್ಕೆ ಮುಂದೂಡಲಾಗಿದೆ.

ಪ್ರಕರಣವೇನು?: ಬೆಂಗಳೂರಿನ ಲ್ಯಾಂಬೋರ್ಗಿನಿ ಷೋ ರೂಮ್ ವತಿಯಿಂದ ಮಡಿಕೇರಿಯಲ್ಲಿ 2025ರ ಡಿಸೆಂಬರ್ 14ರಂದು ಕಾರ್ಯಕ್ರಮ ಆಯೋಜಿಸಲಾಗಿತ್ತು. ಇದರಲ್ಲಿ ಭಾಗವಹಿಸಲು 13 ಲ್ಯಾಂಬೋರ್ಗಿನಿ ಕಾರುಗಳು ಹೊರಟಿದ್ದವು. ಈ ಪೈಕಿ ಅರ್ಜಿದಾರರ ಕಾರು ಕೊನೆಯದಾಗಿತ್ತು.

‘ಅತಿವೇಗ ಮತ್ತು ಅಜಾಗರೂಕತೆಯಿಂದ ಲ್ಯಾಂಬೋರ್ಗಿನಿ ಕಾರನ್ನು ಚಾಲನೆ ಮಾಡಲಾಗಿದೆ’ ಎಂಬ ಆಕ್ಷೇಪದ ವಿಡಿಯೊವನ್ನು ‘ಸನಾತನ’ ಎಂಬ ‘ಎಕ್ಸ್’ ಖಾತೆಯಲ್ಲಿ ವೀಕ್ಷಿಸಿರುವುದಾಗಿ ಪಿಎಸ್‌ಐ ಆರ್. ರಾಮಸ್ವಾಮಿ ದೂರು ನೀಡಿದ್ದರು. ಇದರನ್ವಯ ಕೆಂಗೇರಿ ಸಂಚಾರ ಪೊಲೀಸ್ ಠಾಣೆಯಲ್ಲಿ, ಭಾರತೀಯ ಮೋಟಾರು ವಾಹನಗಳ ಕಾಯ್ದೆ ಅಡಿ ಪ್ರಕರಣ ದಾಖಲಿಸಲಾಗಿದೆ.

ಸಿಸಿಬಿ ತನಿಖೆ ಆರಂಭ

ಬೆಂಗಳೂರು: ನಗರದ ಸೌಂದರ್ಯ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಯಲ್ಲಿ ಕೋಟ್ಯಂತರ ರೂಪಾಯಿ ದುರ್ಬಳಕೆ ಆರೋಪಕ್ಕೆ ಸಂಬಂಧಿಸಿದಂತೆ ಕೇಂದ್ರ ಅಪರಾಧ ವಿಭಾಗದ (ಸಿಸಿಬಿ) ವಿಶೇಷ ವಿಚಾರಣಾ ದಳ ತನಿಖೆ ಆರಂಭಿಸಿದೆ.

ಸೌಂದರ್ಯ ಸೊಸೈಟಿಯ ಸದಸ್ಯ ಶಂಕರಗೌಡ ಜೋಗರೆಡ್ಡಿ ಅವರು ನಗರ ಪೊಲೀಸ್ ಕಮಿಷನರ್‌ಗೆ ದೂರು ನೀಡಿದ್ದರು.

‘ಸೌಂದರ್ಯ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಯ ಅಧ್ಯಕ್ಷ ಪಿ.ಮಂಜಪ್ಪ, ಅವರ ಪತ್ನಿ ಎಂ.ಸುನೀತಾ ಸೇರಿದಂತೆ ಇತರರು ಅಧಿಕಾರ ದುರ್ಬಳಕೆ ಮಾಡಿಕೊಂಡಿದ್ದು, 2020 ರಿಂದ 2024ರ ಅವಧಿಯಲ್ಲಿ ನಡೆದ ₹14 ಕೋಟಿ ಸಾಲ ಮಂಜೂರಾತಿಯಲ್ಲಿ ಅಕ್ರಮ ಎಸಗಿದ್ದಾರೆ’ ಎಂದು ದೂರುದಾರರು ಆರೋಪಿಸಿದ್ದಾರೆ.

‘ಕೋ ಆಪರೇಟಿವ್ ಸೊಸೈಟಿ ನಿಯಮ ಉಲ್ಲಂಘನೆ, ಸಾಲ ನೀಡಿಕೆಯಲ್ಲಿ ಅಕ್ರಮ ಹಾಗೂ ಅಧಿಕಾರ ದುರ್ಬಳಕೆ ಆರೋಪ ಕುರಿತು ದಾಖಲಾಗಿರುವ ದೂರಿನ ಅನ್ವಯ ಪ್ರಾಥಮಿಕ ವಿಚಾರಣೆ ನಡೆಸಲಾಗುತ್ತಿದೆ. ಹಲವು ದಾಖಲೆಗಳ ಪರಿಶೀಲನೆ ನಡೆದಿದೆ’ ಎಂದು ಸಿಸಿಬಿ ಡಿಸಿಪಿ ಶ್ರೀಹರಿಬಾಬು ತಿಳಿಸಿದ್ದಾರೆ.

ಸಹಕಾರ ಇಲಾಖೆಯಿಂದಲೂ ತನಿಖೆ: ಸೊಸೈಟಿಯಲ್ಲಿ ನಡೆದಿರುವ ಹಣ ದುರ್ಬಳಕೆ ಆರೋಪ ಸಂಬಂಧ ಸಹಕಾರ ಇಲಾಖೆ ನಿಬಂಧಕರು ಪ್ರತ್ಯೇಕ ತನಿಖೆ ನಡೆಸುತ್ತಿದ್ದಾರೆ. ಸೊಸೈಟಿಯ 5 ವರ್ಷಗಳ ಆಯ-ವ್ಯಯದ ಲೆಕ್ಕಪರಿಶೋಧನೆಯು ನಡೆದಿದೆ. ಹೀಗಾಗಿ, ಸಹಕಾರ ಇಲಾಖೆ ತನಿಖಾ ವರದಿ ಯನ್ನು ಪಡೆಯಲಾಗುವುದು ಎಂದು ಮೂಲಗಳು ಹೇಳಿವೆ.

ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಆರ್. ಸುನಂದಮ್ಮ ಅಭಿಮತ

‘ಒತ್ತಡದಲ್ಲಿ ಕಾರ್ಯನಿರ್ವಹಿಸುವ ವೈದ್ಯರು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವೈದ್ಯರು ಒತ್ತಡದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಅನಗತ್ಯವಾಗಿ ಅವರನ್ನು ದೂಷಿಸುವುದು ಬಿಡಬೇಕು’ ಎಂದು ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಆರ್. ಸುನಂದಮ್ಮ ಹೇಳಿದರು.

ಭಾರತೀಯ ವೈದ್ಯಕೀಯ ಸಂಘದ (ಐಎಂಎ) ಕರ್ನಾಟಕ ಶಾಖೆ–ಬೆಂಗಳೂರು ಹಾಗೂ ಭಾರತೀಯ ವೈದ್ಯಕೀಯ ಸಂಘದ ಬರಹಗಾರರ ಸಮಿತಿ ಹಾಗೂ ಹರಿವು ಬುಕ್ಸ್ ಜಂಟಿಯಾಗಿ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ‘ಸಿರಿಂಜ್ ಹಿಡಿವ ಕೈ ಪೆನ್ನು ಹಿಡಿದಾಗ’ ಪುಸ್ತಕ ಜನಾರ್ಪಣೆ ಮಾಡಿ ಮಾತನಾಡಿದರು.

‘ನಮ್ಮ ಕುಟುಂಬದಲ್ಲಿಯೂ ವೈದ್ಯರಿದ್ದು, ಅವರ ಕಾರ್ಯನಿರ್ವಹಣೆಯನ್ನು ಹತ್ತಿರದಿಂದ ನೋಡಿದ್ದೇನೆ. ಇದರಿಂದಾಗಿ ಅವರು ದೈನಂದಿನ ಜೀವನದಲ್ಲಿ ಎದುರಿಸುತ್ತಿರುವ ಒತ್ತಡ ಅರಿವಿನಲ್ಲಿದೆ. ವಿವಿಧ ಸಂಕೀರ್ಣ ಪ್ರಕರಣಗಳ ನಿರ್ವಹಣೆ ವೇಳೆ ಹಲವು ಸವಾಲುಗಳನ್ನು ವೈದ್ಯರು ಎದುರಿಸಬೇಕಾಗುತ್ತದೆ. ಚಿಕಿತ್ಸೆಗೆ ಸ್ಪಂದಿಸದೆ ವ್ಯಕ್ತಿ ಮೃತಪಟ್ಟರೂ ವೈದ್ಯರನ್ನು ದೂಷಿಸುತ್ತೇವೆ’ ಎಂದರು.

‘ಹಿಂದೆ ವೈದ್ಯರನ್ನು ದೇವರಂತೆ ಕಾಣುತ್ತಿದ್ದ ಜನರು, ಈಗ ಅವರ ಬಗೆಗಿನ ವಿಶ್ವಾಸ ಕಳೆದುಕೊಳ್ಳುತ್ತಿದ್ದಾರೆ. ಇದಕ್ಕೆ ಕಾರಣವನ್ನು ಹುಡುಕಬೇಕಿದೆ. ವೈದ್ಯಕೀಯ ಪದಗಳನ್ನು ಕನ್ನಡೀಕರಣ ಮಾಡಿ, ವೈದ್ಯ ವಿಜ್ಞಾನವನ್ನು ಸರಳವಾಗಿ ಜನರಿಗೆ ತಿಳಿಸುವ ಕೆಲಸವಾಗಬೇಕು’ ಎಂದು ಅಭಿಪ್ರಾಯಪಟ್ಟರು.

ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯದ ಹಳೆ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷೆ ಆರ್.ಕೆ. ಸರೋಜಾ, ‘ಕೃತಿಯಲ್ಲಿ 83 ವೈದ್ಯರು ಲೇಖನಗಳನ್ನು ಬರೆದಿದ್ದಾರೆ. ಅಪರೂಪದ ಪ್ರಕರಣಗಳ ಬಗ್ಗೆ ಮಾಹಿತಿ ಒದಗಿಸಿದ್ದಾರೆ. ವೈದ್ಯ ಸಾಹಿತ್ಯವು ಕನ್ನಡ ಸಾಹಿತ್ಯಕ್ಕೆ ಹೊಸ ದೃಷ್ಟಿ ನೀಡುವಂತಾಗಬೇಕು’ ಎಂದು ಹೇಳಿದರು.

ಕೃತಿಯ ಪ್ರಧಾನ ಸಂಪಾದಕ ಡಾ.ಎಂ. ಅಣ್ಣಯ್ಯ ಕುಲಾಲ್ ಉಳ್ತೂರು, ‘ಹೊತ್ತಲ್ಲದ ಹೊತ್ತಿನಲ್ಲಿ ಜೀವನ್ಮರಣ ಸ್ಥಿತಿಯಲ್ಲಿ ಬರುವ ರೋಗಿಗಳ ಜೀವ ಉಳಿಸಲು ವೈದ್ಯರು ಹೆಣಗುತ್ತಾರೆ. ವೈದ್ಯರ ಇನ್ನೊಂದು ಮುಖ ನೋಡುವ ಪ್ರಯತ್ನ ನಡೆಯಬೇಕು. ವೈದ್ಯರ ಕಥಾನಕ ಸಂಗ್ರಹದ ಓದಿನಿಂದ ಜನಸಾಮಾನ್ಯರು ವೈದ್ಯಲೋಕದ ನಿತ್ಯ ಸಂಕಷ್ಟಗಳು, ಸುಖ–ದುಃಖಗಳನ್ನು ಸ್ವಲ್ಪಮಟ್ಟಿಗಾದರೂ ಅರಿತುಕೊಳ್ಳಲಿ ಎನ್ನುವುದೇ ಕೃತಿ ರಚನೆ ಹಿಂದಿನ ಆಶಯ’ ಎಂದರು.

ಲೇಖಕ ಹಾಗೂ ಪ್ರಕಾಶಕ ವಸುಧೇಂದ್ರ, ಐಎಂಎ ಕರ್ನಾಟಕ ಶಾಖೆ ಅಧ್ಯಕ್ಷ ಡಾ.ಟಿ.ಎ. ವೀರಭದ್ರಯ್ಯ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಗೌರವ ಕಾರ್ಯದರ್ಶಿ ಡಾ.ಸೂರಿರಾಜು ವಿ., ಸ್ತ್ರೀರೋಗ ತಜ್ಞೆ ಡಾ. ಇಂದಿರಾ ದೊಡ್ಡಬಳ್ಳಾಪುರ ಉಪಸ್ಥಿತರಿದ್ದರು.



ಕಾರ್ಯಕ್ರಮದಲ್ಲಿ ಡಾ. ಸರೋಜಾ ಆರ್.ಕೆ. ಹಾಗೂ ಆರ್. ಸುನಂದಮ್ಮ ಸಮಾಲೋಚನೆ ನಡೆಸಿದರು. ವಸುಧೇಂದ್ರ, ಡಾ. ಟಿ.ಎ. ವೀರಭದ್ರಯ್ಯ ಮತ್ತು ಡಾ.ಇಂದಿರಾ ದೊಡ್ಡಬಳ್ಳಾಪುರ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

ಬೈಕ್ ಟ್ಯಾಕ್ಸಿಗೆ ಅವಕಾಶ: ಆತಂಕ

ಆಗಸ್ಟ್‌ನಿಂದಲೇ ಸಂಚರಿಸುತ್ತಿದ್ದ ಬೈಕ್ ಟ್ಯಾಕ್ಸಿ • ನಿಯಮಾವಳಿ ರಚಿಸದ ಸರ್ಕಾರ

• ಬಾಲಕೃಷ್ಣ ಪಿ.ಎಚ್.

ಮುಖ್ಯಾಂಶಗಳು

- ವಾಣಿಜ್ಯ ತೆರಿಗೆ ಕಟ್ಟದೇ ಬೈಕ್ ಟ್ಯಾಕ್ಸಿಗಳ ಸಂಚಾರಕ್ಕೆ ಅವಕಾಶ
- ನಿಯಾಮವಳಿ ರೂಪಿಸಲು ಆಗ್ರಹ
- ಆಟೊ ಚಾಲಕರ ಅಸಮಾಧನ

ಬೆಂಗಳೂರು: 'ಅರ್ಹ ಮೋಟಾರ್ ಸೈಕಲ್‌ಗಳನ್ನು ಬೈಕ್ ಟ್ಯಾಕ್ಸಿಗಳನ್ನಾಗಿ ಬಳಸಬಹುದು' ಎಂಬ ಆದೇಶವು ಬೈಕ್ ಟ್ಯಾಕ್ಸಿ ಚಾಲಕರಿಗೆ, ಅಗ್ರಿಗೇಟರ್ ಕಂಪನಿಗಳಿಗೆ ಖುಷಿ ನೀಡಿದ್ದರೆ, 'ಬೈಕ್ ಟ್ಯಾಕ್ಸಿಗಳು ಹೆಚ್ಚಾದರೆ ನಮ್ಮ ಆದಾಯಕ್ಕೆ ಹೊಡೆತ ಬೀಳಲಿದೆ' ಎಂದು ಆಟೊ ಚಾಲಕರು ಆತಂಕ ವ್ಯಕ್ತಪಡಿಸಿದ್ದಾರೆ.

2025ರ ಜೂನ್‌ನಲ್ಲಿ ಬೈಕ್ ಟ್ಯಾಕ್ಸಿಗಳನ್ನು ನಿಷೇಧಿಸಲಾಗಿತ್ತು. ವಿವಿಧ ಅಗ್ರಿಗೇಟರ್ ಕಂಪನಿಗಳು ಈ ನಿಷೇಧವನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸಿದ್ದರಿಂದ 'ಬೈಕ್ ಟ್ಯಾಕ್ಸಿ ಸೇವೆ ಒದಗಿಸುವ ವ್ಯಕ್ತಿಗಳಿಗೆ ಕಿರುಕುಳ ನೀಡಬಾರದು' ಎಂದು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ 2025ರ ಆಗಸ್ಟ್‌ನಲ್ಲಿಯೇ ಮೌಖಿಕ ಸೂಚನೆಯನ್ನು ನೀಡಿತ್ತು. ಅಲ್ಲದೇ ಈ ಬಗ್ಗೆ ನಿಯಮಾವಳಿಯನ್ನು ರಚಿಸುವಂತೆಯೂ ತಿಳಿಸಿತ್ತು.

ಅಂದಿನಿಂದ ಬೈಕ್ ಟ್ಯಾಕ್ಸಿಗಳು ಮತ್ತೆ ಸಂಚಾರ ಆರಂಭಿಸಿದ್ದವು. ಹಾಗಾಗಿ, ಬೈಕ್ ಟ್ಯಾಕ್ಸಿಗಳ ಪರವಾಗಿ ಹೈಕೋರ್ಟ್ ಆದೇಶ ಬಂದಿದ್ದರೂ ಸಾರ್ವಜನಿಕವಾಗಿ ಯಾವುದೇ ಬದಲಾವಣೆಗಳು ಉಂಟಾಗಲಿಲ್ಲ. ಬೈಕ್ ಟ್ಯಾಕ್ಸಿಗಳ ಹೆಚ್ಚಳವೂ ಆಗಿಲ್ಲ.

'ಬೈಕ್ ಟ್ಯಾಕ್ಸಿ ಅವಲಂಬಿಸಿ ದುಡಿಯುವ ಲಕ್ಷಾಂತರ ಮಂದಿಗೆ ಹೈಕೋರ್ಟ್ ಆದೇಶವು ಉಸಿರು ನೀಡಿದಂತಾಗಿದೆ. ಹಲವು ಸಮಯದ ಹೋರಾಟವು ಫಲ ನೀಡಿದೆ. ಬೈಕ್ ಟ್ಯಾಕ್ಸಿಗಳಿಗೆ ನಿಯಮ ರೂಪಿಸುವುದನ್ನು ನಾವು ವಿರೋಧಿಸಿರಲಿಲ್ಲ. ಆದರೆ, ನಿಷೇಧ ಮಾಡಿದ್ದರಿಂದ ಬೈಕ್ ಟ್ಯಾಕ್ಸಿ ಚಾಲಕರು ಬೀದಿಗೆ ಬೀಳುವಂತಾಗಿತ್ತು. ಓಲಾ, ಉಬರ್, ರ್‍ಯಾಪಿಡೊ ಮುಂತಾದ ಅಗ್ರಿಗೇಟರ್ ಸಂಸ್ಥೆಗಳಲ್ಲಿ ಬೈಕ್ ಮಾತ್ರವಲ್ಲ ಆಟೊ, ಕ್ಯಾಬ್‌ಗಳಿವೆ. ಹಾಗಾಗಿ ಕಂಪನಿಗಳಿಗೆ ನಷ್ಟವಾಗುವುದಿಲ್ಲ. ಈ ಕಂಪನಿಗಳ ಮೂಲಕವೇ ಬೈಕ್ ಟ್ಯಾಕ್ಸಿ ಓಡಿಸುತ್ತಿವ ನಮ್ಮಂಥವರಿಗೆ ಸಮಸ್ಯೆಯಾಗಿತ್ತು' ಎಂದು ಬೈಕ್ ಟ್ಯಾಕ್ಸಿ ಸವಾರ ಪುನೀತ್ ತಿಳಿಸಿದರು.

'ಬೇಕಾದಷ್ಟು ಆದಾಯವಿದ್ದವರು ಯಾರೂ ಬೈಕ್ ಟ್ಯಾಕ್ಸಿ ಓಡಿಸುವುದಿಲ್ಲ. ಬೇರೆ ದುಡಿಮೆ ಇಲ್ಲದೇ ಬೈಕ್‌ಟ್ಯಾಕ್ಸಿಗಳಲ್ಲಿ ದುಡಿಯುತ್ತಿರುವುವರೇ ಹೆಚ್ಚು. ಅವರ ಪರವಾಗಿ ಹೈಕೋರ್ಟ್ ನಿಂತಿದೆ' ಎಂದು ರ್‍ಯಾಪಿಡೊ ಅಗ್ರಿಗೇಟರ್ ಸಂಸ್ಥೆಯ ಶಶಾಂಕ್ ಹೇಳಿದರು.

'ಬೈಕ್ ಟ್ಯಾಕ್ಸಿಯಲ್ಲಿ ಸಂಚರಿಸುತ್ತಿದ್ದ ಯುವತಿಯರಿಗೆ ಕಿರುಕುಳ ನೀಡಿದ, ಮೈಕೈ ಸವರಿದ ಪ್ರಕರಣಗಳು ಇತ್ತೀಚೆಗೆ ದಾಖಲಾಗಿದ್ದವು. ಸುರಕ್ಷಿತವಲ್ಲದ ಪ್ರಯಾಣ ಇದಾಗಿದೆ. ಇದು ಒಂದೆಡೆ ಮಹಿಳೆಯರಿಗೆ ತೊಂದರೆಯಾದರೆ, ಮತ್ತೊಂದೆಡೆ ಆಟೊಗಳನ್ನು ನಂಬಿ ಬದುಕುವ ನಮ್ಮಂಥ ಲಕ್ಷಾಂತರ ಮಂದಿ ಬೀದಿಗೆ ಬೀಳುವಂತಾಗಿದೆ. ಯಾವುದೇ ವಾಣಿಜ್ಯ ಸಂಚಾರ ತೆರಿಗೆ ಕಟ್ಟದೇ ಅವರು ಪ್ರಯಾಣಿಕರನ್ನು ಕರೆದೊಯ್ಯಬಹುದು. ಆದರೆ, ನಾವು ವಾಣಿಜ್ಯ ತೆರಿಗೆ ಕಟ್ಟಿಯೂ ಪ್ರಯಾಣಿಕರಿಲ್ಲದೇ ತೊಂದರೆ ಅನುವಭವಿಸುವಂತಾಗಿದೆ' ಎಂದು ರಾಜಾಜಿನಗರದ ಆಟೊ ಚಾಲಕ ತಿಮ್ಮರಾಜು ಅಸಹಾಯಕತೆ ವ್ಯಕ್ತಪಡಿಸಿದರು.

'ಹಳದಿ ಸಂಖ್ಯಾಫಲಕ, ಬಿಳಿ ಸಂಖ್ಯಾಫಲಕದ ವ್ಯತ್ಯಾಸವೇ ಗೊತ್ತಿಲ್ಲ ಎಂದಾದರೆ ನಾವು ಏನು ಮಾಡಲು ಸಾಧ್ಯ. ಅಕ್ರಮವಾಗಿ ಓಡಿಸುವುದೇ ಸರಿ ಎಂದಾದರೆ ಮುಂದೆ ಎಲ್ಲ ಆಟೊದವರು ಬೈಕ್ ಟ್ಯಾಕ್ಸಿ ಓಡಿಸಲು ಮುಂದಾಗಬೇಕಾದ ಪರಿಸ್ಥಿತಿ ಬರಬಹುದು. ಮನೆಯಲ್ಲಿ ಒಂದು ಬೈಕ್ ಇದ್ದರೆ ಯಾವುದೋ ಅಗ್ರಿಗೇಟರ್ ಸಂಸ್ಥೆಯೊಂದಿಗೆ ಕೈ ಜೋಡಿಸಿಕೊಂಡು ಬೇರೆ ಕೆಲಸದ ನಡುವೆ ಸಮಯಾವಕಾಶ ಇರುವವರೆಲ್ಲ ಬೈಕ್ ಟ್ಯಾಕ್ಸಿ ಓಡಿಸುತ್ತಿದ್ದಾರೆ. ಮುಂದೆ ಇನ್ನಷ್ಟು ಹೆಚ್ಚಳವಾಗಲಿದೆ' ಎಂದು ಸಾರಥಿ ಆಟೊ ಚಾಲಕರ ಸಂಘದ ಅಧ್ಯಕ್ಷ ರಾಮೇಗೌಡ ಆತಂಕ ವ್ಯಕ್ತಪಡಿಸಿದರು.

'ಸರ್ಕಾರಕ್ಕೆ ಪಾಠ ಕಲಿಸುವುದು ಅನಿವಾರ್ಯ'

'ಸರ್ಕಾರಕ್ಕೆ ವಾಣಿಜ್ಯ ಸಂಚಾರದ ತೆರಿಗೆ ಕಟ್ಟುವ ಆಟೊ, ಕ್ಯಾಬ್‌ಗಳ ಹಿತಾಸಕ್ತಿಯನ್ನು ಕಡೆಗಣಿಸಿ ವೈಯಕ್ತಿಕ ವಾಹನಗಳಲ್ಲಿ ಪ್ರಯಾಣಿಕರನ್ನು ಕರೆದೊಯ್ಯುವವರ ಹಿತಾಸಕ್ತಿ ಕಾಪಾಡಲು ಸರ್ಕಾರ ಕೆಲಸ ಮಾಡಿದರೆ ಮುಂದಿನ ಚುನಾವಣೆಯಲ್ಲಿ ತಕ್ಕ ಪಾಠ ಕಲಿಸಬೇಕಾಗುತ್ತದೆ' ಎಂದು ರಾಜ್ಯ ಖಾಸಗಿ ಸಾರಿಗೆ ಸಂಘಗಳ ಒಕ್ಕೂಟದ ಅಧ್ಯಕ್ಷ ಎಸ್. ನಟರಾಜ ಶರ್ಮಾ ಎಚ್ಚರಿಸಿದ್ದಾರೆ.

ಬಿಳಿ ಸಂಖ್ಯಾಫಲಕಗಳನ್ನು ಹೊಂದಿರುವ ವಾಹನಗಳನ್ನು ವಾಣಿಜ್ಯ ಸಂಚಾರಕ್ಕೆ ಬಳಸಿ ಎಂದು ಹೈಕೋರ್ಟ್ ಹೇಳಿಲ್ಲ. ಹಾಗಾಗಿ ಹಳದಿ ಸಂಖ್ಯಾಫಲಕಗಳ ವಾಹನಗಳಷ್ಟೇ ಸಂಚರಿಸಬಹುದು. ದ್ವಿಚಕ್ರ ವಾಹನಗಳಿಗೆ ಹಳದಿ ಸಂಖ್ಯಾಫಲಕ ಇಲ್ಲ. ಈ ಬಗ್ಗೆ ನಿಯಮಾವಳಿ ರೂಪಿಸಿ ಎಂದು ಸರ್ಕಾರಕ್ಕೆ ಹೈಕೋರ್ಟ್ ಪದೇ ಪದೇ ಹೇಳಿತ್ತು. ಆದರೆ ಸರ್ಕಾರ ನಿರ್ಲಕ್ಷಿಸಿದ್ದರಿಂದ ಈ ಆದೇಶ ಬಂದಿದೆ. ಮುಂದೆಯಾದರೂ ಸರಿಯಾದ ನಿಯಮವನ್ನು ರೂಪಿಸಬೇಕು. ಅಲ್ಲಿಯವರೆಗೆ ಬಿಳಿ ಫಲಕದ ವಾಹನಗಳನ್ನು ವಾಣಿಜ್ಯ ಸಂಚಾರಕ್ಕೆ ಬಳಸುವುದನ್ನು ನಿಷೇಧಿಸಲು ಸರ್ಕಾರಕ್ಕೆ ಅಧಿಕಾರವಿದೆ. ಆ ಕೆಲಸ ಮಾಡಬೇಕು ಎಂದು ಒತ್ತಾಯಿಸಿದ್ದಾರೆ.


ಮಿಜೋರಾಂನಲ್ಲಿ ಅಧಿಕೃತವಾಗಿ ವಾಣಿಜ್ಯ ಸಂಚಾರ ಮಾಡುವ ಬೈಕ್‌ಟ್ಯಾಕ್ಸಿಗಳು (ಹಳದಿ ಸಂಖ್ಯಾಫಲಕ)

'ವೇದ ವಿಜ್ಞಾನದ ಅಧ್ಯಯನ ನಡೆಯಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆಧುನಿಕ ವಿಜ್ಞಾನ ವ್ಯವಸ್ಥೆಯ ಒಳಗಡೆ ವೇದ ವಿಜ್ಞಾನವನ್ನು ಇಟ್ಟು ಪರೀಕ್ಷಿಸುವ ಸಾಹಸಕ್ಕೆ ಮುಂದಾಗದೆ, ಸ್ವತಂತ್ರ ಹಾಗೂ ಪ್ರತ್ಯೇಕವಾಗಿ ವೇದ ವಿಜ್ಞಾನವನ್ನು ಅಧ್ಯಯನ ಮಾಡಬೇಕು' ಎಂದು ನವದೆಹಲಿಯ ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿ ಶ್ರೀನಿವಾಸ ವರಖೇಡಿ ಅಭಿಪ್ರಾಯಪಟ್ಟರು.

ರಾಷ್ಟ್ರೀಯ ವೇದ ವಿಜ್ಞಾನ ಸಂಸ್ಥೆ ಟ್ರಸ್ಟ್ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ 'ಆಧುನಿಕ ಜಗತ್ತಿನಲ್ಲಿ ವೇದ ವಿಜ್ಞಾನಗಳ ಪ್ರಸ್ತುತತೆ' 7ನೇ ಅಂತರರಾಷ್ಟ್ರೀಯ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ, ಮಾತನಾಡಿದರು.

'ಪ್ರಾಚೀನ ಶಾಸ್ತ್ರ ಪರಂಪರೆಯು ವೈಜ್ಞಾನಿಕ ಚಿಂತನೆಯನ್ನು ಒಳಗೊಂಡಿದೆ. ನಮ್ಮ ಪರಂಪರೆ ಬಗ್ಗೆ ಪ್ರಶ್ನೆ ಮಾಡುವುದೇ ವಿಜ್ಞಾನದ ಮೂಲಧರ್ಮವೆಂದು ಕೆಲವರು ಅಂದುಕೊಂಡಿದ್ದಾರೆ. ನೈಜ ವಿಜ್ಞಾನಿಗಳು ಮಾತ್ರ ಈ ಬಗ್ಗೆ ಜಿಜ್ಞಾಸೆ ಮಾಡುತ್ತಾರೆ. ವೇದ ವಿಜ್ಞಾನದಲ್ಲಿಯೂ ಜಿಜ್ಞಾಸೆ ಪ್ರಧಾನವಾಗಿದೆ. ಪ್ರಯೋಗಾಲಯದ ಒಳಗಡೆ ಇರುವುದು ಮಾತ್ರ ವೈಜ್ಞಾನಿಕ, ಹೊರಗಡೆ ಇರುವುದೆಲ್ಲ ಅವೈಜ್ಞಾನಿಕವೆಂಬ ಮನೋಭಾವವೂ ಕೆಲವರಲ್ಲಿದೆ' ಎಂದು ಹೇಳಿದರು.

'ವೇದ ಮೂಲ ಚಿಂತನೆಯಲ್ಲಿ ಜ್ಞಾನ ವಿಜ್ಞಾನ ಸೇರಿಸಿ ಅಖಂಡವಾದ ಜ್ಞಾನದ ರೂಪ ನೀಡಲಾಗಿದೆ. ಪಾಶ್ಚಾತ್ಯ ವಿಜ್ಞಾನದ ವ್ಯವಸ್ಥೆಯಡಿ ವೇದ ವಿಜ್ಞಾನ ಇಡಲು ಸಾಧ್ಯವಿಲ್ಲ. ವೇದ ವಿಜ್ಞಾನದ ಮಾನಂಡ, ವ್ಯಾಪ್ತಿ ಬೇರೆ ಬೇರೆ. ವಿಜ್ಞಾನಕ್ಕೆ ಗಣಿತವು ಭಾಷೆಯಾದಂತೆ, ವೇದ ವಿಜ್ಞಾನದ ಮೂಲದ್ರವ್ಯ ಅರಿಯಲು ಸಂಸ್ಕೃತ ಸಹಕಾರಿ' ಎಂದು ಅಭಿಪ್ರಾಯಪಟ್ಟರು.

ಹೈಕೋರ್ಟ್ ನ್ಯಾಯಮೂರ್ತಿ ವಿ.ಶ್ರೀಶಾನಂದ, 'ಫಲಿತಾಂಶ ಮುಂದಿದ್ದರೂ ಅದನ್ನು ನಿರಾಕರಿಸುವ, ನಾಸ್ತಿಕನಿಗೂ ಜಾಗ ನೀಡಿರುವ ಏಕೈಕ ಧರ್ಮ ಹಿಂದೂ ಧರ್ಮ. ಹುದುಗಿಹೋಗಿರುವ ಸತ್ಯವನ್ನು ಹೊರತೆಗೆಯಬೇಕು. ಚಿನ್ನ ಮಣ್ಣಿನಲ್ಲಿ ಬೆರೆತಾಗ ಹಲವು ರೀತಿಯ ಸಂಸ್ಕರಣೆಗೆ ಒಳಗಾಗಿ, ಮಹಿಳೆಯರ ಕೊರಳಿನಲ್ಲಿ ಶೋಭಿಸಲಿದೆ. ಅದೇ ರೀತಿ, ವೇದ ವಿಜ್ಞಾನದಲ್ಲಿ ಅಡಗಿರುವ ಜ್ಞಾನವನ್ನು ಹೊರತೆಗೆಯಬೇಕು' ಎಂದು ಹೇಳಿದರು.

ಮುಳಬಾಗಿಲಿನ ಶ್ರೀಪಾದರಾಜ ಮಠದ ಸುಜಯನಿಧಿತೀರ್ಥ ಸ್ವಾಮೀಜಿ ಅವರು ಸಮಾರಂಭದ ಸಾನ್ನಿಧ್ಯ ವಹಿಸಿದ್ದರು.


ಸಮಾರಂಭದಲ್ಲಿ ವಿ. ಶ್ರೀಶಾನಂದ ಅವರನ್ನು ಸುಜಯನಿಧಿತೀರ್ಥ ಸ್ವಾಮೀಜಿ ಗೌರವಿಸಿದರು. ಟ್ರಸ್ಟ್ ಸದಸ್ಯ ಶ್ಯಾಮಾಚಾರ್ ಮತ್ತು ಐಎಎಸ್ ಅಧಿಕಾರಿ ಜಿ. ಶ್ರೀಧರ್ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

ನಗರದಲ್ಲಿ ಇಂದು


ರಥಸಪ್ತಮಿ 108 ಸೂರ್ಯ ನಮಸ್ಕಾರ: ಆಯೋಜನೆ ಮತ್ತು ಸ್ಥಳ: ಓಂ ಸೇವಾ ಕೇಂದ್ರ, ಹೇರೋಹಳ್ಳಿ ಸಿಂಡಿಕೇಟ್ ಬ್ಯಾಂಕ್ ಕಾಲೊನಿ, ರಾಜರಾಜೇಶ್ವರಿನಗರ, ಬೆಳಿಗ್ಗೆ 6

ಸುರ್ ಪ್ರಭಾತ್: ಗಾಯನ: ವಿನಾಯಕ್ ತೊರವಿ, ತಬಲಾ: ರವೀಂದ್ರ ಯಾವಗಲ್, ಹಾರ್ಮೋನಿಯಂ: ವ್ಯಾಸಮೂರ್ತಿ ಕಟ್ಟಿ, ಆಯೋಜನೆ: ರಾಜಗುರು ಸ್ಮೃತಿ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಬೆಳಿಗ್ಗೆ 7

ಪ್ರಸನ್ನ ಪಾರ್ವತಿ ಸಮೇತ ಗವಿಗಂಗಾಧರೇಶ್ವರ ದೇವಸ್ಥಾನದ ಬ್ರಹ್ಮ ರಥೋತ್ಸವ: ಬೆಳಿಗ್ಗೆ 8ಕ್ಕೆ ಅಭಿಷೇಕ, ಸ್ಥಳ: ಪ್ರಸನ್ನ ಪಾರ್ವತಿ ಸಮೇತ **ಗವಿಗಂಗಾಧರೇಶ್ವರ ದೇವಸ್ಥಾನ ಗವಿಪುರ**

ಚಿತ್ರಕಲಾ ಸ್ಪರ್ಧೆ, ಉಚಿತ ಆರೋಗ್ಯ ತಪಾಸಣಾ ಶಿಬಿರ: ಆಯೋಜನೆ: ಕಲ್ಪವೃಕ್ಷ ಮಹಿಳಾ ಚಾರಿಟಬಲ್ ಟ್ರಸ್ಟ್, ಸ್ಥಳ: ಐಡಿಯಲ್ ಹೋಮ್ಸ್ ಮುನಿ ವೆಂಕಟಪ್ಪ ಸ್ಮಾರಕ ಬಯಲು ರಂಗಮಂದಿರ, ರಾಜರಾಜೇಶ್ವರಿನಗರ, ಬೆಳಿಗ್ಗೆ 9ರಿಂದ

'ಶ್ರೀ ಶ್ರೀ ಅವಾರ್ಡ್ಸ್ ಫಾರ್ ಎಜುಕೇಷನ್–2026' ಪ್ರದಾನ: ಸಾನ್ನಿಧ್ಯ: ಶ್ರೀ ಶ್ರೀ ರವಿಶಂಕರ್ ಗುರೂಜಿ, ಅತಿಥಿಗಳು: ದಿನೇಶ್ ಗುಂಡೂರಾವ್, ಮೋಹನ್‌ದಾಸ್ ಪೈ, ಮನೋಜ್ ಶ್ರೀವತ್ಸ, ಸ್ಥಳ: ಆರ್ಟ್ ಆಫ್ ಲಿವಿಂಗ್ ಅಂತರರಾಷ್ಟ್ರೀಯ ಕೇಂದ್ರ, ಕನಕಪುರ ರಸ್ತೆ, ಬೆಳಿಗ್ಗೆ 9.30


ಶ್ರೀ ರವಿಶಂಕರ್ ಗುರೂಜಿ

ಶ್ರೀ ವಿಶ್ವಬಂಧು ಸಂಗೀತ ಗುರುಕುಲದ ದಶಮಾನೋತ್ಸವ, ಪರಂಪರಾ 10ನೇ ವಾರ್ಷಿಕೋತ್ಸವ, ಭಾರತ ರತ್ನ ಪಂಡಿತ್ ಭೀಮ್ ಸೇನ್ ಜೋಶಿ ಅವರ 16ನೇ ಪುಣ್ಯಸ್ಮರಣೆ: ಉದ್ಘಾಟನೆ, ಗಾಯನ: ಜಯತೀರ್ಥ ಮೇವುಂಡಿ, ತಬಲಾ: ಕೇಶವ್ ಜೋಶಿ, ಮಧುಸೂದನ್ ಭಟ್, ಸಮಾರೋಪ ಸಮಾರಂಭ: ಅಧ್ಯಕ್ಷತೆ: ಮಹೇಂದ್ರ ಡಿ., ಅತಿಥಿಗಳು: ತೇಜಸ್ವಿ ಸೂರ್ಯ, ಕೆ. ಸುಚೇಂದ್ರ ಪ್ರಸಾದ್, ದಾಸೇಗೌಡ ಸಿ., ಆರ್.ಎಸ್. ಪಾಟೀಲ್, ಮಹೇಂದ್ರ ಮುನ್ನೋಟ್ ಜೈನ್, ಆಯೋಜನೆ: ಶ್ರೀ ವಿಶ್ವಬಂಧು ಸಂಗೀತ ಗುರುಕುಲ, ಸ್ಥಳ: ಇಂದಿರಾ ಗಾಂಧಿ ರಾಷ್ಟ್ರೀಯ ಕಲಾ ಕೇಂದ್ರದ ಪ್ರಾದೇಶಿಕ ವಲಯ, ಕೆಂಗುಂಟೆ ವೃತ್ತ, ಮಲ್ಲತ್ತಹಳ್ಳಿ, ಬೆಳಿಗ್ಗೆ 9.30ರಿಂದ

ನಾದ ನಮನ: ಕಲಾಶೃಂಗ ಪ್ರಶಸ್ತಿ ಸ್ವೀಕರಿಸುವವರು: ಸ್ವಪ್ನ ಚೌಧರಿ, ಆಯೋಜನೆ: ಶ್ರೀರಾಮ ಕಲಾ ವೇದಿಕೆ, ಸ್ಥಳ: ಬೆಂಗಳೂರು ಗಾಯನ ಸಮಾಜ, ಕೆ.ಆರ್. ರಸ್ತೆ, ಬೆಳಿಗ್ಗೆ 9.30

ಡಿ.ಎಸ್. ವಿಶ್ವನಾಥ್ ಅವರ ಪುಸ್ತಕಗಳ ಲೋಕಾರ್ಪಣೆ: ಎಚ್.ಎಸ್. ಗೋಪಿನಾಥ್, ಉಪಸ್ಥಿತಿ: ಸತೀಶ್‌ಕುಮಾರ್ ಹೊಸಮನಿ, ಅಧ್ಯಕ್ಷತೆ: ಮನು ಬಳಿಗಾರ್, ಆಯೋಜನೆ: ಶ್ರೀ ಗಣೇಶ್ ಪಬ್ಲಿಕೇಷನ್ಸ್, ಸ್ಥಳ: ಸಾರ್ವಜನಿಕ ಗ್ರಂಥಾಲಯ ಇಲಾಖೆ, ನಗರ ಕೇಂದ್ರ ಗ್ರಂಥಾಲಯ ಪಶ್ಚಿಮ ವಲಯ, ಹಂಪಿನಗರ, ಬೆಳಿಗ್ಗೆ 9.30

'ಬಿಗ್‌ಬಾಸ್ ಉನ್ಮಾದ, ಮಾಧ್ಯಮ ಪ್ರಚೋದನೆ ಸಾರ್ವಜನಿಕ ಸಂಯಮದ ಅವಶ್ಯಕತೆ' ಚರ್ಚಾಗೋಷ್ಠಿ: ಸ್ಥಳ: ಗಾಂಧಿಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10

'ಎ ಸೈಂಟಿಫಿಕ್ ಅಪ್ರೋಚ್ ಟುವರ್ಡ್ಸ್ ಟೀಚಿಂಗ್ ಹಿಸ್ಟರಿ': ಭಾಷಣಕಾರರು: ಆದಿತ್ಯ ಮುಖರ್ಜಿ, ಮೃದುಲಾ ಮುಖರ್ಜಿ, ಸುಮಿತ್ರೊ ಬ್ಯಾನರ್ಜಿ, ಅತಿಥಿಗಳು: ಬಿ. ರಮೇಶ್, ಎ. ನವೀನ್ ಜೋಸೆಫ್, ಆಯೋಜನೆ: ಎಐಎಸ್ಇಸಿ, ಸ್ಥಳ: ಸೆಮಿನಾರ್ ಹಾಲ್, ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜಿನ ಆವರಣ, ಬೆಳಿಗ್ಗೆ 10

ದೇಶಭಕ್ತಿ ಗೀತೆಗಳು, ಕನ್ನಡ ಗೀತೆಗಳ ಗಾಯನ: ಶೀಬಾ ಮೂರ್ತಿ, ಗೀತಾ ವಿಶ್ವನಾಥ್, ಉಮೇಶ್, ಮೋಹನ್ ರಾಜೇಶ್ ಕಶ್ಯಪ್, 'ಕೃಷ್ಣ ಸಂಧಾನ' ನಾಟಕ ಪ್ರದರ್ಶನ: ಆಯೋಜನೆ: ದೃಶ್ಯರಂಗ ಕಲಾ ಸಂಘ, ಶ್ರೀ ವಿನಾಯಕ ಕಲಾ ಬಳಗ ಟ್ರಸ್ಟ್, ಸ್ಥಳ: ಮೈಸೂರು ಉದ್ಯಾನ ಕಲಾ ಸಂಘ ಭವನ, ಲಾಲ್‌ಬಾಗ್, ಬೆಳಿಗ್ಗೆ 10ರಿಂದ

ವಲ್ಲೀದೇವಸೇನಾ ಸಮೇತ ಸುಬ್ರಹ್ಮಣ್ಯೇಶ್ವರಸ್ವಾಮಿ ದೇವಸ್ಥಾನದ ರಜತ ಬ್ರಹ್ಮ ರಥೋತ್ಸವ: ರುದ್ರಾಭಿಷೇಕ, ನಿತ್ಯಹೋಮ, ಪ್ರಕಾರೋತ್ಸವ, ಮಹಾಮಂಗಳಾರತಿ, ಆಯೋಜನೆ: ವಲ್ಲೀದೇವಸೇನಾ ಸಮೇತ ಸುಬ್ರಹ್ಮಣ್ಯೇಶ್ವರಸ್ವಾಮಿ ದೇವಸ್ಥಾನ, ಸುಬ್ರಹ್ಮಣ್ಯಪುರ, ಬೆಳಿಗ್ಗೆ 10

ಪಿಟೀಲು ವಾದನ ಮತ್ತು ಭಕ್ತಿಗೀತೆ ಗಾಯನ ಸ್ಪರ್ಧೆ: ಉದ್ಘಾಟನೆ: ಕೆ. ಮೋಹನ್‌ದೇವ್ ಆಳ್ವ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10ರಿಂದ

ಉಪನ್ಯಾಸ, ಕವಿಗೋಷ್ಠಿ, ಗಾಯನ, ರಸಪ್ರಶ್ನೆ ಕಾರ್ಯಕ್ರಮ: ಅಧ್ಯಕ್ಷತೆ: ರೂಪಶ್ರೀ ಮೋಹನ್, ಅತಿಥಿಗಳು: ಸಿ.ವಿ. ಶ್ರೀನಿವಾಸ್, ಎಚ್.ಎಸ್. ಜಯರಾಂ, ಆಯೋಜನೆ: ಕಲಾಚಂದಿರ ಕಲಾಮಂದಿರ ಟ್ರಸ್ಟ್, ಸ್ಥಳ: ಎಸ್.ಜಿ.ಆರ್ ಗ್ರೀನ್‌ಹೌಸ್ ಕರೋಕೆ ಕ್ಲಬ್, ಆರನೇ ಬ್ಲಾಕ್, ರಾಜಾಜಿನಗರ, ಬೆಳಿಗ್ಗೆ 10

ಅವಕಾಶವಂಚಿತರು ಹಾಗೂ ಅಶಕ್ತರಿಗೆ ಆರೋಗ್ಯ ಪಾಲನಾ ಶಿಬಿರ, ಉಚಿತ ಪೊರೆ ಶಸ್ತ್ರಚಿಕಿತ್ಸೆಗಾಗಿ ಕಣ್ಣು ಪರೀಕ್ಷೆ ಶಿಬಿರ, ಉಚಿತ ದಂತ ಪರೀಕ್ಷೆ ಶಿಬಿರ: ಉದ್ಘಾಟನೆ: ಕೆ. ಮೋಹನ್‌ದೇವ್ ಆಳ್ವ, ಆಯೋಜನೆ ಮತ್ತು ಸ್ಥಳ: ಉದಯಭಾನು ಕಲಾಸಂಘ, ಕೆಂಪೇಗೌಡನಗರ, ಬೆಳಿಗ್ಗೆ 10

ಗಾಯನ, ಹಾಸ್ಯ, ರಸಪ್ರಶ್ನೆ, ಕವಿಗೋಷ್ಠಿ ಕಾರ್ಯಕ್ರಮ: ಅಧ್ಯಕ್ಷತೆ: ಸದಾನಂದ, ಅತಿಥಿಗಳು: ವೆಂಕಟರಂಗನ್, ಸಿರಿಗಂಧ ರಾಮಕೃಷ್ಣ, ಎಂ.ಜಿ. ರಮೇಶ್, ಆಯೋಜನೆ: ಸಹಮತ, ಸ್ಥಳ: 323, ಹೇಮ ಸದನ, ಸಹಕಾರ ನಗರ, ಬೆಳಿಗ್ಗೆ 10

ಜಾಂಬವ ಎಂ. ಗಂಗಾಧರ್ ಸಂಪಾದಿಸಿರುವ 'ಗಾನಗಾರುಡಿಗ ಗುರುರಾಜ ಹೊಸಕೋಟೆ' ಅಭಿನಂದನಾ ಗ್ರಂಥ ಬಿಡುಗಡೆ, ಅಭಿನಂದನಾ ಸಮಾರಂಭ: ಉದ್ಘಾಟನೆ: ಆರ್. ದೇವದಾಸ್, ಗ್ರಂಥ ಬಿಡುಗಡೆ: ವೂಡೇ ಪಿ. ಕೃಷ್ಣ, ಅತಿಥಿಗಳು: ಮಲ್ಲೇಪುರಂ ಜಿ. ವೆಂಕಟೇಶ್, ಪ್ರಾಸ್ತಾವಿಕ ನುಡಿ: ಎ. ರಾಜೇಶ್, ಅತಿಥಿಗಳು: ರಾಜಗುರು ಬಿ.ಎಸ್. ದ್ವಾರಕನಾಥ್ ಗುರೂಜಿ, ವಿ. ನಾಗೇಂದ್ರ ಪ್ರಸಾದ್, ಆಯೋಜನೆ: ಶ್ರೀ ಗುರುರಾಜ ಹೊಸಕೋಟೆಯವರ ಅಭಿನಂದನಾ ಸಮಿತಿ, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10.30


ಗುರುರಾಜ ಹೊಸಕೋಟೆ

ಒಪೆರಾ ಕಾಡೋ ಕಥೆ, ಗುನಗೋ ಗೀತೆ: ಭಾಗವಹಿಸುವವರು: ವಿ.ಎ. ಲಕ್ಷ್ಮಣ, ಶ್ರೀದೇವಿ ಕಳಸದ, ಮಾಸಂದ್ರ ಕೃಷ್ಣಪ್ರಸಾದ್, ಪ್ರವೀಣ್ ಡಿ. ರಾವ್, ರಾಣಾ, ಸುನೀಲ್ ಕುಮಾರ್ ಸಿಂಗ್, ಅರುಂಧತಿ ವಸಿಷ್ಠ, ಆಯೋಜನೆ: ತಾರರೇನಾ, ಸ್ಥಳ: ಸನಾತನ ಕಲಾಕ್ಷೇತ್ರ, ಜಯನಗರ ನಾಲ್ಕನೇ ಬಡಾವಣೆ, ಬೆಳಿಗ್ಗೆ 10.30

'ಅಭಿನಯ ನನ್ನ ದೃಷ್ಟಿಯಲ್ಲಿ' ಉಪನ್ಯಾಸ: ಉಮಾಶ್ರೀ, ಆಯೋಜನೆ: ಟೆಂಟ್ ಸಿನಿಮಾ, ಸ್ಥಳ: 184, ಲಿರಿಕ್ಸ್ 17ನೇ ಮುಖ್ಯರಸ್ತೆ, ಬನಶಂಕರಿ ಎರಡನೇ ಹಂತ, ಬೆಳಿಗ್ಗೆ 10.30


ಉಮಾಶ್ರೀ

16ನೇ ರಾಷ್ಟ್ರೀಯ ಮತದಾರರ ದಿನ: ಅತಿಥಿಗಳು: ಥಾವರ್‌ಚಂದ್ ಗೆಹಲೋತ್, ಮಹೇಶ್ವರಾವ್ ಎಂ., ವಿ. ಅನ್ಬುಕುಮಾರ್, ಆಯೋಜನೆ: ಭಾರತ ಚುನಾವಣಾ ಆಯೋಗ ಮುಖ್ಯ ಚುನಾವಣಾಧಿಕಾರಿ ಕರ್ನಾಟಕ, ಸ್ಥಳ: ಪುರಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 11

ಪ್ರಭಾ ಮಲ್ಲೇಶ್ ಅವರ 'ರುಟೆಡ್ ಇನ್ ಗೋಲ್ಡ್' ಪುಸ್ತಕ ಬಿಡುಗಡೆ: ಚಿರಂಜೀವಿ ಸಿಂಘ್, ಅಧ್ಯಕ್ಷತೆ: ಬಿ.ಎಲ್. ಶಂಕರ್, ಉಪಸ್ಥಿತಿ: ಎಸ್.ಎನ್. ಮೂರ್ತಿ, ಸೋಮಶೇಖರ್, ಸ್ಥಳ: ಹೋಟೆಲ್ ತಾಜ್, ಎಂ.ಜಿ. ರಸ್ತೆ, ಬೆಳಿಗ್ಗೆ 11

ಸೂರ್ಯಕಾಂತ ಗುಣಕಿಮಠ ಅವರ 'ಆರುಷ್‌ನ ಅಕ್ಷರ ಲೋಕ', 'ಪೆದ್ದಮಲ್ಲನ ಪೊರಕೆ' ಎರಡು ಪುಸ್ತಕಗಳ ಬಿಡುಗಡೆ: ಎಂ. ಕೃಷ್ಣಪ್ಪ, ಎಲ್. ಹನುಮಂತಯ್ಯ, ಅಧ್ಯಕ್ಷತೆ: ದೇವರಾಜ್, ಪುಸ್ತಕಗಳ ಕುರಿತು: ಬಿ.ಟಿ. ಲಲಿತಾ ನಾಯಕ್, ಎಂ. ವಿಶ್ವನಾಥ್, ಆಯೋಜನೆ: ವಿಜಯನಗರ ಹಿರಿಯ ನಾಗರಿಕರ ವೇದಿಕೆ, ಪವಿತ್ರವಾಣಿ ಪ್ರಕಾಶನ, ಸ್ಥಳ: ವಿಜಯನಗರ ಹಿರಿಯ ನಾಗರಿಕರ ವೇದಿಕೆ ಎಂಟನೇ ಮುಖ್ಯರಸ್ತೆ, ಎಂ.ಸಿ. ಲೇಔಟ್ ಗಣೇಶ ದೇವಸ್ಥಾನದ ಎದುರು, ವಿಜಯನಗರ, ಸಂಜೆ 4

ಸಂಗೀತ ಧಾಮ ಸಂಭ್ರಮ–22, ಭಾವ ಕೌಸ್ತುಭ ಪ್ರಶಸ್ತಿ ಪ್ರದಾನ: ಶುಭಾ ಧನಂಜಯ, ಪ್ರಶಸ್ತಿ ಸ್ವೀಕರಿಸುವವರು: ಎಸ್. ಮಲ್ಲಣ್ಣ, ಅತಿಥಿಗಳು: ರಮೇಶ್ ಯಾದವ್, ಶ್ರೀಶೈಲ ಮಾದಣ್ಣವರ, ಎಲ್. ರವಿಕುಮಾರ್, ಆಯೋಜನೆ: ಸಂಗೀತಧಾಮ, ಸ್ಥಳ: ಸಿಲಿಕಾನ್ ಸಿಟಿ ಕಾಲೇಜಿನ ಸಭಾಂಗಣ, ಹರಿನಗರ ಕ್ರಾಸ್, ಜೆ.ಪಿ. ನಗರ ಎಂಟನೇ ಹಂತ, ಸಂಜೆ 4ರಿಂದ

'ಹೇ ಗೋವಿಂದ್' ಭಕ್ತಿ ಸಂಗೀತ ಕಛೇರಿ: ಗಾಯನ: ಜಯತೀರ್ಥ ಮೇವುಂಡಿ, ಕೊಳಲು: ಪ್ರವೀಣ್ ಗೋಡ್ಖಿಂಡಿ, ಹಾರ್ಮೋನಿಯಂ: ಬಸವರಾಜ್ ಹಿರೇಮಠ, ತಬಲಾ: ರಾಜೇಂದ್ರ ನಾಕೋಡ್, ಪಕ್ವಾಜ್: ಸುಖದ್ ಮಾಣಿಕ ಮುಂಡೆ, ಸೈಡ್ ರಿದಮ್: ಸೂರ್ಯಕಾಂತ ಗೋಪಾಲ್ ಸುರ್ವೆ, ಆಯೋಜನೆ: ಏಮ್ ಫಾರ್ ಸೇವಾ, ಸ್ಥಳ: ಎನ್‌ಎಂಕೆಆರ್‌ವಿ ಮಂಗಳ ಮಂಟಪ, ಎನ್‌ಎಂಕೆಆರ್‌ವಿ ಪಿಯು ಕಾಲೇಜು, ಜಯನಗರ, ಸಂಜೆ 6.30


ಜಯತೀರ್ಥ ಮೇವುಂಡಿ

ಭರತನಾಟ್ಯ ರಂಗಪ್ರವೇಶ: ಭೂಮಿಕಾ ಎಸ್.ಆರ್. ಮತ್ತು ಭುವನಾ ಎಸ್.ಆರ್., ಅತಿಥಿಗಳು: ವಿದ್ಯಾ ರಾವ್, ಪದ್ಮಿನಿ ರವಿ, ಆರತಿ ಎಚ್.ಎನ್., ಭುವನೇಶ್ ಎಸ್.ಆರ್., ಅಯೋಜನೆ: ನಾಟ್ಯಾರಾಧನ, ಸ್ಥಳ: ಚೌಡಯ್ಯ ಸ್ಮಾರಕ ಸಭಾಂಗಣ, ವೈಯಾಲಿ ಕಾವಲ್, ಮಲ್ಲೇಶ್ವರ, ಸಂಜೆ 5

ಪಾವಗಡ ಪ್ರಕಾಶರಾವ್ ಅವರಿಂದ ಕವಿ ಲಕ್ಷ್ಮೀಶರ 'ಜೈಮಿನಿ ಭಾರತ' ಉಪನ್ಯಾಸ ಮಾಲಿಕೆ: ಭಾಗವಹಿಸುವವರು: ರಾಜಗುರು ಬಿ.ಎಸ್. ದ್ವಾರಕಾನಾಥ್,ಡಾ.ಟಿ.ಕೆ. ವೆಂಕಟೇಶ್, ಆಯೋಜನೆ: ಡಾ.ಪಾವಗಡ ಪ್ರಕಾಶರಾಯರ ಅಮೃತ ಮಹೋತ್ಸವ ಸಮಿತಿ, ಸ್ಥಳ: ಪತ್ತಿ ಸಭಾಂಗಣ, ಶ್ರೀರಾಮಮಂದಿರ, ಎನ್.ಆರ್. ಕಾಲೊನಿ, ಸಂಜೆ 5.45

ಸವಿತಾ ಮಹರ್ಷಿ ಜಯಂತಿ: ಉದ್ಘಾಟನೆ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಅಧ್ಯಕ್ಷತೆ: ಶಿವರಾಜ ಎಸ್. ತಂಗಡಗಿ, ಅತಿಥಿಗಳು: ಉದಯ್ ಬಿ. ಗರುಡಾಚಾರ್, ಕಿಶೋರಕುಮಾರ್ ಪುತ್ತೂರ್, ಎಂ.ಎಸ್. ಮುತ್ತುರಾಜು, ಎಂ.ಸಿ. ವೇಣುಗೋಪಾಲ್, ಉಪನ್ಯಾಸ: ಡಿ.ಆರ್. ಕೃಷ್ಣಪ್ಪ, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 6

ದ.ರಾ. ಬೇಂದ್ರ, ಕೆ.ಎಸ್. ನರಸಿಂಹಸ್ವಾಮಿ ಅವರ 'ಕವಿತೆಗಳ ಪರಿಚಯ, ಓದು ಮತ್ತು ಗಾಯನ': ಭಾಗವಹಿಸುವವರು: ಭ.ರಾ. ವಿಜಯಕುಮಾರ್, ಶ್ಯಾಮದತ್ತ ಎಸ್., ಬಿ.ಎನ್. ರಮ್ಯ, ಎ.ಎಂ. ಚಂದ್ರಶೇಖರ, ಸತ್ಯನಾರಾಯಣಮೂರ್ತಿ ಆರ್., ಆಯೋಜನೆ ಮತ್ತು ಸ್ಥಳ: ಪಂಚಾಮೃತ ಸುಗಮ ಸಂಗೀತ ಅಕಾಡೆಮಿ, ದೊಡ್ಡಬೊಮ್ಮಸಂದ್ರ, ಸಂಜೆ 6

ರಥಸಪ್ತಮಿ ಅಂಗವಾಗಿ ಆಡುಗೋಡಿಯ 36 ದೇವಸ್ಥಾನಗಳಲ್ಲಿ ವಿಶೇಷ ಪೂಜೆ, ಊರ್ ಹಬ್ಬ ಜಾತ್ರೆ: 36 ಪಲ್ಲಕ್ಕಿಗಳ ಮೆರವಣಿಗೆ, ವಿಶೇಷ ರಸಮಂಜರಿ ಕಾರ್ಯಕ್ರಮ, ಸ್ಥಳ: ಆಡುಗೋಡಿ ಶಾಲಾ ಮೈದಾನ, ಸಂಜೆ 6ರಿಂದ

ಆರಂಭ–2026 ಎರಡು ದಿನಗಳ **ನಾಟಕೋತ್ಸವ: 'ಅವತಾರಣಮ್ ಭ್ರಾಂತಾಲಯಮ್' ನಾಟಕ ಪ್ರದರ್ಶನ:** ಆಯೋಜನೆ ಮತ್ತು ಸ್ಥಳ: ಸ್ಫೂರ್ತಿಧಾಮ, ಮುದ್ದಿನಪಾಳ್ಯ ಮುಖ್ಯರಸ್ತೆ, ಅಂಜನಾನಗರ, ಸಂಜೆ 6.30


'ಬಾಯ್ಬಡ್ಕಿ' ನಾಟಕ ಪ್ರದರ್ಶನ: ನಿರ್ದೇಶನ: ಭೀಷ್ಮ ರಾಮಯ್ಯ, ಆಯೋಜನೆ: ಕಲ್ಪವೃಕ್ಷ ಟ್ರಸ್ಟ್, ಸ್ಥಳ: ಡಾ.ಸಿ. ಅಶ್ವಥ್ ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 7

'ಯಾಮಿನಿ' ಸಂಗೀತ ಕಛೇರಿ, ನೃತ್ಯ ಪ್ರದರ್ಶನ: ಗಾಯನ: ಸಿಕ್ಕಿಲ್ ಗುರುಚರಣ್, ಮೃದಂಗ: ಯು.ಕೆ. ಶಿವರಾಮನ್, ಸ್ಯಾಕ್ಸೊಫೋನ್: ಲಾರ್ಸ್ ಮುಲ್ಲರ್, ರುದ್ರವೀಣಾ: ಉಸ್ತಾದ್ ಬಹಾವುದ್ದೀನ್ ದಾಗರ್, ನಾದಸ್ವರ: ಕಲೀಶಾಬಿ ಮಹಬೂಬ್, ಹಿಂದೂಸ್ತಾನಿ ಗಾಯನ: ಜಯತೀರ್ಥ ಮೇವುಂಡಿ, ಆಯೋಜನೆ: ಸ್ಪಿಕ್ ಮೆಕೆ, ಸ್ಥಳ: ಐಐಎಂಬಿ, ಬನ್ನೇರುಘಟ್ಟ ರಸ್ತೆ, ಸಂಜೆ 7.30ರಿಂದ

ಬೆಂಗಳೂರು ಹಬ್ಬ: ಬೆಳಿಗ್ಗೆ 8ಕ್ಕೆ ಕಾಟನ್‌ಪೇಟೆ ಹೆರಿಟೇಜ್ ವಾಕ್, ಸ್ಥಳ: ಲೋಕಮಾನ್ಯ ತಿಲಕ್ ಪಾರ್ಕ್, 8 ಸಂಗೀತ ಕಛೇರಿ: ಕಾರ್ತಿಕ್ ಹೆಬ್ಬಾರ್, ಸ್ಥಳ: ಬ್ಯಾಂಡ್‌ಸ್ಟ್ಯಾಂಡ್ ಕಬ್ಬನ್ ಉದ್ಯಾನ, ಚಿಕ್ಕಪೇಟೆ, 8.30ಕ್ಕೆ ದಿ ಆರ್ಮಿ ಟೌನ್ ಆ್ಯಂಡ್ ಇಟ್ಸ್ ಟೇಲ್ಸ್ ಗೈಡೆಡ್ ಹೆರಿಟೇಜ್ ವಾಕ್, ಸ್ಥಳ: ಸೇಂಟ್ ಮಾರ್ಕ್ಸ್ ರಸ್ತೆ, 10ಕ್ಕೆ ಮಲ್ಲೇಶ್ವರಂ ಹೋಗೋಣ' ಐತಿಹಾಸಿಕ, ಸಾಂಸ್ಕೃತಿಕ ನಡಿಗೆ, ಸ್ಥಳ: ಶ್ರೀಸಾಗರ ಸಿಟಿಆರ್, ಮಲ್ಲೇಶ್ವರ, 11ಕ್ಕೆ ದೊಡ್ಡಾಟ ಪ್ರದರ್ಶನ: ಜಿ.ಕೆ. ಕಲಾ ವೇದಿಕೆ ಹುಬ್ಬಳ್ಳಿ, ಸ್ಥಳ: ಸಭಾ, ಕಾಮರಾಜ ರಸ್ತೆ, ಸಂಜೆ 5.30ರಿಂದ

ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ, ತಮಿಳು ಜಾನಪದ ಗಾಯನ, ಸ್ಥಳ: ಸ್ವಾತಂತ್ರ್ಯ ಉದ್ಯಾನ, 7ಕ್ಕೆ 'ಚಿತ್ರಕಥಿ' ನಾಟಕ ಪ್ರದರ್ಶನ, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ) ದೊಮ್ಮಲೂರು.

'ಅಣ್ಣನ ನೆನಪು' ನಾಟಕ ಪ್ರದರ್ಶನ: ನಿರ್ದೇಶನ: ಹನು ರಾಮಸಂಜೀವ, ರಂಗರೂಪ: ಕರಣಂ ಪವನ್ ಪ್ರಸಾದ್, ಸಂಗೀತ: ಅಕ್ಷಯ್ ಭೊಂಸ್ಲೆ, ಬೆಳಕು: ರಂಜನ್, ರೇಖಾಚಿತ್ರ: ಹರ್ಷ ಕಾವೇರಿಪುರ, ಪ್ರಸಾಧನ: ಮಾಲತೇಶ್ ಬಡಿಗೇರ್, ಆಯೋಜನೆ: ಪ್ರವರ ಥಿಯೇಟರ್, ಸ್ಥಳ: ಲಾಲ್‌ಬಾಗ್, ಸಂಜೆ 5.15


'ಅಣ್ಣನ ನೆನಪು' ನಾಟಕದ ದೃಶ್ಯ

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in



ಪ್ರತಿಜೀವಕಗಳೇ ಜೀವಕ್ಕೆ ಕುತ್ತು





ಒಂದನೇ ಪುಟದಿಂದ...

ವಿಶ್ವ ಆರೋಗ್ಯ ಸಂಸ್ಥೆಯ ವರದಿಗಳ ಪ್ರಕಾರ, ಆ್ಯಂಟಿಬಯೊಟಿಕ್‌ಗಳ ದುರುಪಯೋಗ ಮತ್ತು ಅತಿಯಾದ ಬಳಕೆಯಿಂದ ಉಂಟಾಗುವ ಅತ್ಯಂತ ಗಂಭೀರ ಪರಿಣಾಮವೆಂದರೆ ಆ್ಯಂಟಿ ಮೈಕ್ರೋಬಿಯಲ್ ರೆಸಿಸ್ಟನ್ಸ್ (Anti-Microbial Resistance -AMR).

ಆ್ಯಂಟಿಬಯೋಟಿಕ್‌ಗಳು ಒಂದು ರೀತಿಯ ಆ್ಯಂಟಿಮೈಕ್ರೊಬಿಯಲ್‌ಗಳಾಗಿದ್ದು, ಬ್ಯಾಕ್ಟೀರಿಯಾದಿಂದ ಬರುವ ಸೋಂಕನ್ನು ತಡೆಗಟ್ಟಲು ಮತ್ತು ಚಿಕಿತ್ಸೆ ನೀಡಲು ಬಳಸುವ ಔಷಧಿಗಳಾಗಿವೆ. ಆ್ಯಂಟಿಬಯೋಟಿಕ್‌ಗಳನ್ನು ಪದೇ ಪದೇ ಬಳಸಿದಾಗ, ಬ್ಯಾಕ್ಟೀರಿಯಾಗಳು ಆ ಔಷಧಿಗಳಿಗೆ ಒಗ್ಗಿಕೊಂಡು, ಅವುಗಳ ವಿರುದ್ಧ ಹೋರಾಡುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳುತ್ತವೆ. ಹೀಗೆ, ಔಷಧಿಗಳಿಗೆ ಪ್ರತಿಕ್ರಿಯಿಸದ ಬ್ಯಾಕ್ಟೀರಿಯಾಗಳನ್ನು 'ಸೂಪರ್‌ಬಗ್‌ಗಳು' ಎಂದು ಕರೆಯಲಾಗುತ್ತದೆ.

ರೋಗಕಾರಕ ಸೂಕ್ಷ್ಮಾಣುಜೀವಿಗಳಾದ ಬ್ಯಾಕ್ಟೀರಿಯಾಗಳು, ಪರಾವಲಂಬಿ ಜೀವಿಗಳು, ವೈರಸ್‌ಗಳು ಮತ್ತು ಶಿಲೀಂಧ್ರಗಳಿಂದ ಉಂಟಾಗುವ ಸೋಂಕುಗಳ ಚಿಕಿತ್ಸೆಗೆ ಈ ಸೂಗರ್ ಬಗ್‌ಗಳು ಪ್ರತಿರೋಧ ಒಡ್ಡುತ್ತವೆ. ಇದನ್ನು ಆ್ಯಂಟಿಮೈಕ್ರೊಬಿಯಲ್ ಅಥವಾ ಆ್ಯಂಟಿಬಯೋಟಿಕ್ ಪ್ರತಿರೋಧ (ಎಎಂಆರ್) ಎನ್ನಲಾಗುತ್ತದೆ.

ಆ್ಯಂಟಿಬಯೋಟಿಕ್ ಪ್ರತಿರೋಧ ಕಂಡುಬಂದಾಗ ಇಲ್ಲವೇ ಹೆಚ್ಚಾದಾಗ, ಸೋಂಕುಗಳಿಗೆ ಚಿಕಿತ್ಸೆ ನೀಡುವುದು ಕಷ್ಟವಾಗುತ್ತದೆ. ಇದರಿಂದ ರೋಗ ಹರಡುವಿಕೆ, ತೀವ್ರ ಅನಾರೋಗ್ಯ ಮತ್ತು ಸಾವು–ನೋವು ಹೆಚ್ಚಾಗುತ್ತದೆ. ಸೋಂಕುಗಳು ದೇಹದಲ್ಲೇ ಉಳಿದು, ಇತರರಿಗೆ ಹರಡುವ ಅಪಾಯ ಸಹ ಹೆಚ್ಚುತ್ತದೆ.

ವಿಶ್ವ ಆರೋಗ್ಯ ಸಂಸ್ಥೆ ವರದಿಯಲ್ಲಿ ಏನಿದೆ?: ಆ್ಯಂಟಿಬಯೋಟೆಕ್‌ಗಳ ಅತಿಯಾದ ಇಲ್ಲವೇ ಅಜಾಗರೂಕ ಬಳಕೆ ಕುರಿತಂತೆ ವಿಶ್ವ ಆರೋಗ್ಯ ಸಂಸ್ಥೆ(ಡಬ್ಲುಎಚ್‌ಒ) ಇತ್ತೀಚೆಗೆ ವರದಿಯೊಂದನ್ನು ಪ್ರಕಟಿಸಿದೆ. 2018 ರಿಂದ 2023ರ ವರೆಗಿನ ದತ್ತಾಂಶಗಳನ್ನು ವಿಶ್ಲೇಷಿಸಿ, ಸಮಗ್ರ ವರದಿಯೊಂದನ್ನು ಸಿದ್ಧಪಡಿಸಿದೆ

ಆ್ಯಂಟಿಬಯೋಟಿಕ್ ಪ್ರತಿರೋಧಕ್ಕೆ (ಎಎಂಆರ್) ಸಂಬಂಧಿಸಿ 100ಕ್ಕೂ ಅಧಿಕ ದೇಶಗಳಿಂದ ಸಂಗ್ರಹಿಸಿರುವ ದತ್ತಾಂಶವನ್ನು 'ಗ್ಲೋಬಲ್ ಆ್ಯಂಟಿಮೈಕ್ರೊಬಿಯಲ್ ರೆಸಿಸ್ಟನ್ಸ್ ಆ್ಯಂಡ್ ಯೂಸ್ ಸರ್ವೆಲನ್ಸ್ ಸಿಸ್ಟಮ್ (ಜಿಎಲ್‌ಎಎಸ್‌ಎಸ್)ನಲ್ಲಿ ಅಳವಡಿಸಿದೆ.

ಎಎಂಆರ್ ಇಂದು ಜಾಗತಿಕ ಆರೋಗ್ಯಕ್ಕೆ ಎದುರಾಗಿರುವ 10 ಅಗ್ರ ಬೆದರಿಕೆಗಳಲ್ಲಿ ಒಂದಾಗಿದೆ. ಇದೇ ಪ್ರವೃತ್ತಿ ಮುಂದುವರೆದಲ್ಲಿ, ಸಾಮಾನ್ಯ ಸೋಂಕುಗಳು ಮತ್ತು ಸಣ್ಣ ಗಾಯಗಳಿಗೂ ಚಿಕಿತ್ಸೆ ನೀಡಲು ಸಾಧ್ಯವಾಗುವುದಿಲ್ಲ. 2050ರ ವೇಳೆಗೆ, ಎಎಂಆರ್‌ನಿಂದಾಗಿ ವಿಶ್ವದಾದ್ಯಂತ ವಾರ್ಷಿಕ 1 ಕೋಟಿ ಸಾವುಗಳು ಸಂಭವಿಸುವ ಸಾಧ್ಯತೆ ಇದೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಅಂದಾಜಿಸಿದೆ.

ಸೋಂಕುಗಳ ಚಿಕಿತ್ಸೆ ಕಷ್ಟಕರ ಮತ್ತು ಹೆಚ್ಚು ವೆಚ್ಚದಾಯಕವಾಗುತ್ತದೆ. ರೋಗಿಗಳು ಆಸ್ಪತ್ರೆಗಳಲ್ಲಿ ಇರಬೇಕಾದ ಅವಧಿ ಹೆಚ್ಚುತ್ತದೆ. ಅಂಗಾಂಗ ಕಸಿ ಮತ್ತು ಕಿಮೊಥೆರಪಿಯಂತಹ ಚಿಕಿತ್ಸೆಗಳು ಹೆಚ್ಚು ಅಪಾಯಕಾರಿಯಾಗುತ್ತವೆ ಎಂದು ತಜ್ಞರು ಹೇಳುತ್ತಾರೆ.

2025ರ ಕೊನೆಯ 'ಮನದ ಮಾತು' ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಆ್ಯಂಟಿಬಯೋಟಿಕ್‌ಗಳ ಬಳಕೆ ಕುರಿತು ಪ್ರಸ್ತಾಪಿಸಿದ್ದರು.

'ಅನೇಕ ಬ್ಯಾಕ್ಟೀರಿಯಾಗಳು ಪ್ರತಿಜೀವಕಗಳಿಗೆ ಪ್ರತಿರೋಧ ಬೆಳೆಸಿಕೊಂಡಿವೆ. ಹೀಗಾಗಿ, ಆ್ಯಂಟಿಬಯೋಟಿಕ್‌ಗಳ ಬಳಕೆ ಬಗ್ಗೆ ಜನರು ಎಚ್ಚರ ವಹಿಸಬೇಕು. ಅವುಗಳನ್ನು ವೈದ್ಯರ ಸೂಚನೆಯಂತೆ ಮಾತ್ರ ಬಳಸಬೇಕು' ಎಂದು ಡಿಸೆಂಬರ್ 28ರಂದು ಪ್ರಸಾರವಾದ ಕಾರ್ಯಕ್ರಮದಲ್ಲಿ ಮೋದಿ ಸಲಹೆ ನೀಡಿದ್ದರು.

ಆ್ಯಂಟಿಬಯೋಟಿಕ್‌ಗಳ ಅಜಾಗರೂಕ ಬಳಕೆ ಕುರಿತಂತೆ ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿಯ (ಐಸಿಎಂಆರ್) ಇತ್ತೀಚಿನ ವರದಿಯಲ್ಲಿನ ಅಂಶಗಳನ್ನು ಕೂಡ ಅವರು ಉಲ್ಲೇಖಿಸಿದ್ದರು.

ಪ್ರತಿರೋಧ ಬೆಳೆಸಿಕೊಂಡಿರುವ ಬ್ಯಾಕ್ಟೀರಿಯಾಗಳು: ಹಲವಾರು ಬ್ಯಾಕ್ಟೀರಿಯಾಗಳು ಅನೇಕ ಆ್ಯಂಟಿಬಯೋಟಿಕ್‌ಗಳಿಗೆ ಪ್ರತಿರೋಧ ವೃದ್ಧಿಸಿ ಕೊಂಡಿದ್ದು, ಚಿಕಿತ್ಸೆಯನ್ನು ಮತ್ತಷ್ಟು ಸಂಕೀರ್ಣಗೊಳಿಸಿವೆ. 'ಎನ್‌ಡಿಎಂ–1' ಎಂಬುದು ಆ್ಯಂಟಿಬಯೋಟಿಕ್‌ಗಳಿಗೆ ಪ್ರತಿರೋಧ ಬೆಳೆಸಿಕೊಂಡಿರುವ ಪ್ರಮುಖ ಬ್ಯಾಕ್ಟೀರಿಯಾ. ಇದು 2009ರಲ್ಲಿ ಪತ್ತೆಯಾಗಿದೆ. ಆಗ, ನವದೆಹಲಿಗೆ ಭೇಟಿ ನೀಡಿದ್ದ ಸ್ವೀಡನ್ ಪ್ರಜೆಯೊಬ್ಬರಲ್ಲಿ ಈ ಬ್ಯಾಕ್ಟೀರಿಯಾ ಕಾಣಸಿಕೊಂಡಿತ್ತು. ಹೀಗಾಗಿ ಈ ಬ್ಯಾಕ್ಟೀರಿಯಾಕ್ಕೆ 'ಎನ್‌ಡಿಎಂ–1' ಎಂದು ಕರೆಲಾಗುತ್ತದೆ.

ಇ–ಕೊಲಿ (Enterobacteriaceae), ಕ್ಲೆಬ್‌ಸಿಯೆಲ್ಲಾ (Klebsiella) ಕರುಳಿನಲ್ಲಿ ಕಂಡು ಬರುವ ಬ್ಯಾಕ್ಟೀರಿಯಾಗಳು. ವಿಆರ್‌ಇ (Enterococcus) ಬ್ಯಾಕ್ಟೀರಿಯಾ ಸೋಂಕಿನಿಂದ ಉಸಿರಾಟದ ತೊಂದರೆಗಳು ಕಾಣಿಸಿಕೊಳ್ಳುತ್ತವೆ. ಈ ಬ್ಯಾಕ್ಟೀರಿಯಾಗಳು ಬಹುತೇಕ ಆ್ಯಂಟಿಬಯೋಟಿಕ್‌ಗಳಿಗೆ ಪ್ರತಿರೋಧ ಬೆಳಸಿಕೊಂಡಿವೆ. ಚರ್ಮದ ಸೋಂಕಿಗೆ ಕಾರಣವಾಗುವ (ಎಂಆರ್‌ಎಸ್‌ಎ) ಬ್ಯಾಕ್ಟೀರಿಯಾ ಕೂಡ ಪ್ರತಿರೋಧ ಬೆಳೆಸಿಕೊಂಡಿವೆ ಎಂದು ಬೆಂಗಳೂರಿನಲ್ಲಿ ಅಪೊಲೊ ಸ್ಪೆಷಾಲಿಟಿ ಆಸ್ಪತ್ರೆ ಹಾಗೂ ಬೃಂದಾವನ್ ಏರಿಯಾನ್ ಆಸ್ಪತ್ರೆಯಲ್ಲಿ ಕನ್ಸಲ್ಟಿಂಗ್ ಫಿಜಿಶಿಯನ್ ಆಗಿರುವ ಡಾ.ಮಧು ಮುದ್ದಯ್ಯ ಹೇಳುತ್ತಾರೆ.

'ಅನೇಕ ಸೋಂಕುಗಳ ಚಿಕಿತ್ಸೆಯಲ್ಲಿ ಸಿಪ್ರೊಫ್ಲಾಕ್ಸಾಸಿನ್, ಅಮಾಕ್ಸಿಲಿನ್, ಆ್ಯಂಪಿಸಿಲಿನ್, ಅಜಿತ್ರೊಮೈಸಿನ್‌ನಂತಹ ಆ್ಯಂಟಿಬಯೋಟಿಕ್‌ಗಳನ್ನು ಬಳಸಲಾಗುತ್ತದೆ. ಆದರೆ, ಕೆಲ ಬ್ಯಾಕ್ಟೀರಿಯಾಗಳು ಪ್ರತಿರೋಧ ಬೆಳೆಸಿಕೊಂಡಿರುವ ಕಾರಣ ಈ ಆ್ಯಂಟಿಬಯೋಟಿಕ್‌ಗಳು ನಿರೀಕ್ಷಿತ ಫಲಿತಾಂಶ ನೀಡುತ್ತಿಲ್ಲ' ಎಂದು ವಿವರಿಸುತ್ತಾರೆ.



ಡಾ.ಮಧು ಮುದ್ದಯ್ಯ

'ಆ್ಯಂಟಿಬಯೋಟಿಕ್‌ಗಳಿಗೆ ಪ್ರತಿರೋಧ ಬೆಳೆಸಿಕೊಂಡಿರುವ ಬ್ಯಾಕ್ಟೀರಿಯಾಗಳು ಸಾಮಾನ್ಯವಾಗಿ ಆಸ್ಪತ್ರೆಯ ಐಸಿಯು ಹಾಗೂ ಜನರಲ್ ವಾರ್ಡ್‌ಗಳಲ್ಲಿ ಕಂಡುಬರುತ್ತವೆ. ಒಂದು ಪ್ರದೇಶದಲ್ಲಿ ಕಂಡುಬರುವ ಆ್ಯಂಟಿಬಯೋಟಿಕ್‌ಗೆ ಪ್ರತಿರೋಧ ಬೆಳೆಸಿಕೊಂಡಿರುವ ಬ್ಯಾಕ್ಟೀರಿಯಾಗಳ ಕುರಿತ ಮಾಹಿತಿಯನ್ನು ಆಯಾ ಪ್ರದೇಶದ ಆಸ್ಪತ್ರೆಗಳು ಇತರ ಆರೋಗ್ಯ ಕೇಂದ್ರಗಳೊಂದಿಗೆ ಹಂಚಿಕೊಳ್ಳುವುದು ಮುಖ್ಯ' ಎಂದು ಡಾ.ಮಧು ಮುದ್ದಯ್ಯ ಪ್ರತಿಪಾದಿಸುತ್ತಾರೆ.

'ಎಎಂಆರ್ ಎಂಬುದು ಈಗ ಸಮುದಾಯ ಮಟ್ಟದ ಸಮಸ್ಯೆಯಾಗಿದೆ. ಇಂತಹ ಬ್ಯಾಕ್ಟೀರಿಯಾಗಳ ಕುರಿತು ಮಾಹಿತಿ ಹಂಚಿಕೊಳ್ಳುವ ಹಾಗೂ ನಿರಂತರವಾಗಿ ದಾಖಲೆ ನಿರ್ವಹಿಸುವುದು ಅಗತ್ಯ. ಇದಕ್ಕಾಗಿ ಕೇಂದ್ರೀಕೃತ ವ್ಯವಸ್ಥೆ ರೂಪಿಸಬೇಕು. ನಾನು ಸಿಂಗಪುರದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ವೇಳೆ ಇಂತಹ ವ್ಯವಸ್ಥೆ ಇತ್ತು. ನಮ್ಮ ದೇಶದಲ್ಲಿಯೂ ಇದನ್ನು ಜಾರಿಗೊಳಿಸಬೇಕು' ಎನ್ನುವರು.

ಎಎಂಆರ್ ಕಾರ್ಯತಂತ್ರ: ವೈದ್ಯಕೀಯ ಕ್ಷೇತ್ರಕ್ಕೆ ಸಂಬಂಧಿಸಿದ ಅಂತರರಾಷ್ಟ್ರೀಯ ನಿಯತಕಾಲಿಕೆ 'ಲ್ಯಾನ್ಸೆಟ್'ನಲ್ಲಿ ಇತ್ತೀಚೆಗೆ ಪ್ರಕಟವಾಗಿರುವ ಅಧ್ಯಯನ ವರದಿ ಪ್ರಕಾರ, 'ಭಾರತವು ಸೂಪರ್ ಬಗ್‌ಗಳ ಸ್ಫೋಟದ ಕೇಂದ್ರಬಿಂದುವಾಗಲಿದೆ' ಎಂದು ಎಚ್ಚರಿಸಲಾಗಿದೆ. ದೇಶದ ಶೇ 83ರಷ್ಟು ರೋಗಿಗಳಲ್ಲಿ ಬಹು ಔಷಧಗಳಿಗೆ ಪ್ರತಿರೋಧ ವೃದ್ಧಿಸಿಕೊಂಡಿರುವ ಸೂಕ್ಷ್ಮಾಣುಜೀವಿಗಳು ಕಂಡುಬಂದಿವೆ ಎಂದು ಇದೇ ವರದಿಯಲ್ಲಿ ಹೇಳಲಾಗಿದೆ.



ದಿನದಿಂದ ದಿನಕ್ಕೆ ಆಹಾರದ ಕಲಬೆರಕೆ ಹೆಚ್ಚುತ್ತಿದೆ. ಇದರಿಂದ ಮನುಷ್ಯನಲ್ಲಿರುವ ರೋಗ ನಿರೋಧಕ ಶಕ್ತಿ ಕ್ಷೀಣಿಸುತ್ತಿದೆ. ಇಂಥ ಪರಿಸ್ಥಿತಿಯಲ್ಲಿ ಆ್ಯಂಟಿಬಯೋಟಿಕ್‌ಗಳಿಗೆ ಬ್ಯಾಕ್ಟೀರಿಯಾಗಳು ಪ್ರತಿರೋಧ ಬೆಳೆಸಿಕೊಂಡಾಗ ಚಿಕಿತ್ಸೆ ಕಠಿಣವಾಗುವುದು. ರೋಗಿಗಳಿಗೆ ಹೆಚ್ಚು ಶಕ್ತಿಶಾಲಿ ಆ್ಯಂಟಿಬಯೋಟಿಕ್‌ಗಳನ್ನು ನೀಡಬೇಕಾಗುತ್ತದೆ. ಇದು ಆರ್ಥಿಕ ಹೊರೆಯನ್ನೂ ಹೆಚ್ಚಿಸುತ್ತದೆ

ಡಾ.ಶಂಕರ್ ಸಿರಾ, ಹಿರಿಯ ವೈದ್ಯಾಧಿಕಾರಿ, ಬೆಂಗಳೂರು ಆಸ್ಪತ್ರೆ



ಇದೇ ಮೊದಲ ಬಾರಿಗೆ ಭಾರತದಲ್ಲಿ ಎಎಂಆರ್ ಕುರಿತ ಸಮಗ್ರ ಕಾರ್ಯತಂತ್ರ ರೂಪಿಸಲಾಗಿದೆ. ಸಹಾನುಭೂತಿ ಹಾಗೂ ವಾಸ್ತವಿಕತೆಯೇ ಈ ಕಾರ್ಯತಂತ್ರದ ಬುನಾದಿಯಾಗಿದೆ

ಡಾ.ಶ್ವೇತವಲ್ಲಿ ರಾಘವನ್, ಸಲಹೆಗಾರ್ತಿ, ಎಎಂಆರ್ ಕುರಿತ ಕಾರ್ಯತಂತ್ರ, ಕರ್ನಾಟಕ

'ಮಾದರಿ ಕಾರ್ಯತಂತ್ರ': ಕರ್ನಾಟಕ ಮುಂಚೂಣಿಯಲ್ಲಿ

ಆ್ಯಂಟಿಬಯೋಟಿಕ್‌ಗಳಿಗೆ ಪ್ರತಿರೋಧ ಬೆಳೆಸಿಕೊಂಡಿರುವ ಸೂಕ್ಷ್ಮಾಣುಜೀವಿಗಳು ಆಸ್ಪತ್ರೆಗಳ ಪರಿಸರದಲ್ಲಿ ಮಾತ್ರ ಕಂಡುಬರುವುದಿಲ್ಲ. ಇವು ಸಮುದಾಯದ ಮಟ್ಟದಲ್ಲಿ ಹಾಗೂ ನಮ್ಮ ಸುತ್ತಲಿನ ಪರಿಸರದಲ್ಲಿಯೂ ಕಂಡುಬರುತ್ತವೆ. ಈ ಸಮಸ್ಯೆಯನ್ನು ಎದುರಿಸುವುದಕ್ಕೆ ಭಾರತವು ರಾಜ್ಯಗಳ ಮಟ್ಟದಲ್ಲಿ ಕಾರ್ಯತಂತ್ರಗಳನ್ನು ರೂಪಿಸಿ, ಅನುಷ್ಠಾನಗೊಳಿಸಬೇಕು. ವಾಸ್ತವಿಕ ಸಂಗತಿಗಳ ಆಧಾರದಲ್ಲಿ ರೂಪಿಸುವ ಜನಕೇಂದ್ರಿತ ಕಾರ್ಯತಂತ್ರ ಅಗತ್ಯ' ಎಂದು ವೈಜ್ಞಾನಿಕ ನಿಯತಕಾಲಿಕೆ 'ಲ್ಯಾನ್ಸೆಟ್' ನಡೆಸಿದ ಅಧ್ಯಯನದಲ್ಲಿ ಅಭಿಪ್ರಾಯ ಪಡಲಾಗಿದೆ.

'ಈ ಅಧ್ಯಯನದಲ್ಲಿ ಹೇಳಿರುವ ಅಂಶಗಳಿಗೆ ಅನುಗುಣವಾದ, ಸಮಗ್ರ ಕಾರ್ಯತಂತ್ರವನ್ನು ರೂಪಿಸುವ ಮೂಲಕ ಕರ್ನಾಟಕವು ದೇಶದಲ್ಲಿಯೇ ಮುಂಚೂಣಿಯಲ್ಲಿದೆ' ಎಂದು ಎಎಂಆರ್ ಕುರಿತ ಕಾರ್ಯತಂತ್ರದ ಕರ್ನಾಟಕದ ಸಲಹೆಗಾರ್ತಿ ಡಾ.ಶ್ವೇತವಲ್ಲಿ ರಾಘವನ್ ಹೇಳುತ್ತಾರೆ.

'ವೈಜ್ಞಾನಿಕ ತಳಹದಿ ಮಾತ್ರವಲ್ಲ ಜನರು–ಸಮುದಾಯ–ಪರಿಸರದ ಬಗ್ಗೆ ಸಹಾನುಭೂತಿ ಹೊಂದಿರುವಂತಹ ಕಾರ್ಯತಂತ್ರ ಮಾತ್ರ ನಿರೀಕ್ಷಿತ ಬದಲಾವಣೆ ತರಬಲ್ಲದು. ಇದು ಆರೋಗ್ಯ ವಲಯಕ್ಕೆ ಸಂಬಂಧಿಸಿದ್ದು ಮಾತ್ರವಲ್ಲ, ಇದು ಹಲವು ವ್ಯವಸ್ಥೆಗಳಿಗೆ ಅಗತ್ಯವಿರುವ ಕಾರ್ಯತಂತ್ರವಾಗಿದೆ' ಎಂದೂ ಅವರು ತಿಳಿಸಿದರು.

'ಸಿದ್ಧ ಮಾದರಿಯನ್ನು ಇಟ್ಟುಕೊಂಡು ಸಾಮಾನ್ಯ ಕಾರ್ಯತಂತ್ರದ ವರದಿಯನ್ನು ತಯಾರಿಸುವ ಬದಲು, ಕರ್ನಾಟಕದ ಜನತೆ ಎಎಂಆರ್ ವಿಚಾರವಾಗಿ ಎದುರಿಸುತ್ತಿರುವ ಸಮಸ್ಯೆಗಳಿಗೆ ಅನುಗುಣವಾಗಿ ಯೋಜನೆಯನ್ನು ಸಿದ್ಧಪಡಿಸಿರುವೆ. ಜನರ ಅನುಭವಗಳನ್ನು, ಇಲ್ಲಿನ ಆರೋಗ್ಯ ವ್ಯವಸ್ಥೆಗಳ ಆಧಾರದಲ್ಲಿ ಸಲಹೆಗಳನ್ನು ನೀಡಲಾಗಿದೆ' ಎಂದೂ ಹೇಳುತ್ತಾರೆ.

ಜನ ಕೇಂದ್ರಿತ ವಿಧಾನ, ಆ್ಯಂಟಿಬಯೋಟಿಕ್‌ಗಳ ಲಭ್ಯತೆ ಕೇಂದ್ರಿತ ಹಾಗೂ ಕಾನೂನಿನಲ್ಲಿ ಸುಧಾರಣೆ ತರುವುದು– ಹೀಗೆ ಮೂರು ವಿಧಾನಗಳನ್ನು ಆಧರಿಸಿ ಶಿಫಾರಸುಗಳನ್ನು ಮಾಡಲಾಗಿದೆ ಎನ್ನುತ್ತಾರೆ.

'ಜಿಲ್ಲೆಗಳಲ್ಲಿ ಕೈಗೊಂಡ ಕ್ಷೇತ್ರ ಅಧ್ಯಯನ ವೇಳೆ 400ಕ್ಕೂ ಹೆಚ್ಚು ಭಾಗೀದಾರರೊಂದಿಗೆ ವ್ಯಾಪಕ ಸಮಾಲೋಚನೆಗಳನ್ನು ನಡೆಸಲಾಗಿದೆ. ಫಾರ್ಮಾಸಿಸ್ಟ್‌ಗಳು, ವೈದ್ಯರು, ಔಷಧಗಳ ತಯಾರಕರು, ರೋಗಿಗಳು ಹಾಗೂ ಆಶಾ ಕಾರ್ಯಕರ್ತೆಯರನ್ನು ಭೇಟಿ ಮಾಡಿ, ಮಾಹಿತಿ ಸಂಗ್ರಹಿಸಲಾಗಿದೆ' ಎಂದೂ ಅವರು ತಿಳಿಸಿದರು.

'ವಿವಿಧ ಭಾಗೀದಾರರೊಂದಿಗೆ ನಡೆಸಿದ ಸಮಾಲೋಚನೆ ವೇಳೆ, ಆ್ಯಂಟಿಬಯೋಟಿಕ್‌ಗಳ ಅಧಿಕ ಬಳಕೆ ಹಾಗೂ ಅಗತ್ಯದ ಸಂದರ್ಭಗಳಲ್ಲಿ ಈ ಔಷಧ ಸಿಗುತ್ತಿಲ್ಲ ಎಂಬ ಪ್ರಮುಖ ಸಂಗತಿಗಳನ್ನು ಗುರುತಿಸಲಾಯಿತು. ಈ ಸಮಸ್ಯೆಗಳನ್ನು ನಿವಾರಿಸಲು ಎರಡು ಪ್ರಮುಖ ಕಾರ್ಯತಂತ್ರಗಳನ್ನು ರೂಪಿಸುವ ಅಗತ್ಯವಿದೆ ಎಂದು ನಮ್ಮ ತಂಡಕ್ಕೆ ಮನವರಿಕೆಯಾಯಿತು. ಹೀಗಾಗಿ, ಈ ಕುರಿತು ಎರಡು ಸಲಹೆಗಳನ್ನು ಸರ್ಕಾರದ ಮುಂದಿಡಲಾಗಿದೆ' ಎಂದು ಡಾ.ಶ್ವೇತವಲ್ಲಿ ಹೇಳುತ್ತಾರೆ.

ಜಿಲ್ಲಾ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ನೀಡಲಾಗುವ ಔಷಧಗಳ ಪಟ್ಟಿಯೊಂದು ಇರಲಿದ್ದು, ಇದಕ್ಕೆ 'ಅಗತ್ಯ ಔಷಧಗಳ ಪಟ್ಟಿ' ಎನ್ನಲಾಗುತ್ತದೆ. ಆ್ಯಂಟಿಬಯೋಟಿಕ್‌ಗಳನ್ನು ಕೂಡ ಈ ಪಟ್ಟಿಯಲ್ಲಿ ಸೇರಿಸಬೇಕು. ಇದರಿಂದ, ಜಿಲ್ಲೆಯಲ್ಲಿನ ಎಲ್ಲ ಆಸ್ಪತ್ರೆಗಳಿಗೆ ಬರುವ ರೋಗಿಗಳಿಗೆ ಆ್ಯಂಟಿಬಯೋಟಿಕ್‌ಗಳು ಅಗತ್ಯ ಪ್ರಮಾಣದಲ್ಲಿ ಸಿಗುವಂತಾಗುವುದು. ಎಲ್ಲ ಸರ್ಕಾರಿ ಆಸ್ಪತ್ರೆಗಳು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿನ ಔಷಧಾಲಯಗಳಿಗೆ ಅಗತ್ಯವಿರುವ ಆ್ಯಂಟಿಬಯೋಟಿಕ್‌ಗಳನ್ನು ಕರ್ನಾಟಕ ರಾಜ್ಯ ವೈದ್ಯಕೀಯ ಪೂರೈಕೆಗಳ ನಿಗಮ ನಿಯಮಿತವೇ (ಕೆಎಸ್‌ಎಂಎಸ್‌ಸಿಎಲ್) ಖರೀದಿಸಿ, ಸರಬರಾಜು ಮಾಡಬೇಕು ಎಂಬ ಶಿಫಾರಸುಗಳನ್ನು ಮಾಡಲಾಗಿದೆ ಎಂದರು.

ಆ್ಯಂಟಿಬಯೋಟಿಕ್‌ಗಳ ಖರೀದಿ ಹಾಗೂ ಅವುಗಳ ಬಳಕೆ ಮೇಲೆ ನಿಗಾ ಇಡುವುದಕ್ಕೆ ಸಂಬಂಧಿಸಿ, 'ಡಿಜಿಟಲ್ ಡ್ಯಾಶ್‌ಬೋರ್ಡ್' ರೂಪಿಸಬೇಕು ಎಂಬ ಸಲಹೆಯನ್ನೂ ನೀಡಲಾಗಿದೆ ಎಂದೂ ಅವರು ವಿವರಿಸಿದರು.


ಆ್ಯಂಟಿಬಯೋಟಿಕ್‌ಗಳ ವಿಲೇವಾರಿ ಕೂಡ ಮುಖ್ಯ. ಸಮರ್ಪಕವಾಗಿ ವಿಲೇವಾರಿ ಮಾಡದಿದ್ದಾಗ ಸೂಪರ್ ಬಗ್‌ಗಳ ಉತ್ಪತ್ತಿಗೆ ಇವು ಕಾರಣವಾಗುತ್ತವೆ. ಇದು ಮತ್ತೊಂದು ತೆರನಾದ ಸಮಸ್ಯೆಗೆ ಕಾರಣವಾಗುತ್ತದೆ ಎಂದು ಡಾ.ಶ್ವೇತವಲ್ಲಿ ಹೇಳುತ್ತಾರೆ.

ಪ್ರತಿರೋಧ ಪತ್ತೆ ಹೇಗೆ?

ಬ್ಯಾಕ್ಟೀರಿಯಾಗಳು ಪ್ರತಿಜೀವಕಗಳಿಗೆ ಪ್ರತಿರೋಧ ಬೆಳೆಸಿಕೊಂಡಿವೆ ಎಂಬುದನ್ನು ಹೇಗೆ ಪತ್ತೆ ಹಚ್ಚಬಹುದು ಎಂಬ ಪ್ರಶ್ನೆ ಮೂಡುವುದು ಸಹಜ. ಇದಕ್ಕಾಗಿ ರಕ್ತ ಪರೀಕ್ಷೆ ಮಾಡಿಸುವುದಕ್ಕೆ ವೈದ್ಯರು ಸಲಹೆ ನೀಡುತ್ತಾರೆ. ಅಂದರೆ, ವ್ಯಕ್ತಿಯಲ್ಲಿ/ರೋಗಿಯಲ್ಲಿ ಸೆಪ್ಸಿಸ್ ಆಗಿದೆಯೇ ಎಂಬುದನ್ನು ಪತ್ತೆ ಮಾಡಲು ರಕ್ತ ಪರೀಕ್ಷೆ ಅಗತ್ಯ.

ರಕ್ತ ಅಥವಾ ಇತರ ಅಂಗಾಂಶಗಳಲ್ಲಿ ಹಾನಿಕಾರಕ ಸೂಕ್ಷ್ಮಾಣುಜೀವಿಗಳ ಉಪಸ್ಥಿತಿ ಮತ್ತು ಅವುಗಳ ಉಪಸ್ಥಿತಿಗೆ ದೇಹದ ಪ್ರತಿಕ್ರಿಯೆಯಿಂದ ಉಂಟಾಗುವ ಗಂಭೀರ ಸ್ಥಿತಿಯನ್ನು ಸೆಪ್ಸಿಸ್ ಎಂದು ಕರೆಯಲಾಗುತ್ತದೆ. ಇದು ಉಲ್ಬಣಗೊಂಡಾಗ, ಕೆಲ ಸಂದರ್ಭಗಳಲ್ಲಿ ಆಘಾತ ಮತ್ತು ಸಾವಿಗೆ ಕಾರಣವಾಗಬಹುದು.

ವ್ಯಕ್ತಿ/ರೋಗಿಯ ರಕ್ತದ ಮಾದರಿಯನ್ನು ಪ್ರಯೋಗಾಲಯದಲ್ಲಿ ವಿವಿಧ ಆ್ಯಂಟಿಬಯೋಟಿಕ್‌ಗಳನ್ನು ಬಳಸಿ ಪರೀಕ್ಷಿಸಲಾಗುತ್ತದೆ. ಒಂದು ವೇಳೆ ಬ್ಯಾಕ್ಟೀರಿಯಾ ಬೆಳವಣಿಗೆ ಮುಂದುವರಿದಲ್ಲಿ ಆ ನಿರ್ದಿಷ್ಟ ಆ್ಯಂಟಿಬಯೋಟಿಕ್‌ಗೆ ಅದು ಪ್ರತಿರೋಧ ಬೆಳೆಸಿಕೊಂಡಿದೆ ಎಂದು ನಿರ್ಧರಿಸಲಾಗುತ್ತದೆ.



ಈ ಹಿನ್ನೆಲೆಯಲ್ಲಿ ಆ್ಯಂಟಿಮೈಕ್ರೊಬಿಯಲ್ ರೆಸಿಸ್ಟನ್ಸ್(ಎಎಂಆರ್) ಕುರಿತು ಸಲಹೆ ನೀಡುವುದಕ್ಕಾಗಿ ಕರ್ನಾಟಕದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಡಾ.ಶ್ವೇತವಲ್ಲಿ ರಾಘವನ್ ಅವರನ್ನು ಸಲಹೆಗಾರರನ್ನಾಗಿ ನೇಮಕ ಮಾಡಿದೆ.

ಡಾ.ಶ್ವೇತವಲ್ಲಿ ನೇತೃತ್ವದ ತಂಡವು ರಾಜ್ಯದ 11 ಜಿಲ್ಲೆಗಳಲ್ಲಿ ಕ್ಷೇತ್ರ ಅಧ್ಯಯನ ಕೈಗೊಂಡಿದ್ದು, ಎಎಂಆರ್ ತಡೆಗಟ್ಟುವ ಕುರಿತು ಕೈಗೊಳ್ಳಬೇಕಾದ ಕಾರ್ಯತಂತ್ರಗಳನ್ನು ಒಳಗೊಂಡ ವರದಿಯನ್ನು ಸಿದ್ಧಪಡಿಸಿದೆ. ಈ ವರದಿಗೆ ಸಚಿವ ಸಂಪುಟದ ಅನುಮೋದನೆ ಸಿಗಬೇಕಿದೆ ಎಂದು ಮೂಲಗಳು ಹೇಳಿವೆ.

ಕಾನೂನುಗಳಲ್ಲಿ ಸುಧಾರಣೆ ಅಗತ್ಯ: 'ಆ್ಯಂಟಿಬಯೋಟಿಕ್‌ಗಳ ದುರ್ಬಳಕೆ ತಡೆಯಲು ಕಾನೂನಿನ ಬಲವೂ ಬೇಕು. ಇದಕ್ಕಾಗಿ, ವಕೀಲ ಭೈರವ ಕುಟ್ಟಯ್ಯ ಅವರೊಂದಿಗೆ ಸಮಾಲೋಚನೆ ನಡೆಸಿದ ಬಳಿಕ, ಔಷಧ ಮತ್ತು ಸೌಂದರ್ಯವರ್ಧಕಗಳ ಕಾಯ್ದೆ, 1940ಕ್ಕೆ ಕೆಲ ತಿದ್ದುಪಡಿಗಳನ್ನು ಶಿಫಾರಸು ಮಾಡಿರುವೆ' ಎಂದು ಡಾ.ಶ್ವೇತವಲ್ಲಿ ಹೇಳುತ್ತಾರೆ.

'ಆ್ಯಂಟಿಬಯೋಟಿಕ್‌ಗಳ ತಯಾರಿಕೆ, ಮಾರಾಟ ಹಾಗೂ ಬಳಕೆಯನ್ನು ನಿಯಂತ್ರಿಸುವುದಕ್ಕೆ ಸಂಬಂಧಿಸಿದ ಶಿಫಾರಸುಗಳನ್ನು ರಾಜ್ಯದ ಔಷಧ ನಿಯಂತ್ರಕರಿಗೆ ಸಲ್ಲಿಸಲಾಗಿದೆ. ಅವರ ಮೂಲಕ ಭಾರತೀಯ ಔಷಧ ಮಹಾನಿಯಂತ್ರಕರಿಗೂ (ಡಿಸಿಜಿಐ) ಈ ಶಿಫಾರಸುಗಳನ್ನು ಸಲ್ಲಿಸಲಾಗಿದೆ' ಎಂದು ಹೇಳುತ್ತಾರೆ.

ವೈದ್ಯರ ಶಿಫಾರಸು ಇಲ್ಲದೆ ಆ್ಯಂಟಿಬಯೋಟಿಕ್‌ಗಳನ್ನು ಔಷಧ ಅಂಗಡಿಗಳಲ್ಲಿ ಮಾರಾಟ ಮಾಡುವುದಕ್ಕೆ ಕಡಿವಾಣ ಬೀಳದಿದ್ದರೆ ಸಾಮಾನ್ಯವಾದ ಸೋಂಕು ಅಥವಾ ರೋಗಗಳಿಗೆ ಪ್ರಬಲ ಔಷಧಗಳನ್ನು ಸೇರಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಬಹುದು ಎಂದು ವೈದ್ಯರು ಎಚ್ಚರಿಸುತ್ತಾರೆ.

ಪರಿಕಲ್ಪನೆ: ಯತೀಶ್ ಕುಮಾರ್ ಜಿ.ಡಿ

ಗಂಡಾಂತರದಲ್ಲಿ ಜೀವ




ಜಗತ್ತಿನಾದ್ಯಂತ ಕೋವಿಡ್ ಅವಧಿಯಲ್ಲಿ ಮೃತಪಟ್ಟ ಜನರಿಗಿಂತ ದುಪ್ಪಟ್ಟು ಪ್ರಮಾಣದಲ್ಲಿ ಪ್ರತಿ ವರ್ಷ ಆ್ಯಂಟಿಬಯೋಟಿಕ್ ಪ್ರತಿರೋಧ ಬೆಳೆಸಿಕೊಳ್ಳುವುದರಿಂದ ಸಾಯುತ್ತಿದ್ದಾರೆ. ಇತ್ತೀಚೆಗೆ ಸಮುದಾಯದಲ್ಲಿ ಆ್ಯಂಟಿಬಯೋಟಿಕ್ ಪ್ರತಿರೋಧ ಹೆಚ್ಚಾಗುತ್ತಿದೆ. ಒಂದು ರೀತಿ ಗಂಡಾಂತರ ಎದುರಿಸುತ್ತಿದ್ದೇವೆ. ಕುಕ್ಕುಟೋದ್ಯಮ, ಪಶು ಸಂಗೋಪನೆ ಕ್ಷೇತ್ರದಲ್ಲೂ ಆ್ಯಂಟಿಬಯೋಟಿಕ್ ಹಾವಳಿ ಹೆಚ್ಚಾಗಿದ್ದು, ಇದರಿಂದ ಮನುಷ್ಯರ ಜೊತೆಗೆ, ಪರಿಸರದ ಮೇಲೂ ದುಷ್ಪರಿಣಾಮಬೀರುತ್ತಿದೆ. ಔಷಧ ಕಂಪನಿಗಳು ಜಾಹಿರಾತಿನ ಮೂಲಕ ಜನರನ್ನು ತಪ್ಪು ದಾರಿಗೆ ಎಳೆಯುತ್ತಿವೆ.

ಇದಕ್ಕೆ ಪರಿಹಾರವೆಂದರೆ, ಕಂಪನಿಗಳ ಆ್ಯಂಟಿಬಯೋಟಿಕ್ ಬಳಕೆಯ ಉತ್ತೇಜನದ ಪ್ರಚಾರದ (ಜಾಹಿರಾತು) ಮೇಲೆ ಸರ್ಕಾರ ನಿಯಂತ್ರಣ ಹೇರಬೇಕು. 'ಪ್ರಚಾರ'ದಲ್ಲಿ ಕೇವಲ ವೈಜ್ಞಾನಿಕ ಅಂಶಗಳಷ್ಟೇ ಇರಬೇಕೆಂಬ ನಿಬಂಧನೆ ವಿಧಿಸಬೇಕು. ಮುಖ್ಯವಾಗಿ, ಆ್ಯಂಟಿಬಯೋಟಿಕ್ ಕುರಿತು ಮಾಧ್ಯಮಗಳ ಮೂಲಕ ಜನರಲ್ಲಿ ಅರಿವು ಮೂಡಿಸಬೇಕು.

ಡಾ. ಗೋಪಾಲ ದಾಬಡೆ, ಅಧ್ಯಕ್ಷರು, ಡ್ರಗ್ ಆಕ್ಷನ್ ಫೋರಂ–ಕರ್ನಾಟಕ

ವೈದ್ಯರ ಚೀಟಿ ಇಲ್ಲದೇ ಆ್ಯಂಟಿಬಯೋಟಿಕ್ ಮಾರಾಟ ಬೇಡ



ಆ್ಯಂಟಿಬಯೋಟಿಕ್‌ಗಳ ದುರ್ಬಳಕೆ ಹಾಗೂ ಆ ಮೂಲಕ ಅವುಗಳಿಗೆ ಪ್ರತಿರೋಧ ಬೆಳೆಯುವುದಕ್ಕೆ (ಎಎಂಆರ್) ಹಲವು ಕಾರಣಗಳಿವೆ ಎಂದು ಹಿರಿಯ ವೈದ್ಯ ಡಾ.ಶಂಕರ್ ಸಿರಾ ಹೆಳುತ್ತಾರೆ.

ಅದರಲ್ಲೂ, ವೈದ್ಯರ ಚೀಟಿ ಇಲ್ಲದೆಯೇ ಈ ಆ್ಯಂಟಿಬಯೋಟಿಕ್‌ಗಳನ್ನು (ಓವರ್–ದಿ–ಕೌಂಟರ್) ಔಷಧ ಅಂಗಡಿಯವರು ನೀಡುತ್ತಿರುವುದು ಪ್ರಮುಖ ಕಾರಣಗಳಲ್ಲೊಂದು. ವಿದೇಶಗಳಲ್ಲಿ ವೈದ್ಯರ ಚೀಟಿ ಇಲ್ಲದೇ ಯಾವುದೇ ಔಷಧಗಳನ್ನು ಅಂಗಡಿಯವರು ನೀಡುವುದಿಲ್ಲ ಎಂದು ಸಮಸ್ಯೆಯ ಮತ್ತೊಂದು ಮುಖವನ್ನು ಅವರು ತೆರೆದಿಡುತ್ತಾರೆ.

ಓವರ್–ದಿ–ಕೌಂಟರ್ (ಒಟಿಸಿ) ಆ್ಯಂಟಿಬಯೋಟಿಕ್‌ಗಳ ಮಾರಾಟಕ್ಕೆ ಕಡಿವಾಣ ಹಾಕುವುದು ಅಗತ್ಯ. ಸರ್ಕಾರವು ಈ ಸಂಬಂಧ ಸೂಕ್ತವಾದ ನೀತಿ ರೂಪಿಸಿ, ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದೇ ಪರಿಹಾರ ಎಂದು ಡಾ.ಶಂಕರ್ ಹೇಳುತ್ತಾರೆ.

'ಎಷ್ಟೋ ಔಷಧ ಮಾರಾಟಗಾರರಿಗೆ ಯಾವ ಔಷಧಗಳನ್ನು ವೈದ್ಯರ ಚೀಟಿ ಇಲ್ಲದೆಯೇ ಕೊಡಬಾರದು ಎಂಬ ಬಗ್ಗೆ ಮಾಹಿತಿ ಇರುವುದಿಲ್ಲ. ಇನ್ನೊಂದೆಡೆ ನೈತಿಕ ಪ್ರಶ್ನೆಗಳನ್ನೂ ಇದು ಒಳಗೊಂಡಿದೆ' ಎನ್ನುತ್ತಾರೆ.

'ನಕಲಿ ವೈದ್ಯರ ಹಾವಳಿ, ಗುಣಮಟ್ಟ ರಹಿತ ಔಷಧಗಳು ಕೂಡ ಎಎಂಆರ್ ಸಮಸ್ಯೆ ತೀವ್ರಗೊಳ್ಳುವುದಕ್ಕೆ ಕಾರಣವಾಗುತ್ತಿದೆ' ಎಂದೂ ಹೇಳಲು ಮರೆಯುವುದಿಲ್ಲ.

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 25-1-2001

● **ಕನ್ನಡ ಮಾಧ್ಯಮ ಮೀಸಲಿಗೆ ತಾತ್ವಿಕ ಒಪ್ಪಿಗೆ**

ಬೆಂಗಳೂರು, ಜ 24– ಒಂದರಿಂದ 10ನೇ ತರಗತಿ ವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳಿಗೆ ವೈದ್ಯಕೀಯ ಹಾಗೂ ಎಂಜಿನಿಯರಿಂಗ್ ಮುಂತಾದ ವೃತ್ತಿ ಶಿಕ್ಷಣಗಳ ಕೋರ್ಸ್‌ಗಳಲ್ಲಿ ಮೀಸಲಾತಿ ನೀಡಬೇಕು ಎಂಬುದನ್ನು ಸಚಿವ ಸಂಪುಟದ ಸಭೆಯಲ್ಲಿ ಶೀಘ್ರದಲ್ಲೇ ನಿರ್ಧರಿಸಲಾಗುತ್ತದೆ ಎಂದು ಉನ್ನತ ಶಿಕ್ಷಣ ಸಚಿವ ಡಾ. ಜಿ.ಪರಮೇಶ್ವರ ಇಂದು ತಮ್ಮನ್ನು ಭೇಟಿ ಮಾಡಿದ ವರದಿಗಾರರಿಗೆ ತಿಳಿಸಿದರು. ಈ ವರ್ಷ ರಾಜ್ಯದಲ್ಲಿ ಅನುಮತಿ ಪಡೆದಿರುವ ಹೊಸ 41 ಕಾಲೇಜುಗಳಿಂದ ಮಾಹಿತಿ ತಂತ್ರಜ್ಞಾನ ಆಧರಿತ 11 ಸಾವಿರ ಹೆಚ್ಚುವರಿ ಸೀಟುಗಳು ಸಿಗಲಿವೆ ಎಂದರು.

75 ವರ್ಷಗಳ ಹಿಂದೆ

ಗುರುವಾರ, 25-1-1951

● **ಜಮೀನ್ದಾರಿ ನಿರ್ಮೂಲನ ಮಸೂದೆ**

ನವದೆಹಲಿ, ಜ 24– ಉತ್ತರ ಪ್ರದೇಶದ ಜಮೀನ್ದಾರಿ ನಿರ್ಮೂಲನ ಮಸೂದೆಗೆ ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದರು ಅಂಗೀಕಾರವಿತ್ತಿದ್ದಾರೆ.

ಒಂದೂವರೆ ಶಮಾನಗಳಿಂದಲೂ ನಡೆದುಕೊಂಡು ಬಂದಿರುವ ಜಮೀನ್ದಾರಿ ಪದ್ಧತಿಯನ್ನು ತೊಡೆದುಹಾಕಬೇಕೆಂಬ ಮಸೂದೆಯು ಶಾಸನ ಸಭೆಯಲ್ಲಿ ಅಂಗೀಕಾರವಾಯಿತು.

ಮೇಲ್ಮನೆಯು ಜನವರಿ 16ರಂದು ಮಸೂದೆಯನ್ನು ಒಪ್ಪಿ ಭಾರತ ರಾಜ್ಯಾಂಗದ 1ನೇ ವಿಧಿಯ ಪ್ರಕಾರ ರಾಷ್ಟ್ರಾಧ್ಯಕ್ಷರ ಅನುಮತಿಗೆ ಕಾದಿಡಲಾಗಿತ್ತು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

25 ಜನವರಿ 2026 ಭಾನುವಾರ ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಶುಕ್ಲ ಸಪ್ತಮಿ ಗಂ. 23-11 **ನಕ್ಷತ್ರ:** ರೇವತಿ ಗಂ. 13-36 **ಯೋಗ:** ಸಿದ್ಧ ಗಂ. 11-46 **ಕರಣ:** ಗರ ಗಂ. 11-59 ಮಕರ ಮಾಸದ 11 ನೇ ದಿನ. **ಮಳೆ ನಕ್ಷತ್ರ:** ಶ್ರವಣ 1 ನೇ ಪಾದ. **ರಾಹುಕಾಲ:** ಸಾಯಂಕಾಲ 04-30 -06-00 **ಸೂರ್ಯೋದಯ:** 07-01 **ಸೂರ್ಯಾಸ್ತ:** 06-24 **ಮುಸ್ಲಿಂ ದಿನಾಂಕ:** 5 ಶಬನ್ **ದಿನ ವಿಶೇಷ:** ರಥ ಸಪ್ತಮಿ **ಅದೃಷ್ಟ ಸಂಖ್ಯೆ:** 11, 3

ಮೇಷ: ಪ್ರಭಾವಿ ವ್ಯಕ್ತಿಗಳ ಸಹಾಯ ಬಳಸಿಕೊಂಡು ನಿಮ್ಮ ಉದ್ಯೋಗದಲ್ಲಿ ಬರಬಹುದಾದ ಸಮಸ್ಯೆಗಳನ್ನು ನಿವಾರಿಸಿಕೊಳ್ಳುವ ಯೋಚನೆಯನ್ನು ನಡೆಸುವಿರಿ. ನಿಸ್ವಾರ್ಥ, ತ್ಯಾಗದ ಮನೋಭಾವ ಬೆಳೆಸಿಕೊಳ್ಳುವಿರಿ.

ವೃಷಭ: ಅವಿವಾಹಿತರು ಮನೆಯಲ್ಲಿ ತೋರಿಸಿರುವ ಎಲ್ಲಾ ಸಂಬಂಧಗಳಿಗೆ ನಕಾರ ಮಾಡುತ್ತಿರುವುದರ ಬದಲು ನಿಮ್ಮ ಅಪೇಕ್ಷಿತ ವ್ಯಕ್ತಿಯನ್ನೇ ಮನೆಯವರ ಮುಂದೆ ಪ್ರಸ್ತಾಪಿಸುವುದು ಒಳ್ಳೆಯದು.

ಮಿಥುನ: ಅರಿಷಡ್ವರ್ಗಗಳ ನಿವಾರಣೆಗಾಗಿ ಅಧಿಕ ಮಟ್ಟದಲ್ಲಿ ಸಾಧನೆ ಮಾಡಲು ಪ್ರಾರಂಭಿಸಬಹುದು. ವ್ಯವಹಾರದಲ್ಲಿ ಅಡ್ಡಿ ಆತಂಕ ಎದುರಾದರೂ ದುರ್ಗಾದೇವಿಯ ಆರಾಧನೆಯಿಂದಾಗಿ ಸಹಜವಾಗಿ ಮುಂದುವರೆಯುವುದು.

ಕರ್ಕಾಟಕ: ಮನೆಯಲ್ಲಿರುವ ಸೂಕ್ಷ್ಮ ವ್ಯಕ್ತಿಯ ಆರೋಗ್ಯದ ನಿಗಾವಹಿಸುವುದು ನಿಮ್ಮ ಪ್ರಮುಖ ಕಾರ್ಯವಾಗುವುದು. ಪ್ರವಾಸಕ್ಕಾಗಿ ಹೋದ ಪ್ರದೇಶದಲ್ಲಿ ಕೆಲವು ತೊಂದರೆಗಳಾಗುವಂತಹಾ ಸಂದರ್ಭಗಳಿವೆ.

ಸಿಂಹ: ಮೋಸದಿಂದಾಗಿ ಬೇರೆಯವರ ಕೈ ಸೇರಿದ ನಿಮ್ಮ ಹಣ ನಿಮಗೆ ಹಿಂತಿರುಗುವ ಸೂಚನೆಗಳು ಕಾಣುತ್ತವೆ. ಹಿರಿಯರ ಮಾತಿನಂತೆ ಕೆಲಸ ಕೈಗೊಳ್ಳುವುದು ಉತ್ತಮ. ವೃಥಾ ಅಲೆದಾಟದಿಂದ ಆಯಾಸ ಆಗುವುದು.

ಕನ್ಯಾ: ಮಧ್ಯದಲ್ಲಿ ನಿಂತ ವಿದ್ಯಾಭ್ಯಾಸವನ್ನು ಮುಂದುವರೆಸುವ ಪ್ರಯತ್ನ ಮಾಡಿದಲ್ಲಿ ಸಫಲವಾಗುವುದು. ಉದ್ಯೋಗಕ್ಕಾಗಿ ಹೆಚ್ಚಿನ ಪರಿಶ್ರಮ, ದೇವರ ಕೃಪಾ ಕಟಾಕ್ಷ ಬೇಕಾಗುವುದು. ಪತಿ ಪತ್ನಿಯರಲಿ ಸಾಮರಸ್ಯ ಇರುವುದು.

ತುಲಾ: ನಿಮ್ಮ ನಿಷ್ಕಪಟ ಸಮಾಜ ಸೇವೆಯನ್ನು ಕುಟುಂಬದವರು ಹಾಗೂ ಸಮಾಜದವರು ಗುರುತಿಸಿ ಶ್ಲಾಘಿಸುವರು ಹಾಗು ಅನೇಕ ಕಡೆಯಿಂದ ಸಹಾಯ ಹಸ್ತಗಳು ಸಿಗುವವು. ಲೇವಾದೇವಿ ವ್ಯವಹಾರಗಳು ಮುಂದುವರೆಯುವುದು.

ವೃಶ್ಚಿಕ: ನಿಮಗೆ ಇಷ್ಟವಿಲ್ಲದ ಸಂಬಂಧವನ್ನು ಹೊತ್ತು ತಂದ ಮಗಳ ಮೇಲೆ ಕೋಪ ಸಹಜವಾದರು ಸಹ ಜೀವನ ಆಕೆಯದ್ದು ಎಂಬುದನ್ನು ಅರ್ಥೈಸಿಕೊಳ್ಳುವುದು ಸೂಕ್ತ. ಸಾಮಾಜಿಕ ವಲಯದಲ್ಲಿ ನಿಮ್ಮ ವರ್ಚಸ್ಸು ಬೆಳೆಯಲಿದೆ.

ಧನು: ದಾಯಾದಿಗಳು ಕಲಹಗಳನ್ನು ಬಿಟ್ಟು ರಾಜಿ ಮಾಡಿಕೊಳ್ಳುವ ಮನೋಭಾವಕ್ಕೆ ಬಂದಾರು. ನೀವು ನಿಮ್ಮ ವೈಯಕ್ತಿಕ ಮನೋಭಾವವನ್ನು ಬದಲಿಸಿಕೊಳ್ಳುವಂತೆ ಆಗಲಿದೆ. ಹೊಸ ವಾಹನ ಖರೀದಿಸುವ ಯೋಗವಿದೆ.

ಮಕರ: ಪ್ರಭಾವಿ ವ್ಯಕ್ತಿಗಳ ಒಡನಾಟ ನಿಮಗೆ ಹೆಚ್ಚಿನ ಸ್ಥಾನಮಾನವನ್ನು ಜೊತೆಯಲ್ಲಿ ಆಯಾಸವನ್ನು ತಂದು ಕೊಡಲಿದೆ. ಇಂದು ಕೈಗೊಂಡ ಪ್ರವಾಸದಿಂದ ನಿಮಗೆ ಅನಿರೀಕ್ಷಿತವಾದ ಲಾಭದ ಅನುಭವ ಉಂಟಾಗುವುದು.

ಕುಂಭ: ಕಷ್ಟ ಕಾರ್ಪಣ್ಯಗಳ ಜೀವನವನ್ನು ಈಗಷ್ಟೇ ಕಳೆದ ನಿಮಗೆ ಈಗ ಮಗನು ಹೊಸಾ ತಲೆನೋವನ್ನು ತರುವಂತಹಾ ಸಾಧ್ಯತೆ ಇದೆ. ಚರ್ಮಕ್ಕೆ ಸಂಬಂಧಿಸಿದ ಅಪರೂಪದ ಕಾಯಿಲೆಯೊಂದು ಕಾಣಿಸಿಕೊಳ್ಳುವ ಸಾಧ್ಯತೆ ಇದೆ.

ಮೀನ: ಇದ್ದಂಕ್ಕಿದ್ದಂತೆಯೇ ನಿಮ್ಮ ಮೇಲೆ ಪ್ರೀತಿಯನ್ನು ತೋರಿಸಲು ಶುರು ಮಾಡಿದ ನೆಂಟರ ಬುದ್ಧಿಯು ಕಪಟ ಎಂದು ಅರಿತುಕೊಳ್ಳಿ. ಹಿರಿಯರೊಂದಿಗೆ ವಿನಯವನ್ನು ಬಿಟ್ಟು ಮಾತನಾಡಿದಲ್ಲಿ ನಿಮ್ಮ ಗೌರವ ಕಳೆದುಕೊಳ್ಳುವಿರಿ.

ಪದಬಂಧ 6295

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಗುರಿ ತಲುಪಿರುವ ನಿಶ್ಚಿತವಾದ ಉದ್ದೇಶ (4)
3.ಈಗ ಕಾಣಿಸಿದ ತೋಳ! (4)
5.ಸಂಗೀತ ವಿದ್ಯೆಯಿದು (4)
7.ನಕ್ಷೆ ಅಥವಾ ಚಿತ್ರವನ್ನು ಹೀಗೆನ್ನುವರು (3)
8.ಬೇರೆ ಬೇರೆ ದೇಶಗಳಿಗೆ ಪರಸ್ಪರ ಸಂಬಂಧಿಸಿದ್ದು (5)
11.ಕಸವನ್ನು ಗುಡಿಸುವ ಸಾಧನ (3)
12.ನಿಸ್ಸಾರವಾದುದನ್ನು ಹೀಗೆ ಹೇಳಿ (4)
14.ಖಾಲಿಯಾದ ಕೈ (4)
15.ಅನಿರೀಕ್ಷಿತವಾಗಿ ತಗಲಿದ ಪೆಟ್ಟು (4)

ಮೇಲಿಂದ ಕೆಳಕ್ಕೆ

1.ಅಸಮಾಧಾನದ ಮಾತು (4)
2.ಗುಣಿಸುವ ಸಂಖ್ಯೆ (3)
4.ಪ್ರತೀ ಸಲ ಕಾಣುವ ಗಂಡಾನೆ ಉಲ್ಟಾ ನಿಂತಿದೆಯಲ್ಲಾ! (3)
6.ತಲೆಯಲ್ಲಿನ ಅನ್ನದಪಾತ್ರೆ ಬೋರಲಾಗಿದೆಯಲ್ಲಾ? (3)
7. ನಯವಾಗಿ ಬಂದಿರುವ ನಮ್ರತೆ (3)
8.ಹೆಜ್ಜೆಯ ಕೆಳಭಾಗ (3)
9.ಕೈ ಕೊನೆಗಿದ್ದಾಗ ಕಾಣಿಸಿದ ತುಂತುರು (3)
10.ಮಂದಿಯ ಒಳಿತು (4)
11.ಕೋಟೆಯ ಮೇಲುಭಾಗ (3)
13.ಸರಸದ ಮಾತುಕತೆ (3)

1		2		■	3			4
	■		■	■	■	■	■	
5			6	■	■	7		
	■	■		■	■		■	■
■	■	8			9		■	■
■	■		■	■		■	■	10
11			■	■	12	13		
	■	■	■	■	■		■	
14				■	15			

6294ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1. 2.ಮಹಿಷ 4.ವಾಮನ 5.ಅಂಜುಬುಳಿ 6.ವನ್ಯಮೃಗ 7.ಕೆರ 9.ಗವಿ 13.ಮನ್ವಂತರ 14.ಅಪವ್ಯಯ 15.ವಂಚನೆ 16.ಹರಿತ

ಮೇಲಿಂದ ಕೆಳಕ್ಕೆ: 1.ಜವಾಹಿರಿ 2.ಮನವರಿಕೆ 3.ಮಕುಟ 5.ಅಂಗರಾಗ 8.ರಸಮಯ 10.ವಿಚಾರವಂತ 11.ಕುಂಟುನೆಪ 12.ಚಪಲ

ಸುಡೊಕು 6679

ಹೀಗೆ ಆಡಿ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

3	5		7		2		8	
						3		4
	7	8	3		9		1	
1		4	8				2	3
				3				
8		7			1		5	9
2		3	9		6	5		8
		6						
	8		5		4		3	2

6678 ಸುಡೊಕು

5	6	3	9	2	7	8	1	4
8	1	7	6	5	4	2	3	9
4	2	9	3	8	1	7	5	6
2	4	6	7	1	3	9	8	5
3	9	1	8	4	5	6	7	2
7	5	8	2	9	6	3	4	1
6	8	5	1	7	9	4	2	3
1	3	2	4	6	8	5	9	7
9	7	4	5	3	2	1	6	8

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಕಳ್ಳರ ಕಟ್ಟಿಹಾಕಿ ಹಲ್ಲೆ: 7 ಮಂದಿ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಳ್ತಂಗಡಿ (ದಕ್ಷಿಣ ಕನ್ನಡ): ಬೈಕ್ ಕಳ್ಳತನ ಮಾಡಿದ ಆರೋಪದ ಮೇಲೆ ಇಬ್ಬರನ್ನು ಮರಕ್ಕೆ ಕಟ್ಟಿಹಾಕಿ ಹಲ್ಲೆ ನಡೆಸಿದ ಪ್ರಕರಣಕ್ಕೆ ಸಂಬಂಧಿಸಿ 7 ಮಂದಿಯ ವಿರುದ್ಧ ಎಫ್‌ಐಆರ್ ದಾಖಲಾಗಿದೆ ಎಂದು ವೇಣೂರು ಪೊಲೀಸರು ತಿಳಿಸಿದ್ದಾರೆ.

ತಾಲ್ಲೂಕಿನ ಮರೋಡಿ ಗ್ರಾಮದ ಪಳಾರಗೋಳಿ ನಿವಾಸಿ ದೇವಿಪ್ರಸಾದ್ ಮನೆಯಿಂದ ಜ.20ರಂದು ಬೆಳಿಗ್ಗೆ ಮಂಗಳೂರಿನ ಬಂಗ್ರಕೂಳೂರು ನಿವಾಸಿಗಳಾದ ಮೊಯ್ದಿನ್ ನಾಸೀರ್ ಹಾಗೂ ಅಬ್ದುಲ್ ಸಮದ್ ಬೈಕ್ ಕಳ್ಳತನ ಮಾಡಿದ್ದು ಅವರನ್ನು ಹಿಡಿಯಲು ಹೋದಾಗ ಹಲ್ಲೆ ಮಾಡಿದ್ದಾರೆ ಎಂದು ದೇವಿಪ್ರಸಾದ್ ದೂರು ನೀಡಿದ್ದರು.

'ಬೈಕ್ ತೆಗೆದುಕೊಂಡು ಹೋಗುತ್ತಿದ್ದಾಗ ತಮ್ಮನ್ನು ಹಿಡಿದು ಮರಕ್ಕೆ ಕಟ್ಟಿಹಾಕಿ ದೇವಿಪ್ರಸಾದ್ ಮತ್ತು ಇತರರು ಹಲ್ಲೆ ಮಾಡಿದ್ದಾರೆ' ಎಂದು ಅಬ್ದುಲ್ ಸಮದ್ ಪ್ರತಿ ದೂರು ನೀಡಿದ್ದರು. ಮರೋಡಿಯಲ್ಲಿರುವ ನಾಸಿರ್ ಸಂಬಂಧಿಕರ ಮನೆಗೆ ತೆರಳಿ ವಾಪಸಾಗುವಾಗ ರಸ್ತೆ ಬದಿ ನಿಲ್ಲಿಸಿದ್ದ ಬೈಕ್ ತೆಗೆದುಕೊಂಡು ಹೋಗಿದ್ದೆವು. ಆಗ 2 ಬೈಕ್‌ಗಳಲ್ಲಿ ಬಂದ ನಾಲ್ವರು ಅಡ್ಡಗಟ್ಟಿದ್ದರು. ತಪ್ಪಿಸಿಕೊಂಡು ಮುಂದೆ ಹೋದಾಗ ಇನ್ನಷ್ಟು ಮಂದಿ ಬಂದು ಮರಕ್ಕೆ ಕಟ್ಟಿ ಹಾಕಿ ಹಲ್ಲೆ ನಡೆಸಿದ್ದಾರೆ ಎಂದು ಅಬ್ದುಲ್ ಸಮದ್ ದೂರಿನಲ್ಲಿ ತಿಳಿಸಿದ್ದಾರೆ.

ಬಿಜೆಪಿ ಶಾಸಕರ ಮನೆ ಮುಂದೆ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆಯಲ್ಲಿ ಶುಕ್ರವಾರದ ಕಲಾಪದ ವೇಳೆ ಸಚಿವ ಬೈರತಿ ಸುರೇಶ್ ಕುರಿತು ಅವಹೇಳನಕಾರಿ ಹೇಳಿಕೆ ನೀಡಿದ್ದಾರೆ ಎಂದು ಆರೋಪಿಸಿದ ಕಾಂಗ್ರೆಸ್ ಕಾರ್ಯಕರ್ತರು, ಬಿಜೆಪಿ ಶಾಸಕ ಎಸ್. ಸುರೇಶ್ ಕುಮಾರ್ ಅವರ ಮನೆ ಮುಂದೆ ಶನಿವಾರ ಪ್ರತಿಭಟಿಸಿದರು.

ರಾಜಾಜಿನಗರದಲ್ಲಿರುವ ಸುರೇಶ್ ಕುಮಾರ್ ಅವರ ಮನೆಯ ಮುಂದೆ ಶನಿವಾರ ಬೆಳಿಗ್ಗೆ ಸೇರಿದ್ದ ಕಾಂಗ್ರೆಸ್ ಕಾರ್ಯಕರ್ತರು, ಘೋಷಣೆ ಕೂಗಿ ಪ್ರತಿಭಟಿಸಿದರು. ಮನೆಯ ಗೋಡೆಗಳಿಗೆ ಪೋಸ್ಟರ್‌ಗಳನ್ನು ಅಂಟಿಸಿದರು.

'ತಾಯಂದಿರಿಗೆ ಅವಮಾನ ಆಗುವ ರೀತಿಯಲ್ಲಿ ಸುರೇಶ್ ಕುಮಾರ್ ಅವರು ಹೇಳಿಕೆ ನೀಡಿದ್ದರು. ಅದನ್ನು ವಿಧಾನಸಭೆಯ ಕಲಾಪದ ಕಡತಗಳಿಂದ ತೆಗೆಯಲಾಗಿದೆ. ಆದರೆ ಅವರು ಬಹಿರಂಗವಾಗಿ ಕ್ಷಮೆ ಕೇಳಬೇಕು' ಎಂದು ಒತ್ತಾಯಿಸಿದರು.

'ಆತ್ಮ ಸ್ವಚ್ಛ, ಹೋರಾಟ ನಿರಂತರ'

ಜೆಡಿಎಸ್ ಬೆಳ್ಳಿ ಹಬ್ಬದ ಸಮಾವೇಶದಲ್ಲಿ ಕಾಂಗ್ರೆಸ್ ವಿರುದ್ಧ ದೇವೇಗೌಡ ಕಿಡಿ

ಪ್ರಜಾವಾಣಿ ವಾರ್ತೆ

ಹಾಸನ: ಬೆಳ್ಳಿಹಬ್ಬದ ಅಂಗವಾಗಿ ನಗರದಲ್ಲಿ ಶನಿವಾರ ನಡೆದ ಜೆಡಿಎಸ್ ಆಯೋಜಿಸಿದ್ದ ಸಮಾವೇಶವು ಪಕ್ಷದ ಶಕ್ತಿ ಪ್ರದರ್ಶನ ಹಾಗೂ ಕಾಂಗ್ರೆಸ್ ಸರ್ಕಾರದ ವಿರುದ್ಧ ವಾಗ್ದಾಳಿಗೆ ವೇದಿಕೆಯಾಯಿತು.

ಭಾರಿ ಸಂಖ್ಯೆಯಲ್ಲಿ ಸೇರಿದ್ದ ಜನರನ್ನು ನೋಡಿದ ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡರು, ಗಟ್ಟಿ ಮಾತಿನಲ್ಲಿಯೇ ತಮ್ಮ ಸಾಧನೆಗಳನ್ನು ಹೇಳಿಕೊಂಡರು. ಬಿಜೆಪಿ ಜೊತೆಗಿನ ಮೈತ್ರಿಯನ್ನು ಸಮರ್ಥಿಸಿಕೊಳ್ಳುತ್ತಲೇ, ಜಿಲ್ಲೆಯಲ್ಲಿ ಜೆಡಿಎಸ್ ಹೊರತಾಗಿ ಅದಕ್ಕೆ ಅಸ್ತಿತ್ವವಿಲ್ಲ ಎಂಬ ಸಂದೇಶವನ್ನೂ ನೀಡಿದರು. ಕಾಂಗ್ರೆಸ್‌ನ ರಾಜ್ಯ ಹಾಗೂ ರಾಷ್ಟ್ರೀಯ ನಾಯಕರ ವಿರುದ್ಧ ಆಕ್ರೋಶವನ್ನೂ ಹೊರಹಾಕಿದರು. 'ಪಕ್ಷದಲ್ಲಿ ನಾಯಕತ್ವದ ಕೊರತೆ ಇಲ್ಲ' ಎಂಬ ಪ್ರತಿಪಾದನೆಯೂ ನಡೆಯಿತು.

ಜಿಲ್ಲೆಯಲ್ಲಿ ಕಾಂಗ್ರೆಸ್ ಸರ್ಕಾರ ನಡೆಸಿದ ಎರಡು ಸಮಾವೇಶಗಳಿಗೆ ಪ್ರತಿಯಾಗಿ ಆಯೋಜಿಸಿದಂತಿದ್ದ ಸಮಾವೇಶದ ಮೂಲಕವೇ, ಮುಂಬರುವ ಸ್ಥಳೀಯ ಸಂಸ್ಥೆ ಚುನಾವಣೆಗೆ ಸಿದ್ಧತೆಯನ್ನೂ ಪಕ್ಷ ಆರಂಭಿಸಿತು. ನಿಖಿಲ್ ಕುಮಾರಸ್ವಾಮಿ, ಡಾ.ಸೂರಜ್ ರೇವಣ್ಣ ಅವರಿಗೆ ಮಾತನಾಡಲು ಅವಕಾಶ ನೀಡಿ, 'ಯುವ ನಾಯಕತ್ವ'ವನ್ನು ಪ್ರತಿಪಾದಿಸಿತು.

'ದೇವೇಗೌಡನ ಆತ್ಮ ಸ್ವಚ್ಛವಾಗಿದೆ. ಯಾರ ಹಂಗಿಗೂ ನಾನು ಒಳಗಾಗಿಲ್ಲ. ದುಡಿದಿದ್ದೇನೆ, ಕಷ್ಟಪಟ್ಟಿದ್ದೇನೆ. ನಿನ್ನೆಯೇ ಡಯಾಲಿಸಿಸ್ ಮಾಡಿಕೊಂಡಿದ್ದು, ಇಂದು ಜನರ ಮಧ್ಯೆ ಇದ್ದೇನೆ. ನನ್ನ ಹೋರಾಟ ನಿರಂತರ' ಎಂದು ಎಚ್.ಡಿ. ದೇವೇಗೌಡ ಪ್ರತಿಪಾದಿಸಿದರು.

ಮುಖ್ಯಾಂಶಗಳು
- ಒಂದೂವರೆ ಲಕ್ಷ ಜನ ಸಮಾವೇಶದಲ್ಲಿ ಭಾಗಿ
- ಪಕ್ಷದ ಬಲ ಪ್ರದರ್ಶನದ ವೇದಿಕೆ

ದೇವೇಗೌಡರ ಕುಟುಂಬವನ್ನು ಹೆದರಿಸುತ್ತೇವೆ ಎಂದುಕೊಂಡಿದ್ದರೆ ಆಗುವುದಿಲ್ಲ. ದ್ವೇಷ ರಾಜಕಾರಣ ಮಾಡುತ್ತಿರುವ ಕಾಂಗ್ರೆಸ್ ನಿರ್ನಾಮ ಈ ಜಿಲ್ಲೆಯಿಂದಲೇ ಆರಂಭವಾಗಲಿದೆ
ಎಚ್.ಡಿ. ರೇವಣ್ಣ, ಶಾಸಕ

'ನನಗೆ ದೈವದಲ್ಲಿ ನಂಬಿಕೆ ಇದೆ. ಕಾಲ ಬರುತ್ತೆ. ಸ್ವಲ್ಪ ಕಾಯಿರಿ. ರಾಜ್ಯದಲ್ಲಿ ಏನೇನು ನಡೆದಿದೆ ಎಂಬುದನ್ನು ಹೇಳಬಲ್ಲೆ. ಆದರೆ, ಈ ಬಾಯಿ ಹೊಲಸು ಮಾಡಿಕೊಳ್ಳಲು ಹೋಗಲ್ಲ. 10 ವರ್ಷದ ಹಿಂದೆ ಜಿಲ್ಲೆಗೆ ಬಂದಿದ್ದ ರಾಹುಲ್ ಗಾಂಧಿ, ಜೆಡಿಎಸ್ ಪಕ್ಷವನ್ನು ಕಾಂಗ್ರೆಸ್‌ನ ಬಿ ಟೀಂ ಎಂದು ಕರೆದಿದ್ದರು. ಇಂದು ಅದೇ ದೇವೇಗೌಡ ಬಿಜೆಪಿ ಜೊತೆ ಮೈತ್ರಿ ಸಾಧಿಸಿ, ಎನ್‌ಡಿಎದಲ್ಲಿ ನಾವು ಪಾಲುದಾರರಾಗಿದ್ದೇವೆ' ಎಂದು ಸಮರ್ಥಿಸಿಕೊಂಡರು.


ಹಾಸನದಲ್ಲಿ ನಡೆದ ಜೆಡಿಎಸ್ ಸಮಾವೇಶದಲ್ಲಿ ಪಾಲ್ಗೊಂಡಿದ್ದ ಜನರ ಕೈಕುಲುಕಿದ ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ

'ಪ್ರಧಾನಿ ನರೇಂದ್ರ ಮೋದಿ ಹಾಗೂ ರಾಜ್ಯದ ಜೆಡಿಎಸ್-ಬಿಜೆಪಿಯ 18 ಸಂಸದರನ್ನು ಇಲ್ಲಿಗೆ ಕರೆಸಿ, ವಿಮಾನ ನಿಲ್ದಾಣದ ಉದ್ಘಾಟನೆ ಹಾಗೂ ಐಐಟಿ ಸ್ಥಾಪನೆಯ ಕನಸನ್ನು ಈಡೇರಿಸುವೆ' ಎಂದರು.

'ರೇವಣ್ಣ ಹಾಗೂ ಅವರ ಕುಟುಂಬವನ್ನು ಮುಗಿಸಲು ಹೊರಟ ಎಸ್‌ಐಟಿ ಅಧಿಕಾರಿಗಳಿಗೆ, ರಾಜ್ಯದ ಆಡಳಿತ ಚುಕ್ಕಾಣಿ ಹಿಡಿದಿರುವ ನಮ್ಮ ಎದುರಾಳಿಗಳು ಉಡುಗೊರೆ ಕೊಟ್ಟಿದ್ದಾರೆ. 25 ವರ್ಷದ ಹಿಂದೆ ಎಚ್.ಡಿ. ಕುಮಾರಸ್ವಾಮಿ ದುಡ್ಡು ಕೊಟ್ಟು ಜಮೀನು ಖರೀದಿಸಿದ್ದಕ್ಕೆ ಅವರ ವಿರುದ್ಧ ಪ್ರಕರಣ ದಾಖಲಿಸಿದರು' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಜಿಲ್ಲೆಯಲ್ಲಿ ನಮ್ಮ ಎದುರಾಳಿಗಳು ಎರಡು ಸಮಾವೇಶ ಮಾಡಿ, ಜೆಡಿಎಸ್ ನಾಶ ಮಾಡುವುದಾಗಿ ಹೇಳಿದ್ದರು. ಆದರೆ, ಇಲ್ಲಿ ಬಂದಿರುವ ಜನ, ನಿಮ್ಮ ಆಟ ನಡೆಯಲ್ಲ. ರೇವಣ್ಣ, ಕುಮಾರಸ್ವಾಮಿ ಹಿಂದೆ ನಾವಿದ್ದೇವೆ ಎಂಬ ಮಾತನ್ನು ಆಡಳಿತ ನಡೆಸುವವರಿಗೆ ನೀಡಿದ್ದೀರಿ' ಎಂದರು.

2028ಕ್ಕೆ ಜನಪರ ಸರ್ಕಾರ ರಚನೆ: ಎಚ್‌ಡಿಕೆ

'ಇದು ಪ್ರಾರಂಭ. ರಾಜ್ಯದ ಆಡಳಿತ ನಡೆಸುತ್ತಿರುವ ದುರಹಂಕಾರಿ ಕಾಂಗ್ರೆಸ್ ಸರ್ಕಾರವನ್ನು ಕಿತ್ತೆಸೆಯಲು 30 ಜಿಲ್ಲೆಗಳಲ್ಲಿ ಇಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು. 2028ಕ್ಕೆ ರಾಜ್ಯದಲ್ಲಿ ಜನಪರ ಸರ್ಕಾರ ರಚಿಸುತ್ತೇವೆ' ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

'ಮುಖ್ಯಮಂತ್ರಿ ಕುರ್ಚಿಗಾಗಿ ಎರಡೂವರೆ ವರ್ಷದಿಂದ ನಡೆಯುತ್ತಿರುವ ನಾಟಕ ನೋಡುತ್ತಿದ್ದೇನೆ. ಕೋಗಿಲು ಪ್ರದೇಶದಲ್ಲಿ ಅಲ್ಪಸಂಖ್ಯಾತರನ್ನು ಬೀದಿಗೆ ತಂದರು. ಮೆಕ್ಕೆಜೋಳ, ತೊಗರಿ ಬೆಳೆದ ರೈತರು ಸಂಕಷ್ಟದಲ್ಲಿದ್ದಾರೆ. ಜನರ ಕಷ್ಟಗಳಿಗೆ ಸ್ಪಂದಿಸಲು ಇವರಿಗೆ ಸಮಯವಿಲ್ಲ' ಎಂದು ಟೀಕಿಸಿದರು.

'ದೇವೇಗೌಡರ ಮಗನಾಗಿ ಹಾಸನ ಜಿಲ್ಲೆಗೆ ಮೂರು ಸರ್ಕಾರಿ ಎಂಜಿನಿಯರಿಂಗ್ ಕಾಲೇಜು ಕೊಟ್ಟಿದ್ದೇನೆ. ದೇವರಾಜ ಅರಸು ಅವರ ದಾಖಲೆಯನ್ನು ಅಳಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ತವರಿನಲ್ಲಿ ಒಂದೇ ಒಂದು ಸರ್ಕಾರಿ ಎಂಜಿನಿಯರಿಂಗ್ ಕಾಲೇಜು ಇಲ್ಲ' ಎಂದರು.

ಬಾಲಕಿಗೆ ಹೆರಿಗೆ: ನಿರ್ಲಕ್ಷ್ಯ ತೋರಿದ ಶಿಕ್ಷಕರಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತರ ವಲಯದ ಸರ್ಕಾರಿ ಪ್ರೌಢಶಾಲೆಯೊಂದರ 16 ವರ್ಷದ ಬಾಲಕಿ ಗಂಡು ಮಗುವಿಗೆ ಜನ್ಮ ನೀಡಿದ್ದು, ಪ್ರಕರಣ ಕುರಿತು ಹಿರಿಯ ಅಧಿಕಾರಿಗಳಿಗೆ ಮಾಹಿತಿ ನೀಡದ ಮುಖ್ಯಶಿಕ್ಷಕ ಹಾಗೂ ಶಿಕ್ಷಕರ ವಿರುದ್ಧ ಶಿಸ್ತುಕ್ರಮಕ್ಕೆ ಶಿಫಾರಸು ಮಾಡಲಾಗಿದೆ.

ಬಾಲಕಿಗೆ ಹೊಟ್ಟೆನೋವು ಕಾಣಿಸಿಕೊಂಡ ನಂತರ ವೈದ್ಯರು ಪರಿಶೀಲನೆ ನಡೆಸಿದ್ದು, ಆಕೆ ಗರ್ಭಿಣಿ ಆಗಿರುವುದು ದೃಢಪಟ್ಟಿದೆ. ಬಳಿಕ, ಬಾಲಕಿಯ ತಾಯಿ ಪೊಲೀಸರಿಗೆ ದೂರು ನೀಡಿದ್ದಾರೆ. ಪೊಲೀಸರು ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು, ಬಾಲಕಿಯ ಮನೆ ಸಮೀಪ ವಾಸವಿರುವ ಖಾಸಗಿ ಕಂಪನಿಯ ಉದ್ಯೋಗಿಯನ್ನು (19) ಬಂಧಿಸಿದ್ದಾರೆ.

ಘಟನೆ ನಂತರ ಶಾಲಾ ಶಿಕ್ಷಣ ಇಲಾಖೆಯ ಅಧಿಕಾರಿಗಳು ಶಾಲೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಮೇಲಧಿಕಾರಿಗಳಿಗೆ ವರದಿ ಸಲ್ಲಿಸಿದ್ದಾರೆ. ತರಗತಿಗಳಿಗೆ ನಿಯಮಿತವಾಗಿ ಹಾಜರಾಗುತ್ತಿದ್ದರೂ ಬಾಲಕಿಯ ದೈಹಿಕ ಬದಲಾವಣೆಗಳನ್ನು ಗುರುತಿಸಲು ವಿಫಲರಾದ ಕಾರಣ ಶಾಲೆಯ ಮುಖ್ಯಶಿಕ್ಷಕ ಹಾಗೂ ಇತರೆ ಶಿಕ್ಷಕರಿಗೆ ವಿವರಣೆ ಕೇಳಿ ನೋಟಿಸ್ ನೀಡಲಾಗಿದೆ.

'ಘಟನೆ ಶಾಲೆಯಲ್ಲಿ ನಡೆದಿದ್ದಲ್ಲ. ಆರೋಪಿಗೂ ಶಾಲೆಗೂ ನೇರ ಸಂಬಂಧ ಇಲ್ಲ. ಬಾಲಕಿ 9 ತಿಂಗಳ ಗರ್ಭಿಣಿಯಾಗಿದ್ದು, ಆರೋಗ್ಯಕರ ಮಗುವಿಗೆ ಜನ್ಮ ನೀಡಿದ್ದಾಳೆ. ಆದರೆ, ಶಾಲೆಗೆ ನಿತ್ಯವೂ ಬರುತ್ತಿದ್ದ ವಿದ್ಯಾರ್ಥಿನಿಯ ದೈಹಿಕ ಬದಲಾವಣೆಗಳನ್ನು ಗಮನಿಸದಿರುವುದು ನಿರ್ಲಕ್ಷ್ಯಕ್ಕೆ ಸಮಾನ. ಹಾಗಾಗಿ, ಶಿಸ್ತುಕ್ರಮಕ್ಕೆ ಶಿಫಾರಸು ಮಾಡಲಾಗಿದೆ ಎಂದು ಶಿಕ್ಷಣ ಇಲಾಖೆಯ ಮೂಲಗಳು ಹೇಳಿವೆ.

ಘಟನೆ ನಂತರ ಎಚ್ಚೆತ್ತುಕೊಂಡ ಶಾಲಾ ಶಿಕ್ಷಣ ಇಲಾಖೆಯ ಅಧಿಕಾರಿಗಳು ಬಾಲಕಿಯರ ಆರೋಗ್ಯ, ಬೆಳವಣಿಗೆ, ವರ್ತನೆಗಳ ಮೇಲೆ ನಿಗಾವಹಿಸುವಂತೆ ಇತರೆ ಶಾಲೆಗಳಿಗೂ ಸೂಚನೆ ನೀಡಿದ್ದಾರೆ.

ವಿಐಎಸ್‌ಎಲ್ ಪುನಶ್ಚೇತನಕ್ಕೆ ₹ 5,000 ಕೋಟಿ

ಒಂದನೇ ಪುಟದಿಂದ...

ಭದ್ರಾವತಿಯಲ್ಲಿ ಶನಿವಾರ ಆರಂಭವಾದ ತರಳಬಾಳು ಹುಣ್ಣಿಮೆ ಮಹೋತ್ಸವದಲ್ಲಿ ಮಾತನಾಡಿದ ಅವರು, 'ಎರಡೂವರೆ ತಿಂಗಳಲ್ಲಿ ಕಾರ್ಖಾನೆಗೆ ದೊಡ್ಡಮಟ್ಟದ ಕಾಯಕಲ್ಪ ನೀಡಲಿದ್ದೇವೆ. ಯಾವುದೇ ಸಂಶಯ ಬೇಡ' ಎಂದು ಹೇಳಿದರು.

ವಿಐಎಸ್‌ಎಲ್ ಪುನಶ್ಚೇತನ ಕುರಿತು ಭಾರತೀಯ ಉಕ್ಕು ಪ್ರಾಧಿಕಾರ ಕೈಗೊಂಡಿರುವ ನಿರ್ಧಾರಕ್ಕೆ ಕೇಂದ್ರ ಹಣಕಾಸು ಸಚಿವರ ಸಹಿ ಮಾತ್ರ ಬಾಕಿ ಇದೆ ಎಂದರು.

'ಸಿರಿಗೆರೆ ಮಠದಿಂದ ₹5 ಕೋಟಿ': ಭದ್ರಾವತಿಯ ವಿಐಎಸ್‌ಎಲ್ ಕಾರ್ಖಾನೆಯ ಪುನಃಶ್ಚೇತನಕ್ಕೆ ಸಿರಿಗೆರೆ ಮಠದಿಂದಲೂ ₹5 ಕೋಟಿ ಕೊಡುವುದಾಗಿ ಸಿರಿಗೆರೆಯ ತರಳಬಾಳು ಮಠದ ಶಿವಾಚಾರ್ಯ ಸ್ವಾಮೀಜಿ ವಾಗ್ದಾನ ಮಾಡಿದರು.

ತರಳಬಾಳು ಹುಣ್ಣಿಮೆ ಮಹೋತ್ಸವದಲ್ಲಿ ಕಾಣಿಕೆ ಸಂಗ್ರಹವಾಗಿ ಉಳಿದ ಹಣವನ್ನು ಹಾಗೂ ಮಠದಿಂದ ಅದಕ್ಕೆ ಇನ್ನಷ್ಟು ಹಣವನ್ನು ಸೇರಿಸಿ ಕೊಡುವುದಾಗಿ ಅವರು ಹೇಳಿದರು.

ಇದೇ ವೇಳೆ, ಮುಂಬರುವ ಕೇಂದ್ರ ಬಜೆಟ್‌ನಲ್ಲಿ ಕಾರ್ಖಾನೆ ಪುನಶ್ಚೇತನಕ್ಕೆ ಅಗತ್ಯ ಹಣಕಾಸು ವ್ಯವಸ್ಥೆ ಮಾಡುವಂತೆ ಕುಮಾರಸ್ವಾಮಿಯವರಿಗೆ ಸ್ವಾಮೀಜಿ ಸಲಹೆ ನೀಡಿದರು.

₹19.46 ಕೋಟಿ ಮೌಲ್ಯದ ಆಸ್ತಿ ಮುಟ್ಟುಗೋಲು

ಒಂದನೇ ಪುಟದಿಂದ

'ಸೀಟ್ ಬ್ಲಾಕಿಂಗ್‌ನಿಂದ ₹20.20 ಕೋಟಿ ಸಂಗ್ರಹ ಮಾಡಿರುವುದಕ್ಕೆ ಸಂಬಂಧಪಟ್ಟಂತೆ ಸಂಸ್ಥೆಯ ಪ್ರತಿನಿಧಿಗಳು ಮತ್ತು ಮಧ್ಯವರ್ತಿಗಳ ವಾಟ್ಸ್‌ಆ್ಯಪ್ ಚಾಟ್‌ಗಳು, ಡೈರಿ ಮತ್ತು ಲೆಕ್ಕದ ಪುಸ್ತಕಗಳಲ್ಲಿ ಸಾಕ್ಷ್ಯಗಳು ಪತ್ತೆಯಾಗಿದ್ದವು. ಆದರೆ ಸಂಸ್ಥೆಯ ಲೆಕ್ಕಪತ್ರಗಳಲ್ಲಿ ಈ ಹಣವನ್ನು ತೋರಿಸಿರಲಿಲ್ಲ' ಎಂದು ಇ.ಡಿ ಮಾಹಿತಿ ನೀಡಿದೆ.

'ಶೋಧದ ವೇಳೆ ₹1.86 ಕೋಟಿ ನಗದು ಪತ್ತೆಯಾಗಿತ್ತು. ಅದಕ್ಕೂ ಲೆಕ್ಕಪತ್ರವಿರಲಿಲ್ಲ. ಸೀಟ್ ಬ್ಲಾಕಿಂಗ್ ಮೂಲಕ, ಸೀಟ್‌ಗಳನ್ನು ಮಾರಾಟ ಮಾಡಲಾಗುತ್ತಿತ್ತು ಎಂಬುದನ್ನು ಏಜೆಂಟರು, ಮಧ್ಯವರ್ತಿಗಳು, ಕಾಲೇಜಿನ ಸಿಬ್ಬಂದಿಯು ವಿಚಾರಣೆ ವೇಳೆ ದೃಢಪಡಿಸಿದ್ದರು' ಎಂದು ಇ.ಡಿ ತಿಳಿಸಿದೆ.

'ಅಕ್ರಮವಾಗಿ ಗಳಿಸಲಾದ ಹಣವನ್ನು ಟ್ರಸ್ಟಿಗಳು ವೈಯಕ್ತಿಕ ಲಾಭಕ್ಕೆ ಬಳಸಿಕೊಂಡಿದ್ದಾರೆ ಮತ್ತು ಸ್ವತ್ತುಗಳನ್ನು ಖರೀದಿಸಿದ್ದಾರೆ. ಹೀಗಾಗಿ ಅವರ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ತನಿಖೆ ಮುಂದುವರಿದಿದೆ' ಎಂದು ವಿವರಿಸಿದೆ.

ಪಿಎಸ್‌ಐ ನೇಮಕಾತಿ ಹಗರಣ: ₹1.53 ಕೋಟಿ ಇ.ಡಿ ತೆಕ್ಕೆಗೆ

ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣದಲ್ಲಿ ಐಪಿಎಸ್ ಅಧಿಕಾರಿ ಅಮ್ರಿತ್ ಪೌಲ್ ಮತ್ತು ಹೆಡ್ ಕಾನ್‌ಸ್ಟೆಬಲ್ ಎಚ್.ಶ್ರೀಧರ್ ಅವರಿಗೆ ಸೇರಿದ ₹1.53 ಕೋಟಿ ಮೌಲ್ಯದ ಸ್ಥಿರಾಸ್ತಿಗಳನ್ನು ಇ.ಡಿ ಮುಟ್ಟುಗೋಲು ಹಾಕಿಕೊಂಡಿದೆ.

'2021-22ರಲ್ಲಿ ಕರ್ನಾಟಕ ಪೊಲೀಸ್ ನೇಮಕಾತಿ ಘಟಕವು 545 ಪಿಎಸ್‌ಐ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ನಡೆಸಿತ್ತು. ಅಮ್ರಿತ್ ಪೌಲ್ ಅವರು ಆಗ ಪೊಲೀಸ್ ನೇಮಕಾತಿ ವಿಭಾಗದ ಎಡಿಜಿಪಿ ಆಗಿದ್ದರು. ಸಂಭಾವ್ಯರ ಪಟ್ಟಿ ಪ್ರಕಟವಾದ ನಂತರ ಅಭ್ಯರ್ಥಿಗಳ ಒಎಂಆರ್ ಶೀಟ್‌ಗಳನ್ನು ತಿದ್ದಲಾಗಿತ್ತು' ಎಂದು ಇ.ಡಿ ತಿಳಿಸಿದೆ.

'ಎಡಿಜಿಪಿ ಕಚೇರಿಯಲ್ಲಿ ಒಎಂಆರ್ ಶೀಟ್‌ಗಳನ್ನು ಇರಿಸಲಾಗಿದ್ದ ಅಲ್ಮೆರಾದ ಕೀಗಳನ್ನು ಪೌಲ್ ಅವರು ಡಿವೈಎಸ್‌ಪಿ ಶಾಂತಕುಮಾರ್ ಅವರಿಗೆ ನೀಡಿದ್ದರು. ಶಾಂತಕುಮಾರ್ ಮತ್ತು ಎಚ್.ಶ್ರೀಧರ್ ಅವರು ಒಎಂಆರ್ ಶೀಟ್‌ಗಳನ್ನು ತಿದ್ದಿದ್ದರು. ಇದಕ್ಕಾಗಿ ₹30 ಲಕ್ಷದಿಂದ ₹70 ಲಕ್ಷದವರೆಗೆ ಲಂಚ ಪಡೆದಿದ್ದರು' ಎಂದು ಇ.ಡಿ ಮಾಹಿತಿ ನೀಡಿದೆ.

'ಆರೋಪಿಗಳು ಈ ಲಂಚದ ಹಣವನ್ನು ಕೈಸಾಲ ಎಂದು ತಮ್ಮ ಡೈರಿ ಮತ್ತು ಲೆಕ್ಕಪತ್ರಗಳಲ್ಲಿ ನಮೂದಿಸಿದ್ದರು. ಮನೆಗಳನ್ನು ನಿರ್ಮಿಸಲು ಈ ಹಣ ಬಳಸಿಕೊಂಡಿದ್ದರು. ಆ ಮನೆಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ' ಎಂದು ವಿವರಿಸಿದೆ.

ಲಕ್ಕುಂಡಿ: 7 ಹೆಡೆಯ ನಾಗರ ಕಲ್ಲು ಪತ್ತೆ

ಪ್ರಜಾವಾಣಿ ವಾರ್ತೆ

ಗದಗ: ಲಕ್ಕುಂಡಿ ಗ್ರಾಮದ ಕೋಟೆ ವೀರಭದ್ರೇಶ್ವರ ದೇವಸ್ಥಾನದ ಆವರಣದಲ್ಲಿ ಒಂಬತ್ತನೇ ದಿನವೂ ಉತ್ಖನನ ಮುಂದುವರೆದಿದ್ದು, ದಿನದ ಅಂತ್ಯಕ್ಕೆ ಮೂಳೆ ಚೂರುಗಳಷ್ಟೇ ಪತ್ತೆಯಾದವು.

'ಲಕ್ಕುಂಡಿ ಗ್ರಾಮದ ಹೊರವಲಯದಲ್ಲಿ ಷಣ್ಮುಖಪ್ಪ ರವದಿ ಅವರ ಜಮೀನಿನಲ್ಲಿ ಏಳು ಹೆಡೆಯ ಹಾವಿನ ಶಿಲ್ಪ ಪತ್ತೆಯಾಗಿದೆ. ಅದರ ಅಕ್ಕಪಕ್ಕ ಎರಡು ಹೆಡೆಯುಳ್ಳ ಏಳು ಹಾವಿನ ಶಿಲೆಗಳು ಸಿಕ್ಕಿವೆ. ಏಳು ಹೆಡೆಯ ಸರ್ಪದ ಕೆತ್ತನೆ ಇರುವ ಶಿಲ್ಪ ವಿಜಯನಗರ ಅರಸರ ಕಾಲದ್ದು ಇರಬಹುದೆಂದು ತಜ್ಞರು ಅಂದಾಜಿಸಿದ್ದಾರೆ' ಎಂದು ಲಕ್ಕುಂಡಿ ಪಾರಂಪರಿಕ ಅಭಿವೃದ್ಧಿ ಪ್ರಾಧಿಕಾರದ ರಾಜ್ಯ ಸದಸ್ಯ ಸಿದ್ದು ಪಾಟೀಲ ತಿಳಿಸಿದ್ದಾರೆ.

ಗ್ರಾಮದ ಕಲ್ಲಯ್ಯ ಬಳಗಾನೂರ ಹಾಗೂ ಷಣ್ಮುಖಪ್ಪ ರವದಿ ಅವರ ಜಮೀನಿನ ಬಾವಿ, ತೋಟದ ಮನೆಯ ಗೋಡೆಗಳಲ್ಲಿ ಕೂಡ ಇತಿಹಾಸದ ಕುರುಹುಗಳು ಪತ್ತೆಯಾಗಿವೆ. ನೂರಾರು ವರ್ಷಗಳ ಹಿಂದೆಯೇ ನಿರ್ಮಾಣವಾದ ಬಾವಿ, ಮನೆಯಲ್ಲಿ ಐತಿಹಾಸಿಕ ಕಲ್ಲು, ಶಿಲೆಗಳನ್ನು ಬಳಸಿಕೊಳ್ಳಲಾಗಿದೆ.

'ಇತಿಹಾಸಕ್ಕೆ ಸಂಬಂಧಿಸಿದ ಯಾವುದೇ ಕುರುಹುಗಳು ಇದ್ದರೂ ಅದನ್ನು ಸರ್ಕಾರ ತೆಗೆದುಕೊಂಡು ಹೋಗಲಿ. ಅದಕ್ಕೆ ನಮ್ಮ ಆಕ್ಷೇಪ ಇಲ್ಲ' ಎಂದು ಕಲ್ಲಯ್ಯ ಬಳಗಾನೂರ ತಿಳಿಸಿದ್ದಾರೆ.


ಲಕ್ಕುಂಡಿ ಗ್ರಾಮದ ಷಣ್ಮುಖಪ್ಪ ರವದಿ ಅವರ ಜಮೀನಿನಲ್ಲಿ ಪತ್ತೆಯಾದ ಏಳು ಹೆಡೆಯ ನಾಗರ ಶಿಲ್ಪ

ಕೋಟಕ್ ಮಹೀಂದ್ರ ಬ್ಯಾಂಕ್ ಲಾಭ ಹೆಚ್ಚಳ

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ಕೋಟಕ್ ಮಹೀಂದ್ರ ಬ್ಯಾಂಕ್ ₹3,446 ಕೋಟಿ ನಿವ್ವಳ ಲಾಭ ಗಳಿಸಿದೆ.

ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ಬ್ಯಾಂಕ್ ₹3,305 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಲಾಭದ ಪ್ರಮಾಣವು ಶೇ 4ರಷ್ಟು ಹೆಚ್ಚಳವಾಗಿದೆ ಎಂದು ಬ್ಯಾಂಕ್ ಷೇರುಪೇಟೆಗೆ ತಿಳಿಸಿದೆ. ಬ್ಯಾಂಕ್‌ನ ಒಟ್ಟು ವರಮಾನವು ₹16,050 ಕೋಟಿಯಿಂದ ₹16,741 ಕೋಟಿಗೆ ಹೆಚ್ಚಳವಾಗಿದೆ.

ಮುಂಬೈ ಖಾದ್ಯ ತೈಲ (10 ಕೆ.ಜಿಗೆ)	
ಶೇಂಗಾ (ರಿಫೈನ್ಡ್)	₹1680 (1670)
ಸೋಯಾ (ರಿಫೈನ್ಡ್)	₹1385 (1380)
ಸೂರ್ಯಕಾಂತಿ (ರಿಫೈನ್ಡ್)	₹1625 (1620)
ಪಾಮೋಲಿನ್	₹1305 (1300)

ಮೊಟ್ಟೆ ಧಾರಣೆ	
ಬೆಂಗಳೂರು: 100 ಕ್ಕೆ	₹560
12 ಕ್ಕೆ	₹75
ಮೈಸೂರು: 100 ಕ್ಕೆ	₹560

ರಾಮನಗರ ರೇಷ್ಮೆಗೂಡು	
ಮಿಶ್ರತಳಿ (ಕೆ.ಜಿ)	₹400–758
ದ್ವಿತಳಿ (ಕೆ.ಜಿ)	₹211–923

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹195
ಆರ್‌ಎಸ್‌ಎಸ್-5	₹190
ಗಿಡ್ ಲಾಟ್	₹178

ಮುದ್ರೆಮನೆ ಕಾಫಿ	
ಎಪಿ	₹26350
ಎಸಿ	₹14280
ಆರ್‌ಪಿ	₹17750
ಆರ್‌ಸಿ	₹10370

ಹಟ್ಟಿ: ಚಿನ್ನ ಉತ್ಪಾದನೆ ಕುಸಿತ

ಡಿಸೆಂಬರ್ ಅಂತ್ಯಕ್ಕೆ 901 ಕೆ.ಜಿ ಚಿನ್ನ, 4.39 ಲಕ್ಷ ಟನ್ ಅದಿರು ಉತ್ಪಾದನೆ

ಪ್ರಜಾವಾಣಿ ವಾರ್ತೆ



ಹಟ್ಟಿ ಚಿನ್ನದ ಗಣಿ (ರಾಯಚೂರು ಜಿಲ್ಲೆ): ಹಟ್ಟಿ ಚಿನ್ನದ ಗಣಿ ಕಂಪನಿಯಲ್ಲಿ ಚಿನ್ನದ ಉತ್ಪಾದನೆ ಕುಸಿತವಾಗಿದ್ದು, 2025ರ ಡಿಸೆಂಬರ್ ಅಂತ್ಯಕ್ಕೆ ಉತ್ಪಾದನೆಯ ಗುರಿ ಆಧಾರದಲ್ಲಿ 285.5 ಕೆ.ಜಿ. ಕೊರತೆಯಾಗಿದೆ.

2025ರ ಡಿಸೆಂಬರ್ ಅಂತ್ಯಕ್ಕೆ 1,187 ಕೆ.ಜಿ ಚಿನ್ನ ಉತ್ಪಾದಿಸುವ ಗುರಿ ಹೊಂದಲಾಗಿತ್ತು. ಆದರೆ, 901 ಕೆ.ಜಿ ಮಾತ್ರ ಉತ್ಪಾದಿಸಲಾಗಿದೆ. 5.70 ಲಕ್ಷ ಟನ್ ಅದಿರು ಉತ್ಪಾದನೆ ಗುರಿ ಹೊಂದಲಾಗಿತ್ತು. ಆದರೆ, 4.39 ಲಕ್ಷ ಟನ್ ಉತ್ಪಾದಿಸಲಾಗಿದ್ದು, 1.30 ಲಕ್ಷ ಟನ್ ಅದಿರು ಉತ್ಪಾದನೆ ಕೊರತೆಯಾಗಿದೆ.

ನ್ಯೂ ಸರ್ಕ್ಯುಲರ್ ಶಾಫ್ಟ್ ಗಣಿ ಆರಂಭಗೊಂಡರೆ ಪ್ರತಿ ದಿನ 3 ಸಾವಿರ ಟನ್ ಅದಿರು ಉತ್ಪಾದನೆ, ವಾರ್ಷಿಕ 3 ಟನ್‌ವರೆಗೆ ಚಿನ್ನ ಉತ್ಪಾದನೆಯಾಗಲಿದೆ ಎಂದು ಗಣಿ ಆಡಳಿತ ಮಂಡಳಿ ಈ ಹಿಂದೆ ಹೇಳಿತ್ತು. ಈಗಾಗಲೇ ನ್ಯೂ ಸರ್ಕ್ಯುಲರ್ ಶಾಫ್ಟ್ ಗಣಿ ಆರಂಭಗೊಂಡಿದೆ. ಆದರೆ, ಅದಿರು ಹಾಗೂ ಚಿನ್ನ ಉತ್ಪಾದನೆಯಲ್ಲಿ ವ್ಯತ್ಯಾಸವೇನೂ ಕಾಣಿಸಿಲ್ಲ.

ಸದ್ಯ ಊಟಿ ಚಿನ್ನದ ಗಣಿ, ಹೀರಾ ಬುದ್ದಿನಿ ಗಣಿಯಿಂದಲೂ ಹೆಚ್ಚಿನ ಅದಿರು ತರಿಸಲಾಗುತ್ತಿದೆ.

2024-25ನೇ ಸಾಲಿನಲ್ಲಿ 6 ಲಕ್ಷ ಟನ್ ಅದಿರು ಸಂಸ್ಕರಿಸಿ, 1,600 ಕೆ.ಜಿ. ಚಿನ್ನ ಉತ್ಪಾದನೆ ಮಾಡಲಾಗಿತ್ತು. ಆಧುನಿಕ ತಂತ್ರಜ್ಞಾನ ಬಳಕೆ ಮಾಡಿಕೊಂಡಿದ್ದರೂ ಚಿನ್ನದ ಉತ್ಪಾದನೆ ಕುಸಿತದಿಂದ ಗಣಿ ಕಂಪನಿ ಆದಾಯ ಇಳಿಕೆಯಾಗಿದೆ. ಚಿನ್ನ ಉತ್ಪಾದನೆ ಹೆಚ್ಚಿಸಬೇಕಾಗಿರುವುದರ ಜೊತೆಗೆ ದಿಢೀರನೆ ಚಿನ್ನದ ಬೆಲೆ ಕುಸಿತವಾದರೆ ಗಣಿ ಕಂಪನಿ ನಷ್ಟಕ್ಕೊಳಗಾಗುವ ಸಾಧ್ಯತೆ ಇದೆ ಎಂದು ವಿಶ್ಲೇಷಿಸಲಾಗುತ್ತಿದೆ.

> ಚಿನ್ನ ಉತ್ಪಾದನೆಯಲ್ಲಿ ಕುಸಿಯುವುದರ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆಯಲಾಗಿದೆ. ಉತ್ಪಾದನೆ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುವುದು
>
> **ಜಿ.ಟಿ. ಪಾಟೀಲ**, ಅಧ್ಯಕ್ಷ, ಹಟ್ಟಿ ಚಿನ್ನದ ಗಣಿ ಕಂಪನಿ ನಿಗಮ

ಅದಿರು ಸಂಸ್ಕರಣಾ ಸಾಮರ್ಥ್ಯವನ್ನು ಹೆಚ್ಚಿಸಲು 2x50 ಟಿಪಿಎಚ್ ಬಾಲ್ ಮಿಲ್ ಅದಿರು ಸಂಸ್ಕರಣಾ ಘಟಕವನ್ನು ಸ್ಥಾಪನೆ ಮಾಡಿ, ನಂತರ ಆಧುನಿಕ ಸೈಂಟಿಫಿಕ್ ತಂತ್ರಜ್ಞಾನ ಅಳವಡಿಸಿಕೊಳ್ಳಲಾಗಿತ್ತು. ಹೀಗಿದ್ದರೂ ಚಿನ್ನ ಉತ್ಪಾದನೆ ಕುಸಿಯುತ್ತಿದ್ದು ಹೇಗೆ ಎಂಬ ಪ್ರಶ್ನೆ ಉದ್ಭವಿಸಿದೆ.

ಅದಿರು ಹಾಗೂ ಚಿನ್ನ ಉತ್ಪಾದನೆಯಲ್ಲಿ ಹಿನ್ನಡೆ ಅನುಭವಿಸಿದ ಬಗ್ಗೆ ಪ್ರತಿಕ್ರಿಯೆ ಪಡೆಯಲು ಗಣಿ ಆಡಳಿತವರ್ಗದ ಉನ್ನತ ಅಧಿಕಾರಿಗಳನ್ನು ಸಂಪರ್ಕಿಸಿದರೆ ಪ್ರತಿಕ್ರಿಯೆಗೆ ನಿರಾಕರಿಸಿದರು.

ಕೈದಿಗಳ ವಿಶೇಷ ಸೌಲಭ್ಯಕ್ಕೆ ಕತ್ತರಿ

ಹೊಸ ಸುತ್ತೋಲೆ ಹೊರಡಿಸಿದ ಕಾರಾಗೃಹ, ಸುಧಾರಣಾ ಸೇವೆ ಇಲಾಖೆ ಡಿಜಿಪಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಡಿಜಿಪಿ ಅಲೋಕ್ ಕುಮಾರ್ ಸುತ್ತೋಲೆ
- ಆಹಾರ, ಬಟ್ಟೆ, ಹಾಸಿಗೆ ಸರಬರಾಜು ನಿಯಂತ್ರಣಕ್ಕೆ ಕ್ರಮ



ಬೆಂಗಳೂರು: ರಾಜ್ಯದ ಜೈಲುಗಳಲ್ಲಿನ ವಿಚಾರಣಾಧೀನ ಕೈದಿಗಳು ಹಾಗೂ ಇತರೆ ಕೈದಿಗಳಿಗೆ ಹೆಚ್ಚುವರಿ ಸೌಲಭ್ಯಗಳನ್ನು ನಿಯಂತ್ರಿಸುವಂತೆ ಕಾರಾಗೃಹ ಮತ್ತು ಸುಧಾರಣಾ ಸೇವೆ ಇಲಾಖೆ ಡಿಜಿಪಿ ಅಲೋಕ್ ಕುಮಾರ್ ಸೂಚಿಸಿದ್ದಾರೆ.

ಈ ಬಗ್ಗೆ ಸುತ್ತೋಲೆ ಹೊರಡಿಸಿರುವ ಅವರು, ಆಹಾರ, ಬಟ್ಟೆ, ಹಾಸಿಗೆ ಸರಬರಾಜು ನಿಯಂತ್ರಣಕ್ಕೆ ಕ್ರಮ ವಹಿಸುವಂತೆ ಜೈಲಧಿಕಾರಿಗಳಿಗೆ ತಿಳಿಸಿದ್ದಾರೆ.

ಸುತ್ತೋಲೆಯಲ್ಲಿ ಏನಿದೆ?: ರಾಜ್ಯದ ಎಲ್ಲ ಜೈಲುಗಳಲ್ಲಿ ಹೊರಗಿನಿಂದ ಆಹಾರವನ್ನು ಅನುಮತಿಸುವಂತಿಲ್ಲ. ಬೆಂಗಳೂರು ಜೈಲಿನ ಆಹಾರವನ್ನು ಎಫ್‌ಎಸ್‌ಎಸ್‌ಎಐ ಪ್ರಮಾಣೀಕರಿಸಿದೆ ಮತ್ತು ಉತ್ತಮ ಗುಣಮಟ್ಟದ್ದಾಗಿದೆ. ಆದ್ದರಿಂದ ಹೊರಗಿನಿಂದ ಬೇಯಿಸಿದ ಆಹಾರಕ್ಕೆ ಅವಕಾಶ ನೀಡುವುದಿಲ್ಲ ಎಂದು ಸ್ಪಷ್ಟವಾಗಿ ತಿಳಿಸಲಾಗಿದೆ.

ಜೈಲಿನ ನಿಯಮಾವಳಿ ಪ್ರಕಾರ ಆಹಾರ, ಬಟ್ಟೆ, ಹಾಸಿಗೆ ನೀಡಲಾಗುತ್ತದೆ. ವಿಚಾರಣಾಧೀನ ಕೈದಿಗಳು ಜೈಲಿನಲ್ಲಿ ಕೊಡುವ ಹೊದಿಕೆ ಬಳಸಬೇಕು. ಹೆಚ್ಚುವರಿಯಾಗಿ ಒಂದು ಹೊದಿಕೆ ನೀಡಲಾಗುತ್ತದೆ. ಹಾಸಿಗೆಯ ಸೌಲಭ್ಯ ಇರುವುದಿಲ್ಲ. ಇನ್ನು ಸಂದರ್ಶನ ವೇಳೆ ಕೈದಿಗಳಿಗೆ ಖಾಸಗಿ ವ್ಯಕ್ತಿಗಳಿಂದ ನಿರ್ದಿಷ್ಟ ಪ್ರಮಾಣದಲ್ಲಿ ಆಹಾರ ಪೂರೈಕೆಗೆ ಸೂಚಿಸಲಾಗಿದೆ.

ಬೇಯಿಸದ ಮತ್ತು ಪ್ಯಾಕ್ ಮಾಡಿರುವ ಆಹಾರ ನೀಡಲು ಅವಕಾಶವಿದ್ದು, ಬಾಳೆಹಣ್ಣು, ಸೇಬು, ಸೀಬೆಹಣ್ಣು, ಸಪೋಟ ಸೇರಿ 2 ಕೆ.ಜಿ. ಮೀರದಂತೆ ನೀಡಬಹುದು. ಡ್ರೈಫ್ರೂಟ್, ಬೇಕರಿ ತಿನಿಸು ಸೇರಿ 500 ಗ್ರಾಂ ಮೀರದಂತಿಲ್ಲ. ವಿಚಾರಣಾಧೀನ ಕೈದಿಗಳಿಗೆ ಎರಡು ಜತೆ ಬಟ್ಟೆ, ಎರಡು ಒಳ ಉಡುಪು ನೀಡಬಹುದು. ಈ ರೀತಿಯ ಆಹಾರ ಬರುವಾಗ ಕಡ್ಡಾಯವಾಗಿ ಜೈಲಿನಲ್ಲಿ ದೈಹಿಕ ತಪಾಸಣೆ, ಭದ್ರತಾ ತಪಾಸಣೆ ನಡೆಸಬೇಕು ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ಕೈದಿಗಳು ಮತ್ತು ಶಿಕ್ಷೆಗೊಳಗಾಗದ ಕ್ರಿಮಿನಲ್ (ವಿಚಾರಣೆಯಲ್ಲಿರುವ) ಕೈದಿಗಳು ಸೇರಿ ಎಲ್ಲಾ ಕೈದಿಗಳಿಗೆ ಕರ್ನಾಟಕ ಕಾರಾಗೃಹ ಕಾಯ್ದೆ, 1963, ಕರ್ನಾಟಕ ಕಾರಾಗೃಹ ನಿಯಮಗಳು, 1974 ಮತ್ತು ಕರ್ನಾಟಕ ಕಾರಾಗೃಹ ಮತ್ತು ತಿದ್ದುಪಡಿ ಸೇವೆಗಳ ಕೈಪಿಡಿ, 2021 ರ ಪ್ರಕಾರ ಕಾರಾಗೃಹ ಮತ್ತು ತಿದ್ದುಪಡಿ ಸೇವೆಗಳ ಇಲಾಖೆಯು ನಿರ್ದಿಷ್ಟ ಸಂಖ್ಯೆ ಆಹಾರ, ಬಟ್ಟೆ ಮತ್ತು ಹಾಸಿಗೆಗಳನ್ನು ಒದಗಿಸುತ್ತಿದೆ.

ಕಾರಾಗೃಹ ಡಿಜಿಪಿ ಅವರ ಹೊಸ ಸುತ್ತೋಲೆಯಿಂದ, ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ಜೈಲಿನಲ್ಲಿರುವ ದರ್ಶನ್ ಹೆಚ್ಚುವರಿ ಬ್ಲಾಂಕೆಟ್ ಸೌಲಭ್ಯಕ್ಕೆ ಕುತ್ತು ಎದುರಾಗಿದೆ. ಪ್ರಕರಣದ ಆರೋಪಿ ಪವಿತ್ರಾ ಗೌಡ ಮತ್ತು ಇತರ ಆರೋಪಿಗಳು ಮನೆ ಊಟಕ್ಕೆ ಮನವಿ ಮಾಡಿದ್ದರು. ಈ ಅರ್ಜಿ ವಿಚಾರಣೆ ನಡೆಸಿದ್ದ ಹೈಕೋರ್ಟ್, ರಾಜ್ಯದ ಕಾರಾಗೃಹಗಳಲ್ಲಿರುವ ಕೈದಿಗಳಿಗೆ ಮನೆ ಊಟ ಹಾಗೂ ಇತರ ಅಗತ್ಯ ವಸ್ತುಗಳನ್ನು ಪೂರೈಸುವ ಕುರಿತು ಮಾರ್ಗಸೂಚಿಗಳನ್ನು ರೂಪಿಸಬೇಕು ಎಂದು ಮೌಖಿಕವಾಗಿ ಹೇಳಿತ್ತು. ಅದರ ಬೆನ್ನಲ್ಲೇ ಆಹಾರ ಮತ್ತು ಹೊದಿಕೆ ಬಗ್ಗೆ ಅಲೋಕ್ ಕುಮಾರ್ ಮಾರ್ಗಸೂಚಿ ಹೊರಡಿಸಿದ್ದಾರೆ.

ಕರೂರ್ ವೈಶ್ಯ ಬ್ಯಾಂಕ್ ಲಾಭ ಏರಿಕೆ

ಮುಂಬೈ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ಕರೂರ್ ವೈಶ್ಯ ಬ್ಯಾಂಕ್‌ನ ನಿವ್ವಳ ಲಾಭದಲ್ಲಿ ಶೇ 39ರಷ್ಟು ಹೆಚ್ಚಳವಾಗಿದೆ.

ಕಳೆದ ಆರ್ಥಿಕ ವರ್ಷದ ಇದೇ ತ್ರೈಮಾಸಿಕದಲ್ಲಿ ಬ್ಯಾಂಕ್ ₹496 ಕೋಟಿ ಲಾಭ ಗಳಿಸಿತ್ತು. ಈ ಬಾರಿ ₹690 ಕೋಟಿಗೆ ಹೆಚ್ಚಳವಾಗಿದೆ ಎಂದು ಬ್ಯಾಂಕ್ ತಿಳಿಸಿದೆ.

ನಿವ್ವಳ ಬಡ್ಡಿ ವರಮಾನ ಶೇ 14ರಷ್ಟು ಹೆಚ್ಚಳವಾಗಿದ್ದು, ₹1,239 ಕೋಟಿಯಾಗಿದೆ. ವಸೂಲಾಗದ ಸಾಲದ ಪ್ರಮಾಣ ಶೇ 0.71ರಿಂದ ಶೇ 0.12ಕ್ಕೆ ಇಳಿದಿದೆ.

ಬ್ಯಾಂಕ್‌ನ ಬಂಡವಾಳ ಮೀಸಲು ಅನುಪಾತ (ಸಿಎಆರ್) ಶೇ 16.05ರಷ್ಟಾಗಿದೆ ಎಂದು ಬ್ಯಾಂಕ್ ತಿಳಿಸಿದೆ.

ಬ್ಯಾಂಕ್‌ನ ಸಿಇಒ ಮತ್ತು ವ್ಯವಸ್ಥಾಪಕ ನಿರ್ದೇಶಕ ಬಿ. ರಮೇಶ್ ಬಾಬು ಅವರ ಅಧಿಕಾರಾವಧಿ ಈ ವರ್ಷದ ಜುಲೈ 28ಕ್ಕೆ ಕೊನೆಯಾಗುತ್ತಿದ್ದು, ಬ್ಯಾಂಕ್‌ನ ಆಡಳಿತ ಮಂಡಳಿಯು ಇವರ ಅಧಿಕಾರಾವಧಿಯನ್ನು ಎರಡು ವರ್ಷ ವಿಸ್ತರಿಸಿದೆ.

ಜಿಮೇಲ್, ಫೇಸ್‌ಬುಕ್ ವಿವರ ಸೋರಿಕೆ

ನವದೆಹಲಿ (ಪಿಟಿಐ): 14.90 ಕೋಟಿಗಿಂತ ಹೆಚ್ಚಿನ ಜನರ ಜಿಮೇಲ್, 'ಇನ್‌ಸ್ಟಾಗ್ರಾಂ, ಫೇಸ್‌ಬುಕ್, ನೆಟ್‌ಫ್ಲಿಕ್ಸ್ ಪಾಸ್‌ವರ್ಡ್, ಯೂಸರ್‌ನೇಮ್‌ಗಳು ಸೋರಿಕೆ ಆಗಿವೆ ಎಂದು 'ಎಕ್ಸ್‌ಪ್ರೆಸ್‌ವಿಪಿಎನ್' ಪ್ರಕಟಿಸಿರುವ ವರದಿಯೊಂದರಲ್ಲಿ ಆರೋಪಿಸಲಾಗಿದೆ.

ಸೈಬರ್ ಭದ್ರತೆ ಸಂಶೋಧಕ ಜೆರೆಮಿಯಾ ಫೌಲರ್ ಅವರು ಪ್ರಕಟಿಸಿರುವ ವರದಿಯಲ್ಲಿ ಈ ವಿಷಯ ಉಲ್ಲೇಖವಾಗಿದೆ. ಜಿಮೇಲ್‌ನ 4.8 ಕೋಟಿ ಖಾತೆಗಳು, 40 ಲಕ್ಷ ಯಾಹೂ ಖಾತೆಗಳು, 1.7 ಕೋಟಿ ಫೇಸ್‌ಬುಕ್ ಖಾತೆಗಳು, 65 ಲಕ್ಷ 'ಇನ್‌ಸ್ಟಾಗ್ರಾಂ ಖಾತೆಗಳು, 34 ಲಕ್ಷ ನೆಟ್‌ಫ್ಲಿಕ್ಸ್ ಖಾತೆಗಳು, 15 ಲಕ್ಷ ಟಿಕ್‌ಟಾಕ್ ಖಾತೆಗಳ ವಿವರ ಸೋರಿಕೆ ಆಗಿದೆ ಎಂದು ವರದಿಯಲ್ಲಿ ಹೇಳಲಾಗಿದೆ.

ಈ ವಿಚಾರವಾಗಿ ಪ್ರಮುಖ ಕಂಪನಿಗಳಿಂದ ಪ್ರತಿಕ್ರಿಯೆ ಲಭ್ಯವಾಗಿಲ್ಲ. ಲಾಗಿನ್ ವಿವರಗಳು ಇರುವ ದತ್ತಾಂಶವು ಎಲ್ಲರಿಗೂ ಲಭ್ಯವಾಗುವಂತೆ ಇದೆ ಎಂದು ಫೌಲರ್ ಅವರು ವರದಿಯಲ್ಲಿ ಹೇಳಿದ್ದಾರೆ.

ಮುಂಬೈ ಧಾರಣೆ (ಶೇಂಗಾ)	
24-01-2026	
ಜಾವಾ 70/80(ಹೊಸ)	11400-11500
ಜಾವಾ 80/90(ಹೊಸ)	10700-10800
ದಪ್ಪ ಮಧ್ಯಪ್ರದೇಶ (ಹೊಸ)	8400-8500
ದಪ್ಪ ಗುಜರಾತ್ (ಹೊಸ)	9700-9800
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1690 (1680)
ಒಂದು ವಾರದ ಡೆಲಿವರಿ	1685 (1675)
ಪಾಮ್ ವಾರದ ಡೆಲಿವರಿ	1303 (1298)
ಸೂರ್ಯಕಾಂತಿ ಎಣ್ಣೆ ಕಚ್ಚಾ	1525 (1520)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿ)	
ಅಪರಂಜಿ ಚಿನ್ನ 10 ಗ್ರಾಂ	1,57,500 (1,53,500)
ಬೆಳ್ಳಿ ಕೆ.ಜಿಗೆ	3,30,000 (3,11,500)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

'ಎ.ಐ ನ್ಯಾಯಾಂಗಕ್ಕೆ ಪರ್ಯಾಯವಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೃತಕ ಬುದ್ಧಿಮತ್ತೆ (ಎ.ಐ) ತಂತ್ರಜ್ಞಾನವು ನ್ಯಾಯಾಲಯಗಳ ಅಥವಾ ವಕೀಲರಿಗೆ ಪರ್ಯಾಯವಲ್ಲ. ಹಾಗೆಂದು ಅದನ್ನು ನಿರ್ಲಕ್ಷಿಸಲೂ ಆಗದು. ಆದರೆ, ಅದರ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳುವ ಕೌಶಲ ರೂಢಿಸಿಕೊಳ್ಳುವುದು ಇಂದಿನ ಅಗತ್ಯವಾಗಿದೆ' ಎಂದು ಹೈಕೋರ್ಟ್ ನ್ಯಾಯಮೂರ್ತಿ ಸಿ.ಎಂ.ಜೋಶಿ ಅಭಿಪ್ರಾಯಪಟ್ಟರು.

ನ್ಯಾ.ಜೋಶಿ ಅವರು ನಿವೃತ್ತರಾಗುತ್ತಿರುವ ಹಿನ್ನೆಲೆಯಲ್ಲಿ ರಾಜ್ಯ ವಕೀಲರ ಪರಿಷತ್ ವತಿಯಿಂದ ಹೈಕೋರ್ಟ್‌ನ ಕೋರ್ಟ್ ಹಾಲ್ 1 ರಲ್ಲಿ ಆಯೋಜಿಸಿದ್ದ ಬೀಳ್ಕೊಡುಗೆ ಸಮಾರಂಭದಲ್ಲಿ ಅವರು ಮಾತನಾಡಿದರು.

'ಕಾನೂನು ಸಮುದಾಯ ಕಾಲಕಾಲಕ್ಕೆ ಬದಲಾಗುತ್ತಿರುವ ತಾಂತ್ರಿಕ ಪ್ರಗತಿಯೊಂದಿಗೆ ಹೆಜ್ಜೆ ಹಾಕುತ್ತಲೇ ಇದೆ. ಈ ಹಿನ್ನೆಲೆಯಲ್ಲಿ ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಬಳಸಲು ಅಗತ್ಯವಾದ ಕೌಶಲ ಸಜ್ಜುಗೊಳಿಸಿಕೊಳ್ಳುವುದು ಅತ್ಯಗತ್ಯ' ಎಂದರು.

'ದಕ್ಷತೆಯನ್ನು ಹೆಚ್ಚಿಸಲು ನ್ಯಾಯಾಲಯಗಳಲ್ಲಿ ಸಮಗ್ರ ಮಾನವ ಸಂಪನ್ಮೂಲ ನಿರ್ವಹಣಾ ನೀತಿಗಳ ತುರ್ತು ಅಗತ್ಯವಿದೆ. ನಾಗರಿಕರ ಹಕ್ಕುಗಳನ್ನು ನಿರ್ಧರಿಸುವ ಕಾರ್ಯವು ಒಂದು ಗಂಭೀರ ಜವಾಬ್ದಾರಿಯಾಗಿದೆ. ಯಾವುದೇ ನ್ಯಾಯಮೂರ್ತಿಗಳು ಇದನ್ನು ಲಘುವಾಗಿ ಪರಿಗಣಿಸಬಾರದು' ಎಂದರು.

ನಂತರ, 'ಬೆಂಗಳೂರು ವಕೀಲರ ಸಂಘ'ದ ವತಿಯಿಂದಲೂ ನ್ಯಾ.ಜೋಶಿ ಅವರನ್ನು ಅಭಿನಂದಿಸಿ ಬೀಳ್ಕೊಡಲಾಯಿತು.

ಚಂದ್ರಶೇಖರ ಮೃತ್ಯುಂಜಯ ಜೋಶಿ ಅವರು 1964ರ ಜನವರಿ 24ರಂದು ಹುಬ್ಬಳ್ಳಿಯಲ್ಲಿ ಜನಿಸಿದ್ದಾರೆ. ಹುಬ್ಬಳ್ಳಿಯಲ್ಲಿ ತಮ್ಮ ವಕೀಲಿಕೆ ಆರಂಭಿಸಿದ ಅವರು 1995ರ ಫೆಬ್ರುವರಿ 8ರಂದು ಮುನ್ಸಿಫ್ ಆಗಿ, 2009ರ ಜುಲೈ 6ರಂದು ಜಿಲ್ಲಾ ನ್ಯಾಯಾಧೀಶರಾಗಿ ಮತ್ತು 2022ರ ಆಗಸ್ಟ್ 16ರಂದು ಹೈಕೋರ್ಟ್ ನ್ಯಾಯಮೂರ್ತಿಯಾಗಿ ನೇಮಕಗೊಂಡಿದ್ದರು. ಹೈಕೋರ್ಟ್ ಕಂಪ್ಯೂಟರ್ ವಿಭಾಗದ ರಿಜಿಸ್ಟ್ರಾರ್ ಆಗಿಯೂ ಅವರು ಕಾರ್ಯನಿರ್ವಹಿಸಿದ್ದಾರೆ.

ಸುಂಕ ತೆರವಿಗೆ 'ಮಾರ್ಗ'

ಒಂದನೇ ಪುಟದಿಂದ...

ಭಾರತ ಮತ್ತು ಐರೋಪ್ಯ ಒಕ್ಕೂಟ ನಡುವಿನ ಮುಕ್ತ ವ್ಯಾಪಾರ ಒಪ್ಪಂದವು ಅಂತಿಮ ಹಂತಕ್ಕೆ ಬಂದಿದೆ ಎಂದು ವರದಿಯಾಗಿದೆ.

ಉಕ್ರೇನ್ ಮೇಲೆ ರಷ್ಯಾ ಆಕ್ರಮಣ ಆರಂಭವಾದ ನಂತರದಲ್ಲಿ ಭಾರತವು ರಷ್ಯಾದಿಂದ ಕಚ್ಚಾ ತೈಲ ಆಮದು ಮಾಡಿಕೊಳ್ಳುವುದನ್ನು, ಅದನ್ನು ಸಂಸ್ಕರಿಸಿ ಮಾರಾಟ ಮಾಡುವುದನ್ನು ಹೆಚ್ಚಿಸಿದೆ ಎಂದು ಬೆಸೆಂಟ್ ದೂರಿದ್ದಾರೆ. ಅಲ್ಲದೆ, ಭಾರತದಲ್ಲಿ ಸಂಸ್ಕರಣೆಯಾದ ರಷ್ಯಾದ ತೈಲವನ್ನು ಖರೀದಿಸುವ ಮೂಲಕ ಯುರೋಪಿನ ರಾಷ್ಟ್ರಗಳು ರಷ್ಯಾದ ಯುದ್ಧಕ್ಕೆ ಧನಸಹಾಯ ಮಾಡಿವೆ ಎಂದೂ ಬೆಸೆಂಟ್ ಆರೋಪಿಸಿದ್ದಾರೆ. 'ಯುರೋಪಿನ ದೇಶಗಳು ತಮ್ಮ ವಿರುದ್ಧ ನಡೆದಿರುವ ಯುದ್ಧಕ್ಕೆ ತಾವೇ ಹಣ ನೀಡಿವೆ' ಎಂದು ಅವರು ಹೇಳಿದ್ದಾರೆ.

ಅಮೆರಿಕದಲ್ಲಿ ನೆಲಸಿರುವ ಭಾರತ ಮೂಲದ ವ್ಯಕ್ತಿಯ ಕೃತ್ಯ

ಪತ್ನಿ ಸೇರಿ ನಾಲ್ವರನ್ನು ಕೊಂದ ಪತಿ

ನ್ಯೂಯಾರ್ಕ್ (ಪಿಟಿಐ): ಪತ್ನಿ ಹಾಗೂ ತನ್ನ ಮೂವರು ಸಂಬಂಧಿಕರನ್ನು ಗುಂಡಿಟ್ಟು ಹತ್ಯೆ ಮಾಡಿದ ಭಾರತ ಮೂಲದ 51 ವರ್ಷದ ವಿಜಯ್ ಕುಮಾರ್ ಅವರನ್ನು ಅಮೆರಿಕದ ಪೊಲೀಸರು ಬಂಧಿಸಿದ್ದಾರೆ. ಕೌಟುಂಬಿಕ ಕಲಹವೇ ಹತ್ಯೆಗೆ ಕಾರಣ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಜಾರ್ಜಿಯಾ ರಾಜ್ಯದ ಗ್ವಿನೆಟ್ ಕೌಂಟಿ ಎಂಬಲ್ಲಿ ಶುಕ್ರವಾರ ರಾತ್ರಿ ಈ ಘಟನೆ ನಡೆದಿದೆ. ಮನೆಯಿಂದ ಸ್ವಲ್ಪ ದೂರದಲ್ಲಿಯೇ ವಿಜಯ್ ಅವರನ್ನು ಬಂಧಿಸಲಾಗಿದೆ. ಪ್ರಕರಣದ ಬಗ್ಗೆ ಅಲ್ಲಿನ ಪೊಲೀಸರು 'ಎಕ್ಸ್'ನಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ.

ವಿಜಯ್ ಅವರ ಪತ್ನಿ ಮೀಮು ಡೋಗ್ರಾ (43), ಗೌರವ್ ಕುಮಾರ್ (33), ನಿಧಿ ಚಂದರ್ (37) ಮತ್ತು ಹರೀಶ್ ಚಂದರ್ (38) ಹತ್ಯೆಯಾದವರು. ಈ ಬಗ್ಗೆ ಅಟ್ಲಾಂಟಾದಲ್ಲಿರುವ ಭಾರತದ ಕಾನ್ಸುಲೇಟ್ ಜನರಲ್ ಕೂಡ ಮಾಹಿತಿ ಹಂಚಿಕೊಂಡಿದ್ದಾರೆ. ದುಃಖದಲ್ಲಿರುವ ಕುಟುಂಬಕ್ಕೆ ಬೇಕಾದ ಎಲ್ಲ ಸಹಕಾರ ನೀಡುವುದಾಗಿ ಹೇಳಿದ್ದಾರೆ.

> ದಂಪತಿ ನಡುವೆ ವಾಗ್ವಾದವು ಎಷ್ಟು ಹೊತ್ತಿಗೆ ಆರಂಭವಾಯಿತು ಎಂಬುದು ತಿಳಿದಿಲ್ಲ. ಅವರು ಇಬ್ಬರೇ ಏಕೆ ಬಂದರು, ಗುಂಡಿಕ್ಕುವಂಥ ಘಟನೆ ಏನು ನಡೆಯಿತು ಎಂದೂ ತಿಳಿದಿಲ್ಲ
>
> **ಗ್ವಿನೆಟ್ ಕೌಂಟಿ ನಗರದ ಪೊಲೀಸರು**

ಘಟನೆ ಏನು?: ವಿಜಯ್ ಮತ್ತು ಮೀಮು ಅಟ್ಲಾಂಟಾದಲ್ಲಿ ನೆಲಸಿದ್ದಾರೆ. ಯಾವುದೋ ವಿಚಾರಕ್ಕೆ ಮನೆಯಲ್ಲಿ ಇಬ್ಬರ ಮಧ್ಯೆ ಜಗಳ ಆರಂಭವಾಗಿದೆ. ತಮ್ಮ 12 ವರ್ಷದ ಮಗು ಹಾಗೂ ತಮ್ಮ ಸಂಬಂಧಿಕರ ಮನೆಗೆ ತೆರಳಿದ್ದಾರೆ.

ಗೌರವ್, ನಿಧಿ ಮತ್ತು ಹರೀಶ್ ಅವರು ಐಟಿ ಮತ್ತು 10 ವರ್ಷದ ಇಬ್ಬರು ಮಕ್ಕಳೊಂದಿಗೆ ಜಾರ್ಜಿಯಾದ ಬ್ರೂಕ್ ಐವಿ ಕೌಂಟಿ ಎಂಬಲ್ಲಿ ವಾಸವಿದ್ದರು. ಈ ಮನೆಯಲ್ಲಿಯೇ ವಿಜಯ್ ನಾಲ್ವರನ್ನು ಹತ್ಯೆ ಮಾಡಿದ್ದಾರೆ.

ಪಾರಾದ ಮಕ್ಕಳು

ಘಟನೆ ನಡೆದ ಬಳಿಕ ವಿಜಯ್ ಅವರ 12 ವರ್ಷದ ಮಗುವೇ ಪೊಲೀಸರಿಗೆ ಕರೆ ಮಾಡಿ ಮಾಹಿತಿ ನೀಡಿದೆ. ಶುಕ್ರವಾರ ರಾತ್ರಿ 2.30ರ ಸುಮಾರಿಗೆ ಕರೆ ಬಂದಿದೆ ಎಂದು ಪೊಲೀಸರು ತಿಳಿಸಿದರು.

'ಕರೆ ಬಂದ ತಕ್ಷಣವೇ ಘಟನಾ ಸ್ಥಳಕ್ಕೆ ಧಾವಿಸಿದ್ದು. ಸರಿಯಾದ ಸಮಯಕ್ಕೆ ಕರೆ ಮಾಡಿದ್ದರಿಂದ ಆರೋಪಿಯನ್ನು ಮನೆಯಿಂದ ಸ್ವಲ್ಪ ದೂರದಲ್ಲಿಯೇ ಬಂಧಿಸಲು ಸಾಧ್ಯವಾಯಿತು. ಘಟನೆ ವೇಳೆ ಮನೆಯಲ್ಲಿ ಮೂವರು ಮಕ್ಕಳಿದ್ದರು. ಎಲ್ಲರೂ ಭಯಗೊಂಡಿದ್ದರು ಮತ್ತು ಬಚ್ಚಿಟ್ಟುಕೊಂಡಿದ್ದರು' ಎಂದು ಪೊಲೀಸರು ಮಾಹಿತಿ ನೀಡಿದರು.



ಸುದ್ದಿ 2 ನಿಮಿಷ

'ವಿಝಿಂಜಂ ಅಭಿವೃದ್ಧಿಗೆ ₹30 ಸಾವಿರ ಕೋಟಿ ಹೂಡಿಕೆ'

ತಿರುವನಂತಪುರ (ಪಿಟಿಐ): 'ವಿಝಿಂಜಂ ಬಂದರಿನ ಅಭಿವೃದ್ಧಿಗಾಗಿ ಒಟ್ಟು ₹30 ಸಾವಿರ ಕೋಟಿ ಹೂಡಿಕೆ ಮಾಡಲಾಗುವುದು' ಎಂದು ಅದಾನಿ ಪೋರ್ಟ್ಸ್ ಆ್ಯಂಡ್ ಸ್ಪೆಷಲ್ ಎಕನಾಮಿಕ್ ಜೋನ್ ಲಿಮಿಟೆಡ್‌ನ (ಎಪಿಎಸ್‌ಇಝಡ್) ವ್ಯವಸ್ಥಾಪಕ ನಿರ್ದೇಶಕ ಕರಣ್ ಅದಾನಿ ಹೇಳಿದ್ದಾರೆ.

'ಇದು ಕೇರಳದಲ್ಲಿ ಆಗುತ್ತಿರುವ ಅತಿದೊಡ್ಡ ಹೂಡಿಕೆ. ವಿಝಿಂಜಂ ಬಂದರು ದೇಶದ ಆಡಳಿತಕ್ಕೆ ಸರಕು ಸಾಗಣೆ ಬಂದರು ಆಗಲಿದೆ. ಜಾಗತಿಕವಾಗಿ ಸ್ಥಾನ್ತರವಾಗಲಿದೆ ಎಂದು ಇಲ್ಲಿ ನಡೆದ ಕಾರ್ಯಕ್ರಮದಲ್ಲಿ ಹೇಳಿದರು. ವಿಝಿಂಜಂ ಬಂದರನ್ನು ಎಪಿಎಸ್‌ಇಝಡ್ ನಿರ್ವಹಣೆ ಮಾಡುತ್ತಿದೆ.

ಈ ಬಂದರು ದೊಡ್ಡದಾದ ಸರಕು ಸಾಗಣೆ ಬಂದರು ಮಾತ್ರವಲ್ಲದ, ದೇಶದಲ್ಲಿ ಸುಧಾರಿತ ತಂತ್ರಜ್ಞಾನ ಹೊಂದಿದ ಬಂದರು ಕೂಡ ಆಗಲಿದೆ. 'ಇದು ದೇಶದ ಬಂದರುಗಳು ಹೇಗೆ ಕಾರ್ಯನಿರ್ವಹಿಸಬೇಕು ಎಂಬುದಕ್ಕೆ ಭವಿಷ್ಯದ ದಿಕ್ಸೂಚಿ ಆಗಲಿದೆ ಎಂದು ಹೇಳಿದರು.



ಚೆಟ್ಟಿ ನಿರ್ಮಾಣಕ್ಕೆ ಶಂಕುಸ್ಥಾಪನೆ


ಬೆಂಗಳೂರು: ಕರ್ನಾಟಕ, ಕೇರಳ ಸೇರಿದಂತೆ ವಿವಿಧ ರಾಜ್ಯಗಳಲ್ಲಿ ಒಳನಾಡು ಜಲಸಾರಿಗೆ ಅಗತ್ಯವಿರುವ ಜೆಟ್ಟಿಗಳನ್ನು ನಿರ್ಮಾಣ ಮಾಡುವ ಯೋಜನೆಗಳಿಗೆ ಒಳನಾಡು ಜಲಸಾರಿಗೆ ಅಭಿವೃದ್ಧಿ ಮಂಡಳಿಯ (ಐಡಬ್ಲ್ಯುಡಿಸಿ) ಸಭೆಯಲ್ಲಿ ಶಂಕುಸ್ಥಾಪನೆ ನೆರವೇರಿಸಲಾಗಿದೆ.

ಈ ಯೋಜನೆಗಳು ಹಡಗು ಪ್ರವಾಸೋದ್ಯಮವನ್ನು ಉತ್ತೇಜಿಸುವ ಉದ್ದೇಶ ಹೊಂದಿವೆ ಎಂದು ಪ್ರಕಟಣೆ ತಿಳಿಸಿದೆ.

ಕೊಚ್ಚಿಯಲ್ಲಿ ಶುಕ್ರವಾರ ನಡೆದ ಮಂಡಳಿಯ ಮೂರನೆಯ ಸಭೆಯು ದೇಶದ ಒಳನಾಡು ಜಲಸಾರಿಗೆ ಜಾಲವನ್ನು ವಿಸ್ತರಿಸುವ ನೀಲನಕ್ಷೆಯೊಂದನ್ನು ಸಿದ್ಧಪಡಿಸಿದೆ. ಮೂಲಸೌಕರ್ಯ ವಲಯದ ಮೇಲಿನ ಪ್ರಮುಖ ಹೂಡಿಕೆ ಪ್ರಸ್ತಾವಗಳಿಗೆ ಒಪ್ಪಿಗೆ ನೀಡಿದೆ, ದೇಶದ ನದಿಗಳ ಆರ್ಥಿಕ ಸಾಮರ್ಥ್ಯವನ್ನು ಪೂರ್ಣ ಪ್ರಮಾಣದಲ್ಲಿ ಬಳಕೆ ಮಾಡಿಕೊಳ್ಳಲು ರಾಜ್ಯ ಹಾಗೂ ಕೇಂದ್ರ ಸರ್ಕಾರದ ನಡುವೆ ಸಮನ್ವಯವನ್ನು ಬಲಪಡಿಸಲು ನಿರ್ಧರಿಸಿದೆ.

ಮಂಡಳಿಯ ಸಭೆಯ ಅಧ್ಯಕ್ಷತೆಯನ್ನು ಕೇಂದ್ರ ಬಂದರು, ಹಡಗು ಮತ್ತು ಜಲಸಾರಿಗೆ ಸಚಿವ ಸರ್ಬಾನಂದ ಸೋನೊವಾಲ್ ವಹಿಸಿದ್ದರು. ಪರಿಸರ ಪೂರಕ ಸಾರಿಗೆ ವ್ಯವಸ್ಥೆಗೆ ಬಲ ನೀಡುವ, ನದಿಗಳನ್ನು ಆಧರಿಸಿದ ಆರ್ಥಿಕ ಅಭಿವೃದ್ಧಿ ಮಾದರಿಗೆ ಉತ್ತೇಜನ ನೀಡುವ ಹಾಗೂ ಬಹು ಆಯಾಮಗಳ ಸರಕು ಸಾಗಣೆ ವ್ಯವಸ್ಥೆಯನ್ನು ಗಟ್ಟಿಗೊಳಿಸುವ ₹1,500 ಕೋಟಿಗೂ ಹೆಚ್ಚಿನ ಮೊತ್ತ ಯೋಜನೆಗಳನ್ನು ಮಂಡಳಿಯು ಗುರುತಿಸಿದೆ ಎಂದು ಪ್ರಕಟಣೆಯಲ್ಲಿ ಹೇಳಲಾಗಿದೆ.

'ವ್ಯಾಪಾರ ಒಪ್ಪಂದ: ಯುವ ಸಮೂಹಕ್ಕೆ ಉದ್ಯೋಗಾವಕಾಶ'



ನರೇಂದ್ರ ಮೋದಿ

ನವದೆಹಲಿ (ಪಿಟಿಐ): ದೇಶದ 45 ಸ್ಥಳಗಳಲ್ಲಿ ಶನಿವಾರ ಆಯೋಜಿಸಿದ್ದ 18ನೇ ರೋಜಗಾರ್ ಮೇಳದಲ್ಲಿ ವಿವಿಧ ಸರ್ಕಾರಿ ಹುದ್ದೆಗಳಿಗೆ ಆಯ್ಕೆಯಾದ 61 ಸಾವಿರ ಅಭ್ಯರ್ಥಿಗಳಿಗೆ ನೇಮಕಾತಿ ಪತ್ರಗಳನ್ನು ಪ್ರಧಾನಿ ನರೇಂದ್ರ ಮೋದಿ ಅವರು ಎಲೆಕ್ಟ್ರಾನಿಕ್ ವ್ಯವಸ್ಥೆ ಮೂಲಕ ವಿತರಿಸಿದರು.

ವರ್ಚುವಲ್ ಮೂಲಕ ಮಾತನಾಡಿದ ಪ್ರಧಾನಿ, 'ದೇಶ ಮತ್ತು ವಿದೇಶಗಳಲ್ಲಿ ಯುವಜನರಿಗೆ ಹೊಸ ಉದ್ಯೋಗಾವಕಾಶಗಳನ್ನು ಸೃಷ್ಟಿಸಲು ಭಾರತವು ವಿವಿಧ ದೇಶಗಳೊಂದಿಗೆ ವ್ಯಾಪಾರ ಒಪ್ಪಂದಗಳನ್ನು ಮಾಡಿಕೊಳ್ಳುತ್ತಿದೆ' ಎಂದು ಹೇಳಿದರು.

'ಭಾರತವು ವಿಶ್ವದಲ್ಲೇ ಅತಿ ಹೆಚ್ಚು ಯುವ ಸಮೂಹವನ್ನು ಹೊಂದಿದೆ. ಸರ್ಕಾರ ದೇಶ ಹಾಗೂ ವಿದೇಶಗಳಲ್ಲಿ ಹೊಸ ಅವಕಾಶಗಳನ್ನು ಸೃಷ್ಟಿಸುವ ಗುರಿ ಹೊಂದಿದೆ' ಎಂದರು. ರಾಷ್ಟ್ರ ನಿರ್ಮಾಣಕ್ಕೆ ಕೈಜೋಡಿಸಬೇಕು. ಅಭಿವೃದ್ಧಿ ಹೊಂದಿದ ಭಾರತವನ್ನು ನಿರ್ಮಿಸಲು ಪ್ರತಿಜ್ಞೆ ಮಾಡಬೇಕು' ಎಂದು ಸಲಹೆ ನೀಡಿದರು.

'ಹಿಂದಿನ ವರ್ಷಗಳಲ್ಲಿ ಸರ್ಕಾರಿ ಕಚೇರಿಗಳಲ್ಲಿ ತಮಗಾದ ಕಹಿ ಅನುಭವಗಳನ್ನು ನೆನಪಿಸಿಕೊಳ್ಳಬೇಕು. ಹಾಗೆಯೇ, ತಮ್ಮ ಅಧಿಕಾರಾವಧಿಯಲ್ಲಿ ಅಂತಹ ಕಷ್ಟಗಳು ಜನ ಸಾಮಾನ್ಯರಿಗೆ ಎದುರಾಗದಂತೆ ನೋಡಿಕೊಳ್ಳಲು ಸಂಕಲ್ಪ ಮಾಡಬೇಕು. 'ನಾಗರಿಕರು ದೇವರ ಸಮಾನ' ಎಂಬ ಧ್ಯೇಯದೊಂದಿಗೆ ಕೆಲಸ ಮಾಡಬೇಕು' ಎಂದು ಕರೆ ನೀಡಿದರು.

'ಡಿಜಿಟಲ್ ಇಂಡಿಯಾ ಹೊಸ ಅರ್ಥಿಕತೆಯನ್ನು ವಿಸ್ತರಿಸಿದೆ. ಭಾರತವು ಅನಿಮೇಷನ್, ಡಿಜಿಟಲ್ ಮಾಧ್ಯಮ ಮತ್ತು ಇತರ ಹಲವಾರು ವಲಯಗಳಲ್ಲಿ ಜಾಗತಿಕ ಕೇಂದ್ರವಾಗಿ ಹೊರಹೊಮ್ಮುತ್ತಿದೆ. ಹೊಸ ಕಾರ್ಮಿಕ ಸಂಹಿತೆಗಳು ಸಾಮಾಜಿಕ ಭದ್ರತಾ ವ್ಯಾಪ್ತಿಯನ್ನು ವಿಸ್ತರಿಸಿವೆ. ಕಾರ್ಮಿಕರನ್ನು ಸಬಲೀಕರಣ ಗೊಳಿಸಿವೆ' ಎಂದು ಹೇಳಿದರು.

ದೇಶದಾದ್ಯಂತ ಈವರೆಗೆ ಆಯೋಜಿಸಿರುವ ರೋಜಗಾರ್ ಮೇಳಗಳ ಮೂಲಕ 11 ಲಕ್ಷಕ್ಕೂ ಹೆಚ್ಚು ನೇಮಕಾತಿ ಪತ್ರಗಳನ್ನು ವಿತರಿಸಲಾಗಿದೆ.

'ನವೋದ್ಯಮ: 21 ಲಕ್ಷ ಮಂದಿಗೆ ಉದ್ಯೋಗ'

'ಇತ್ತೀಚಿನ ದಿನಗಳಲ್ಲಿ ಸರ್ಕಾರವು ಆಧುನಿಕ ಮೂಲಸೌಕರ್ಯ ಕ್ಷೇತ್ರದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಹೂಡಿಕೆ ಮಾಡಿದೆ. ಇದು ನಿರ್ಮಾಣ ಕ್ಷೇತ್ರಗಳಲ್ಲಿ ಉದ್ಯೋಗಾವಕಾಶಗಳ ಹೆಚ್ಚಳಕ್ಕೆ ಕಾರಣವಾಗಿದೆ. ಭಾರತದ ನವೋದ್ಯಮ ಕ್ಷೇತ್ರವು ವೇಗವಾಗಿ ವಿಸ್ತರಿಸುತ್ತಿದ್ದು, ಸುಮಾರು 2 ಲಕ್ಷ ನವೋದ್ಯಮಗಳು 21 ಲಕ್ಷಕ್ಕೂ ಹೆಚ್ಚು ಮಂದಿಗೆ ಉದ್ಯೋಗ ಕಲ್ಪಿಸಿವೆ' ಎಂದು ಮೋದಿ ಹೇಳಿದರು.

ಚಿಟಿಕೆ ಸುದ್ದಿ

ಸ್ವಪಕ್ಷಕ್ಕೆ ದಂಡ ವಿಧಿಸಿದ ಬಿಜೆಪಿ ಆಡಳಿತದ ಪಾಲಿಕೆ



ತಿರುವನಂತಪುರ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಭೇಟಿಗೆ ಸಂಬಂಧಿಸಿದ ಜಾಹೀರಾತು ಫಲಕಗಳನ್ನು ಪಾದಚಾರಿ ರಸ್ತೆಗಳಲ್ಲಿ ಅಳವಡಿಸಿದ್ದ ಬಿಜೆಪಿ ತನ್ನದೇ ಆಡಳಿತವಿರುವ ತಿರುವನಂತಪುರ ನಗರ ಪಾಲಿಕೆಯು ₹19.7 ಲಕ್ಷ ದಂಡ ವಿಧಿಸಿ, ದೂರು ದಾಖಲಿಸಿದೆ.

ತಿರುವನಂತಪುರ ನಗರ ಪಾಲಿಕೆ ಕಾರ್ಯದರ್ಶಿ ನೀಡಿರುವ ದೂರಿನ ಆಧಾರದಲ್ಲಿ ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಕರಮನ ಜಯನ್ ಅವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಬಿಜೆಪಿಯ ಜಿಲ್ಲಾ ಘಟಕವು ಪಾದಚಾರಿ ರಸ್ತೆಗಳಲ್ಲಿ ಫ್ಲೆಕ್ಸ್ ಅಳವಡಿಸಿದ್ದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

‘ಆತುರದ ಎಸ್‌ಐಆರ್: ಪ್ರಜಾಪ್ರಭುತ್ವಕ್ಕೆ ಧಕ್ಕೆ’

ನಿರ್ಗತಿಕರ ಪಾಡೇನು: ನೊಬೆಲ್ ಪ್ರಶಸ್ತಿ ಪುರಸ್ಕೃತ ಅಮರ್ತ್ಯ ಸೆನ್ ಪ್ರಶ್ನೆ



ಎಸ್‌ಐಆರ್ ನಡೆಸಲು ಅಧಿಕಾರಿಗಳಿಗೂ ಸಮಯವಿಲ್ಲ. ದಾಖಲೆಗಳನ್ನು ಒದಗಿಸಲು ಜನರಿಗೂ ಕಾಲಾವಕಾಶವಿಲ್ಲ. ಇಷ್ಟೊಂದು ಆತುರದ ಪ್ರಕ್ರಿಯೆ ಪ್ರಜಾಪ್ರಭುತ್ವಕ್ಕೆ ಅನ್ಯಾಯ ಎಸಗಿದಂತೆ
ಅಮರ್ತ್ಯ ಸೆನ್, ನೊಬೆಲ್ ಪ್ರಶಸ್ತಿ ಪುರಸ್ಕೃತ

ಕೋಲ್ಕತ್ತ/ಗುವಾಹಟಿ (ಪಿಟಿಐ): ‘ಪಶ್ಚಿಮ ಬಂಗಾಳದಲ್ಲಿ ಎಸ್‌ಐಆರ್ ಅನ್ನು ಆತುರವಾಗಿ ನಡೆಸಲಾಗುತ್ತಿದೆ. ಇದರಿಂದ ಪ್ರಜಾಪ್ರಭುತ್ವ ಪ್ರಕ್ರಿಯೆಯಲ್ಲಿ ಜನರು ಭಾಗವಹಿಸುವುದನ್ನು ಎಸ್‌ಐಆರ್ ಕಸಿದುಕೊಳ್ಳಬಹುದು’ ಎಂದು ನೊಬೆಲ್ ಪ್ರಶಸ್ತಿ ಪುರಸ್ಕೃತ ಅಮರ್ತ್ಯ ಸೆನ್ ಅಭಿಪ್ರಾಯಪಟ್ಟರು.

ರಾಜ್ಯದಲ್ಲಿ ನಡೆದ ಎಸ್‌ಐಆರ್ ಪ್ರಕ್ರಿಯೆ ವೇಳೆ, ಸೆನ್ ಅವರಿಗೆ ಚುನಾವಣಾ ಆಯೋಗವು ನೋಟಿಸ್ ನೀಡಿತ್ತು. ಸೆನ್ ಮತ್ತು ಅವರ ತಾಯಿ ಮಧ್ಯದ ವಯಸ್ಸಿನ ಅಂತರದ ಕುರಿತು ಆಯೋಗ ಪ್ರಶ್ನೆ ಎತ್ತಿತ್ತು. ಇದು ರಾಜಕೀಯವಾಗಿ ವಿವಾದ ಸೃಷ್ಟಿಸಿತ್ತು. ಈ ಬಗ್ಗೆಯೂ ಸೆನ್ ಅವರು ‘ಪಿಟಿಐ’ ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ಮಾತನಾಡಿದ್ದಾರೆ.

‘ಶಾಂತಿನಿಕೇತನ ಕ್ಷೇತ್ರದಲ್ಲಿ ನನ್ನ ಮತ ಇದೆ. ನನ್ನ ಹೆಸರು, ವಿಳಾಸ ಸೇರಿ ಎಲ್ಲದರ ದಾಖಲೆಗಳಿವೆ. ನನ್ನ ತಾಯಿಯ ವಯಸ್ಸು, ಅವರ ಹುಟ್ಟಿದ ದಿನಾಂಕ ಕೇಳಿದರು. ನನ್ನ ತಾಯಿಯ ಮತ ಕೂಡ ಇದೇ ಕ್ಷೇತ್ರದಲ್ಲಿತ್ತು ಮತ್ತು ಅವರ ದಾಖಲೆಗಳೂ ಇದ್ದವು. ಹಾಗಿದ್ದರೂ ಆಯೋಗ ನನ್ನ ಮತದಾನದ ಹಕ್ಕಿನ ಕುರಿತು ಪ್ರಶ್ನಿಸಿತು’ ಎಂದರು.

‘ಗ್ರಾಮೀಣ ಭಾಗದಲ್ಲಿ ಜನಿಸಿದ ಎಲ್ಲ ಭಾರತೀಯನಂತೆ ನನ್ನ ಬಳಿಯೂ ಜನನ ಪ್ರಮಾಣಪತ್ರ ಇಲ್ಲ. ನಾನು ಇಲ್ಲಿನ ಮತದಾರ ಎಂದು ಸಾಬೀತು ಮಾಡಲು ಹಲವು ದಾಖಲೆಗಳು ಬೇಕಿತ್ತು. ನನ್ನ ಸ್ನೇಹಿತರ ಸಹಕಾರದಿಂದ ಈ ಎಲ್ಲವನ್ನೂ ನಿಭಾಯಿಸಿದೆ. ಆದರೆ, ಸಾಮಾನ್ಯ ಜನರ ಪಾಡೇನು?’ ಎಂದರು.

‘ತುಳಿತಕ್ಕೊಳಗಾದ ಸಮುದಾಯದವರು ಪಟ್ಟಿಯಿಂದ ಹೊರಗುಳಿಯುತ್ತಾರೆ. ಆಯೋಗ ಕೇಳುತ್ತಿರುವ ದಾಖಲೆಗಳನ್ನು ಬಡವರು ಒದಗಿಸುವುದು ಸಾಧ್ಯವೇ ಇಲ್ಲ ಎನ್ನಬಹುದು. ಈ ಇಡೀ ಪ್ರಕ್ರಿಯೆ ನಿರ್ಗತಿಕರ ವಿರೋಧವಾಗಿದೆ’ ಎಂದರು.

‘ಸುಪ್ರೀಂ’ ನಿರ್ದೇಶನ ಪಾಲನೆ ಸಾಧ್ಯವಿಲ್ಲ’

ಎಸ್‌ಐಆರ್‌ನ ಕರಡು ಮತದಾರರ ಪಟ್ಟಿಯಲ್ಲಿ ಇರುವ ಜನರ ವಿವರಗಳಲ್ಲಿ ಸಮಸ್ಯೆ ಕಂಡುಬಂದಿರುವವರ ಪಟ್ಟಿಯನ್ನು ಶನಿವಾರದ ಒಳಗೆ ಪ್ರಕಟಿಸಬೇಕು ಎಂಬ ಜ.19ರ ಸುಪ್ರೀಂ ಕೋರ್ಟ್ ನಿರ್ದೇಶನ ಪಾಲಿಸಲು ಚುನಾವಣಾ ಆಯೋಗಕ್ಕೆ ಸಾಧ್ಯವಾಗುವುದಿಲ್ಲ ಎಂದು ಅಧಿಕಾರಿಗಳು ಹೇಳಿದ್ದಾರೆ. ಹೀಗೆ ಜನರ ಹೆಸರನ್ನು ಪ್ರಕಟಿಸಲು ಅಗತ್ಯವಿರುವ ತಂತ್ರಾಂಶ ಬೂತ್ ಮಟ್ಟದ ಅಧಿಕಾರಿಗಳ (ಬಿಎಲ್‌ಒ) ಬಳಿ ಇಲ್ಲವಾಗಿದೆ.

‘ವಿವರಗಳಲ್ಲಿ ಸಮಸ್ಯೆ ಇರುವವರ ಸಂಖ್ಯೆ 1.26 ಕೋಟಿ ಇದೆ. ಬಿಎಲ್‌ಒಗಳು ಈ ಎಲ್ಲರಿಗೂ ನೋಟಿಸ್ ನೀಡಿ, ಪ್ರಶ್ನೋತ್ತರ ನಡೆಸುತ್ತಿದ್ದಾರೆ. ಕಳೆದ ಬಾರಿಯ (2002) ವಿವರಗಳಿಗೂ ಮತ್ತು ಈ ಬಾರಿಯ ವಿವರಗಳಿಗೂ ತಾಳೆಯಾಗದ ಜನರು ಸಮಾರು 3 ಲಕ್ಷದಷ್ಟು ಅಧಿಕ ಇದ್ದಾರೆ. ಇವರಲ್ಲಿ ಈಗ 10ರಷ್ಟು ಜನರು ಪ್ರಶ್ನೋತ್ತರ ಎದುರಿಸಲು ಬಂದಿಲ್ಲ’ ಎಂದು ಮಾಹಿತಿ ನೀಡಿದರು.

12 ರಾಜ್ಯಗಳಲ್ಲಿ ಎಸ್‌ಐಆರ್ ಸುಸೂತ್ರವಾಗಿ ನಡೆಯುತ್ತಿದೆ. ಈಗ ಉಳಿದ ರಾಜ್ಯಗಳಲ್ಲಿಯೂ ಈ ಪ್ರಕ್ರಿಯೆಯು ಶೀಘ್ರದಲ್ಲಿಯೇ ಆರಂಭಗೊಳ್ಳಲಿದೆ. ಸುಳ್ಳು ಮಾಹಿತಿಗಳು ಮತ್ತು ತಪ್ಪು ಸಂಕಥನಗಳ ವಿರುದ್ಧ ಯುವ ಮತದಾರರು ಹೋರಾಟ ನಡೆಸಬೇಕು ಎಂದು ನಾನು ಕರೆ ನೀಡುತ್ತೇನೆ
ಜ್ಞಾನೇಶ್ ಕುಮಾರ್, ಮುಖ್ಯ ಚುನಾವಣಾ ಆಯುಕ್ತ

‘ಮಿಯಾಗಳಿಗೆ ಮಾತ್ರವೇ ನೋಟಿಸ್’

‘ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆಯಲ್ಲಿ (ಎಸ್‌ಐಆರ್) ‘ಮಿಯಾ’ಗಳಿಗೆ ಮಾತ್ರವೇ ನೋಟಿಸ್ ನೀಡುತ್ತಿದ್ದೇವೆ. ಹೀಗೆ ಮಾಡಲಿಲ್ಲ ಎಂದರೆ ಅವರು ನಮ್ಮನ್ನು ತುಳಿಯುತ್ತಾರೆ. ಮಿಯಾಗಳ ಮೇಲೆ ನೋಟಿಸ್ ನೀಡುತ್ತಿರುವುದು ಅವರ ಮೇಲೆ ಒತ್ತಡ ಹೇರುವ ತಂತ್ರ. ಇದರಲ್ಲಿ ಯಾವುದೇ ಮುಚ್ಚುಮರೆ ಇಲ್ಲ. ಕಾನೂನು ಅಡಿಯಲ್ಲಿಯೇ ನಾವು ಅವರಿಗೆ ತೊಂದರೆ ನೀಡುತ್ತಿದ್ದೇವೆ
ಹಿಮಂತ ಬಿಸ್ವಾ ಶರ್ಮಾ, ಅಸ್ಸಾಂ ಮುಖ್ಯಮಂತ್ರಿ

(ಅಸ್ಸಾಂನಲ್ಲಿ ಬಂಗಾಳಿ ಮಾತನಾಡುವ ಮುಸ್ಲಿಮರನ್ನು ಅವಹೇಳನ ಮಾಡುವ ದೃಷ್ಟಿಯಿಂದ ‘ಮಿಯಾ’ಗಳು ಎಂದು ಕರೆಯಲಾಗುತ್ತದೆ. ಜನರು ಇವರನ್ನು ಬಾಂಗ್ಲಾ ವಲಸಿಗರು ಎನ್ನುತ್ತಾರೆ. ರಾಜ್ಯದಲ್ಲಿ ಈ ಜನರು ಶೇ 40ರಷ್ಟು ಇದ್ದಾರೆ ಎಂದು ಹಿಮಂತ ಅವರು ಈ ಹಿಂದೆ ಹೇಳಿದ್ದರು)

ಉಕ್ಕಿನ ಸೇತುವೆ ಕಳ್ಳತನ

ಕೊರ್ಬಾ (ಪಿಟಿಐ): ಛತ್ತೀಸಗಢದ ಕೊರ್ಬಾ ನಗರದಲ್ಲಿ, 4 ದಶಕಗಳ ಹಿಂದೆ ನಿರ್ಮಿಸಲಾಗಿದ್ದ, 70 ಅಡಿ ಉದ್ದದ, 10 ಟನ್‌ಗಿಂತ ಹೆಚ್ಚು ತೂಕವಿದ್ದ ಉಕ್ಕಿನ ಸೇತುವೆಯನ್ನೇ ರಾತ್ರೋರಾತ್ರಿ ಕಳ್ಳತನ ಮಾಡಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಐವರನ್ನು ಬಂಧಿಸಲಾಗಿದೆ.

ಕಳ್ಳತನದಲ್ಲಿ 15 ಮಂದಿ ಭಾಗಿಯಾಗಿದ್ದಾರೆ. ಈ ಪೈಕಿ ಐವರನ್ನು ಬಂಧಿಸಲಾಗಿದ್ದು 10 ಮಂದಿಯ ಪತ್ತೆಗಾಗಿ ಕಾರ್ಯಾಚರಣೆ ನಡೆಸಲಾಗುತ್ತಿದೆ. ಕಾಲುವೆಯೊಳಗೆ ಅಡಗಿಸಿಟ್ಟಿದ್ದ 7 ಟನ್ ಉಕ್ಕನ್ನು ವಶಪಡಿಸಿಕೊಳ್ಳಲಾಗಿದೆ ಎಂದು ತನಿಖಾ ಅಧಿಕಾರಿಗಳು ಮಾಹಿತಿ ನೀಡಿದರು.

‘ಸೇತುವೆಯನ್ನು ಕತ್ತರಿಸಿ ಅದರ ಭಾಗಗಳನ್ನು ಗುಜರಿಗೆ ಮಾರಾಟ ಮಾಡಲು ಯೋಜಿಸಿದ್ದರು ಎಂದು ಆರೋಪಿಗಳು ವಿಚಾರಣೆ ವೇಳೆ ಒಪ್ಪಿಕೊಂಡಿದ್ದಾರೆ. ಗ್ಯಾಸ್ ಕಟರ್ ಅನ್ನು ಬಳಸಿ ಸೇತುವೆಯನ್ನು ಕತ್ತರಿಸಿದ್ದಾರೆ’ ಎಂದೂ ಹೇಳಿದರು.

ಧೋಢಿಪಾರಾ ಪ್ರದೇಶದ ವಾರ್ಡ್ ಸಂಖ್ಯೆ 17ರಲ್ಲಿ, ಹಸ್ದೇವ ಎಡ ಕಾಲುವೆ ಮೇಲೆ ಪಾದಚಾರಿ ಮಾರ್ಗಕ್ಕೆಂದು ಈ ಸೇತುವೆಯನ್ನು ನಿರ್ಮಿಸಲಾಗಿತ್ತು.

ಜ.18ರಂದು ಮುಂಜಾನೆ ಸೇತುವೆಯು ಕಾಣೆಯಾಗಿದ್ದನ್ನು ಕಂಡ ಸ್ಥಳೀಯರು ದಿಗ್ಭ್ರಮೆಗೊಂಡಿದ್ದರು. ಬಳಿಕ ದೂರು ದಾಖಲಿಸಲಾಯಿತು. ಪ್ರಕರಣದ ತನಿಖೆಗೆ ವಿಶೇಷ ತಂಡವನ್ನು ರಚಿಸಲಾಗಿದೆ.



ವಿವಿಧತೆಯಲ್ಲಿ ಏಕತೆ ಮಹತ್ವ ಸಾರಿದ ಭಾಗವತ್

ರಾಂಚಿ (ಪಿಟಿಐ): ಆರ್‌ಎಸ್‌ಎಸ್ ಸರಸಂಘಚಾಲಕ ಮೋಹನ್ ಭಾಗವತ್ ಅವರು ‘ವಿವಿಧತೆಯಲ್ಲಿ ಏಕತೆ’ಯ ಮಹತ್ವದ ಕುರಿತು ಶನಿವಾರ ಒತ್ತಿ ಹೇಳಿದರು.



ಬುಡಕಟ್ಟು ಸಮುದಾಯಗಳೊಂದಿಗೆ ಸಂವಾದ ನಡೆಸಿದ ಅವರು, ಧಾರ್ಮಿಕ ಮತಾಂತರ ಸೇರಿದಂತೆ ಹಲವು ವಿಚಾರಗಳ ಬಗ್ಗೆ ಮಾತುಕತೆ ನಡೆಸಿದರು.

‘ಭಾರತದ ಸಂಪ್ರದಾಯ ಮತ್ತು ಧರ್ಮ ವಿವಿಧತೆಯಲ್ಲಿ ಏಕತೆಯ ಸಂದೇಶವನ್ನು ಸಾರುತ್ತವೆ. ಹಾದಿಯು ವಿಭಿನ್ನವಾಗಿರಬಹುದು; ಆದರೆ ಗಮ್ಯ ಒಂದೇ. ಎಲ್ಲಾ ಹಾದಿಗಳೂ ಸರಿಯಾದವು, ಯಾವುದೂ ತಪ್ಪಲ್ಲ ಎಂದು ಭಾರತೀಯ ಧರ್ಮ ಹೇಳುತ್ತದೆ. ಇದೇ ಸನಾತನ, ಹಿಂದೂ ಮತ್ತು ಭಾರತೀಯ ಧರ್ಮ ಎಂದು ಭಾಗವತ್ ಹೇಳಿದರು’ ಎಂದು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಕಾಂಗ್ರೆಸ್ ಶಾಸಕ ರಾಮೇಶ್ವರ ಓರಾನ್ ಅವರ ಪುತ್ರಿ ನೀಶಾ ಒರಾನ್ ತಿಳಿಸಿದರು.

ದಾಖಲೆ ಪರಿಶೀಲನೆ ನೆಪದಲ್ಲಿ ವಾಹನ ಸವಾರರಿಗೆ ಕಿರಿಕಿರಿ ಮಾಡುವ ಪೊಲೀಸರು ಸಂಚಾರ ಮಾರ್ಗಸೂಚಿ ಪಾಲಿಸುತ್ತಿಲ್ಲ

● ಹೌದು ● ಇಲ್ಲ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ತೆಲಂಗಾಣ: ಮೃತ ಬೀದಿ ನಾಯಿಗಳ ಸಂಖ್ಯೆ 900ಕ್ಕೆ ಏರಿಕೆ

ವಿಷದ ಚುಚ್ಚುಮದ್ದು: 300 ಶ್ವಾನಗಳ ಹತ್ಯೆ

ಹೈದರಾಬಾದ್ (ಪಿಟಿಐ): ತೆಲಂಗಾಣದಲ್ಲಿ ಮತ್ತೆ 300 ಶ್ವಾನಗಳನ್ನು ಹತ್ಯೆ ಮಾಡಲಾಗಿದೆ. ಜಗಿತ್ಯಾಲ ಜಿಲ್ಲೆಯ ಪೆಗದಪಲ್ಲಿ ಗ್ರಾಮದಲ್ಲಿ ಈ ಘಟನೆ ನಡೆದಿದೆ.

ಇದರೊಂದಿಗೆ ರಾಜ್ಯದಲ್ಲಿ ಹತ್ಯೆಗೀಡಾದ ಶ್ವಾನಗಳ ಸಂಖ್ಯೆ 900ಕ್ಕೆ ಏರಿಕೆಯಾಗಿದೆ ಎಂದು ಪ್ರಾಣಿಗಳ ಹಕ್ಕುಗಳ ಹೋರಾಟಗಾರರು ತಿಳಿಸಿದ್ದಾರೆ.

‘ಪೆಗದಪಲ್ಲಿಯಲ್ಲಿ ಜನವರಿ 22ರಂದು ವಿಷಕಾರಿ ಚುಚ್ಚುಮದ್ದು ನೀಡಿ 300 ಬೀದಿ ನಾಯಿಗಳನ್ನು ಹತ್ಯೆಗೈಯ್ಯಲಾಗಿದೆ. ಗ್ರಾಮದ ಸರಪಂಚ್ ಹಾಗೂ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಸೇರಿ ಈ ಕೃತ್ಯ ಎಸಗಿದ್ದಾರೆ. ಶ್ವಾನಗಳನ್ನು ಕೊಲ್ಲುವುದಕ್ಕಾಗಿಯೇ ಅವರು ಕೆಲವರನ್ನು ನೇಮಿಸಿದ್ದಾರೆ’ ಎಂದೂ ಪೊಲೀಸರಿಗೆ ಹೋರಾಟಗಾರರು ದೂರು ನೀಡಿದ್ದಾರೆ.



ದೂರನ್ನು ಆಧರಿಸಿ ಸರಪಂಚ್ ಹಾಗೂ ಪಂಚಾಯಿತಿ ಕಾರ್ಯದರ್ಶಿಯ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ. ಜತೆಗೆ ತನಿಖೆ ವೇಳೆ 70 ರಿಂದ 80 ಶ್ವಾನಗಳ ಕಳೇಬರ ಪತ್ತೆ ಮಾಡಲಾಗಿದೆ ಎಂದು ಪೊಲೀಸರು ಶನಿವಾರ ತಿಳಿಸಿದ್ದಾರೆ.

3–4 ದಿನಗಳ ಹಿಂದೆಯೇ ಈ ಕೃತ್ಯ ನಡೆದಿರುವಂತಿದೆ. ಕೃತ್ಯದಲ್ಲಿ ಆರೋಪಿಗಳ ಕೈವಾಡ ಇದೆಯೇ ಎಂಬುದನ್ನು ಈ ಹಂತದಲ್ಲಿ ದೃಢಪಡಿಸಲಾಗದು. ಮರಣೋತ್ತರ ಪರೀಕ್ಷೆಯ ವರದಿ ಬರಬೇಕಿದ್ದು, ತನಿಖೆ ನಡೆಸಲಾಗುತ್ತಿದೆ ಎಂದೂ ಪೊಲೀಸರು ಮಾಹಿತಿ ನೀಡಿದ್ದಾರೆ.

ಜನವರಿ 19ರಂದು ಯಾಚಾರಮ್ ಗ್ರಾಮದಲ್ಲಿ 100 ಶ್ವಾನಗಳನ್ನು, ಹನುಮಕೊಂಡ ಜಿಲ್ಲೆಯಲ್ಲಿ 300, ಕಾಮರೆಡ್ಡಿ ಜಿಲ್ಲೆಯಲ್ಲಿ 200 ಶ್ವಾನಗಳನ್ನು ಹತ್ಯೆಗೈಯ್ಯಲಾಗಿದೆ ಎಂದೂ ಪ್ರಾಣಿಗಳ ಹಕ್ಕುಗಳ ಸಂಘಟನೆಗಳು ಆರೋಪಿಸಿ, ದೂರು ದಾಖಲಿಸಿದ್ದವು.

ಬೀದಿ ನಾಯಿಗಳ ಹತ್ಯೆ ಪ್ರಕರಣದಲ್ಲಿ ಸರಪಂಚ್ ಸೇರಿದಂತೆ ಕೆಲವು ಚುನಾಯಿತ ಪ್ರತಿನಿಧಿಗಳ ಕೈವಾಡವಿರುವ ಶಂಕೆ ವ್ಯಕ್ತವಾಗಿದೆ. ಕಳೆದ ವರ್ಷ ಡಿಸೆಂಬರ್‌ನಲ್ಲಿ ನಡೆದ ಗ್ರಾಮ ಪಂಚಾಯಿತಿ ಚುನಾವಣೆಗೂ ಮುನ್ನ ಬೀದಿ ನಾಯಿಗಳ ಹಾವಳಿ ತಪ್ಪಿಸುವುದಾಗಿ ಜನರಿಗೆ ನೀಡಿರುವ ಭರವಸೆ ಈಡೇರಿಸಲು ಅವರು ಈ ಕೃತ್ಯಗಳನ್ನು ಎಸಗುತ್ತಿರಬಹುದು ಎನ್ನಲಾಗಿದೆ.

ಕೆಲ ಸಮಸ್ಯೆಗಳಿವೆ, ನಾಯಕರ ಗಮನಕ್ಕೆ ತರುವೆ: ಶಶಿ ತರೂರ್

ಕೋಯಿಕ್ಕೋಡ್ (ಕೇರಳ) (ಪಿಟಿಐ): ‘ಕಾಂಗ್ರೆಸ್ ಪಕ್ಷದ ಜೊತೆ ನನಗೆ ಕೆಲ ವಿಷಯಗಳ ಕುರಿತು ಸಮಸ್ಯೆಗಳಿವೆ. ಅವುಗಳ ಕುರಿತು ನಾಯಕರ ಗಮನಕ್ಕೆ ತರುವೆ. ಆದರೆ, ಸಂಸತ್‌ನಲ್ಲಿ ಪಕ್ಷದ ನಿಲುವುಗಳನ್ನು ಎಂದಿಗೂ ವಿರೋಧಿಸಿಲ್ಲ. ಆದರೆ, ಆಪರೇಷನ್ ಸಿಂಧೂರ ಬಗ್ಗೆ ಮಾತ್ರ ಸಾರ್ವಜನಿಕವಾಗಿ ಪಕ್ಷದ ನಿಲುವು ಒಪ್ಪಿರಲಿಲ್ಲ’ ಎಂದು ಸಂಸದ ಶಶಿ ತರೂರ್ ಶನಿವಾರ ತಿಳಿಸಿದ್ದಾರೆ.



‘ಆಂತರಿಕ ಭಿನ್ನಾಭಿಪ್ರಾಯಗಳನ್ನು ಪಕ್ಷದ ಒಳಗೆ ಚರ್ಚಿಸಬೇಕು. ಮಾಧ್ಯಮಗಳ ಮೂಲಕ ಅಲ್ಲ. ಸಂಸತ್ ಅಧಿವೇಶನಕ್ಕಾಗಿ ನಾನು ದೆಹಲಿಗೆ ಹೋಗುತ್ತೇನೆ. ಅಲ್ಲಿ ಪಕ್ಷದ ನಾಯಕರಿಗೆ ನನ್ನ ಕಳಕಳಿ, ಅಭಿಪ್ರಾಯವನ್ನು ಸ್ಪಷ್ಟಪಡಿಸುತ್ತೇನೆ’ ಎಂದು ಸುದ್ದಿಗಾರರಿಗೆ ತಿಳಿಸಿದ್ದಾರೆ.

‘ನಾನು ಕಳೆದ 17 ವರ್ಷಗಳಿಂದ ಕಾಂಗ್ರೆಸ್‌ನಲ್ಲಿದ್ದೇನೆ. ಏನೇ ತಪ್ಪಾಗಿದ್ದರೂ ಅದನ್ನು ಸರಿಪಡಿಸಬೇಕಾಗಿದೆ ಮತ್ತು ಅದನ್ನು ಸೂಕ್ತ ವೇದಿಕೆಯಲ್ಲಿ ಸರಿಪಡಿಸಲಾಗುವುದು’ ಎಂದಿದ್ದಾರೆ. ‘ನನ್ನ ಬಗ್ಗೆ ಪ್ರಕಟವಾಗಿರುವ ಕೆಲವು ವರದಿಗಳು ಸತ್ಯವಾಗಿರಬಹುದು ಮತ್ತು ಕೆಲವು ಸುಳ್ಳಾಗಿರಬಹುದು’ ಎಂದಿದ್ದಾರೆ.

‘ಸಿಂಧೂರ ವಿಚಾರ– ವಿಷಾದ ಇಲ್ಲ’

ಕೇರಳ ಸಾಹಿತ್ಯ ಉತ್ಸವದ ಗೋಷ್ಠಿಯಲ್ಲಿ ಮಾತನಾಡಿದ ತರೂರ್, ‘ಆಪರೇಷನ್ ಸಿಂಧೂರ ವಿಚಾರದಲ್ಲಿ ಕಠಿಣ ನಿಲುವು ತೆಗೆದುಕೊಂಡಿದ್ದೆ ಮತ್ತು ಈ ಬಗ್ಗೆ ನನಗೆ ಯಾವುದೇ ವಿಷಾದ ಇಲ್ಲ’ ಎಂದು ಹೇಳಿದ್ದಾರೆ.

‘ಪಹಲ್ಗಾಮ್‌ನಲ್ಲಿ ಭಯೋತ್ಪಾದಕರು ದಾಳಿ ನಡೆಸಿದ ನಂತರ ದಿನಪತ್ರಿಕೆಗೆ ಅಂಕಣ ಬರೆದಿದ್ದೆ. ಈ ಕೃತ್ಯವು ಶಿಕ್ಷೆಗೆ ಅರ್ಹವಾದದ್ದು. ಸೇನಾ ಕಾರ್ಯಾಚರಣೆ ಮೂಲಕ ತಕ್ಕ ಉತ್ತರ ನೀಡಬೇಕು ಎಂದು ಹೇಳಿದ್ದೆ’ ಎಂದಿದ್ದಾರೆ.

‘ಭಾರತವು ಅಭಿವೃದ್ಧಿ ಕಡೆ ಕೇಂದ್ರೀಕರಿಸಿದ್ದರೂ ಪಾಕಿಸ್ತಾನದೊಂದಿಗಿನ ದೀರ್ಘಕಾಲದ ಸಂಘರ್ಷಕ್ಕೆ ಅದನ್ನು ಎಳೆಯಬಾರದು. ಯಾವುದೇ ಕ್ರಮವು ಭಯೋತ್ಪಾದಕ ಶಿಬಿರಗಳನ್ನು ಗುರಿಯಾಗಿಸುವುದಕ್ಕೆ ಸೀಮಿತವಾಗಿರಬೇಕು ಎಂದು ಹೇಳಿದ್ದೆ. ಅದನ್ನೇ ಕೇಂದ್ರ ಸರ್ಕಾರ ಮಾಡಿತು. ಇದು ನನಗೆ ಆಶ್ಚರ್ಯ ತಂದಿತು’ ಎಂದು ತಿಳಿಸಿದ್ದಾರೆ.

‘ನಾನೇ ಮಾಡಿದ ಶಿಫಾರಸು ಕುರಿತು ನಾನೇ ಟೀಕಿಸಬೇಕು ಎಂಬುದನ್ನು ಹೇಗೆ ನಿರೀಕ್ಷಿಸಲು ಸಾಧ್ಯ? ಆಪರೇಷನ್ ಸಿಂಧೂರ ಕಾರ್ಯಾಚರಣೆ ಹಾಗೂ ಆ ನಂತರವೂ ನಾನು ಅದನ್ನು ಸಂಪೂರ್ಣವಾಗಿ ಬೆಂಬಲಿಸಿದೆ’ ಎಂದಿದ್ದಾರೆ.

ಕೇಂದ್ರ ಸರ್ಕಾರವು ಆಪರೇಷನ್ ಸಿಂಧೂರದ ನಂತರ ರಾಜತಾಂತ್ರಿಕ ಕಾರ್ಯಾಚರಣೆಯ ಭಾಗವಾಗಿ ವಿದೇಶಗಳಿಗೆ ಕಳುಹಿಸಿದ್ದ ಸರ್ವ ಪಕ್ಷಗಳ ನಿಯೋಗದಲ್ಲಿ ತರೂರ್ ಸಹ ಇದ್ದರು. ಇದಕ್ಕೆ ಕಾಂಗ್ರೆಸ್ ಆಕ್ಷೇಪ ವ್ಯಕ್ತಪಡಿಸಿತ್ತು.

ಶಾಲೆಗಳಲ್ಲಿ ವೃತ್ತಿ ಸಲಹೆಗಾರರ ನೇಮಿಸಿ: ಸಿಬಿಎಸ್‌ಇ

ಕೋಟಾ (ಪಿಟಿಐ): ಎಲ್ಲ ಶಾಲೆಗಳಲ್ಲಿ ಮಾನಸಿಕ ಆರೋಗ್ಯ ಮತ್ತು ವೃತ್ತಿ ಸಲಹೆಗಾರರ ನೇಮಕವನ್ನು ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿಯು (ಸಿಬಿಎಸ್‌ಇ) ಕಡ್ಡಾಯಗೊಳಿಸಿದೆ.

500 ವಿದ್ಯಾರ್ಥಿಗಳಿಗೆ ತಲಾ ಒಬ್ಬರನ್ನು ನೇಮಿಸಿಕೊಳ್ಳುವಂತೆ ಸಿಬಿಎಸ್‌ಇ ಜ.19ರಂದು ಹೊರಡಿಸಿರುವ ಸುತ್ತೋಲೆಯಲ್ಲಿ ತಿಳಿಸಿದೆ.

ಸಿಬಿಎಸ್‌ಇ ಮಾನ್ಯತೆ ಪಡೆದಿರುವ ಎಲ್ಲ ಶಾಲೆಗಳಿಗೆ ಈ ನಿಯಮವನ್ನು ಕಡ್ಡಾಯಗೊಳಿಸಲಾಗಿದೆ. ವಿದ್ಯಾರ್ಥಿಗಳ ಮಾನಸಿಕ ಆರೋಗ್ಯವನ್ನು ಬಲಪಡಿಸುವ ಮತ್ತು ಅವರಿಗೆ ವೃತ್ತಿ ಮಾರ್ಗದರ್ಶನ ನೀಡುವ ಗುರಿ ಹೊಂದಿರುವ ಮಹತ್ವದ ನೀತಿ ಸುಧಾರಣೆಯಡಿ ಸಿಬಿಎಸ್‌ಇ ಈ ಕ್ರಮ ಕೈಗೊಂಡಿದೆ.

ಕೋಟಾದ ವಕೀಲ ಸುಜೀತ್ ಸ್ವಾಮಿ ಮತ್ತು ಕೆಲವು ಮನೋವಿಜ್ಞಾನ ತಜ್ಞರು 2025ರ ಜುಲೈನಲ್ಲಿ ರಾಜಸ್ಥಾನ ಹೈಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯನ್ನು (ಪಿಐಎಲ್) ಸಲ್ಲಿಸಿದ ನಂತರ, ರಾಷ್ಟ್ರೀಯ ಶಿಕ್ಷಣ ಮಂಡಳಿಯು ಸಿಬಿಎಸ್‌ಇ ನಿಬಂಧನೆಗಳಲ್ಲಿ ತಿದ್ದುಪಡಿ ಮಾಡಿದೆ.

ರಾಜಸ್ಥಾನ ಹೈಕೋರ್ಟ್ 2025ರ ಸೆಪ್ಟೆಂಬರ್‌ನಲ್ಲಿ ವಿಚಾರಣೆ ನಡೆಸಿದ ಸಂದರ್ಭ ಸಿಬಿಎಸ್‌ಇ, ಆರ್‌ಬಿಎಸ್‌ಇ, ವಿಶ್ವವಿದ್ಯಾಲಯ ಧನಸಹಾಯ ಆಯೋಗ ಮತ್ತು ರಾಜ್ಯ ಸರ್ಕಾರದಿಂದ ಪ್ರತಿಕ್ರಿಯೆ ಕೋರಿತ್ತು. ಪ್ರತಿಕ್ರಿಯೆ ಸಲ್ಲಿಸಿದ ಬಳಿಕ ಸಿಬಿಎಸ್‌ಇ ಈ ಸುತ್ತೋಲೆ ಹೊರಡಿಸಿದೆ.

ಶೈಕ್ಷಣಿಕ ಒತ್ತಡ ಮತ್ತು ರಚನಾತ್ಮಕ ವೃತ್ತಿ ಮಾರ್ಗದರ್ಶನದ ಕೊರತೆ ಸೇರಿದಂತೆ ವಿದ್ಯಾರ್ಥಿಗಳಲ್ಲಿ ಹೆಚ್ಚುತ್ತಿರುವ ಮಾನಸಿಕ ಆರೋಗ್ಯ ಸವಾಲುಗಳನ್ನು ಪಿಐಎಲ್‌ನಲ್ಲಿ ಉಲ್ಲೇಖಿಸಲಾಗಿದೆ.

ಓಪನ್ ಸೀ ಈಜು ಸ್ಪರ್ಧೆ ನಾಳೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಮುಕುಂದ್ ರಿಯಾಲಿಟಿ ಸಂಸ್ಥೆಯ ಸಹಯೋಗದಲ್ಲಿ ಮಂಗಳೂರು ಸರ್ಫ್ ಕ್ಲಬ್ ಆಯೋಜಿಸಿರುವ ‘ಡೆನ್ ಡೆನ್’ ಅಂತರರಾಷ್ಟ್ರೀಯ ಓಪನ್ ವಾಟರ್ ಈಜು ಚಾಂಪಿಯನ್‌ಷಿಪ್‌ನ ಮೂರನೇ ಆವೃತ್ತಿ ಜ.26ರಂದು ತಣ್ಣೀರುಬಾವಿ ಸಮುದ್ರದಲ್ಲಿ ನಡೆಯಲಿದೆ.

ಹಿಂದಿನ ಎರಡು ಆವೃತ್ತಿಗಳಲ್ಲಿ 6 ಕಿಲೊಮೀಟರ್, 4 ಕಿ.ಮೀ., 2ಕಿ.ಮೀ. ಮತ್ತು 500 ಮೀ. ವಿಭಾಗಗಳಲ್ಲಿ ಸ್ಪರ್ಧೆ ನಡೆದಿತ್ತು. ಈ ಬಾರಿ 8 ಕಿಮೀ ವಿಭಾಗವನ್ನು ಸೇರಿಸಲಾಗಿದೆ. 400ಕ್ಕೂ ಹೆಚ್ಚು ಸ್ಪರ್ಧಿಗಳು ಭಾಗವಹಿಸುವ ನಿರೀಕ್ಷೆಯಿದೆ ಎಂದು ಮಂಗಳೂರು ಸರ್ಫ್ ಕ್ಲಬ್ ಅಧ್ಯಕ್ಷ ಪದ್ಮನಾಭ ನಾಯಕ್ ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದರು. ಬೆಳಿಗ್ಗೆ 6.30ಕ್ಕೆ ಕೋಸ್ಟ್ ಗಾರ್ಡ್ ಡಿಐಜಿ ಪಿ.ಕೆ. ಮಿಶ್ರಾ ಸ್ಪರ್ಧೆಗೆ ಚಾಲನೆ ನೀಡುವರು.

ಬೀಟರ್ಸ್, ಸ್ಟ್ರೈಕರ್ಸ್ ಮೇಲುಗೈ

ಮಂಗಳೂರು: ಬಿಗ್ ಬೀಟರ್ಸ್ ಮತ್ತು ಎಸ್.ಆರ್ ಸ್ಟ್ರೈಕರ್ಸ್ ತಂಡಗಳು ನಗರದಲ್ಲಿ ಶನಿವಾರ ಆರಂಭಗೊಂಡ ತುಳುನಾಡು ನಮ್ಮ ಪ್ರೀಮಿಯರ್ ಲೀಗ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಮೇಲುಗೈ ಸಾಧಿಸಿದವು.

ದಕ್ಷಿಣ ಕನ್ನಡ ಬ್ಯಾಡ್ಮಿಂಟನ್ ಸಂಸ್ಥೆಯ ಸಹಯೋಗದಲ್ಲಿ ಉರ್ವ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಟೂರ್ನಿಯ ‘ಬಿ’ ಗುಂಪಿನಲ್ಲಿ ಬಿಗ್ ಬೀಟರ್ಸ್ ತಂಡ ಮತ್ಸ್ಯರಾಜ್ ಮಲ್ಪೆ ವಿರುದ್ಧ 4–3ರಲ್ಲಿ ಜಯ ಗಳಿಸಿತು. ‘ಎ’ ಗುಂಪಿನಲ್ಲಿ ಎಸ್.ಆರ್ ಸ್ಟ್ರೈಕರ್ಸ್ 4–3ರಲ್ಲಿ ಫೆದರ್ ಫೈಟರ್ಸ್ ವಿರುದ್ಧ ಗೆದ್ದಿತು.

‘ಎ’ ಗುಂಪಿನ ಮತ್ತೊಂದು ಹಣಾಹಣಿಯಲ್ಲಿ ಎಲ್‌ಎಸ್‌ಎಂ ಇಂಡಿಯನ್ಸ್ ತಂಡ ವೀರ್ ಗೋಲ್ಡನ್ ಈಗಲ್ಸ್ ಎದುರು 4–3ರ ಗೆಲುವು ದಾಖಲಿಸಿತು. ‘ಬಿ’ ಗುಂಪಿನಲ್ಲಿ ಡೇರಿಂಗ್ ಜಾಗ್ವಾರ್ಸ್ 4–3ರಲ್ಲಿ ನ್ಯಾಷನಲ್ ಸ್ಮ್ಯಾಷರ್ಸ್ ತಂಡವನ್ನು ಮಣಿಸಿತು.

ಕಾರ್ತಿಕೇಯ ದ್ವಿಶತಕ: ಕರ್ನಾಟಕ ಬಿಗಿಹಿಡಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾರ್ತಿಕೇಯ ಕೆ.ಪಿ. ಅವರು ಅಮೋಘ ದ್ವಿಶತಕ ಬಾರಿಸಿದರೆ, ನಾಯಕ ಅನೀಶ್ವರ್ ಗೌತಮ್ ಮತ್ತು ಹರ್ಷಿಲ್ ಧರ್ಮಾನಿ ಅವರು ಮಿಂಚಿನ ಶತಕ ಸಿಡಿಸಿದರು. ಈ ಮೂವರು ಹರಿಸಿದ ರನ್ ಹೊಳೆಯಿಂದಾಗಿ ಕರ್ನಾಟಕ ತಂಡವು ಕರ್ನಲ್ ಸಿ.ಕೆ. ನಾಯ್ಡು ಟ್ರೋಫಿ ಕ್ರಿಕೆಟ್ (23 ವರ್ಷ ದೊಳಗಿನವರ) ಟೂರ್ನಿಯಲ್ಲಿ ಚಂಡೀಗಢ ವಿರುದ್ಧ ಬಿಗಿಹಿಡಿತ ಸಾಧಿಸಿದೆ.



ಆಲೂರು ಕೆಎಸ್‌ಸಿಎ ಕ್ರೀಡಾಂಗಣ (3)ದಲ್ಲಿ ನಡೆಯುತ್ತಿರುವ ಪಂದ್ಯದಲ್ಲಿ ಆತಿಥೇಯ ತಂಡವು 138.2 ಓವರ್‌ಗಳಲ್ಲಿ ನಾಲ್ಕು ವಿಕೆಟ್‌ಗೆ 634 ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿತು. ಇದಕ್ಕೆ ಉತ್ತರವಾಗಿ ಇನಿಂಗ್ಸ್ ಆರಂಭಿಸಿದ ಚಂಡೀಗಢ ತಂಡವು ಶನಿವಾರ ಎರಡನೇ ದಿನದಾಟದ ಮುಕ್ತಾಯಕ್ಕೆ 40 ಓವರ್‌ಗಳಲ್ಲಿ 3 ವಿಕೆಟ್‌ಗೆ 98 ರನ್ ಗಳಿಸಿ ಸಂಕಷ್ಟದಲ್ಲಿದೆ.

ಎರಡು ವಿಕೆಟ್‌ಗೆ 369 ರನ್‌ಗಳೊಂದಿಗೆ ದಿನದ ಆಟ ಆರಂಭಿಸಿದ ಕರ್ನಾಟಕ ತಂಡವು ಬಿರುಸಿನ ಬ್ಯಾಟಿಂಗ್‌ಗೆ ಒತ್ತು ನೀಡಿತು. ಶುಕ್ರವಾರ ಔಟಾಗದೇ 155 ರನ್ ಗಳಿಸಿದ್ದ 20 ವರ್ಷದ ಕಾರ್ತಿಕೇಯ (200; 233ಎ, 4x14, 6x10) ಅವರು ದ್ವಿಶತಕವನ್ನು ಪೂರೈಸಿದ ಬೆನ್ನಲ್ಲೇ ವಿಕೆಟ್ ಒಪ್ಪಿಸಿದರು. ನಂತರದಲ್ಲಿ ಅನೀಶ್ವರ್ (ಔಟಾಗದೇ 110;11ಎ, 4X6, 6X7) ಮತ್ತು ಹರ್ಷಿಲ್ (ಔಟಾಗದೇ 100;93ಎ, 4X11, 6X4) ಅವರು ಎದುರಾಳಿ ಬೌಲರ್‌ಗಳನ್ನು ದಂಡಿಸಿದರು.

ಸಂಕ್ಷಿಪ್ತ ಸ್ಕೋರ್: ಕರ್ನಾಟಕ: 138.2 ಓವರ್‌ಗಳಲ್ಲಿ 4 ವಿಕೆಟ್‌ಗೆ 634 ಡಿಕ್ಲೇರ್ಡ್ (ಕಾರ್ತಿಕೇಯ ಕೆ.ಪಿ. 200, ಧ್ರುವ್ ಪ್ರಭಾಕರ್ 80, ಅನೀಶ್ವರ್ ಗೌತಮ್ ಔಟಾಗದೇ 110, ಹರ್ಷಿಲ್ ಧರ್ಮಾನಿ ಔಟಾಗದೇ 100). ಚಂಡೀಗಢ: 40 ಓವರ್‌ಗಳಲ್ಲಿ 3 ವಿಕೆಟ್‌ಗೆ 98 (ದುಷ್ಯಂತ್ 59; ಮೊಹ್ಸಿನ್ ಖಾನ್ 29ಕ್ಕೆ 2).

ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿ: ಯಾನಿಕ್ ಸಿನ್ನರ್, ಮ್ಯಾಡಿಸನ್ ಮುನ್ನಡೆ

ಜೊಕೊವಿಚ್ ಮತ್ತೊಂದು ಮೈಲಿಗಲ್ಲು

ಮೆಲ್ಬರ್ನ್ (ಎಎಫ್‌ಪಿ): ಹತ್ತು ಬಾರಿಯ ಚಾಂಪಿಯನ್ ನೊವಾಕ್ ಜೊಕೊವಿಚ್ ಅವರು ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿಯಲ್ಲಿ ನಾಲ್ಕನೇ ಸುತ್ತು ಪ್ರವೇಶಿಸುವ ಹಾದಿಯಲ್ಲಿ ಮತ್ತೊಂದು ಮೈಲಿಗಲ್ಲು ಸ್ಥಾಪಿಸಿದರು. ಆದರೆ, ಎರಡು ಬಾರಿಯ ಪ್ರಶಸ್ತಿ ವಿಜೇತೆ ನವೋಮಿ ಒಸಾಕಾ ಅವರು ಮೂರನೇ ಸುತ್ತಿನಲ್ಲೇ ಅಭಿಯಾನ ಮುಗಿಸಿದರು.

ಟೂರ್ನಿಯ ಏಳನೇ ದಿನವಾದ ಶನಿವಾರ ಮಧ್ಯಾಹ್ನದ ಉರಿ ಬಿಸಿಲಿನ ಬೇಗೆಯಿಂದಾಗಿ ಮೆಲ್ಬರ್ನ್ ಪಾರ್ಕ್‌ನ ಹೊರಾಂಗಣ ಅಂಕಣಗಳಲ್ಲಿ ಐದು ಗಂಟೆ ಪಂದ್ಯಗಳನ್ನು ಸ್ಥಗಿತಗೊಳಿಸಲಾಯಿತು. ಈ ಮಧ್ಯೆ, ಹಾಲಿ ಚಾಂಪಿಯನ್ನರಾದ ಯಾನಿಕ್ ಸಿನ್ನರ್ (ಪುರುಷರ ಸಿಂಗಲ್ಸ್) ಮತ್ತು ಮ್ಯಾಡಿಸನ್ ಕೀಸ್ (ಮಹಿಳೆಯರ ಸಿಂಗಲ್ಸ್) ಅವರು ಪ್ರಿ ಕ್ವಾರ್ಟರ್ ಫೈನಲ್‌ಗೆ ಲಗ್ಗೆ ಹಾಕಿದರು. ಪೋಲೆಂಡ್‌ನ ಇಗಾ ಶ್ವಾಂಟೆಕ್ ಮತ್ತು ಇಟಲಿಯ ಲೊರೆಂಜೊ ಮುಸೆಟ್ಟಿ ಅವರು ನಾಲ್ಕನೇ ಸುತ್ತು ಪ್ರವೇಶಿಸುವ ಮುನ್ನ ಸಾಕಷ್ಟು ಬೆವರು ಹರಿಸಿದರು.

ದಾಖಲೆಯ 25ನೇ ಗ್ರ್ಯಾನ್‌ಸ್ಲಾಮ್ ಕಿರೀಟದ ನಿರೀಕ್ಷೆಯಲ್ಲಿರುವ ಸರ್ಬಿಯಾದ ತಾರೆ ಜೊಕೊವಿಚ್ 6-3, 6-4, 7-6(4) ರಿಂದ ನೆದರ್ಲೆಂಡ್ಸ್‌ನ ಬೋಟಿಕ್ ವ್ಯಾನ್ ಡಿ ಝಂಡ್‌ಸ್ಕುಲ್ಪ್ ಅವರನ್ನು ಮಣಿಸಿದರು. ಇದರೊಂದಿಗೆ ಮೆಲ್ಬರ್ನ್ ಪಾರ್ಕ್‌ನಲ್ಲಿ 102ನೇ ಗೆಲುವು ಸಾಧಿಸಿ, ಸ್ವಿಟ್ಜರ್ಲೆಂಡ್‌ನ ರೋಜರ್ ಫೆಡರರ್ ಅವರ ದಾಖಲೆಯನ್ನು ಸರಿಗಟ್ಟಿದರು.



ಗೆಲುವಿನ ಸಂಭ್ರಮದಲ್ಲಿ ನೊವಾಕ್ ಜೊಕೊವಿಚ್ ಎಎಫ್‌ಪಿ ಚಿತ್ರ

ಭಾಂಬ್ರಿ ಮುನ್ನಡೆ, ಬಾಲಾಜಿಗೆ ನಿರಾಸೆ

ಮೆಲ್ಬರ್ನ್ (ಪಿಟಿಐ): ಪುರುಷರ ಡಬಲ್ಸ್‌ನಲ್ಲಿ ಭಾರತಕ್ಕೆ ಮಿಶ್ರಫಲ. ಅನುಭವಿ ಆಟಗಾರ ಯೂಕಿ ಭಾಂಬ್ರಿ ಅವರು ಮೂರನೇ ಸುತ್ತು ಪ್ರವೇಶಿಸಿದರೆ, ಎನ್. ಶ್ರೀರಾಮ್ ಬಾಲಾಜಿ ಎರಡನೇ ಸುತ್ತಿನಲ್ಲಿ ಹೊರಬಿದ್ದರು.

10ನೇ ಶ್ರೇಯಾಂಕದ ಭಾಂಬ್ರಿ ಮತ್ತು ಸ್ವೀಡನ್‌ನ ಜೊತೆಗಾರ ಆ್ಯಂಡ್ರೆ ಗೊರಾನ್ಸನ್ ಅವರು ಮೊದಲ ಸೆಟ್‌ನ ಹಿನ್ನಡೆಯಿಂದ ಚೇತರಿಸಿಕೊಂಡು 4-6, 7-6(5), 6-3 ರಿಂದ ಸ್ಯಾಂಟಿಯಾಗೊ ಗೊನ್ಜಾಲೆಜ್ ಮತ್ತು ಡೇವಿಡ್ ಪೆಲ್ (ಮೆಕ್ಸಿಕೊ–ನೆದರ್ಲೆಂಡ್ಸ್) ಅವರನ್ನು ಹಿಮ್ಮೆಟ್ಟಿಸಿದರು.

ಮಾತ್ರವಲ್ಲದೆ, ಗ್ರ್ಯಾನ್‌ಸ್ಲಾಮ್ ಟೂರ್ನಿಗಳಲ್ಲಿ 400ನೇ ಜಯ ಗಳಿಸಿದ ವಿಶ್ವದ ಮೊದಲ ಆಟಗಾರ ಎಂಬ ಹಿರಿಮೆಗೂ ಪಾತ್ರವಾದರು.

ನಾಲ್ಕನೇ ಶ್ರೇಯಾಂಕದ ಜೊಕೊವಿಚ್‌ಗೆ ಮುಂದಿನ ಎದುರಾಳಿ 16ನೇ ಶ್ರೇಯಾಂಕದ ಜೇಕಬ್ ಮೆನ್ಸಿಕ್. ಝೆಕ್ ರಿಪಬ್ಲಿಕ್‌ನ ಮೆನ್ಸಿಕ್ 6-2, 7-6 (5), 7-6 (5)ರಿಂದ ಅಮೆರಿಕದ ಏಥಾನ್ ಕ್ವಿನ್ ಅವರನ್ನು ಮಣಿಸಿದರು.

ಹ್ಯಾಟ್ರಿಕ್ ಪ್ರಶಸ್ತಿಯ ಪ್ರಯತ್ನದಲ್ಲಿರುವ ಇಟಲಿಯ ಸಿನ್ನರ್ ಮೊದಲ ಸೆಟ್‌ನ ಹಿನ್ನಡೆಯಿಂದ ಚೇತರಿಸಿಕೊಂಡು 4-6, 6-3, 6-4, 6-4 ರಿಂದ ಅಮೆರಿಕದ ಎಲಿಯಟ್ ಸ್ಪಿಜ್ಜಿರಿ ವಿರುದ್ಧ ಗೆಲುವು ಸಾಧಿಸಿದರು. 85ನೇ ಕ್ರಮಾಂಕದ ಎಲಿಯಟ್ ಮೊದಲ ಸೆಟ್ ಗೆದ್ದು, ಎರಡನೇ ಶ್ರೇಯಾಂಕದ ಆಟಗಾರನನ್ನು ಒತ್ತಡಕ್ಕೆ ಸಿಲುಕಿಸಿದರು. ಆದರೆ, ಸಿನ್ನರ್ ನಂತರದ ಮೂರು ಸೆಟ್‌ಗಳನ್ನು ಗೆದ್ದುಕೊಂಡರು.

ಐದನೇ ಶ್ರೇಯಾಂಕದ ಮುಸೆಟ್ಟಿ ಐದು ಸೆಟ್‌ಗಳ ಹೋರಾಟದಲ್ಲಿ ಗೆದ್ದು ಬೀಗಿದರು. ಇಟಲಿಯ ಆಟಗಾರ 5-7, 6-4, 6-2, 5-7, 6-2ರಿಂದ ಝೆಕ್ ರಿಪಬ್ಲಿಕ್‌ನ ಥಾಮಸ್ ಮಚಾಕ್ ಅವರನ್ನು ಮಣಿಸಿದರು. ಒಂಬತ್ತನೇ ಶ್ರೇಯಾಂಕದ ಟೇಲರ್ ಫ್ರಿಟ್ಜ್ 7-6 (7/5), 2-6, 6-4, 6-4ರಿಂದ ಸ್ಟಾನ್ ವಾವ್ರಿಂಕಾ ಅವರನ್ನು ಸೋಲಿಸಿದರು.

ಹಿಂದೆ ಸರಿದ ಒಸಾಕಾ: 2019 ಮತ್ತು 2021ರ ಚಾಂಪಿಯನ್ ಒಸಾಕಾ, ಮಹಿಳೆಯರ ಸಿಂಗಲ್ಸ್ ಮೂರನೇ ಸುತ್ತಿನಲ್ಲಿ ಆಸ್ಟ್ರೇಲಿಯಾದ ಮ್ಯಾಡಿಸನ್ ಇಂಗ್ಲಿಸ್ ವಿರುದ್ಧ ಸ್ಪರ್ಧಿಸಬೇಕಿತ್ತು. ಆದರೆ, ಹೊಟ್ಟೆಭಾಗದ ಗಾಯದಿಂದಾಗಿ ಸ್ಪರ್ಧೆಯಿಂದ ಹಿಂದೆ ಸರಿದರು. ಶ್ವಾಂಟೆಕ್ 6-1, 1-6, 6-1ರಿಂದ ರಷ್ಯಾದ ಅನ್ನಾ ಕಲಿನ್‌ಸ್ಕಯಾ ವಿರುದ್ಧ ಪ್ರಯಾಸದ ಗೆಲುವು ಸಾಧಿಸಿದರು.

ಪ್ರಶಸ್ತಿಯನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಮತ್ತೊಂದು ಹೆಜ್ಜೆ ಮುಂದಿಟ್ಟಿರುವ ಅಮೆರಿಕದ ಮ್ಯಾಡಿಸನ್ 6-3, 6-3ರಿಂದ ಝೆಕ್ ರಿಪಬ್ಲಿಕ್‌ನ ಕರೋಲಿನಾ ಮುಚೋವಾ ಅವರನ್ನು ಸದೆಬಡಿದರು. ಒಂಬತ್ತನೇ ಶ್ರೇಯಾಂಕದ ಅವರು ಮುಂದಿನ ಸುತ್ತಿನಲ್ಲಿ ತಮ್ಮದೇ ದೇಶದ ಜೆಸ್ಸಿಕಾ ಪೆಗುಲಾ ಅವರನ್ನು ಎದುರಿಸಲಿದ್ದಾರೆ. ಆರನೇ ಶ್ರೇಯಾಂಕದ ಪೆಗುಲಾ 6-3, 6-2ರಿಂದ ರಷ್ಯಾದ ಒಕ್ಸಾನಾ ಸೆಲೆಖ್ಮೆಟೆವಾ ಅವರನ್ನು ಮಣಿಸಿದರು.

ಚಲಿಸುವ ಆಗಸದಡಿ ಇಷ್ಟೆಲ್ಲ...
ಬೆಂಗಳೂರಿನ ಕಸ್ತೂರಬಾ ರಸ್ತೆಯಲ್ಲಿರುವ ದಿ ಮ್ಯೂಸಿಯಂ ಆಫ್ ಆರ್ಟ್ ಆ್ಯಂಡ್ ಫೋಟೋಗ್ರಫಿಯಲ್ಲಿ ತೆರೆದುಕೊಂಡಿರುವ ಕಲಾಲೋಕದಲ್ಲೊಂದು ಸುತ್ತು... 10



ಸೆಲೆಬ್ರಿಟಿ 'ಅಲೋಕ'ನ ಶಾಂತಿ ನಡಿಗೆ...



ನಾನೂ ನಿಮ್ ಜೊತೆ ಹೆಜ್ಜೆ ಹಾಕ್ತೀನಿ...

• ಸುಕೃತ ಎಸ್.

'ಅಲೋಕ' ಈಗ ವಿಶ್ವದಲ್ಲಿ ದೊಡ್ಡ ಸೆಲೆಬ್ರಿಟಿ!

ಈತನ ಆಟ, ನಡಿಗೆಯ ರೀಲ್ಸ್ ಜಾಲತಾಣಗಳಲ್ಲಿ ಜೋರಾಗಿ ಸದ್ದು ಮಾಡುತ್ತಿವೆ. ಇವನಿಗಾಗಿಯೇ ಫೇಸ್‌ಬುಕ್‌ನಲ್ಲಿ, ಇನ್‌ಸ್ಟಾಗ್ರಾಮ್‌ನಲ್ಲಿ ಪೇಜ್‌ಗಳಿವೆ. ಬಿಕ್ಕುಗಳು ನಡೆಯುವ ರಸ್ತೆಯ ಬದಿಯಲ್ಲಿ ಜನರು 'ಅಲೋಕ'ನಿಗಾಗಿ ಕಾಯ್ದು ಕುಳಿತುಕೊಳ್ಳುತ್ತಾರೆ. ಬಿಕ್ಕುಗಳಿಗೆ ಹೂವು ನೀಡಿ ಸ್ವಾಗತಿಸಿದರೆ, ಈತನಿಗೆ ಟ್ರೀಟ್ (ಆಹಾರ) ನೀಡುತ್ತಾರೆ. ಪುಟಾಣಿಗಳಂತೂ ಈತನೊಂದಿಗೆ ಆಟವಾಡಲು ಕಾತರರಾಗಿರುತ್ತಾರೆ. ಇವನಿಗೂ ಹಾಗೆಯೇ, ಮಕ್ಕಳೆಂದರೆ ಅಚ್ಚುಮೆಚ್ಚು. ಪುಟಾಣಿಗಳು ಇವನ ಮೂತಿ ತಿಕ್ಕಿ, ಕುತ್ತಿಗೆ ಹಿಡಿದು ಆಲಂಗಿಸಿ ಮುದ್ದಿಸಿ, ಚುಂಬಿಸುತ್ತಾರೆ. ಇವನು ಮುದ್ದು ಮಾಡಿಸಿಕೊಳ್ಳುತ್ತಾ, ನಗುತ್ತಾ ಕುಳಿತಿರುತ್ತಾನೆ. ಫೋಟೊಗೆ ಪೋಸು ಕೊಡುವುದು ಎಂದರೆ ಎಲ್ಲಿಲ್ಲದ ಖುಷಿ. ದಾರಿಯಲ್ಲಿ ಸಿಗುವ ಎಲ್ಲರೊಂದಿಗೆ ಫೋಟೊ ತೆಗೆಸಿಕೊಳ್ಳುತ್ತಾ, ವಿಡಿಯೊ ಮಾಡುವಾಗ ಮೊಬೈಲ್ ಮೂಸಿ ನೋಡುತ್ತಾ, ಮುಂದೆ ಹೋಗುವುದು ಈ ತುಂಟನ ಚಾಳಿ.

ಅಂದಹಾಗೆ ಈ 'ಅಲೋಕ' ಯಾರು ಅಂದುಕೊಂಡಿದ್ದೀರಿ? ಬಿಕ್ಕುಗಳ ಜೊತೆ ವಿಶ್ವಶಾಂತಿಗಾಗಿ ಹೆಜ್ಜೆ ಹಾಕುತ್ತಿರುವ ಭಾರತದ ಬೀದಿನಾಯಿ!

ಬುದ್ಧ ಹುಟ್ಟಿದ ದಿನ ಮತ್ತು ಆತನಿಗೆ ಜ್ಞಾನೋದಯವಾದ ದಿನವನ್ನು ರಾಷ್ಟ್ರೀಯ ರಜೆ ದಿನವನ್ನಾಗಿ ಘೋಷಿಸಬೇಕು ಎನ್ನುವುದು ಪನ್ನಕರ ಬಿಕ್ಕು ಅವರ ಬೇಡಿಕೆ. ಇದಕ್ಕಾಗಿ ತಮ್ಮ ನೇತೃತ್ವದಲ್ಲಿ ಹತ್ತೊಂಬತ್ತು ಬಿಕ್ಕುಗಳನ್ನು ಸೇರಿಸಿಕೊಂಡು ಅಕ್ಟೋಬರ್ 26, 2025 ರಿಂದ ಅಮೆರಿಕದಲ್ಲಿ ನಡಿಗೆ ಆರಂಭಿಸಿದ್ದಾರೆ. ಟೆಕ್ಸಾಸ್‌ನಿಂದ ಶುರುವಾಗಿ ಹನ್ನೆರಡು ರಾಜ್ಯಗಳನ್ನು ದಾಟಿ ಫೆಬ್ರುವರಿ, 2026ರ ಮಧ್ಯದಲ್ಲಿ ವಾಷಿಂಗ್ಟನ್ ಸೇರುವುದು ಇವರ ಯೋಜನೆ. ಒಟ್ಟು 3,700 ಕಿಲೋಮೀಟರ್‌ಗಳು ನಡೆಯುವುದು ಇವರ ಗುರಿ. ಇವರೊಂದಿಗೆ 'ಅಲೋಕ'ನೂ ಇದ್ದಾನೆ.



ಅಲೋಕ

ಅಮೆರಿಕ ತಲುಪಿದ ಮೇಲೆ 'ಅಲೋಕ' 'ದಿ ಪೀಸ್ ಡಾಗ್' ಎಂದು ಮರುನಾಮಕರಣಗೊಂಡಿದ್ದಾನೆ. ಹೆಸರಷ್ಟೇ ಬದಲು, ಉಳಿದೆಲ್ಲವೂ ಅವೇ ಗುಣಗಳು.

'ಅಲೋಕ' ಬಿಕ್ಕುಗಳನ್ನು ಸೇರಿಕೊಂಡಿದ್ದು ಹೇಗೆ ಎನ್ನುವುದನ್ನು ಹೇಳಿಬಿಡುತ್ತೇನೆ. ಅದು 2022. ಪನ್ನಕರ, ಕೆಲವು ಬಿಕ್ಕುಗಳೊಂದಿಗೆ ಜಗತ್ತಿನ ಶಾಂತಿಗಾಗಿ ಭಾರತದಲ್ಲಿ ನಡಿಗೆ ಆರಂಭಿಸಿದ್ದರು. ಭಾರತದಲ್ಲಿ ಅವರು ಸುಮಾರು 112 ದಿನಗಳ ನಡಿಗೆಯನ್ನು ಪೂರ್ಣಗೊಳಿಸಿದ್ದರು. ಇಲ್ಲಿಂದ ನೇಪಾಳಕ್ಕೆ ತೆರಳುವುದು ಅವರ ಯೋಜನೆ. ಪಶ್ಚಿಮ ಬಂಗಾಳದ ಕೋಲ್ಕತ್ತದ ವಿಮಾನ ನಿಲ್ದಾಣದ ಬಳಿ ಅವರು ನಡೆಯುತ್ತಿದ್ದರು. ಅಲ್ಲೇ ಬೀದಿಬದಿ ಮಲಗಿದ್ದ ನಾಯಿಮರಿಯೊಂದು ಅವರನ್ನು ಹಿಂಬಾಲಿಸಿತು. ಬಿಕ್ಕುಗಳಿಗೆ ಇದರಲ್ಲಿ ವಿಶೇಷವೇನೂ ಕಾಣಿಸಲಿಲ್ಲ. ಅವರು ನಡಿಗೆ ಮುಂದುವರಿಸಿದ್ದರು. ಅವರ ಜೊತೆಗೂಡಿದ್ದ ನಾಯಿಮರಿಯೊಂದಿಗೆ ಇನ್ನೂ ಕೆಲವು ನಾಯಿಗಳು ಜೊತೆಯಾಗಿದ್ದವು. ಆದರೆ, ಅವುಗಳು ಹೆಚ್ಚು ದೂರ ಬರಲಿಲ್ಲ. ಆದರೆ, ಈ ನಾಯಿಮರಿ ಮಾತ್ರ ಅವರನ್ನು ಬಿಡಲಿಲ್ಲ.

ಪನ್ನಕರ ಅವರು ಇದನ್ನೆಲ್ಲ ತುಂಬಾ ಆಪ್ತವಾಗಿ ವಿವರಿಸುತ್ತಾರೆ: 'ಇವನು ಯಾಕೋ ನಮ್ಮನ್ನು ಬಿಡಲೇ ಇಲ್ಲ. ನೇಪಾಳದವರೆಗೂ ನಮ್ಮ ಜೊತೆಗೇ ನಡೆದ. ಮಧ್ಯೆ ಇವನಿಗೆ ಆರೋಗ್ಯದಲ್ಲಿ ಏರುಪೇರಾಯಿತು. ನಾನು ಇವನನ್ನು ಅಪ್ಪಿಕೊಂಡೇ ಆರೈಕೆ ಮಾಡಿದೆ. ಕೆಲವೇ ದಿನಗಳಲ್ಲಿ ಸರಿಹೋದ. ಆಮೇಲೆ ಕಾರು ಅಪಘಾತವಾಯಿತು. ಆಗಲೂ ಇವನ ಆರೈಕೆ ಮಾಡಿದೆ'.

'ಬರು ಬರುತ್ತಾ ಇವನು ನಮಗೆ ನಾಯಕನಾದ. ನಮ್ಮ ಚಾಲನಾಶಕ್ತಿಯಾದ. ನಡೆದು ನಡೆದು ನಮಗೆ ಬೇಸರವಾದರೆ, ಇವನೇ ನಮ್ಮನ್ನು ಎಳೆದು ಮುನ್ನಡೆಸಿದ. ಅದಕ್ಕೆ ಇವನಿಗೆ 'ಅಲೋಕ' ಎಂದು ಹೆಸರಿಟ್ಟೆ. 'ಅಲೋಕ' ಎಂದರೆ, ಪ್ರಕಾಶ ಅಥವಾ ಬೆಳಕು ಎಂಬೆಲ್ಲಾ ಅರ್ಥಗಳಿವೆ. ಈತ ನಮ್ಮ ಆತ್ಮದ ಬೆಳಕು. ಇವನ ಹಣೆಯ ಮೇಲೊಂದು ಹೃದಯದ ಚಿತ್ರವಿದೆ; ಸೂಕ್ಷ್ಮವಾಗಿ ಗಮನಿಸಿ. ಮಮತೆಯ, ಪ್ರೀತಿಯ ಪ್ರತಿರೂಪ ಇವನು' ಎನ್ನುವುದು ಪನ್ನಕರ ಅವರ ಕರುಣೆಯ ಮಾತು.

9ನೇ ಪುಟಕ್ಕೆ...

ಫ್ಯಾಷನ್ ವಾಲಾ...



ಅಮೆರಿಕದಲ್ಲಿ ಈಗಂತೂ ಚಳಿಗಾಲ. ತಣ್ಣಗೆ ಗಾಳಿ ಬೀಸುತ್ತಿರುತ್ತದೆ. ಇವನಿಗೆ ಜಾಕೆಟ್ ಬೇಕು. ಇಲ್ಲ, ಶರ್ಟ್ ಹಾಕಬೇಕು. ಕುತ್ತಿಗೆಗೆ ಹಾಕಲು ಮಫ್ಲರ್ (ಬಂದನ್) ಬೇಕು. ದಿನಕ್ಕೊಂದು ಜಾಕೆಟ್, ಶರ್ಟ್ ಹಾಕಿಕೊಂಡು ಬಿಕ್ಕುಗಳ ಹಿಂದೆ ಮುಂದೆ ಓಡಾಡುತ್ತಾನೆ. ಅವನ ಬಳಿ ಕೆಂಪು, ಗುಲಾಬಿ ಬಣ್ಣದ ಬೂಟುಗಳಿವೆ. ಹೆಚ್ಚು ಕಡಿಮೆ ದಿನವೂ ಅವನು ಸ್ನಾನ ಮಾಡುತ್ತಾನೆ. ಸ್ನಾನಕ್ಕಂತೂ ಸ್ವಲ್ಪವೂ ರಗಳೆ ಮಾಡಲ್ಲ.

ಬಿಕ್ಕುಗಳು ಮಾರುಕಟ್ಟೆಯಲ್ಲಿ ನಿಂತರೆ, ಯಾವುದೇ ಅಂಗಡಿ ಹೊಕ್ಕರೆ ಇವನೂ ಒಳಗೆ ಹೋಗಬೇಕು. ಅವರೊಂದಿಗೆ ಶಾಪಿಂಗ್ ಮಾಡಬೇಕು. ಅಮೆರಿಕದಲ್ಲಿ ಇವನನ್ನು ಕಂಡರೆ ಸಾಕು, ಜನರು ಬಂದು ಮೈಸವರುತ್ತಾರೆ. ಒಂದು ಕಡೆಯಂತೂ ಮಹಿಳೆಯೊಬ್ಬಳು ಮೈಸವರಲು ಬಂದರೆ, ಅಂಗಡಿಯ ನೆಲದ ಮೇಲೆಯೇ ಹೊಟ್ಟೆ ನೀಡಿ ಮಲಗಿಯೇ ಬಿಟ್ಟ ಈ ಪುಣ್ಯಾತ್ಮ.

ಆದಿವಾಸಿಗಳ ಆಪ್ತಗೆಳತಿ ಬೇಬಿ

• ವರ್ಷ ಗೌಡ

ಡಿಸೆಂಬರ್ ಚಳಿಯ ಒಂದು ಮುಂಜಾವು. ರೋಗಿಗಳಿಂದ ತುಂಬಿದ್ದ ಚಾಮರಾಜನಗರ ಜಿಲ್ಲಾ ಆಸ್ಪತ್ರೆಯ ವಾತಾವರಣ ಗದ್ದಲಮಯವಾಗಿತ್ತು. ಅದೇ ವೇಳೆ ಹಾಡಿಯೊಂದರ 18 ವರ್ಷದ ಆದಿವಾಸಿ ಮಹಿಳೆಯನ್ನು ಗಾಲಿಕುರ್ಚಿಯಲ್ಲಿ ಹೆರಿಗೆ ವಾರ್ಡ್‌ಗೆ ಕರೆದುಕೊಂಡು ಬರಲಾಯಿತು. ಅದು ಆಕೆಯ ಚೊಚ್ಚಲ ಗರ್ಭಧಾರಣೆಯಾಗಿದ್ದರಿಂದ ಆರೋಗ್ಯ ಸಮಸ್ಯೆಗಳಿದ್ದವು. ಜನಿಸಿದ ಮಗು ಕೇವಲ 1.22 ಕೆ.ಜಿ ತೂಗುತ್ತಿತ್ತು. ಸೋಂಕಿನಿಂದ ಬಳಲುತ್ತಿದ್ದ ಮಗುವಿಗೆ ಐಸಿಯುನಲ್ಲಿ ಚಿಕಿತ್ಸೆ ನೀಡಲಾಯಿತು.

ಆಕೆಯ ಸಂಬಂಧಿಕರು ಚಿಕಿತ್ಸೆ ಪೂರ್ಣಗೊಳ್ಳುವುದಕ್ಕೂ ಮೊದಲೇ, ಮನೆಗೆ ಮರಳುವ ಧಾವಂತದಲ್ಲಿ ಇದ್ದರು. ಆಸ್ಪತ್ರೆ ಪ್ರಕ್ರಿಯೆಗಳ ಬಗ್ಗೆ ಅರಿವಿಲ್ಲದಿದ್ದರಿಂದ ಮನೆಗೆ ಹೊರಡುತ್ತೇವೆ ಎಂದು ಹಟ ಮಾಡುತ್ತಿದ್ದರು. ಚೇತರಿಕೆಗೆ ಸಮಯ ಬೇಕೆಂದೂ, ಈಗ ತೆರಳುವುದು ಶಿಶುವಿಗೆ ಮಾರಣಾಂತಿಕವಾಗಬಹುದೆಂದೂ ವೈದ್ಯರು ಅವರನ್ನು ಸಮಾಧಾನ ಪಡಿಸುತ್ತಿದ್ದರೂ, ಅವರು ಕೇಳಲು ಸಿದ್ಧರಿರಲಿಲ್ಲ. ಕುಟುಂಬಸ್ಥರು ಮನೆಗೆ ಹೋಗುವುದಾಗಿ ಹಟ ಹಿಡಿದಾಗಲೆಲ್ಲಾ, ಜಿಲ್ಲಾ ಆದಿವಾಸಿ ಆರೋಗ್ಯ ಸಂಯೋಜಕಿ ಬೇಬಿ ಜಿ. ಅವರನ್ನು ಸಮಾಧಾನ ಪಡಿಸುತ್ತಿದ್ದರು. ಅವರ ಮಾತುಗಳನ್ನು ಸಮಾಧಾನದಿಂದ ಕೇಳಿ, ಗಂಭೀರಾವಸ್ಥೆಯಲ್ಲಿರುವ ಮಗು ಆಸ್ಪತ್ರೆಯಲ್ಲಿ ಉಳಿದುಕೊಳ್ಳಬೇಕಾದ ಅನಿವಾರ್ಯತೆಯನ್ನು ಅವರಿಗೆ ವಿವರಿಸಿ ಮನವೊಲಿಸುವ ಪ್ರಯತ್ನ ಮಾಡಿದ್ದರು.

ಅನೇಕ ಆದಿವಾಸಿಗಳಿಗೆ ಸರ್ಕಾರಿ ಆಸ್ಪತ್ರೆಗಳೆಂದರೆ ಭಯ ಮತ್ತು ಅಪರಿಚಿತ ಸ್ಥಳ. ವಾಸಸ್ಥಳದಿಂದ ದೂರ ಇರುವುದರಿಂದ, ಭಾಷೆಯ ಅಡೆತಡೆಗಳು ಮತ್ತು ತಾರತಮ್ಯದಿಂದಾಗಿ ಆದಿವಾಸಿಗಳಿಗೆ ಆರೋಗ್ಯ ಸೇವೆಯ ಲಭ್ಯತೆ ಇಂದಿಗೂ ದೂರದ ಮಾತು.

ಅರಣ್ಯವಾಸಿ ಸಮುದಾಯಗಳಿಗೆ ಸಾಂಪ್ರದಾಯಿಕ ಔಷಧೀಯ ಸಸ್ಯಗಳ ಲಭ್ಯತೆ ಇಳಿಮುಖವಾಗುತ್ತಿದ್ದ ಹಾಗೂ ಆಧುನಿಕ ಆರೋಗ್ಯ ಸೇವೆಗಳು ಇನ್ನೂ ಕೈಗೆಟುಕದಂತಿದ್ದ ಸಮಯದಲ್ಲಿ, ಬೇಬಿ ಅವರು ಜಿಲ್ಲಾ ಬುಡಕಟ್ಟು ಆರೋಗ್ಯ ಸಂಯೋಜಕಿಯಾಗಿ ನೇಮಕಗೊಂಡರು. ಕರ್ನಾಟಕದ ಮೊದಲ ಬುಡಕಟ್ಟು ಆರೋಗ್ಯ ಸಂಯೋಜಕಿ ಎನ್ನುವ ಹೆಗ್ಗಳಿಕೆ ಅವರದ್ದು..

ರೋಗಿಗಳಿಗೆ ಉಚಿತ ಚಿಕಿತ್ಸೆ ಕೊಡಿಸುವುದು, ಆಧಾರ್ ನೋಂದಣಿ, ಆಯುಷ್ಮಾನ್ ಭಾರತ್ ಯೋಜನೆಯ ಸೌಲಭ್ಯಗಳು ಸಿಗುವಂತೆ ಮಾಡುವುದು ಇವರ ಕೆಲಸ. ಸದ್ಯ ಈ ಯೋಜನೆಯು ಕರ್ನಾಟಕದ ಆರು ಜಿಲ್ಲೆಗಳ ಜಿಲ್ಲಾ ಮತ್ತು ತಾಲ್ಲೂಕು ಆಸ್ಪತ್ರೆಗಳಲ್ಲಿ ಜಾರಿಯಲ್ಲಿದೆ. ನೇಮಕವಾದ ಬಳಿಕ ಈವರೆಗೂ ಎರಡು ಸಾವಿರ ಆದಿವಾಸಿಗಳಿಗೆ ಚಿಕಿತ್ಸೆ ಸಿಗಲು ಬೇಬಿ ನೆರವಾಗಿದ್ದಾರೆ.

'ಆರಂಭಿಕ ಹಂತದಲ್ಲಿ ನಿರ್ಣಾಯಕ ಚಿಕಿತ್ಸೆ ಸಿಗದೆ, ರೋಗಿಯನ್ನು ಉನ್ನತ ಕೇಂದ್ರಗಳಿಗೆ ತಲುಪಿಸುವಷ್ಟರಲ್ಲಿ ಗುಣಪಡಿಸಬಹುದಾದ ಕಾಯಿಲೆಗಳು ಉಲ್ಬಣಗೊಂಡಿರುತ್ತವೆ' ಎಂದು ಆದಿವಾಸಿ ಸಮುದಾಯದ ಮುಖಂಡ ಮಾದೇಗೌಡ ಸಿ. ವಿವರಿಸುತ್ತಾರೆ. 'ರೋಗ ಪತ್ತೆ ಹಚ್ಚುವಲ್ಲಿ ಆಶಾ ಕಾರ್ಯಕರ್ತೆಯರು ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯರು ಪ್ರಮುಖ ಪಾತ್ರ ವಹಿಸುತ್ತಾರಾದರೂ, ನೂರಾರು ಹಾಡಿಗಳಲ್ಲಿ ಈ ಅನೇಕ ಹುದ್ದೆಗಳು ಖಾಲಿ ಇವೆ' ಎಂದು ಅವರು ಹೇಳುತ್ತಾರೆ. ಹೀಗಾಗಿ ಕಾಯಿಲೆಗಳು ತೀವ್ರ ಸ್ವರೂಪ ಪಡೆದುಕೊಳ್ಳುತ್ತವೆ.

'ನಾನು ಆಸ್ಪತ್ರೆಗೆ ಹೋದಾಗ, ಜನಸಾಗರದ ನಡುವೆ ಇದ್ದಂತಾಯಿತು. ಎಲ್ಲಿಗೆ ಹೋಗಬೇಕೆಂದೇ ಗೊತ್ತಾಗಲಿಲ್ಲ' ಹಲವು ವರ್ಷಗಳ ಮೊಣಕಾಲು ನೋವಿಗೆ ಚಿಕಿತ್ಸೆ ಪಡೆಯಲು ಚಾಮರಾಜನಗರ ವೈದ್ಯಕೀಯ ವಿಜ್ಞಾನ ಸಂಸ್ಥೆಗೆ ಹೋದ ಬಿ.ಆರ್. ಹಿಲ್ಸ್‌ನ 50 ವರ್ಷದ ಲಕ್ಷ್ಮಿ ಎಂಬ ಸೋಲಿಗ ಮಹಿಳೆ ಹೇಳಿದ ಅನುಭವದ ಮಾತುಗಳಿವು. ಯಾವಾಗಲೂ ಗಿಜಿಗುಡುತ್ತಿರುವ ಆಸ್ಪತ್ರೆಯ ಕಾರಿಡಾರ್‌ಗಳು ಅವರಿಗೆ ದಿಕ್ಕುತೋಚದಂತೆ ಮಾಡಿದ್ದವು. 'ವೈದ್ಯರು ನಮ್ಮೊಂದಿಗೆ ಸರಿಯಾಗಿ ಮಾತನಾಡುವುದಿಲ್ಲ. ನಮ್ಮನ್ನು ಬೇಗನೇ ಕಳುಹಿಸಿಬಿಡುತ್ತಾರೆ. ಯಾವುದನ್ನೂ ಸರಿಯಾಗಿ ವಿವರಿಸುವುದಿಲ್ಲ. ಕೆಲವೊಮ್ಮೆ ನಮ್ಮ ಮೇಲೆಯೇ ಕಿರುಚುತ್ತಾರೆ. ನಮಗೆ ಏನೂ ಅರ್ಥವಾಗುವುದಿಲ್ಲ ಎಂಬಂತೆ ನಡೆಸಿಕೊಳ್ಳುತ್ತಾರೆ' ಎಂದು ಹೇಳುವಾಗ ಲಕ್ಷ್ಮಿಯವರ ಮುಖದಲ್ಲಿ ಬೇಸರ ಆವರಿಸಿತ್ತು.

ಲಕ್ಷ್ಮಿ ಅಂದು ಅವಸರವಸರವಾಗಿ ಆಸ್ಪತ್ರೆಯಿಂದ ಮನೆಗೆ ಮರಳಿದ್ದರು. ಇದಾಗಿ ಹಲವು ವರ್ಷಗಳಾದರೂ ಅವರ ಕಾಯಿಲೆ ಪತ್ತೆಯಾಗಲೇ ಇಲ್ಲ. ಈ ವರ್ಷ ನೋವು ಉಲ್ಬಣಗೊಂಡು, ಓಡಾಟವೂ ಕಷ್ಟವಾದಾಗ ಆಸ್ಪತ್ರೆಗೆ ಹೋಗಲೇಬೇಕಾದ ಅನಿವಾರ್ಯತೆ ಲಕ್ಷ್ಮಿಯವರಿಗೆ ಎದುರಾಯಿತು. 'ನಿಲ್ಲುವುದು, ಓಡಾಡುವುದು ಕೂಡ ಕಷ್ಟವಾಗಿತ್ತು. ಜೀವನೋಪಾಯದ ಮೂಲವಾದ ಜಮೀನಿನ ನಿರ್ವಹಣೆ ಅಸಾಧ್ಯವಾಯಿತು' ಎಂದು ಅವರು ಹೇಳುತ್ತಾರೆ. ಈ ಬಾರಿ, ಆಸ್ಪತ್ರೆಗೆ ಹೋಗುವಾಗ ಲಕ್ಷ್ಮಿಯವರಿಗೆ ಆತಂಕ ಕಡಿಮೆ ಇತ್ತು. ಆಸ್ಪತ್ರೆಯಲ್ಲಿ ಸಹಾಯಕ್ಕೆ ಬೇಬಿ ಅವರು ಇರುತ್ತಾರೆ ಎನ್ನುವುದೇ ಅವರಿಗೆ ದೊಡ್ಡ ಸಮಾಧಾನದ ಸಂಗತಿಯಾಗಿತ್ತು.

ಬೇಬಿಯವರ ಬೆಂಬಲ, ಮಾರ್ಗದರ್ಶನದಿಂದ ಲಕ್ಷ್ಮಿ ಅವರು ಚಾಮರಾಜನಗರ ಮತ್ತು ಮೈಸೂರು ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದರು. ಈ ಹಿಂದೆ ತಮಗೆ ಅಸಾಧ್ಯವೆನಿಸಿದ್ದ ದಾಖಲಾತಿ ಪ್ರಕ್ರಿಯೆ, ರೋಗನಿರ್ಣಯ ಮತ್ತು ತಜ್ಞರ ಸಲಹೆಗಳು ಈ ಬಾರಿ ಸುಲಭವಾಗಿ ಲಭಿಸಿತು. ದೀರ್ಘಕಾಲದ ಸಂಧಿವಾತಕ್ಕೆ ಸಕಾಲಿಕ ಚಿಕಿತ್ಸೆ, ಸೂಕ್ತ ಔಷಧಿ ದೊರೆತಿದ್ದರಿಂದ ಅವರ ಸ್ಥಿತಿ ಈಗ ಸುಧಾರಿಸಿದೆ.

'ಎಲ್ಲಿಗೆ ಹೋಗಬೇಕು, ಯಾರನ್ನು ಭೇಟಿ ಮಾಡಬೇಕು ಎಂಬ ಅರಿವು ಲಕ್ಷ್ಮಿಗೆ ಸಿಕ್ಕಿದ್ದು ಬೇಬಿಯಿಂದ. ಆಧುನಿಕ ವೈದ್ಯಕೀಯ ಪದ್ಧತಿಯ ಬಗ್ಗೆ ಭಯ ಹೊಂದಿದ್ದ ಅವರನ್ನು ಚಿಕಿತ್ಸೆ ಪಡೆಯಲು ಒಪ್ಪಿಸಿದರು' ಎಂದು ಲಕ್ಷ್ಮಿ ಅವರ ಚಿಕಿತ್ಸೆಯ ಉಸ್ತುವಾರಿ ವಹಿಸಿದ್ದ ಸೋಲಿಗ ಆರೋಗ್ಯ ಕಾರ್ಯಕರ್ತ ಪಾದ್ರೇಗೌಡ ಹೇಳಿದರು.

ಭಾಷೆಯ ಅಡೆತಡೆಗಳನ್ನು ನಿವಾರಿಸುವಲ್ಲಿ ಬೇಬಿ ಅವರು ತಮ್ಮ ಸಮುದಾಯ ಮತ್ತು ವೈದ್ಯಕೀಯ ಸಿಬ್ಬಂದಿಯ ನಡುವೆ ಸೇತುವೆಯಾಗಿ ಕಾರ್ಯನಿರ್ವಹಿಸುತ್ತಾರೆ ಎನ್ನುವುದು ಚಾಮರಾಜನಗರ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಡೀನ್ ಡಾ. ಮಂಜುನಾಥ್ ಅವರ ಮಾತು.



ಬೇಬಿ ಜಿ.

2023ರಲ್ಲಿ ಸೇವೆಗೆ ನೇಮಕಗೊಂಡ ಬೇಬಿ, ಆರೋಗ್ಯ ಸೇವೆಗಳನ್ನು ಪಡೆಯುವಂತೆ ಜನರನ್ನು ಮನವೊಲಿಸಲು ಸಮುದಾಯ ಜಾಗೃತಿ ಕಾರ್ಯಕ್ರಮಗಳನ್ನು ನಡೆಸಿದರು. ಅನೇಕ ಆದಿವಾಸಿ ಕುಟುಂಬಗಳ ಬಳಿ ಅಗತ್ಯ ಗುರುತಿನ ಚೀಟಿಗಳೂ ಇಲ್ಲದಿರುವುದರಿಂದ ಉಚಿತ ಆರೋಗ್ಯ ಸೇವೆ ನೀಡುವ ಸರ್ಕಾರಿ ಯೋಜನೆಗಳ ಲಾಭ ಪಡೆಯಲು ಅವರಿಗೆ ಸಾಧ್ಯವಾಗುತ್ತಿರಲಿಲ್ಲ ಎನ್ನುವುದು ಅವರ ಗಮನಕ್ಕೆ ಬಂತು. ಬೇಬಿ ಮತ್ತು ಇತರ ಆರೋಗ್ಯ ಸಂಯೋಜಕರು ಈ ವಿಷಯವನ್ನು ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅವರ ಸಭೆಯಲ್ಲಿ ಪ್ರಸ್ತಾಪಿಸಿದರು. 'ನಾವು ಶಿಬಿರ ಆಧಾರಿತ ನೋಂದಣಿ ಅಭಿಯಾನವನ್ನು ನಡೆಸಿದೆವು. ಅಧಿಕಾರಿಗಳು ಕುಗ್ರಾಮಗಳಿಗೆ ತೆರಳಿ, ಹಾಸಿಗೆ ಹಿಡಿದವರು ಮತ್ತು ಅಂಗವಿಕಲರಿಗೂ ದಾಖಲೆಗಳು ಸಿಗುವಂತೆ ಮಾಡಿದರು' ಎಂದು ಜಿಲ್ಲಾಧಿಕಾರಿ ಮಾಹಿತಿ ನೀಡಿದರು.

11ನೇ ಪುಟಕ್ಕೆ...





ಹೇಗಿದೆ ನಮ್ ಡಾನ್ಸ್...

ಮುಸ್ಸಂಜೆಯಲ್ಲಿ ನೊಂದವರ ಸುಂದರ ಬದುಕು

ವೃದ್ಧಾಶ್ರಮಗಳು ಅಂದರೆ ಬರೀ ಯಾತನೆ, ಕಣ್ಣೀರು, ಖಿನ್ನತೆಯ ತಾಣಗಳು ಎನ್ನುವುದು ಸಾಮಾನ್ಯ ಮಾತು. ಜೀವನದಲ್ಲಿ ದಿಕ್ಕೇ ಕಾಣದ ಹಿರಿಯ ಜೀವಗಳ ಬಳಿ ಕೊನೆಗೆ ಉಳಿಯುವುದು ಇಷ್ಟೆ. ಆದರೆ, ಬೆಳಗಾವಿಯ ಶಾಂತಾಯಿ ವೃದ್ಧಾಶ್ರಮ ಮಾತ್ರ ಇದಕ್ಕೆ ಭಿನ್ನವಾಗಿದೆ. ಇಲ್ಲಿ ನೋವು ಮರೆಯಾಗುತ್ತದೆ, ನಲಿವು ನಲಿದಾಡುತ್ತದೆ. ಜೀವನೋತ್ಸಾಹ ಪುಟಿಯುತ್ತದೆ...

• ಇಮಾಮ್‌ಹುಸೇನ್ ಗೂಡುನವರ

ಅದು ಮುಂಬೈನ ವರ್ಣರಂಜಿತ ಸ್ಟುಡಿಯೊ. ಹಳದಿ-ಕೆಂಪು ಬಣ್ಣದ ಸೀರೆಯುಟ್ಟ ಆರು ಸ್ಪರ್ಧಿಗಳು ನಗುಮೊಗದಿಂದಲೇ ಅಲ್ಲಿಗೆ ಎಂಟ್ರಿ ಕೊಟ್ಟರು. ಸ್ಟೈಲಿಷ್ ಕನ್ನಡಕ ಧರಿಸಿ, 'ಪ್ಯಾರ್ ಕಿಯಾ ಥೋ ಢರ್‌ನಾ ಕ್ಯಾ...', 'ಕಾಲಾ..ಕಾಲಾ ಚಷ್ಮಾ...', 'ತೌಬಾ... ತೌಬಾ...' ಎಂಬ ಗೀತೆಗಳಿಗೆ ಉತ್ಸಾಹದಿಂದ ಹೆಜ್ಜೆ ಹಾಕಿದರು. ಇಷ್ಟೇ ಅಲ್ಲದೇ, ತಾವು ತಂದಿದ್ದ ಸೀರೆಯನ್ನು ಬಾಲಿವುಡ್ ನಟಿ ಮಲೈಕಾ ಅರೋರಾ ಅವರಿಗೆ ಉಡುಗೊರೆಯಾಗಿ ಕೊಟ್ಟು ಸಂಭ್ರಮಿಸಿದರು. ಅವರ ಪ್ರದರ್ಶನಕ್ಕೆ ಮನಸೋತ ತೀರ್ಪುಗಾರರು, ಈ ತಂಡಕ್ಕೆ 'ಬೆಳಗಾವಿ ಬ್ಯೂಟೀಸ್' ಎಂದು ಬಿರುದು ಕೊಟ್ಟರು.

ಅಷ್ಟಕ್ಕೂ ಇಂಥದ್ದೊಂದು ಪ್ರದರ್ಶನ ನೀಡಿದ್ದು ನುರಿತ ಕಲಾವಿದರ ತಂಡವೋ, ವಿದ್ಯಾರ್ಥಿಗಳೋ ಅಲ್ಲ. ತಮ್ಮ ಜೀವನದ ಇಳಿಸಂಜೆಯ ದಿನಗಳನ್ನು ಸಂತಸದಿಂದ ಕಳೆಯುತ್ತಿರುವ ಬೆಳಗಾವಿಯ 'ಶಾಂತಾಯಿ ವೃದ್ಧಾಶ್ರಮ'ದ ಮಾಗಿದ ಜೀವಗಳು!

ಹಿಂದಿ ವಾಹಿನಿಯಲ್ಲಿ ಪ್ರಸಾರವಾಗುವ 'ಇಂಡಿಯಾಸ್ ಗಾಟ್ ಟ್ಯಾಲೆಂಟ್' ರಿಯಾಲಿಟಿ ಷೋಗಾಗಿ ಆನ್‌ಲೈನ್‌ನಲ್ಲಿ ನಡೆದ ಮೂರು ಆಡಿಷನ್‌ನಲ್ಲಿ ಆಯೋಜಕರ ಮನಗೆದ್ದ ಇವರು, 2025ರ ನವೆಂಬರ್‌ನಲ್ಲಿ ನಡೆದ ಷೋನ ಮೊದಲ ಸುತ್ತಿನಲ್ಲಿ ಭಾಗವಹಿಸಲು ಅರ್ಹತೆ ಪಡೆದರು.

'ಈಗ ನಿಮ್ಮ ವಯಸ್ಸು ಎಷ್ಟು' ಎಂದು ತೀರ್ಪುಗಾರರೊಬ್ಬರ ಪ್ರಶ್ನೆಗೆ, 'ಇಲ್ಲಿ ನಿಂತಿರುವ ನಮಗೀಗ 69 ರಿಂದ 79 ವರ್ಷ ವಯಸ್ಸು. ಆದರೆ, ಹದಿನೆಂಟರ ಮನಸ್ಸು' ಎಂದಾಗ ಚಪ್ಪಾಳೆಗಳು ಭೋರ್ಗರೆದವು. ಇಳಿವಯಸ್ಸಿನ ಮಹಿಳೆಯರು ಮೂರು ಗೀತೆಗಳಿಗೆ ಖುಷಿಯಿಂದ ಕುಣಿದರು. ಅನುಕಂಪವಲ್ಲ, ತಮ್ಮ ಪ್ರತಿಭೆಯಿಂದಲೇ ತೀರ್ಪುಗಾರರು ಮತ್ತು ವೀಕ್ಷಕರನ್ನು ಸೆಳೆದು, ಮುಂದಿನ ಸುತ್ತಿಗೆ ಅರ್ಹತೆ ಪಡೆದರು.

ಅರೇ ಇದೇನಿದು, 'ಇಳಿ ವಯಸ್ಸಿನವರು' ನೃತ್ಯ ಮಾಡುತ್ತಾರಾ ಎಂದು ನೀವು ಹುಬ್ಬೇರಿಸಬಹುದು. ಆದರೆ, ಇದು ನಿಜ. ವೃದ್ಧಾಶ್ರಮದಲ್ಲಿ ಇರುವ ನಲವತ್ತು ಮಂದಿಗೆ ಆಶ್ರಯವನ್ನಷ್ಟೇ ಕಲ್ಪಿಸಿಲ್ಲ. ಬದಲಿಗೆ ವಿವಿಧ ಚಟುವಟಿಕೆಗಳ ಮೂಲಕ ಅವರಲ್ಲಿ ಜೀವನೋತ್ಸಾಹ ತುಂಬಲಾಗುತ್ತಿದೆ. ಇನ್ನೇನು ತಮ್ಮ ಬದುಕೇ ಮುಗಿಯಿತು ಎಂದು ಇಲ್ಲಿಗೆ ಬಂದವರು, 'ಇನ್ನಷ್ಟು ದಿನ ಖುಷಿಯಿಂದ ಬಾಳಬೇಕು' ಎನ್ನುತ್ತಿದ್ದಾರೆ.

ಇದೇ ಆಶ್ರಮದ ಏಳು ಮಂದಿ ವೃದ್ಧೆಯರು 2024ರ ಡಿಸೆಂಬರ್‌ನಲ್ಲಿ ನಡೆದ ಹಿಂದಿಯ 'ಸರೆಗಮಪ' ರಿಯಾಲಿಟಿ ಷೋನಲ್ಲೂ ಅತಿಥಿಗಳಾಗಿ ಪಾಲ್ಗೊಂಡು, 'ಟಿಪ್ ಟಿಪ್ ಬರಸಾ ಪಾನಿ...' ಹಾಡಿಗೆ ಕುಣಿದು ಸಂಭ್ರಮಿಸಿದರು.

ಎಂಬಿಎ ಓದಿರುವ, ಆಶ್ರಮದ ಕಾರ್ಯಾಧ್ಯಕ್ಷ ವಿಜಯ ಮೋರೆ ಅವರ ಪುತ್ರಿ ಶೆರಿಲ್ ಮೋರೆ, ನಿತ್ಯ ಬಿಡುವಿನ ಸಮಯದಲ್ಲೆಲ್ಲ ಆಶ್ರಮದಲ್ಲಿರುವ ಹಿರಿಯರಿಗೆ ಹಾಡು, ನೃತ್ಯ ಕಲಿಸುತ್ತಿದ್ದಾರೆ.

'ರಿಯಾಲಿಟಿ ಷೋಗಾಗಿ ಒಂದು ವಾರ ಮುಂಬೈನಲ್ಲೇ ಇದ್ದು, ಹಿರಿಯರು ಪ್ರದರ್ಶನ ನೀಡಿದರು. ಇದಕ್ಕಾಗಿ ಒಂದು ತಿಂಗಳು ತಯಾರಿ ನಡೆಸಿದ್ದೆವು. ಕೆಲವು ಅಜ್ಜಿಯರು ತಯಾರಿಗೆ ಬೇಗ ಸ್ಪಂದಿಸುತ್ತಾರೆ. ಇನ್ನೂ ಕೆಲವರು ಬೇರೆ ಸ್ಟೆಪ್ಸ್ ಬೇಕು ಎನ್ನುತ್ತಾರೆ. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಖುಷಿಯಿಂದಲೇ ನೃತ್ಯ, ಗಾಯನ ಮತ್ತು ಅಭಿನಯ ಕಲಿಸುತ್ತೇನೆ' ಎನ್ನುತ್ತಾರೆ ಶೆರಿಲ್.

'ನಾನು ಅವಿವಾಹಿತೆ. ಬದುಕಿನಲ್ಲಿ ಎದುರಾದ ಹಲವು ಕಷ್ಟಗಳಿಗೆ ಸೋತು, ನಾಲ್ಕು ವರ್ಷಗಳ ಹಿಂದೆ ಆಶ್ರಮ ಸೇರಿದೆ. ಇಲ್ಲಿ ಸಂತಸದತ್ತ ಬದುಕು ವಾಲಿತು. ಮೊದಲು ಚಿಕ್ಕ ಕುಟುಂಬದಲ್ಲಿದ್ದೆ. ಈಗ ದೊಡ್ಡ ಕುಟುಂಬದಲ್ಲಿದ್ದೇನೆ. ಗಾಯನ, ನೃತ್ಯ ಕಲಿತಿದ್ದೇನೆ. ರಿಯಾಲಿಟಿ ಷೋನಲ್ಲೂ ನೃತ್ಯ ಮಾಡಿದ್ದೇನೆ. ಇದಕ್ಕಿಂತ ಖುಷಿ ಇನ್ನೇನಿದೆ' ಎಂದು ಶಕುಂತಲಾ ಶಿಂಧೆ ಹೇಳುತ್ತಲೇ ಭಾವುಕರಾದರು.

'ಇಂಡಿಯಾಸ್ ಗಾಟ್ ಟ್ಯಾಲೆಂಟ್ ರಿಯಾಲಿಟಿ ಷೋನಲ್ಲಿ ದೇಶದ ವಿವಿಧ ಕಡೆಗಳ ಸ್ಪರ್ಧಿಗಳು ಭಾಗವಹಿಸಿದ್ದರು. ಅದರಲ್ಲಿ ಭಾಗವಹಿಸುವ ಅವಕಾಶ ನಮಗೆ ದಕ್ಕಿತು. ಒಂದು ವಾರ ಮುಂಬೈನಲ್ಲೇ ಉಳಿದುಕೊಂಡು, ಕಾರ್ಯಕ್ರಮ ಕೊಟ್ಟೆವು. ಈಗಲೂ ಸುಮ್ಮನೇನೂ ಕುಳಿತಿಲ್ಲ. ಆಗಾಗ ನೃತ್ಯ ಮಾಡುತ್ತೇವೆ. ಹಾಡು ಹಾಡುತ್ತೇವೆ. ರೀಲ್‌ಗಳಲ್ಲಿ ಮಿಂಚುತ್ತೇವೆ' ಎನ್ನುತ್ತ ಪುಷ್ಪಾ ಮಿರಜಕರ ನಕ್ಕರು.

ಸಾಮಾನ್ಯವಾಗಿ ಯಾವುದೇ ವೃದ್ಧಾಶ್ರಮಕ್ಕೆ ಕಾಲಿಟ್ಟಾಗ ನೋವಿನ ಕಥೆಗಳೇ ಕಿವಿಗೆ ಬೀಳುತ್ತವೆ, ತೆರೆದುಕೊಳ್ಳುತ್ತವೆ. ಆದರೆ, ಇಲ್ಲಿ ನಲಿವಿನ ಕಥೆಗಳು ಅನಾವರಣಗೊಳ್ಳುತ್ತವೆ.

ಹಿರಿಯರು ತಮ್ಮ ಕುಟುಂಬದವರಿಂದ ದೂರವಾಗಿದ್ದರೂ, ಅವರೆಲ್ಲ ಚೈತನ್ಯದ ಚಿಲುಮೆಯಂತಿದ್ದಾರೆ. ಎಂಥವರನ್ನೂ ಕ್ಷಣಮಾತ್ರದಲ್ಲೇ ಸೆಳೆಯಬಲ್ಲ ಜೀವನೋತ್ಸಾಹ ಅವರದ್ದು.

ಇಡೀ ದಿನ ಚಟುವಟಿಕೆಯಿಂದ ಇರುವುದರ ಜೊತೆಗೆ, ದೇಶದ ಪ್ರಮುಖ ಪ್ರವಾಸಿತಾಣಗಳಿಗೆ ಭೇಟಿ ನೀಡಿ ಅವುಗಳನ್ನು ಕಣ್ತುಂಬಿಕೊಳ್ಳುತ್ತಾರೆ. ಚಿತ್ರಮಂದಿರಗಳಲ್ಲಿ ಸಿನಿಮಾ ವೀಕ್ಷಿಸುತ್ತಾರೆ. ಸರ್ಕಸ್ ಕೂಡ ನೋಡುತ್ತಾರೆ. ಮನರಂಜನಾ ಕಾರ್ಯಕ್ರಮಗಳನ್ನೆಲ್ಲ ಅನುಭವಿಸುತ್ತಾ ಖುಷಿಪಡುತ್ತಾರೆ.

ಎಲ್ಲ ಧರ್ಮದವರೂ...

'ಅದು 1998ನೇ ಇಸ್ವಿ. ಬೆಳಗಾವಿಯಲ್ಲಿ ಒಂದೇ ವೃದ್ಧಾಶ್ರಮವಿತ್ತು. ಅಲ್ಲಿ ಒಂದೇ ಸಮುದಾಯದವರಿಗೆ ಮಾತ್ರ ಪ್ರವೇಶವಿತ್ತು. ಅದನ್ನು ನೋಡಿದಾಗ, ಕಷ್ಟದಲ್ಲಿರುವ ಬೇರೆ ಸಮುದಾಯದ ವೃದ್ಧರ ಗತಿ ಏನು? ಅಂಥವರೆಲ್ಲಿ ಆಶ್ರಯ ಪಡೆಯುತ್ತಾರೆ ಎಂಬೆಲ್ಲ ಪ್ರಶ್ನೆಗಳು ಸುಳಿದಾಡಿದವು. ತಡ ಮಾಡದೆ ಸ್ನೇಹಿತರಾದ ವಿಜಯ ಪಾಟೀಲ ಅವರ ಜಾಗದಲ್ಲೇ ವೃದ್ಧಾಶ್ರಮ ತೆರೆದೆವು. ವಿಜಯ ಅವರ ತಾಯಿ ಶಾಂತಾಯಿ ಹೆಸರನ್ನೇ ಇದಕ್ಕೆ ಇರಿಸಿದೆವು. ಈಗ ಬೇರೆ ಬೇರೆ ಸಮುದಾಯಗಳ ನಲವತ್ತು ಮಂದಿ ವೃದ್ಧರಿಗೆ ಇಲ್ಲಿ ಆಶ್ರಯ ಕಲ್ಪಿಸಿದ್ದೇವೆ' ಎಂದು ವೃದ್ಧಾಶ್ರಮದ ಹುಟ್ಟಿನ ಬಗ್ಗೆ ಕಾರ್ಯಾಧ್ಯಕ್ಷ ವಿಜಯ ಮೋರೆ ಹೇಳಿದರು.

'ಗಂಡು ಮಕ್ಕಳನ್ನು ಹೊಂದಿದ್ದು, ಸರ್ಕಾರಿ ನೌಕರಿಯಿಂದ ನಿವೃತ್ತಿ ಹೊಂದಿದ ಮತ್ತು ಆಸ್ತಿ-ಪಾಸ್ತಿ ಹೊಂದಿದ ಹಿರಿಯ ನಾಗರಿಕರಿಗೆ ನಮ್ಮಲ್ಲಿ ಪ್ರವೇಶವಿಲ್ಲ. ಬದುಕಿನಲ್ಲಿ ಆಸರೆಯೇ ಇಲ್ಲದವರಿಗಷ್ಟೇ ನೆರವಾಗಬೇಕು ಎಂಬುದು ನಮ್ಮ ಉದ್ದೇಶ' ಎನ್ನುತ್ತಾರೆ ಅವರು.

10ನೇ ಪುಟಕ್ಕೆ...

ಕೋಟ್ಯಂತರ ವೀವ್ಸ್

ಶಾಂತಾಯಿ ವೃದ್ಧಾಶ್ರಮ (ಓಲ್ಡ್ ಏಜ್ ಹೋಮ್) ಹೆಸರಿನಲ್ಲಿ ಇನ್‌ಸ್ಟಾಗ್ರಾಂ ಪುಟ ತೆರೆಯಲಾಗಿದ್ದು, 92,400 ಫಾಲೋವರ್ ಇದ್ದಾರೆ. ವಿವಿಧ ಗೀತೆಗಳಿಗೆ ವೃದ್ಧೆಯರು ಹೆಜ್ಜೆಹಾಕುವ ಮತ್ತು ಹಾಡುವ ರೀಲ್‌ಗಳನ್ನು ಪೋಸ್ಟ್ ಮಾಡಲಾಗುತ್ತಿದೆ.

'ಸೋ ಬ್ಯೂಟಿಫುಲ್' ಗೀತೆಯ ನೃತ್ಯ ಸುಮಾರು 2.1 ಕೋಟಿ ವೀಕ್ಷಣೆ ಕಂಡಿದೆ. 12 ಲಕ್ಷ ಜನ ಇದನ್ನು ಲೈಕ್ ಮಾಡಿದ್ದಾರೆ. 'ಪುಷ್ಪಾ-2' ಸಿನಿಮಾದ ನೃತ್ಯ 1.68 ಕೋಟಿ ವೀಕ್ಷಣೆ ಕಂಡಿದೆ.

'ತೌಬಾ... ತೌಬಾ...' ಗೀತೆಯ ನೃತ್ಯ 1 ಕೋಟಿ ವೀಕ್ಷಣೆ ಕಂಡಿದ್ದು, 5.84 ಲಕ್ಷ ಲೈಕ್ಸ್ ಗಿಟ್ಟಿಸಿದೆ. shantai_second_childhood ಪುಟಕ್ಕೆ ಭೇಟಿ ಕೊಟ್ಟರೆ, ಕೋಟ್ಯಂತರ ವೀವ್ಸ್ ಪಡೆದ ಹಲವು ರೀಲ್‌ಗಳನ್ನು ನೋಡಬಹುದು.



ಅಜ್ಜಿ...ಹೇಗಿದ್ದೀರಿ?

ಚಿತ್ರಗಳು: ಏಕನಾಥ ಅಗಸಿಮನಿ



ಗಾಂಧಿ ಉದ್ಯಾನ
ಚಿತ್ರಗಳು: ಚಂದ್ರಪ್ಪ ವಿ.

ಗಾಂಧಿ ತೋಟದಲ್ಲಿ ನೆನಪಿನ ಹೂಗಳು

> ಪೂರ್ವಿಕರು ಇತಿಹಾಸ ಸೃಷ್ಟಿಸಿದ್ದಾರೆ. ಆ ಇತಿಹಾಸವನ್ನು ಉಳಿಸಿ ಬೆಳೆಸಬೇಕಾದುದು ನಮ್ಮ ಜವಾಬ್ದಾರಿ. ಗ್ರಾಮದಲ್ಲಿರುವ ಪ್ರತಿ ಐತಿಹಾಸಿಕ ಕಟ್ಟಡಕ್ಕೂ ಹೊಸರೂಪ ನೀಡಲಾಗಿದೆ. ತುರುವನೂರು ಪ್ರಮುಖ ಪ್ರವಾಸಿ ತಾಣವಾಗಬೇಕು ಎಂಬ ಉದ್ದೇಶದಿಂದ ಗ್ರಾಮಾಭಿವೃದ್ಧಿ ಕಾಮಗಾರಿ ನಡೆಸಲಾಗುತ್ತಿದೆ
>
> **ಟಿ.ರಘುಮೂರ್ತಿ**, ಚಳ್ಳಕೆರೆ ಶಾಸಕ

• ಎಂ.ಎನ್.ಯೋಗೇಶ್

ಸ್ವಾತಂತ್ರ್ಯ ಹೋರಾಟಕ್ಕೆ ಶಕ್ತಿ ತುಂಬಿದ ಚಿತ್ರದುರ್ಗದ ತುರುವನೂರು, ಈಸೂರಿನ ನಂತರ ಅತೀ ಹೆಚ್ಚು ಸ್ವಾತಂತ್ರ್ಯ ಹೋರಾಟಗಾರರನ್ನು ಹೊಂದಿರುವ ಊರೆಂಬ ಹೆಗ್ಗಳಿಕೆ ಗಳಿಸಿತ್ತು. ಈ ಗ್ರಾಮಕ್ಕೆ ಪ್ರವಾಸಿ ತಾಣ ರೂಪ ನೀಡುವ ಪ್ರಯತ್ನಕ್ಕೆ ಈಗ ಫಲ ಸಿಕ್ಕಿದೆ.


'ಈಚಲುಮರಗಳು ನಮ್ಮವು, ಮರದಿಂದ ಇಳಿಸುವ ಹೆಂಡ ನಮ್ಮದು, ಹೆಂಡ ಇಳಿಸುವವರೂ ನಮ್ಮವರು, ಹೆಂಡ ಕುಡಿದು ಹಾಳಾಗುತ್ತಿರುವವರೂ ನಮ್ಮವರೇ, ನಷ್ಟವಾಗುತ್ತಿರುವುದು ನಮಗೇ, ಆದಾಯ ಮಾತ್ರ ಬ್ರಿಟಿಷರಿಗೆ ಹೋಗಬೇಕಾ...?'

ಎಸ್.ನಿಜಲಿಂಗಪ್ಪನವರು ತುರುವನೂರು ಹೈಸ್ಕೂಲ್ ಆವರಣದಲ್ಲಿ ಆಡಿದ ಈ ಮಾತುಗಳು ಯುವಕರಲ್ಲಿ ಹೋರಾಟದ ಕಿಚ್ಚು ಹೊತ್ತಿಸಿದವು. ಕೊಡಲಿಗಳನ್ನು ಹೆಗಲಿಗೆ ಏರಿಸಿಕೊಂಡರು . ಹಳ್ಳದ ಸುತ್ತಮುತ್ತ ಬೆಳೆದಿದ್ದ ಸಾವಿರಾರು ಈಚಲುಮರಗಳನ್ನು ಕತ್ತರಿಸಿ ಬಿಸಾಡಿದರು. ಹೋರಾಟದ ಕಿಚ್ಚು ಸುತ್ತಮುತ್ತಲಿನ ಹಳ್ಳಿಗಳಿಗೂ ವ್ಯಾಪ್ತಿಸಿತು. ಚಳವಳಿಯಲ್ಲಿ ಮಹಿಳೆಯರೂ ಪಾಲ್ಗೊಂಡಿದ್ದು ವಿಶೇಷವಾಗಿತ್ತು. ಕುಡಿದು ಹಾಳಾಗುತ್ತಿದ್ದ ಗಂಡಸರ ಉಳಿವಿಗಾಗಿ ಈ ಚಳವಳಿ ಅವರಿಗೆ ಅಸ್ತ್ರವೂ ಆಗಿತ್ತು.

ಆದಾಯಕ್ಕೆ ಕಲ್ಲುಬಿದ್ದಾಗ ಬ್ರಿಟಿಷ್ ಅಧಿಕಾರಿಗಳು ಹೋರಾಟಗಾರರನ್ನು ಬಂಧಿಸಿದರು, ಹಲವರನ್ನು ಗಡಿಪಾರು ಮಾಡಿದರು. ಆದರೆ ಕಿಚ್ಚು ಆರಲಿಲ್ಲ. ತಂಡೋಪತಂಡವಾಗಿ ತುರುವನೂರಿಗೆ ಬರುತ್ತಿದ್ದ ಜನರು ಈಚಲುಮರ ಕಡಿದು ಬ್ರಿಟಿಷರ ವಿರುದ್ಧ ಆಕ್ರೋಶ ಹೊರಹಾಕುತ್ತಿದ್ದರು. ಊರಿನಲ್ಲಿದ್ದ ಕೋಟೆಯ ಬತ್ತೇರಿ ಮೇಲೆ ತ್ರಿವರ್ಣಧ್ವಜ ಹಾರಿಸಿದರು. ಪೊಲೀಸರು ತಡೆಯಲು ಬಂದಾಗ ಪೊಲೀಸ್ ಠಾಣೆಗೇ ಬೆಂಕಿ ಇಟ್ಟರು.

1939ರಲ್ಲಿ ಆರಂಭವಾದ ಚಳವಳಿ ಹಲವು ವರ್ಷಗಳಿಗೆ ಮುಂದುವರಿಯಿತು. ಮಹಾತ್ಮ ಗಾಂಧಿ 1942ರಲ್ಲಿ 'ಭಾರತ ಬಿಟ್ಟು ತೊಲಗಿ' ಹೋರಾಟಕ್ಕೆ ಕರೆ ನೀಡಿದಾಗ 'ಈಚಲುಮರದ ಚಳವಳಿ' ದೇಶವೇ ತಿರುಗಿ ನೋಡುವಂತೆ ಮಾಡಿತು. ಇದು ಗಾಂಧೀಜಿಯ ಗಮನವನ್ನೂ ಸೆಳೆಯಿತು. ಮುಂದೆ ಈ ಊರು ಇತಿಹಾಸದ ಪುಟ ಸೇರಿತು. 'ಸ್ವಾತಂತ್ರ್ಯ ಹೋರಾಟಗಾರರ ಊರು' ಎಂಬ ಖ್ಯಾತಿಯನ್ನೂ ಪಡೆಯಿತು.

ಈಚಲುಮರದ ಚಳವಳಿಗೆ ಸ್ಫೂರ್ತಿಯಾಗಿದ್ದ ಎಸ್.ನಿಜಲಿಂಗಪ್ಪ ಅವರು ರಾಜ್ಯದ ಮುಖ್ಯಮಂತ್ರಿಯಾದಾಗ ತುರುವನೂರು ಮತ್ತೊಮ್ಮೆ ಗಮನ ಸೆಳೆಯಿತು. ಗಾಂಧಿ ಸ್ಮೃತಿ ಉಳಿಸಲು ಊರಿನ ಕೋಟೆಯ ಬತ್ತೇರಿ ಮೇಲೆ ಗಾಂಧಿ ಪ್ರತಿಮೆ ಸ್ಥಾಪಿಸುವ ಸಂಕಲ್ಪ ಮಾಡಿದರು. ಗ್ರಾಮಸ್ಥರೆಲ್ಲರೂ ಮನೆಯಲ್ಲಿದ್ದ ಕಂಚಿನಪಾತ್ರೆಗಳನ್ನೆಲ್ಲಾ ಅರ್ಪಿಸಿದರು. ಬಳ್ಳಾರಿ ಮಲ್ಲಕ್ಕ ಎಂಬ ಮಹಿಳೆ ಪ್ರತಿಮೆ ಸ್ಥಾಪನೆಯಲ್ಲಿ ಪ್ರಮುಖ ಪಾತ್ರ ವಹಿಸಿದರು. ಇದು ಬರೀ ಪ್ರತಿಮೆಯಾಗಿರಲಿಲ್ಲ, ಸ್ವಾತಂತ್ರ್ಯಾನಂತರ ದೇಶದಲ್ಲಿ ಸ್ಥಾಪನೆಯಾದ ಎರಡನೇ ಕಂಚಿನ ಪ್ರತಿಮೆಯಾಗಿತ್ತು. ಜೊತೆಗೆ 80 ಅಡಿ ಎತ್ತರದ ಬತ್ತೇರಿ ಮೇಲೆ ಸ್ಥಾಪನೆಗೊಂಡ ಮೊದಲ ಗಾಂಧಿ ಪ್ರತಿಮೆಯಾಗಿತ್ತು.



ಗ್ರಾಮದಲ್ಲಿನ ಗಾಂಧಿ ಪ್ರತಿಮೆ

ಸ್ವತಃ ಗಾಂಧೀಜಿಯೇ ಪ್ರತಿಮೆ ಲೋಕಾರ್ಪಣೆಗೆ ಬರಲೊಪ್ಪಿದ್ದರು. ಆದರೆ ಅನಾರೋಗ್ಯದ ಕಾರಣದಿಂದಾಗಿ ಬರಲಾಗಲಿಲ್ಲ. ತಮ್ಮ ಆಪ್ತ ಸಹಾಯಕ ಮೋಹನ ದಾಸ್ ಅವರನ್ನು ಕಳುಹಿಸಿದರು. ಫೆಬ್ರುವರಿ 1, 1966 ರಲ್ಲಿ ಪ್ರತಿಮೆ ಲೋಕಾರ್ಪಣೆಗೊಂಡಿತು. 'ಚೆಂಡು ಹೂವಿನ ಮಳೆ ಸುರಿಸಿ ಮೋಹನ ದಾಸ್, ಎಸ್.ನಿಜಲಿಂಗಪ್ಪ ಅವರನ್ನು ಸ್ವಾಗತಿಸಿದ ಸಂಭ್ರಮವನ್ನು ನಮ್ಮೂರಿನ ಹಿರಿಯರು ಹೇಳುತ್ತಿದ್ದರು. ಹೋರಾಟದ ಕಿಚ್ಚು ಈಗಲೂ ಊರಿನಲ್ಲಿ ಹಸಿರಾಗಿದೆ' ಎಂದು ತುರುವನೂರು ಗ್ರಾಮ ಪಂಚಾಯಿತಿ ಸದಸ್ಯ ಡಿ.ಆರ್. ಮಂಜುನಾಥ್ ತಿಳಿಸಿದರು.

ಗ್ರಾಮದ ಮಾರಿಕಾಂಬ ಹಾಗೂ ಕಲ್ಲೇಶ್ವರ ದೇವಾಲಯಗಳ ನಡುವಿನ ಬತ್ತೇರಿ ಮೇಲೆ ವಿರಾಜಮಾನರಾಗಿರುವ ಗಾಂಧಿ ಪ್ರತಿಮೆಯನ್ನು ಗ್ರಾಮಸ್ಥರು ದೇವರೆಂದೇ ನಂಬಿದ್ದಾರೆ, ನಿತ್ಯವೂ ಪೂಜಿಸುತ್ತಾರೆ. ಊರಹಬ್ಬ, ರಾಷ್ಟ್ರೀಯ ಹಬ್ಬಗಳ ದಿನದಂದು ವಿಶೇಷ ಅಲಂಕಾರ, ವಿಶೇಷ ಪೂಜೆಗಳು ನೆರವೇರುತ್ತವೆ. ಶಿವಮೊಗ್ಗ ಜಿಲ್ಲೆ ಈಸೂರು ನಂತರ ಅತೀ ಹೆಚ್ಚು ಸ್ವಾತಂತ್ರ್ಯ ಹೋರಾಟಗಾರು ತುರುವನೂರಿನಲ್ಲಿದ್ದರು. ಈಗ ಎಲ್ಲರೂ ನಿಧನರಾಗಿದ್ದಾರೆ. ತುರುವನೂರು ಪಕ್ಕದ ಕೂನಬೇವು ಗ್ರಾಮದಲ್ಲಿ 98ರ ಹರೆಯದ ಎನ್.ಭೀಮಪ್ಪ ಮಾತ್ರ ಉಳಿದಿದ್ದಾರೆ. ಈಚಲುಮರದ ಚಳವಳಿಯನ್ನು ಅವರು ಕಣ್ಣಿಗೆ ಕಟ್ಟುವಂತೆ ವಿವರಿಸುತ್ತಾರೆ.

'ಎಸ್.ನಿಜಲಿಂಗಪ್ಪ ಅವರ ಭಾಷಣ ಕೇಳಿ ನಾನೂ ಹೋರಾಟಕ್ಕಿಳಿದೆ, ಈಚಲುಮರ ಕಡಿದೆ. ನಾವು ಹುಡುಗರೆಂಬ ಕಾರಣಕ್ಕೆ ನಮ್ಮನ್ನು ಜೈಲಿನಲ್ಲಿ ಇಟ್ಟುಕೊಳ್ಳಲಿಲ್ಲ. ಆದರೂ ನಾನು ಜೈಲು ಬಿಟ್ಟು ಬರಲಿಲ್ಲ, ನಮ್ಮವರ ಬಿಡುಗಡೆಗಾಗಿ ಉಪವಾಸ ಸತ್ಯಾಗ್ರಹ ಮಾಡಿದೆ' ಎಂದು ಎನ್.ಭೀಮಪ್ಪ ತಿಳಿಸಿದರು.

ಮಧ್ಯ ಕರ್ನಾಟಕದಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ಶಕ್ತಿ ತುಂಬಿದ ತುರುವನೂರು ಇಲ್ಲಿಯವರೆಗೂ ಅಜ್ಞಾತವಾಗಿಯೇ ಉಳಿದಿತ್ತು. ಆದರೆ ಈಗ ಗ್ರಾಮಕ್ಕೆ ಪ್ರವಾಸಿ ತಾಣ ರೂಪ ನೀಡುವ ಪ್ರಯತ್ನಕ್ಕೆ ಫಲ ಸಿಕ್ಕಿದೆ. ಚಿತ್ರದುರ್ಗದಿಂದ 22 ಕಿ.ಮೀ ದೂರದಲ್ಲಿರುವ ಈ ಗ್ರಾಮ ಚಳ್ಳಕೆರೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿದೆ. ಶಾಸಕ ಟಿ.ರಘುಮೂರ್ತಿ ಅವರ ನೇತೃತ್ವದಲ್ಲಿ ಗ್ರಾಮ ಹೊಸ ರೂಪ ಪಡೆಯುತ್ತಿದೆ.

ಸ್ವಾತಂತ್ರ್ಯ ಹೋರಾಟಗಾರರು ಕಲಿತ ಗ್ರಾಮದ ಪ್ರಾಥಮಿಕ ಶಾಲೆಗೆ ನೂರು ವರ್ಷಗಳು ತುಂಬಿದೆ. ಎಸ್.ನಿಜಲಿಂಗಪ್ಪ ಭಾಷಣ ಮಾಡಿದ್ದ ಹೈಸ್ಕೂಲ್‌ಗೆ 75 ವರ್ಷ ತುಂಬಿದೆ. ಎರಡೂ ಶಾಲೆಗಳು ಈಗ ಹೊಸದಾಗಿ ನಿರ್ಮಾಣಗೊಂಡಿದ್ದು ವಿಕಾಸಸೌಧ ತದ್ರೂಪ ಪಡೆದಿವೆ. ಶಾಲೆಗಳಿಗೆ ಅತ್ಯಾಧುನಿಕ ರೂಪ ಒದಗಿಸಲಾಗಿದೆ. ಎಲ್‌ಕೆಜಿಯಿಂದ ಪದವಿವರೆಗೂ ಶಾಲಾ, ಕಾಲೇಜುಗಳು ಹೈಟೆಕ್ ರೂಪದಲ್ಲಿ ನಿರ್ಮಾಣಗೊಂಡಿವೆ. ಗಾಂಧಿ ಉದ್ಯಾನದ ಎದುರಿನಲ್ಲಿ ಬಸ್ ನಿಲ್ದಾಣ ನಿರ್ಮಿಸಲು ಜಾಗ ಮೀಸಲಿಡಲಾಗಿದೆ.

ಗಾಂಧಿ ಪ್ರತಿಮೆ ಸ್ಥಾಪನೆ, ಗಾಂಧಿ ಉದ್ಯಾನ ಉದ್ಘಾಟನೆ, ಪ್ರಾಥಮಿಕ ಶಾಲೆ ಶತಮಾನೋತ್ಸವ, ಹೈಸ್ಕೂಲ್ ಸುವರ್ಣ ಮಹೋತ್ಸವ ಸೇರಿ 'ಶತಮಾನ– ಸುವರ್ಣ ಸಂಭ್ರಮ'ಕ್ಕೆ ತುರುವನೂರು ಸಜ್ಜಾಗುತ್ತಿದೆ. ಫೆಬ್ರುವರಿಯಲ್ಲಿ ಕಾರ್ಯಕ್ರಮ ನಡೆಯಲಿದೆ.


ಗಾಂಧಿಯನ್ನು ಮತ್ತೆ ಮತ್ತೆ ನೆನಪಿಸಿಕೊಳ್ಳುವ, ಜೀವಂತವಾಗಿಡುವ ಕೆಲಸ ನಡೆಯುತ್ತಿರುವುದು ಸಂತೋಷವೇ.

ಗಾಂಧಿ ಉದ್ಯಾನ, ವಸ್ತುಸಂಗ್ರಹಾಲಯ

ಮಹಾತ್ಮ ಗಾಂಧಿ ಅಧ್ಯಕ್ಷತೆಯಲ್ಲಿ ನಡೆದ ಬೆಳಗಾವಿ ಕಾಂಗ್ರೆಸ್ ಅಧಿವೇಶನಕ್ಕೆ ಶತಮಾನೋತ್ಸವ ತುಂಬಿದ ಹೊತ್ತಿನಲ್ಲಿ ತುರುವನೂರು ಗ್ರಾಮಾಭಿವೃದ್ಧಿಗೆ ವಿಶೇಷ ಪ್ಯಾಕೇಜ್ ತರಲಾಗಿದೆ. ಇದರ ಫಲವಾಗಿ ಗ್ರಾಮದಲ್ಲಿ ಗಾಂಧಿ ಉದ್ಯಾನ ತಲೆ ಎತ್ತಿದೆ. ಉದ್ಯಾನದ ನಡುವೆ ಸ್ತೂಪವೊಂದನ್ನು ನಿರ್ಮಿಸಿದ್ದು ಅಲ್ಲಿ ಕಲ್ಲಿನಿಂದ ಕೆತ್ತಿಸಿದ ಗಾಂಧಿ ಪ್ರತಿಮೆ ಪ್ರತಿಷ್ಠಾಪಿಸಲಾಗುತ್ತಿದೆ. ಕೋಲಾರ ಜಿಲ್ಲೆಯ ಶಿವಾರ ಪಟ್ನ ಶಿಲ್ಪಿಗಳಿಂದ ಗಾಂಧಿ ಪ್ರತಿಮೆ ಕೆತ್ತನೆ ಮಾಡಿಸಲಾಗಿದೆ. ಕುಳಿತ ಸ್ಥಿತಿಯಲ್ಲಿರುವ ಆರು ಅಡಿ ಎತ್ತರದ ಪ್ರತಿಮೆ ಸಿದ್ಧಗೊಂಡಿದೆ.

ಗ್ರಾಮದ ಹೃದಯಭಾಗದಲ್ಲಿ 70 ಅಡಿ ಆಳದ ಕಂದಕವೊಂದಿತ್ತು. ಮಳೆಗಾಲದಲ್ಲಿ ನೀರು ನುಗ್ಗಿ ಪ್ರವಾಹವನ್ನೇ ಸೃಷ್ಟಿಸುತ್ತಿತ್ತು. ಇದೇ ಜಾಗ ಈಗ ಉದ್ಯಾನ ರೂಪ ಪಡೆದಿದೆ. ಕಂದಕದ ತಳದಲ್ಲಿ ರಾಜಕಾಲುವೆ ನಿರ್ಮಿಸಿ, ತಳದಿಂದ ಪಿಲ್ಲರ್ ಹಾಕಿ ಇಡೀ ಜಾಗವನ್ನು ಮೇಲೆತ್ತರಿಸಲಾಗಿದೆ. ಶಾಸಕ ರಘುಮೂರ್ತಿ ಸ್ವತಃ ಎಂಜಿನಿಯರ್ ಆಗಿರುವ ಕಾರಣ ಈ ಕಾಮಗಾರಿ ಸಾಕಾರಗೊಂಡಿದೆ ಎಂದು ಗ್ರಾಮಸ್ಥರು ಹೇಳುತ್ತಾರೆ.

ಒಂದು ಎಕರೆ ಜಾಗದಲ್ಲಿ ಜೀವತಳೆದು ನಿಂತಿರುವ ಉದ್ಯಾನದಲ್ಲಿ ಕಲ್ಲುಮಂಟಪಗಳಿವೆ, ಕಲ್ಲಿನಿಂದಲೇ ಗಣೇಶ ದೇವಾಲಯ ನಿರ್ಮಿಸಲಾಗಿದೆ. ಆಕರ್ಷಕ ದೀಪಗಳು ಹೊಸ ವಾತಾವರಣ ಸೃಷ್ಟಿಸಿವೆ. ಸ್ತೂಪದ ಸುತ್ತಲೂ ತುರುವನೂರಿನ ಸ್ವಾತಂತ್ರ್ಯ ಹೋರಾಟಗಾರರ ದಾಖಲಾಗಲಿವೆ. ಗಾಂಧಿ ಉದ್ಯಾನದ ಜೊತೆಗೆ ಗಾಂಧಿ ನೆನಪಿನ ವಸ್ತುಸಂಗ್ರಹಾಲಯ, ಗ್ರಾಮೀಣ ಯುವಕರಿಗಾಗಿ ಮಾಹಿತಿ ಕೇಂದ್ರ ತೆರೆಯಲೂ ಸಿದ್ಧತೆ ಮಾಡಿಕೊಳ್ಳಲಾಗಿದೆ.



ಗಾಂಧಿ ಬಾವಿ

ನವಲಿಹಾಳದ ಗಾಂಧಿ ಬಾವಿ

• ಚಂದ್ರಶೇಖರ ಎಸ್ ಚಿನಕೇಕರ

ಸ್ವಾತಂತ್ರ್ಯಪೂರ್ವದಲ್ಲಿ ಬರಗಾಲಕ್ಕೆ ಕೆರೆ ಮತ್ತು ಬಾವಿಗಳೇ ಪರಿಹಾರವಾಗಿದ್ದವು. ಸ್ವಾತಂತ್ರ್ಯ ಸಂಗ್ರಾಮದ ಕಹಳೆ ಊದುವುದರೊಂದಿಗೆ ಮಹಾತ್ಮ ಗಾಂಧಿ ಅಸ್ಪೃಶ್ಯತೆ ನಿವಾರಣೆ, ಗ್ರಾಮಗಳ ಸ್ವಾವಲಂಬನೆಗೆ ಹೆಚ್ಚು ಒತ್ತು ನೀಡಿದ್ದರು. ಗಾಂಧೀಜಿ ಬರಗಾಲದ ಸಂದರ್ಭದಲ್ಲಿ ಗ್ರಾಮಗಳ ಕಷ್ಟ ನಿವಾರಿಸಲು ಪ್ರಯತ್ನಿಸಿದ ಉದಾಹರಣೆಗಳು ನೂರಾರು. ಅಂತಹ ಪ್ರಯತ್ನದ ಫಲವೇ ನವಲಿಹಾಳ ಗ್ರಾಮದ 'ಗಾಂಧಿ ಬಾವಿ'.

ಒಂಬತ್ತು ದಶಕಗಳ ಹಿಂದೆ, ಅಂದರೆ ಮಾರ್ಚ್ 7 ಮತ್ತು 8, 1934. ಆ ಎರಡು ದಿನ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ನವಲಿಹಾಳ ಗ್ರಾಮದ ಜನರಿಗೆ ಅವಿಸ್ಮರಣೀಯ, ಕ್ಷಣಗಳು. 'ಭಾರತದ ಆತ್ಮ ಹಳ್ಳಿಗಳಲ್ಲಿದೆ' ಎಂಬ ಧ್ಯೇಯ ಹೊಂದಿದ್ದ ಗಾಂಧೀಜಿಯವರಿಗೆ ತಮ್ಮ ಭೇಟಿಯ ಸಂದರ್ಭದಲ್ಲಿ ನವಲಿಹಾಳದಲ್ಲಿ ಬಾವಿ ಅವಶ್ಯಕತೆ ಅರಿವಿಗೆ ಬಂತು. ಕೂಡಲೇ ಸ್ಥಳೀಯ ಮುಖಂಡರ ಕೈಗೆ ₹665 ದೇಣಿಗೆಯನ್ನಿತ್ತು ಬಾವಿ ತೋಡಿಸಲು ಹೇಳಿದರು.

ಜಗತ್ತೇ ಹೆಮ್ಮೆಪಡುವ ಮಹಾನ್ ಚೇತನ ತಮ್ಮೂರಲ್ಲಿ ಬಾವಿ ತೋಡಿಸಲು ದೇಣಿಗೆ ನೀಡಿದ್ದು ಗ್ರಾಮಕ್ಕೆ ಹೆಮ್ಮೆ ಅನಿಸಿತು. ಹಾಗಾಗಿ ತಮ್ಮದೂ ಒಂದಿಷ್ಟು ಪಾಲು ಇರಲಿ ಎಂದು ಗ್ರಾಮಸ್ಥರೂ ₹400 ದೇಣಿಗೆ ಸಂಗ್ರಹಿಸಿದರು. ಸುತ್ತಮುತ್ತಲಿನ ಪ್ರಭಾವಿ ವ್ಯಕ್ತಿಗಳೂ ದೇಣಿಗೆ ನೀಡಿದರು. ಆಗಿನ ಸರ್ಕಾರ ಬಾವಿ ತೋಡಿಸಲು ₹1,965 ಅನುದಾನ ನೀಡಿತು. ಹೀಗೆ ಒಟ್ಟು ₹4,266 ದೇಣಿಗೆ ಸಂಗ್ರಹವಾಯಿತು. ಗಾಂಧೀಜಿ ಭೇಟಿ ನೀಡಿದ ಎರಡು ದಶಕಗಳ ಬಳಿಕ ಗ್ರಾಮದಲ್ಲಿ ನೀರು ಸೇದುವ 40 ರಿಂದ 50 ಅಡಿ ಆಳದ ಬಾವಿ ಸಿದ್ಧವಾಯಿತು. ಜುಲೈ 12, 1954 ರಂದು ಬಾವಿ ಲೋಕಾರ್ಪಣೆಗೊಂಡಿತು. ಈ ವಿವರ ಬಾವಿಕಟ್ಟೆಯ ಮೇಲೆ ದಾಖಲಿಸಲಾಗಿದೆ.

ಗಾಂಧೀಜಿ ನೀಡಿದ ದೇಣಿಗೆಯಿಂದ ನಿರ್ಮಾಣವಾದ ಬಾವಿಯನ್ನು ಇಲ್ಲಿನ ಜನರು 'ಗಾಂಧಿ ಬಾವಿ' ಎಂದು ಕರೆಯುತ್ತಾರೆ. ಗ್ರಾಮದ ಹೃದಯಭಾಗದಲ್ಲಿರುವ 'ಗಾಂಧಿ ಬಾವಿ' ಗ್ರಾಮಸ್ಥರ ಬಾಯಾರಿಕೆ ನೀಗಿಸುತ್ತಿದೆ. ಗ್ರಾಮ ಪಂಚಾಯಿತಿ ಕೊರೆಯಿಸಿದ ಕೊಳವೆಬಾವಿಯಲ್ಲಿ ನೀರು ಕಡಿಮೆಯಾದರೂ, ಗಾಂಧಿ ಬಾವಿಯಲ್ಲಿ ನೀರು ಬತ್ತಿದ ಉದಾಹರಣೆಯೇ ಇಲ್ಲವಂತೆ. ಗಡಗಡೆ ಮೂಲಕ ಗ್ರಾಮಸ್ಥರು ಬೇಸಿಗೆಯಲ್ಲಿ ಹಗ್ಗ ಇಳಿಬಿಟ್ಟು ನೀರನ್ನು ಸೇದುತ್ತಾರೆ.

ಗಾಂಧಿ ವಾಸ್ತವ್ಯದ ಮನೆ

ಮಾರ್ಚ್ 7 ಮತ್ತು 8, 1934 ರಂದು ಗುಜರಾತ್ ಮೂಲದ ವ್ಯಾಪಾರಿ ಅಕ್ಷಯಚಂದ ಗುಜ್ಜರ ಎಂಬುವವರ ತೋಟದ ಮನೆಯಲ್ಲಿ ಗಾಂಧೀಜಿ ವಾಸ್ತವ್ಯ ಹೂಡಿದ್ದರು. ಗಾಂಧೀಜಿ ವಾಸವಿದ್ದ ಮನೆಯನ್ನು ಗುಜ್ಜರ ಕುಟುಂಬ ಇದೀಗ ಬಳಸುತ್ತಿಲ್ಲ. ಯಾರೂ ವಾಸವಿರದೇ ಪಾಳು ಬಿದ್ದಿದೆ. ಈ ಮನೆಯಲ್ಲಿ ಗಾಂಧೀಜಿ ಭಾವಚಿತ್ರವೊಂದು ಅನಾಥವಾಗಿ ಕಾಣಿಸುತ್ತದೆ. ಇದೇ ಮನೆಯ ಮುಂದೆ ಗಾಂಧೀಜಿ ಮಾವಿನಸಸಿಯೊಂದನ್ನು ನೆಟ್ಟಿದ್ದರು. ಇದೀಗ ಹೆಮ್ಮರವಾಗಿ ಗಾಂಧಿ ವಾಸವಿದ್ದ ಮನೆಗೆ ನೆರಳಾಗಿದೆ. ಈ ಮನೆಯನ್ನು ಸಂರಕ್ಷಿಸಿ ಸ್ಮಾರಕವನ್ನಾಗಿ ಮಾಡಬೇಕು ಎಂಬ ಬೇಡಿಕೆ ಗ್ರಾಮಸ್ಥರದು. ಜನಪ್ರತಿನಿಧಿಗಳಾಗಲೀ, ಅಧಿಕಾರಿಗಳಾಗಲೀ ಇತ್ತ ಗಮನ ಹರಿಸುತ್ತಲೇ ಇಲ್ಲ.

ಗಾಂಧೀಜಿ ನವಲಿಹಾಳದಲ್ಲಿ ಇನ್ನೊಂದು ಮಹತ್ತರವಾದ ಕಾರ್ಯ ಮಾಡಿದ್ದರು, ಅದುವೇ ಮಿಷನ್ ಹಾಸ್ಪಿಟಲ್. ಗ್ರಾಮದ ಬಡಜನರಿಗೆ ಉಚಿತ ಆರೋಗ್ಯ ಸೇವೆ ಒದಗಿಸುವ ಉದ್ದೇಶದಿಂದ ಕೊಲ್ಹಾಪುರದ ರಾಜಾರಾಮ ಮಹಾರಾಜರು ಹಾಗೂ ಗಾಂಧೀಜಿ ಪ್ರಯತ್ನದಿಂದ ಗ್ರಾಮದ ಮನೆಯೊಂದರಲ್ಲಿ ಉಚಿತ ಆಸ್ಪತ್ರೆ ತೆರೆಯಲಾಗಿತ್ತು. ಕಾಲಾಂತರದಲ್ಲಿ ಈ ಆಸ್ಪತ್ರೆ ಮಹಾರಾಷ್ಟ್ರದ ಮಿರಜ್ ಪಟ್ಟಣಕ್ಕೆ ಸ್ಥಳಾಂತರವಾಯಿತು. ಇಂದಿಗೂ ಆ ಮನೆಯನ್ನು ಸ್ಥಳೀಯರು 'ದವಾಖಾನಿ ಮನೆ' ಎಂದು ಕರೆಯುತ್ತಾರೆ.

ನವಲಿಹಾಳದಲ್ಲಿ ಗಾಂಧೀಜಿಯ ಹೆಜ್ಜೆ ಗುರುತುಗಳನ್ನು ರಕ್ಷಣೆ ಮಾಡಿ ಮುಂದಿನ ಪೀಳಿಗೆಗೆ ಕಾಯ್ದುಕೊಂಡು ಹೋಗಬೇಕಿದ್ದ ಜಿಲ್ಲಾಡಳಿತ ನಿರ್ಲಕ್ಷ್ಯ ಮಾಡಿದೆ. ಸ್ಥಳೀಯ ಸರ್ಕಾರಿ ಶಾಲೆಯ ಶಿಕ್ಷಕ ವಿಶ್ವನಾಥ ಧುಮಾಳ ಎಂಬುವವರು ನವಲಿಹಾಳದಲ್ಲಿ ಗಾಂಧೀಜಿ ಭೇಟಿ ನೀಡಿದ ಬಗ್ಗೆ 'ನಮ್ಮೂರಿನಲ್ಲಿ ಗಾಂಧೀಜಿ' ಎಂಬ ಕಿರುಹೊತ್ತಿಗೆ ಪ್ರಕಟಿಸಿ, ಶಾಲಾ ಮಕ್ಕಳಿಗೆ ಹಾಗೂ ಗ್ರಾಮಸ್ಥರಿಗೆ ಉಚಿತವಾಗಿ ಹಂಚುವ ಮೂಲಕ ಇತಿಹಾಸ ಮೆಲುಕು ಹಾಕುವ ಕೆಲಸ ಮಾಡಿದ್ದಾರೆ.



ಗಾಂಧಿ ವಾಸ್ತವ್ಯದ ಮನೆ

ಸೆಲೆಬ್ರಿಟಿ 'ಅಲೋಕ'ನ ಶಾಂತಿ ನಡಿಗೆ...

8ನೇ ಪುಟದಿಂದ...

ಬಿಕ್ಕುಗಳ ನಡಿಗೆ ಮುಕ್ತಾಯವಾಯಿತು. ಆದರೆ, ಅವರಿಗೆ ಅಲೋಕನನ್ನು ಬಿಡಲು ಮನಸ್ಸಾಗಲಿಲ್ಲ. ಇವನು ಅವರನ್ನು ಬಿಡಲಿಲ್ಲ ಎನ್ನುವುದೇ ಸರಿ ಅನಿಸುತ್ತದೆ. ಬಿಕ್ಕುಗಳು ಅಮೆರಿಕದವರು. ಇವನನ್ನು ಅಲ್ಲಿಗೆ ಕರೆದುಕೊಂಡು ಹೋಗುವ ನಿರ್ಧಾರ ಮಾಡಿದರು. ಅದಕ್ಕೆ ಬೇಕಾದ ಎಲ್ಲ ತಯಾರಿ ಮಾಡಿಕೊಂಡರು ಮತ್ತು ಇವನನ್ನು ಕರೆದುಕೊಂಡು ಹೋದರು.

ಅಲ್ಪವಿರಾಮ...

ಭಾರತದಲ್ಲಿ ಕಾರು ಅಪಘಾತವಾಗಿದ್ದರಿಂದ ಇವನ ಕಾಲಿಗೆ ಗಂಭೀರವಾದ ಗಾಯವೇ ಆಗಿತ್ತು. ಆದರೆ, ಇದಕ್ಕೆ ಭಾರತದಲ್ಲಿ ಚಿಕಿತ್ಸೆ ಕೊಡಿಸಲಾಗಲಿಲ್ಲ. ಗಾಯ ಸಂಪೂರ್ಣ ವಾಸಿ ಆಗಿರಲಿಲ್ಲ. ಅಮೆರಿಕಕ್ಕೆ ಬಂದ ಮೇಲೆ ಇಲ್ಲಿಯೂ ನಡಿಗೆ ಆರಂಭವಾಯಿತು. ಆದರೆ, ಕೆಲವೇ ದಿನಗಳಲ್ಲಿ ಇವನಿಗೆ ನಡಿಗೆಗೆ ತೊಂದರೆ ಕಾಣಿಸಿಕೊಂಡಿತು. ಅದಕ್ಕಾಗಿ ಬಿಕ್ಕು ಇವನಿಗಾಗಿಯೇ 'ಕ್ಯಾರವಾನ್' (ಬಸ್ ರೀತಿಯ ವ್ಯಾನ್‌ನಂತಿರುತ್ತದೆ. ಇಲ್ಲಿ ಮನೆಯೊಂದರಲ್ಲಿ ಇರುವ ಎಲ್ಲ ವ್ಯವಸ್ಥೆಯೂ ಇರುತ್ತದೆ) ತರಿಸಿದರು. ದಿನದಲ್ಲಿ ಸ್ವಲ್ಪ ಹೊತ್ತು ಮಾತ್ರವೇ ಇವನು ನಡೆಯುವಂತೆ ಕಟ್ಟುನಿಟ್ಟಾಗಿ ಸೂಚಿಸಿದರು.

ಆದರೆ, ಅಲೋಕನಿಗೆ ಯಾವ ಅಂಕೆ. ಇವನಿಗೆ ನಡಿಗೆಯೇ ಜೀವಂತಿಕೆ. ಬಿಕ್ಕುಗಳ ಮಾತು ಕೇಳಲಿಲ್ಲ. ಅವರೊಡನೆ ಮತ್ತೆ ರಸ್ತೆಗಿಳಿದ. ಇದು ಆಗು ಹೋಗುವ ಮಾತಲ್ಲ ಎಂದು ಇವನನ್ನು ಬಿಕ್ಕುಗಳು ಪಶುಚಿಕಿತ್ಸಾ ಆಸ್ಪತ್ರೆಗೆ ಸೇರಿಸಿದರು. ಈಗ ಇವನಿಗೆ ಹಿಂದಿನ ಒಂದು ಕಾಲಿಗೆ ಶಸ್ತ್ರ ಚಿಕಿತ್ಸೆಯಾಗಿದೆ. ಆರಾಮವಾಗಿ ಇದ್ದಾನೆ. ದಿನದಲ್ಲಿ ಇವನು ಹತ್ತು ನಿಮಿಷ ನಡೆಯಬಹುದಷ್ಟೆ.

ಇವನಿಗೆ ಬಿಕ್ಕುಗಳನ್ನು ಬಿಟ್ಟು ಇರುವುದಕ್ಕೆ ಇಷ್ಟವಿಲ್ಲ. ಅವರೊಂದಿಗೆ ಇರುವಷ್ಟು ಹೊತ್ತು ಆಟವಾಡಿ, ಓಡಾಡಿಕೊಂಡು ಇರುತ್ತಾನೆ. ಆಮೇಲೆ ಮಲಗುವುದು ಇದ್ದೇ ಇದೆ. ಮಾತ್ರೆಗಳನ್ನು ತಿನ್ನಲೂ ಇವನು ರಂಪ ಮಾಡುವುದಿಲ್ಲ ಎನ್ನುತ್ತಾರೆ ವೈದ್ಯರು.

ಜಗತ್ತಿನಾದ್ಯಂತ ಇವನಿಗೆ ಅಭಿಮಾನಿಗಳಿದ್ದಾರೆ. ಬಿಕ್ಕುಗಳೊಂದಿಗೆ ಈತ ನಡೆಯುತ್ತಿದ್ದ. ಆದರೆ, ಈಗ ಇವನ ಹಿಂದೆ ನೂರಾರು ಜನರು ನಡೆಯುತ್ತಾರೆ. ಮುಂದಿನ ಊರು ದಾಟಿಸಿ ಬರುತ್ತಾರೆ. ಅಲೋಕನಿಗಾಗಿ ಜನರು ಕಾಯುತ್ತಾ ರಸ್ತೆ ಬದಿಯಲ್ಲಿ ನಿಂತುಕೊಳ್ಳುತ್ತಾರೆ. ಇವನಿಗೂ ಜನರನ್ನು ಕಂಡರೇ ಅಷ್ಟೇ ಅಕ್ಕರೆ. ನಡೆಯುವಲ್ಲೆಲ್ಲಾ ಪ್ರೀತಿ ಹಂಚುತ್ತಾ, ಶಾಂತಿ ಸಾರುತ್ತಾ ಮುನ್ನಡೆಯುತ್ತಿದ್ದಾನೆ, ನಮ್ಮ ಅಲೋಕ.

ಮುನ್ನೋಟ 25-01-2026 ರಿಂದ 31-01-2026

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ನಿಮ್ಮ ಶ್ರಮಕ್ಕೆ ತಕ್ಕ ಫಲ ದೊರೆಯುವುದು ಕಡಿಮೆ. ಆದಾಯವು ಸಾಮಾನ್ಯವಾಗಿದ್ದರೂ, ಅದನ್ನು ಹೆಚ್ಚಿಸಿಕೊಳ್ಳುವ ಮಾರ್ಗಗಳು ದೊರೆಯುತ್ತವೆ. ಗುರುಹಿರಿಯರ ಬಗ್ಗೆ ತಾತ್ಸಾರ ಖಂಡಿತ ಬೇಡ. ಆಸ್ತಿ ಸಂಬಂಧಿತ ದಾಖಲೆಗಳಲ್ಲಿ ವ್ಯತ್ಯಾಸವಾಗುವ ಸಾಧ್ಯತೆಗಳಿವೆ. ಕರಿದ ಪದಾರ್ಥಗಳನ್ನು ತಯಾರಿಸಿ, ಮಾರುವವರಿಗೆ ವ್ಯಾಪಾರ ಹೆಚ್ಚುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ಎಲ್ಲರೊಂದಿಗೆ ಕಲಾತ್ಮಕವಾಗಿ ಮಾತನಾಡಿ ಜನರನ್ನು ಸೆಳೆಯುವಿರಿ. ಆದಾಯವು ನಿಮ್ಮ ಅಗತ್ಯವನ್ನು ಮೀರಿರುತ್ತದೆ. ಸಂಘ–ಸಂಸ್ಥೆಗಳಿಂದ ಆಸ್ತಿ ಪಡೆಯುವ ಯೋಗವಿದೆ. ಉದರ ಸಂಬಂಧಿ ದೋಷಗಳು ಕೆಲವರನ್ನು ಕಾಡಬಹುದು. ವೃತ್ತಿಯಲ್ಲಿ ಸ್ವಲ್ಪ ಅನುಕೂಲತೆ ಇರುತ್ತದೆ. ಮನೆಯಲ್ಲಿ ಶಾಂತತೆಯನ್ನು ಕಾಪಾಡಿಕೊಳ್ಳುವುದು ಅನಿವಾರ್ಯವಾಗಬಹುದು. ಕೃಷಿಯಿಂದ ಆದಾಯವಿರುತ್ತದೆ. ಕೆಲವರಿಗೆ ಕಚೇರಿಯಲ್ಲಿ ತರಬೇತಿ ಸಿಗಲಿದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಈ ಹಿಂದೆ ಮಾಡಿದ ತಪ್ಪುಗಳು ಪುನರಾವರ್ತನೆಯಾಗದಂತೆ ಎಚ್ಚರ ವಹಿಸಿ. ಖರ್ಚಿಗೆ ಕಡಿವಾಣ ಹಾಕಬೇಕಾದ ಪರಿಸ್ಥಿತಿ ಇರುತ್ತದೆ. ಆದಾಯವು ಮಧ್ಯಮ ಗತಿಯಲ್ಲಿರುತ್ತದೆ. ವಿದ್ಯಾರ್ಥಿಗಳು ಅಧ್ಯಯನಕ್ಕೆ ಹೆಚ್ಚು ಶ್ರಮವಹಿಸಬೇಕು. ಸಮಾನ ಮನಸ್ಕರಲ್ಲಿ ಹಣಕಾಸಿನ ವಿಚಾರದಿಂದ ಸಂಬಂಧಗಳು ಹದಗೆಡಬಹುದು. ನಿಮ್ಮ ಮಕ್ಕಳ ಆಸೆಗಾಗಿ ಹೆಚ್ಚು ಹಣ ಖರ್ಚಾಗುತ್ತದೆ. ಸಂಗಾತಿಯ ಆದಾಯದಲ್ಲಿ ಹೆಚ್ಚಳವನ್ನು ಕಾಣಬಹುದು.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ಮನಸ್ಸಿಗೆ ಹೊಸ ಚೈತನ್ಯ ಬಂದಂತೆ ಅನಿಸುತ್ತದೆ. ಆದಾಯವು ಸಾಮಾನ್ಯಗತಿಯಲ್ಲಿರುತ್ತದೆ. ಮಾತನಾಡುವಾಗ ಎಚ್ಚರವಿರಲಿ. ನಿಷ್ಠುರದ ಮಾತುಗಳು ಬೇಡ. ಸಂಗಾತಿಯ ವ್ಯವಹಾರಗಳಲ್ಲಿ ಆದಾಯ ಹೆಚ್ಚುತ್ತದೆ. ವಿದ್ಯಾರ್ಥಿಗಳಿಗೆ ಮಧ್ಯಮ ಫಲಿತಾಂಶವಿರುತ್ತದೆ. ಎಲೆಕ್ಟ್ರಾನಿಕ್ಸ್ ಉದ್ದಿಮೆದಾರರಿಗೆ ಸಾಕಷ್ಟು ಪ್ರಗತಿ ಇರುತ್ತದೆ. ಆಸ್ತಿಯ ವಿಚಾರಗಳಲ್ಲಿ ಹೊಸ ತಗಾದೆಗಳು ಬರಬಹುದು.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಹಿರಿಯರ ಜೊತೆ ಹೆಚ್ಚು ಕಾಲ ಕಳೆಯುವಿರಿ. ಆದಾಯವು ತಕ್ಕಮಟ್ಟಿಗೆ ಇರುತ್ತದೆ. ಸಂಗಾತಿಯ ಆರೋಗ್ಯದಲ್ಲಿ ಏರಿಳಿತಗಳನ್ನು ಕಾಣಬಹುದು. ಆಸ್ತಿಮಾಡುವ ವಿಚಾರದಲ್ಲಿ ಆತುರಬೇಡ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಯಶಸ್ಸು ಇರುತ್ತದೆ. ಕೆಲವರಿಗೆ ಈಗ ಶಸ್ತ್ರ ಚಿಕಿತ್ಸೆಯ ಅಗತ್ಯ ಬರಬಹುದು. ಸ್ನೇಹಿತರ ಅನುಕೂಲದಿಂದ ನಿಮ್ಮ ಕೆಲಸ ಕಾರ್ಯಗಳು ಸರಾಗವಾಗಿ ಆಗುತ್ತವೆ. ರಾಜಕೀಯ ವ್ಯಕ್ತಿಗಳಿಗೆ ಸ್ಥಾನಮಾನ ದೊರೆಯುವ ಸಾಧ್ಯತೆ ಇದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ಮನಸ್ಸಿನಲ್ಲಿ ಸ್ಥಿರ ನಿರ್ಧಾರಗಳಿಲ್ಲದೆ ಒದ್ದಾಡುವಿರಿ. ಆದಾಯವು ತಕ್ಕಮಟ್ಟಿಗೆ ಇರುತ್ತದೆ. ಬಂಧುಗಳ ಸಹಕಾರ ಸ್ವಲ್ಪ ಮಾತ್ರ ಸಿಗುತ್ತದೆ. ಆಸ್ತಿ ವ್ಯವಹಾರ ಮಾಡುವವರಿಗೆ ಆದಾಯ ಹೆಚ್ಚುತ್ತದೆ. ವಿದ್ಯಾರ್ಥಿಗಳಿಗೆ ಮಧ್ಯಮ ಫಲಿತಾಂಶ ಬರುತ್ತದೆ. ನಿಮ್ಮ ಮಕ್ಕಳ ವಿಚಾರದಲ್ಲಿ ಎಚ್ಚರಿಕೆ ವಹಿಸುವುದು ಬಹಳ ಒಳ್ಳೆಯದು.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ನಿಮ್ಮ ಅತಿಯಾದ ಒರಟುತನ ನಿಮ್ಮನ್ನು ಜನ ಸಮೂಹದಲ್ಲಿ ಇಕ್ಕಟ್ಟಿಗೆ ಸಿಲುಕಿಸಬಹುದು. ಆದಾಯವು ಸ್ವಲ್ಪ ಕಡಿಮೆ ಇರುತ್ತದೆ. ವೃತ್ತಿಯಲ್ಲಿ ಹಿತಶತ್ರುಗಳು ಹುಟ್ಟಿಕೊಳ್ಳುವರು. ಸರ್ಕಾರಿ ಕಚೇರಿಗಳಲ್ಲಿ ನಿಮ್ಮ ಕೆಲಸ ಸರಾಗವಾಗಿ ಆಗುತ್ತದೆ. ವಿದ್ಯುತ್ ಉಪಕರಣಗಳ ಮಾರಾಟಗಾರರಿಗೆ ವ್ಯಾಪಾರ ಹೆಚ್ಚಾಗುತ್ತದೆ. ಲೇವಾದೇವಿ ವ್ಯವಹಾರಗಳು ಖಂಡಿತ ಬೇಡ. ವಿದ್ಯಾರ್ಥಿಗಳಿಗೆ ಹೆಚ್ಚು ಶ್ರಮವಹಿಸಬೇಕಾದ ಅಗತ್ಯವಿದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ಸಾಹಸ ಕ್ರೀಡೆಗಳತ್ತ ಮನಸ್ಸು ಹರಿಯುತ್ತದೆ. ಆದಾಯವು ಅಗತ್ಯವನ್ನು ಪೂರೈಸುತ್ತದೆ. ಬಂಧುಗಳ ಕಸಿವಿಸಿಗಳನ್ನು ಎದುರಿಸಿ ನಿಲ್ಲುವಿರಿ. ಸಾಂಪ್ರದಾಯಿಕ ಬೆಳೆಗಳ ತಳಿರಕ್ಷಕರಿಗೆ ಹೆಚ್ಚು ಗೌರವ ಸಿಗುತ್ತದೆ. ಆಧ್ಯಾತ್ಮಿಕ ವಿಚಾರಗಳತ್ತ ಮನಸ್ಸು ಹರಿಯತೊಡಗುತ್ತದೆ. ಈಗ ಆತ್ಮೀಯರೊಂದಿಗೆ ನಿಮ್ಮ ಭಾವನೆಗಳನ್ನು ಹಂಚಿಕೊಂಡು ಸಂತೋಷ ಪಡುವಿರಿ. ಪ್ರಯಾಣದಲ್ಲಿ ನಷ್ಟ ಸಂಭವಿಸುವ ಸಾಧ್ಯತೆಗಳಿವೆ ಎಚ್ಚರ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ಮನಸ್ಸು ಪ್ರಫುಲ್ಲತೆಯಿಂದ ಕೂಡಿರುತ್ತದೆ. ಆದಾಯವು ಚೇತರಿಸಿಕೊಳ್ಳುತ್ತದೆ. ಸರ್ಕಾರಿ ಸಹಾಯಧನಗಳು ದೊರೆಯುತ್ತವೆ. ಯಾರಿಗೂ ಯಾವುದೇ ರೀತಿಯ ಭರವಸೆಗಳನ್ನು ನೀಡಬೇಡಿ. ವಾಹನ ಖರೀದಿಯು ನಿಮ್ಮಿಷ್ಟದಂತೆ ನಡೆಯುತ್ತದೆ. ಉದ್ಯೋಗಕ್ಕೆ ಅನುಕೂಲವಾಗುವ ಹೊಸ ಜನರ ಪರಿಚಯವಾಗುತ್ತದೆ. ಮಿತ್ರರ ಜೊತೆ ಸೇರಿ ಸಣ್ಣಮಟ್ಟದ ಉತ್ಪಾದನಾ ಘಟಕವನ್ನು ಆರಂಭಿಸುವ ಆಲೋಚನೆ ಇರುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಮುನ್ನುಗುವ ಉತ್ಸಾಹ ಹೆಚ್ಚಾಗುತ್ತದೆ. ಆದಾಯವು ಕಡಿಮೆ ಇರುತ್ತದೆ. ಶತ್ರುಗಳನ್ನು ಮಣಿಸುವಲ್ಲಿ ಯಶಸ್ವಿಯಾಗುವಿರಿ. ಆಸ್ತಿಯನ್ನು ಮಾಡುವ ಅವಕಾಶಗಳು ದೊರೆಯುತ್ತವೆ. ವಿದ್ಯಾರ್ಥಿಗಳಿಗೆ ಸಾಮಾನ್ಯ ಫಲಿತಾಂಶ ಇರುತ್ತದೆ. ನಿಮ್ಮ ಸಮಸ್ಯೆಗಳನ್ನು ನ್ಯಾಯಯುತವಾಗಿ ಹಾಗೂ ಸೌಹಾರ್ದಯುತವಾಗಿ ಬಗೆಹರಿಸಿಕೊಳ್ಳುವಿರಿ. ಪಿತ್ತವಿಕಾರಗಳು ಕೆಲವರನ್ನು ಬಾಧಿಸಬಹುದು. ಮನೆಯಲ್ಲಿನ ಆಗುಹೋಗುಗಳ ಬಗ್ಗೆ ಹೆಚ್ಚಿನ ಗಮನ ಕೊಡಿ.


ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ವ್ಯಾಯಾಮವನ್ನು ಮಾಡಿ ದೇಹ ದಂಡಿಸುವಿರಿ. ಆದಾಯವು ಕಡಿಮೆ ಇರುತ್ತದೆ. ಕೃಷಿಯಿಂದ ಲಾಭವಿರುತ್ತದೆ. ಆಸ್ತಿ ಮಾಡಲು ಬೇಕಾದ ಹಣದ ಬಗ್ಗೆ ಆಲೋಚನೆ ಮಾಡುವಿರಿ. ವಿದ್ಯಾರ್ಥಿಗಳಿಗೆ ಅತಿ ಹೆಚ್ಚು ಯಶಸ್ಸು ದೊರೆಯುತ್ತದೆ. ಶೀತಬಾಧೆ ಕೆಲವರನ್ನು ಕಾಡಬಹುದು. ಸಹಕಾರಿ ರಂಗದಲ್ಲಿ ಕೆಲಸ ಮಾಡುತ್ತಿರುವವರಿಗೆ ಹೆಚ್ಚಿನ ಗೌರವ ದೊರೆಯುತ್ತದೆ. ಉದ್ಯೋಗದಲ್ಲಿ ಸ್ಥಾನ ಬದಲಾವಣೆಯನ್ನು ಮಾಡುವವರು ಎಚ್ಚರವಹಿಸಿ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಯಾವುದೇ ಕೆಲಸ ಮಾಡಲು ಮನಸ್ಸು ಇರುವುದಿಲ್ಲ. ಆದಾಯವು ಕಡಿಮೆ ಇದ್ದು, ಖರ್ಚು ಹೆಚ್ಚಾಗುವ ಸಾಧ್ಯತೆಗಳಿವೆ. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸಬಹುದು. ಹೊಸ ಆಸ್ತಿ ಖರೀದಿ ಮಾಡುವ ವಿಚಾರ ಮುನ್ನೆಲೆಗೆ ಬರುತ್ತದೆ. ವಾಹನಗಳ ಬಿಡಿಭಾಗಗಳನ್ನು ಮಾರಾಟ ಮಾಡುವವರ ವ್ಯಾಪಾರ ಹೆಚ್ಚುತ್ತದೆ.

ಪದಬಂಧ 2928



ಮೇಲಿನಿಂದ ಕೆಳಕ್ಕೆ

1.ಅರಸರಿಗೆ ಬರಬಹುದಾದ ಕೆಟ್ಟ ಸಿಟ್ಟು 4
2. ಪ್ರಜಾಪ್ರಭುತ್ವದಲ್ಲಿ ರಾಜ್ಯಪಾಲರ ಮಹಲು 5
3. ಜತೆಗೂಡಿ ಓದುಕಲಿಯಲಿಕ್ಕೆ ಒಲವಿರುವವ 5
4. ಯಾದವ ವಂಶದಲ್ಲಿ ಹುಟ್ಟಿದ ಕುವರ 5
7. ಜೇನಿನಂತೆ ಸವಿಯಾದ ಸಂಗೀತದ ಉಲಿ 5
9. ಯುದ್ಧದ ಸಕಲಶಾಸ್ತ್ರ ತಂತ್ರ ವಿಶಾರದ 5
11. ವರಾಹ ರೂಪದ ಶಕ್ತಿ ದೇವತೆ 3
12. ಪ್ರಾಚೀನ ಪುರಾಣ ಪೂರ್ವ ಎಲ್ಲಾ ನಾಲ್ಕು ಶಾಸ್ತ್ರ 5
14. ಯಾವಾಗಲೂ ಒಟ್ಟಿಗೆ ಇರುವ ಸಂಗಡಿಗರು 5
15. ಮದುವೆಯಾದ ಹೆಣ್ಣಿಗೆ ತಾಯಿಯ ಗೃಹ 5
18. ಒಂದಕ್ಕೊಂದು ಕೊಂಡಿ ಬೆಸೆದ ಮಾಲೆ 4

ಎಡದಿಂದ ಬಲಕ್ಕೆ

1. ಶಂಕರಾಚಾರ್ಯರ ಲಕ್ಷ್ಮೀ ಸ್ತೋತ್ರದಿಂದ ಆಗುವ ಸುವರ್ಣವೃಷ್ಟಿ 5
3. ತ್ರಿಜ್ಯದ ಎರಡಳತೆಯ ಒಡೆಯ ಗುರುವಾಗಿ ಪ್ರಸಿದ್ಧ 4
5. ಲೌಕಿಕ ವ್ಯವಹಾರಗಳಿಂದ ಉಂಟಾಗುವ ಕಾಯಿಲೆ 4
6. ಅತಿ ಶ್ರೇಷ್ಠನಾದ ಈಶ್ವರ 5
8. ಇನ್ನೊಬ್ಬರನ್ನು ವಹಿಸಿಕೊಂಡು ಮಾಡುವ ತರ್ಕ 4
10. ಹೊಸದಾಗಿ ಬಾಗಿಲಿಗೆ ಕಟ್ಟಿದ ಹಸಿರು ಮಾವಿನೆಲೆಯ ಸಾಲು 5
13. ತನ್ನವರೆಂಬ ಮಂದಿಯ ಒಳಿತು 5
16. ಕರುಣೆಯಿಲ್ಲದ ಮೃದುವಲ್ಲದ ಮನಸ್ಸಿನ ಕಠಿಣತೆ 4
17. ಗ್ರೀಷ್ಮದ ಮೊದಲು ಪಲ್ಲವಿಸುವ ಚೈತ್ರ ವೈಶಾಖ ತಿಂಗಳು 5
19. ಹೆಣ್ಣು ಹೆಣ್ಣೆಂದೇಕೆ ಬೀಳುಗಳೆವರು ಕಣ್ಣು ಕಾಣದವರು 4
20. ಹಸು ಮತ್ತು ಅದರ ಜೊತೆಗಿರುವ ಹಸುಗೂಸು 4
21. ಪ್ರವಾಹ ಬಂದು ಮಾಡಿದ ಹಾಳು ರಾದ್ಧಾಂತ 5

ಪದಬಂಧ ಉತ್ತರ -2927

ಮೇಲಿಂದ ಕೆಳಕ್ಕೆ

1.ಸಂಘಮಿತ್ರ 2.ತಿರುವೆಂಕಟೇಶ 3.ರಂಪಾಟ 4.ಣಮರ 6.ಣಿಕ 8.ಪದಪುಂಜ 9. ಪುಷ್ಪಗುಚ್ಛ 13.ಕಾಮಧೇನು 15.ಗಣರಾಜ್ಯೋತ್ಸವ 16.ಪರಾರಿ 18.ಭಾವಗೀತೆ 19.ಸ್ವಗತ 20.ಹರಣ 21.ಮಭೀ

ಎಡದಿಂದ ಬಲಕ್ಕೆ

1.ಸಂಕ್ರಾಂತಿ 3.ರಂಗಾಯಣ 5.ರುಕ್ಮಿಣಿ 7.ಕಪಟ 9.ಧೀರ 10.ಚಿತ್ರಲೋಕ 11.ರಿಪುನಾಶಕಾ 14.ಜಗದಾಧಿಪ 17.ರಾಯಭಾರಿ 19.ಸ್ವಚ್ಛ 20.ಹನುಮ 22.ಭೀಭತ್ಸ 23.ತಮೋಗುಣ 24.ವನಿತೆ



ಎಲ್ಲ ಕಂಡವನು

ಚಲಿಸುವ ಆಗಸದಡಿ ಇಷ್ಟೆಲ್ಲ...

• ರೂಪಾ ಕೆ.ಎಂ.

ಮನುಷ್ಯ ಲೋಕವನ್ನು ಸದಾ ಕಾಡುವ ಭಯ, ಅಭದ್ರತೆ, ಎಂದೂ ಬಗೆಹರಿಯದ ಸಂಕಟ, ಪಾಪಪ್ರಜ್ಞೆ, ಅಸಹಾಯಕತೆ ಇದಕ್ಕಿದ್ದ ಹಾಗೆ ಜೀವ ಪಡೆದು, ಎಂದಾದರೊಮ್ಮೆ ಅವು ತಮ್ಮೊಡಲೊಳಗೆ ಇರಿಸಿಕೊಂಡ ಅಗಾಧತೆಯನ್ನು ಮಾತಿನ ಮೂಲಕ ಸಶಕ್ತವಾಗಿ ಅರುಹಲು ಸಾಧ್ಯವಾದರೆ, ಬಹುಶಃ ಕಲಾತ್ಮಕತೆಗೆ ತಾವು ಉಳಿಯುವುದಿಲ್ಲವೇನೋ!. ಆದರೆ, ಬಣ್ಣದ ಜಗತ್ತು ಈ ಎಲ್ಲಾ ಸ್ಥಾಯೀಭಾವಗಳನ್ನು ತನ್ನದೇ ರೀತಿಯಲ್ಲಿ ಅಪ್ಪಿಕೊಳ್ಳುತ್ತದೆ. ನೋಡುಗರ ಎದೆಯಲ್ಲಿ ಆರ್ದ್ರಭಾವ ಉಕ್ಕುವಂತೆ ಮಾಡುವ ಮೂಲಕ ಕಲಾಲೋಕವನ್ನೇ ಸೃಷ್ಟಿಸಿಬಿಡುತ್ತದೆ.

ಇಂಥದ್ದೊಂದು ಅನೂಹ್ಯ ಎನಿಸುವ ಕಲಾಲೋಕವೊಂದು ಬೆಂಗಳೂರಿನ ಕಸ್ತೂರಬಾ ರಸ್ತೆಯಲ್ಲಿರುವ ದಿ ಮ್ಯೂಸಿಯಂ ಆಫ್ ಆರ್ಟ್ ಆ್ಯಂಡ್ ಫೋಟೋಗ್ರಫಿಯಲ್ಲಿ ಅನಾವರಣಗೊಂಡಿದೆ.

ಅನಿಶ್ಚಿತತೆಯಿಂದ ಕೂಡಿರುವ ಬದುಕಿನ ಗತಿಯನ್ನು ಅರ್ಥ ಮಾಡಿಕೊಳ್ಳುವುದು ಅಷ್ಟು ಸುಲಭದ ಸಂಗತಿಯಲ್ಲ. ಎಲ್ಲಾ ಜಂಜಾಟಗಳ ನಡುವೆಯೂ ಈ ವಿಶ್ವದಲ್ಲಿ ಇರಬಹುದಾದ ಅಗೋಚರ ಶಕ್ತಿಯೊಂದನ್ನು ಅರಸುವ, ಅದರ ಆಶ್ರಯ ಪಡೆಯುವ ತವಕದಲ್ಲಿಯೇ ಉಳಿದು ಬಿಡುತ್ತೇವೆ. ಹಾಗೆ ಅಗೋಚರ ಶಕ್ತಿಯ ಅಸ್ತಿತ್ವವನ್ನು ಅರ್ಥೈಸಿಕೊಳ್ಳುವಾಗ ಬೆಳಕು, ಸಂಕೇತ, ಜ್ಯಾಮಿತಿಗಳನ್ನು ಬಳಸಿಕೊಳ್ಳುವುದು ಹೇಗೆ ಎಂಬುದನ್ನು ಎಸ್‌. ಎಚ್‌. ರಾಝಾ ಅವರ ಕ್ಯಾನ್ವಾಸಿನ ಮೇಲೆ ಅಕ್ರಿಲಿಕ್ ಬಳಸಿ ಮಾಡಿದ 'ವಿಶ್ವ' ಕಲಾಕೃತಿಯು ವಿವರಿಸುತ್ತದೆ.

ನಿರಂತರವಾಗಿ ತಿರುಗುವ ಭೂಮಿ ಮತ್ತು ಕಣ್ಣು ಹಾಯಿಸಿದಷ್ಟು ಕಾಣುವ ಆಗಸದಡಿಯಲ್ಲಿ ಬೆಳಕು ಮತ್ತು ನೆರಳಿನ ಉಪಸ್ಥಿತಿಯಲ್ಲಿ ಪ್ರತಿ ಜೀವದ ಜೀವನವು ತೆರೆದುಕೊಳ್ಳುತ್ತದೆ. ಕಾಲ ಕಳೆದಂತೆ ಪ್ರತಿ ಜೀವವೂ ಕಥೆಯಾಯಿತು. ಕಥೆಯೊಳಗೆ ನಿಸರ್ಗದ ಹಲವು ಅಂಶಗಳು ರೂಪ ಪಡೆಯಿತು. ಈ ಕಥೆ ಜನಜೀವನದ ಭಾಗವೇ ಆಯಿತು. ನಕ್ಷತ್ರಪುಂಜಗಳು, ಇಂದಿಗೂ ಜನರ ವ್ಯಕ್ತಿತ್ವವನ್ನು ನಿರ್ಧರಿಸುವ ಸೂಚಕಗಳಾಗಿವೆಯಲ್ಲ ಹಾಗೆ!.

ನಕ್ಷತ್ರಪುಂಜಗಳನ್ನು ಪ್ರತಿನಿಧಿಸುವ ರಾಶಿಗಳನ್ನು ಅರ್ಪಿತಾ ಸಿಂಗ್ ಅವರು ಜಲವರ್ಣ ಹಾಗೂ ಅಕ್ರಿಲಿಕ್ ಕಲಾಕೃತಿಗಳ ಮೂಲಕ ಕಟ್ಟಿಕೊಟ್ಟಿದ್ದಾರೆ. ಮಕರ ರಾಶಿಯನ್ನು ಪ್ರತಿನಿಧಿಸುವವರು ಸತತಯತ್ನಕ್ಕೆ ಪ್ರಸಿದ್ಧಿ ಪಡೆದಿದ್ದರೆ, ಕುಂಭ ಹಾಗೂ ಮೀನ ರಾಶಿಗಳು ಕ್ರಿಯಾಶೀಲತೆ ಮತ್ತು ಸಹಾನುಭೂತಿಗೆ ಹೆಸರುವಾಸಿಯಾಗಿವೆ. ನಿರ್ದಿಷ್ಟ ನಕ್ಷತ್ರ ಹಾಗೂ ರಾಶಿಯಲ್ಲಿ ಜನಿಸಿದವರ ಮನೋಧರ್ಮವನ್ನು ಅಳೆಯಲು ಇವೆಲ್ಲವೂ ದಿಕ್ಸೂಚಿಯಷ್ಟೆ. ಪ್ರಾಕೃತಿಕ ವರ್ಣಗಳನ್ನು ಬಳಸಿ ಮಾಡಿದ ಬಲಗೈ ಹಸ್ತ ಸಾಮುದ್ರಿಕ ಕಲಾಕೃತಿಯು ಇಂಥದ್ದೇ ಹಲವು ಹೊಳಹುಗಳನ್ನು ತೆರೆದಿಡುತ್ತದೆ.



ವಿಷ್ಣುವಿನ ರೂಪ

ಪ್ರಖರ ಬಿಸಿಲಿನಲ್ಲಿ ಹೊಳೆಯುವ ಜೀವವೃಕ್ಷವೊಂದರ ಭಂಗಿಯು ನಟರಾಜನ ತಾಂಡವ ನೃತ್ಯದಂತೆ ಕಾಣುವುದು ಕಲಾವಿದನಿಗಷ್ಟೆ ಸಾಧ್ಯವೇನೋ. ಸೃಷ್ಟಿ ಮತ್ತು ಲಯಗಳೆರಡೂ ವಿರುದ್ಧ ದಿಕ್ಕಿನಲ್ಲಿರುವ ಸಮತೋಲನದ ಶಕ್ತಿಯಾಗಿರುತ್ತದೆ. ಇದರ ದ್ಯೋತಕವೇ ನಟರಾಜನ ಭಂಗಿಯೇನೋ. 19ನೇ ಶತಮಾನದಲ್ಲಿ ಹತ್ತಿ ಬಟ್ಟೆಯ ಮೇಲೆ ವರ್ಣದ್ರವ್ಯ ಬಳಸಿ ಮಾಡಲಾದ ಈ ಕಲಂಕಾರಿ ಮಾದರಿಯ ಕಲಾಕೃತಿಯು ವೃಕ್ಷದೊಳಗೆ ಮೂಡಿದ ನಟರಾಜನನ್ನು ಬಿಂಬಿಸುತ್ತದೆ.

ನಾವು ಬ್ರಹ್ಮಾಂಡದೊಳಗೆ ಇದ್ದು, ಅದನ್ನು ನಿರಂತರವಾಗಿ ಶೋಧಿಸುತ್ತಿದ್ದೇವೆಯೋ ಅಥವಾ ಬ್ರಹ್ಮಾಂಡದ ಭಾಗವಾಗುತ್ತಲೇ ಅದನ್ನು ಅರಿತುಕೊಳ್ಳುವ ಮೂಲಕ ನಮ್ಮದೇ ಲೋಕವೊಂದನ್ನು ಸೃಷ್ಟಿಸುತ್ತಿದ್ದೇವೆಯೋ ಎಂಬಂತೆ ಬ್ರಹ್ಮಾಂಡಕ್ಕೆ ಸಂಬಂಧಿಸಿದ ಹಲವು ಕಲಾಕೃತಿಗಳನ್ನು ಕಂಡಾಗ ಅನಿಸದೇ ಇರದು.

19ನೇ ಶತಮಾನದ ಮಧ್ಯಬಾಗದಲ್ಲಿ ಕಿನ್ನಾಳದಲ್ಲಿ ಕೆತ್ತನೆಗೊಂಡಿರುವ ರತಿ ಮತ್ತು ಮನ್ಮಥರ ಕಲಾಕೃತಿಗಳು ಚಿತ್ತಾಕರ್ಷಕವಾಗಿವೆ. ಮುದ್ದಾಗಿ ಕಾಣುವ ರತಿ–ಮನ್ಮಥ ಕಲಾಕೃತಿಗಳನ್ನು ಮರದಿಂದ ಮಾಡಲಾಗಿದೆ. ಪ್ರೀತಿ ಎಂಬುದು ಸಂತಸಕ್ಕೂ, ನೋವಿಗೂ ಕಾರಣವಾಗಬಲ್ಲದು. ಚಲನಶೀಲತೆ ಬದುಕಿನ ಗುಣ. ಇದಕ್ಕೆ ಪ್ರೀತಿಯೂ ಹೊರತಲ್ಲ ಎಂಬುದನ್ನು ಸಾರುತ್ತದೆ ಹೆಸರೇ ಇರದ ಮತ್ತೊಂದು ಕಲಾಕೃತಿ.

ಬದುಕಿನಲ್ಲಿ ನೋವು–ನಲಿವನ್ನು ಸಮಚಿತ್ತದಿಂದ ಕಂಡವನ ಮುಖಮುದ್ರೆಯನ್ನು ಕಂಚಿನಲ್ಲಿ ಕೆತ್ತಲಾಗಿದೆ. ಸಂತೋಷಕ್ಕೆ ಹಿಗ್ಗದೆ, ದುಃಖಕ್ಕೆ ಕುಗ್ಗದೇ ಬದುಕಿನ ಪ್ರತಿ ಕ್ಷಣವನ್ನು ತೀವ್ರವಾಗಿ ಅನುಭವಿಸಿದಂತೆ ಕಾಣುತ್ತದೆ ಈ ಪ್ರತಿಮೆಯ ಮುಖಮುದ್ರೆ.

ನಮ್ಮ ಇಂದ್ರಿಯಗಳ ಅರಿವಿಗೆ ನಿಲುಕದ್ದನ್ನು ಕಥೆಗಳ ಮೂಲಕ ಅರ್ಥ ಮಾಡಿಕೊಳ್ಳಲು ಪ್ರಯತ್ನಿಸುತ್ತೇವೆ. ವಿಜ್ಞಾನದಿಂದಲೂ ಉತ್ತರ ಪಡೆಯಲಾಗದ ಪ್ರಾಕೃತಿಕ ಕೌತುಕಗಳನ್ನು, ಬ್ರಹ್ಮಾಂಡದ ವೈಶಾಲ್ಯವನ್ನು ಅರ್ಥೈಸಿಕೊಳ್ಳಲು ಹೆಣಗಾಡುವಾಗೆಲ್ಲ ಆಸರೆಯಾಗಿ ಒದಗಿ ಬರುವುದು ಕಲ್ಪನೆಗಳೇ. ಈ ಕಲ್ಪನೆಗಳನ್ನು ಕುತೂಹಲದ ಪ್ರಜ್ಞೆಯು ಕೈಹಿಡಿದು ಮುನ್ನಡೆಸುತ್ತದೆ. ಪುರಾತನ ಕಥೆಗಳಿಂದ ಆಧುನಿಕ ವಿಜ್ಞಾನದವರೆಗೂ ಬ್ರಹ್ಮಾಂಡವನ್ನು ಎಣಿಕೆಗೆ ಸಿಗದಷ್ಟು ರೀತಿಯಲ್ಲಿ ಕಲ್ಪಿಸಿಕೊಳ್ಳಲಾಗಿದೆ. ಒಂದೇ ದೇಹದಲ್ಲಿ ಸಮಸ್ತ ಜೀವಸಂಕುಲ ಇರುವಂತೆ ವರ್ಣಿಸಲಾಗಿದೆ. ಬ್ರಹ್ಮಾಂಡ ಕುರಿತ ಇಂಥ ಹಲವು ಕಲಾಕೃತಿಗಳು ನೋಡುಗರನ್ನು ಚಿಂತನೆಗೆ ಹಚ್ಚುತ್ತವೆ.



2ನೇ ಶತಮಾನದಲ್ಲಿ ಉತ್ತರ ಪ್ರದೇಶದ ಮಥುರಾದಲ್ಲಿ ಕೆಂಪು ಮರಳುಗಲ್ಲಿನಲ್ಲಿ ರೂಪುಗೊಂಡಿರುವ ಬುದ್ಧನ ಕಲಾಕೃತಿ, ವಾರಾಣಸಿ ಶವಸಂಸ್ಕಾರದ ಘಾಟ್‌ಗಳ ಫೋಟೋಗಳು, ಹತ್ತಿ ಬಟ್ಟೆಯ ಮೇಲೆ 1940ರಲ್ಲಿ ರಚನೆಯಾದ ಬೆಟ್ಟಗುಡ್ಡದ ಚಿತ್ರ, 20ನೇ ಶತಮಾನದ ಆರಂಭದಲ್ಲಿ ಉತ್ತರ ಪ್ರದೇಶದದಲ್ಲಿ ಹತ್ತಿ ಬಟ್ಟೆ ಮೇಲೆ ರಚನೆಗೊಂಡ ಕಂದುರಿ ದೇಗುಲದ ಚಿತ್ರವು ಈ ಪ್ರದರ್ಶನಕ್ಕೆ ಕಳೆ ತಂದಿವೆ.

ಈ ಪ್ರದರ್ಶನವು 'ಚಲಿಸುವ ಆಗಸದಡಿ' ಎನ್ನುವ ಶೀರ್ಷಿಕೆಯಲ್ಲಿ ಮಾರ್ಚ್ ಅಂತ್ಯದವರೆಗೆ ನಡೆಯಲಿದೆ. ವರ್ಣ ಚಿತ್ರಗಳು, ಛಾಯಾಚಿತ್ರಗಳು, ಜವಳಿ, ಶಿಲ್ಪಗಳು ಮತ್ತು ಮುದ್ರಣಗಳ ರೂಪದಲ್ಲಿರುವ ಕಲಾಕೃತಿಗಳು ಪ್ರದರ್ಶನದಲ್ಲಿ ನೋಡಲು ಲಭ್ಯವಿದೆ. ❖

ವಿಭಿನ್ನ ಪ್ರಯೋಗದ 'ಮಹಾಭಾರತ'

• ಸರ್ಜಾಶಂಕರ ಹರಳಿಮಠ

ಜನರ ಪ್ರಜ್ಞೆಯ ಭಾಗವಾಗಿ ಹೋಗಿರುವ ರಾಮಾಯಣ, ಮಹಾಭಾರತದಂತಹ ಮಹಾಕಾವ್ಯಗಳನ್ನು ರಂಗಕ್ಕೆ ತರುವುದು ಸವಾಲೂ ಹೌದು, ಅವಕಾಶವೂ ಹೌದು. ಈ ಮಹಾಕಾವ್ಯಗಳನ್ನು ಆಧರಿಸಿ ಈಗಾಗಲೇ ನೂರಾರು ರಂಗಪ್ರಯೋಗಗಳು ಮೂಡಿಬಂದಿದ್ದು, ಈ ಪ್ರದರ್ಶನಗಳಿಗೆ ಹೊರತಾದ ಪ್ರೇಕ್ಷಕರ ಹೊಸತನದ ನಿರೀಕ್ಷೆಯನ್ನು ಪೂರೈಸಬೇಕಾಗಿರುವುದು ಸವಾಲು.

ಈ ಹೊಸ ಪ್ರಯೋಗ ರಂಗದ ಎಲ್ಲಾ ಭೌತಿಕ ಮತ್ತು ಬೌದ್ಧಿಕ ಪರಿಕರಗಳನ್ನು ಸೃಜನಶೀಲವಾಗಿ ಬಳಸಿಕೊಂಡು ಹೊರಹೊಮ್ಮಿಸಲು ಸಾಧ್ಯವಾದರೆ ಅದು ನಿರ್ದೇಶಕರಿಗೆ ಒದಗುವ ಅವಕಾಶ. ಸವಾಲುಗಳನ್ನು ಸ್ವೀಕರಿಸಿ ಸೃಷ್ಟಿಸಿದ ನವೀನ ಪ್ರಯೋಗಗಳ ಹೆಜ್ಜೆಗುರುತುಗಳು ಕರ್ನಾಟಕ ರಂಗಪಯಣದ ದಾರಿಯುದ್ದಕ್ಕೂ ಕಂಡು ಬರುತ್ತವೆ. ಈ ಸಾಲಿಗೆ ಹೊಸ ಸೇರ್ಪಡೆ 'ಕಂದಗಲ್ಲರಿಗೆ ನಮಸ್ಕಾರ ಅರ್ಥಾತ್ ಕಂದಗಲ್ಲ ಭಾರತ'.

ಕನ್ನಡ ರಂಗಭೂಮಿಗೆ ಅದರ ಎಳೆವೆಯಲ್ಲಿಯೇ ಕಸುವು ತುಂಬಿದ ಕಂದಗಲ್ಲ ಹನುಮಂತರಾಯರು ಮಹಾಭಾರತವನ್ನು ಆಧರಿಸಿ ರಚಿಸಿದ ಏಳು ನಾಟಕಗಳನ್ನು ಆಕರವಾಗಿ ಬಳಿಸಿಕೊಂಡು, ಧಾರವಾಡ ರಂಗಾಯಣದ ರೆಪರ್ಟರಿ ಕಲಾವಿದರು, ಶಿವಮೊಗ್ಗ ರಂಗಾಯಣವು ಶಿವಮೊಗ್ಗದಲ್ಲಿ ಆಯೋಜಿಸಿದ್ದ ರಂಗ ಸಂಕ್ರಾಂತಿ ನಾಟಕೋತ್ಸವದಲ್ಲಿ ಈ ರಂಗರೂಪವನ್ನು ಪ್ರಸ್ತುತಪಡಿಸಿದರು.

ನಾಟಕದ ಆರಂಭದಲ್ಲಿ ಇದು ಮೂರು ಗಂಟೆಗಳ ನಾಟಕ ಎಂದು ನಿರೂಪಕರು ಹೇಳಿದಾಗ ಒಂದರಿಂದ ಎರಡು ಗಂಟೆಗಳ ನಾಟಕಕ್ಕೆ ಸಿದ್ಧವಾಗಿ ಬಂದಿದ್ದ ಪ್ರೇಕ್ಷಕರು ಕೊಂಚ ಕಸಿವಿಸಿಗೊಂಡರು. ಆದರೆ ಮೂರೂವರೆ ತಾಸು ಕಳೆದದ್ದೇ ಗೊತ್ತಾಗದಂತೆ ಹೊಸ ಮಹಾಭಾರತ ರಂಗದಲ್ಲಿ ವರ್ಣರಂಜಿತವಾಗಿ ತೆರೆದುಕೊಳ್ಳುತ್ತಾ ಸಾಗಿತು. ಎಲ್ಲರಿಗೂ ತಿಳಿದಿರುವ ಮಹಾಭಾರತದ ಕಥಾಸರಣಿಯನ್ನು, ಯಾವ ಬಗೆಯಲ್ಲಿ ವಿನ್ಯಾಸಗೊಳಿಸಿದ್ದಾರೆ ಎಂಬ ಕುತೂಹಲದಲ್ಲಿ ನಾಟಕ ಆರಂಭಗೊಂಡಿತು. ಅರಗಿನ ಅರಮನೆಯ ಬೆಂಕಿಯ ಅವಘಡದಿಂದ ಪಾಂಡವರು ಪಾರಾಗುವುದು, ದ್ರೌಪದಿಯ ಸ್ವಯಂವರ, ಪಾಂಡವರು-ಕೌರವರ ನಡುವಿನ ಪಗಡೆಯಾಟ, ಸೋತ ಪಾಂಡವರ ವನವಾಸ, ಮುರಿದ ಬೀಳುವ ಕೃಷ್ಣಸಂಧಾನ, ಕುರುಕ್ಷೇತ್ರ ಯುದ್ಧ.. ಹೀಗೆ ಮಹಾಭಾರತ ಮುಂದುವರೆಯಿತು.



ನಾಟಕದ ದೃಶ್ಯ
ಚಿತ್ರ: ಶಿವಮೊಗ್ಗ ನಾಗರಾಜ್

ಕರ್ಣನ ವಿಚಾರವಾಗಿ ಜಾತಿ ತಾರತಮ್ಯ ಕುರಿತ ಮಾತು-ಪ್ರತಿಮಾತುಗಳು ನಾಟಕವನ್ನು ಸಮಕಾಲೀನಗೊಳಿಸುವಲ್ಲಿ ಸಹಕರಿಸಿದರೆ, ಖಾದಿ ಪ್ರಚಾರ ನಾಟಕದ ಬಂಧದ ಹೊರಗೆ ಉಳಿಯಿತು. ಕೃಷ್ಣನ 'ರಾಜಕಾರಣ'ದ ತಂತ್ರಗಾರಿಕೆಗಳು, ದುರ್ಯೋಧನನ ಕರ್ಣನೆಡೆಗಿನ ಮಿತ್ರಪ್ರೇಮ, ಕರ್ಣನ ಸ್ವಾಮಿನಿಷ್ಠೆ, ಶಕುನಿಯ ಕುತಂತ್ರಗಳು, ನಮ್ಮ ಮನಸ್ಸಿನಲ್ಲಿದ್ದ ಮಹಾಭಾರತದ ಪಾತ್ರಗಳಿಗೆ ಸಾಕ್ಷೀಭೂತವಾದವು. ತನ್ನಿಬ್ಬರು ಮಕ್ಕಳು; ಅರ್ಜುನ-ಕರ್ಣರ ನಡುವೆ ಒಬ್ಬರನ್ನು ಉಳಿಸಿಕೊಳ್ಳುವ ಆಯ್ಕೆಯ ಪ್ರಶ್ನೆ ಬಂದಾಗ ಕುಂತಿಯ ತೊಳಲಾಟ ಮನೋಜ್ಞವಾಗಿ ಮೂಡಿಬಂದಿತು. ಕೊನೆಗೂ ಗೆಲ್ಲುವುದು ತಾಯಿ ಹೃದಯಕ್ಕಿಂತ ಜಾತಿಗ್ರಸ್ಥ ಸಾಮಾಜಿಕ ವ್ಯವಸ್ಥೆ ಹಾಗೂ ಈ ವ್ಯವಸ್ಥೆ ಮುಂದುವರೆಯಲು ಹೆಣ್ಣು ಕೂಡ ಒಂದು ಪರಿಕರ ಎಂಬ ಸಾರ್ವತ್ರಿಕ ಸತ್ಯದ ಧ್ವನಿ ಹೊರಡಿಸುವಲ್ಲಿ ಸಫಲವಾಯಿತು. ಈ ಸನ್ನಿವೇಶ ನಾಟಕದ ಅತ್ಯುತ್ತಮ ಭಾಗವಾಗಿ ಕಂಡುಬಂತು.

ವೃತ್ತಿ ರಂಗಭೂಮಿಯ ಪೌರಾಣಿಕ ನಾಟಕಗಳಲ್ಲಿ ಬಳಸುವ ದೀರ್ಘವಾದ, ಸಂಸ್ಕೃತಭೂಯಿಷ್ಠ ಪದಗಳಿಂದ ಕೂಡಿದ, ವೇಗವಾಗಿ ಮಾತನಾಡುವ ಶೈಲಿ ಕೆಲವು ವೇಳೆ ಕ್ಲೀಷೆಯೆನಿಸುತ್ತಿತ್ತು, ಅರ್ಥವೂ ಆಗುತ್ತಿರಲಿಲ್ಲ. ದ್ರೌಪದಿ ಸ್ವಯಂವರ ಮತ್ತು ಕೃಷ್ಣ ಕುಂತಿಯರ ಸಂವಾದದ ಪ್ರಸಂಗಗಳು ಈ ಶೈಲಿಗೆ ಹೊರತಾಗಿದ್ದು ಅನುಸರಿಸಬಹುದಾದ ಮಾತಿನ ಶೈಲಿಗೆ ಮಾದರಿಯಂತಿದ್ದವು.

ನಾಟಕದ ಅವಧಿ ವೃತ್ತಿ ರಂಗಭೂಮಿಯಂತೆ ದೀರ್ಘ ಮೂರು ಗಂಟೆಗಳು. ಬಹುಶಃ ಕಂದಗಲ್ಲರ ಮಹಾಭಾರತ ಆಧರಿತ ಎಲ್ಲ ನಾಟಕಗಳನ್ನು ಆಕರವಾಗಿ ಮಾಡಿಕೊಂಡಾಗ ಸಹಜವಾಗಿಯೇ ಅದು ಇಷ್ಟು ದೀರ್ಘ ಸಮಯವನ್ನು ನಿರೀಕ್ಷಿಸುತ್ತದೆ. ಇದೇನು ಸಮಸ್ಯೆಯಲ್ಲ. 'ಮಲೆಗಳಲ್ಲಿ ಮದುಮಗಳು'ನಂತಹ ದೀರ್ಘಾವಧಿಯ ನಾಟಕಗಳು ಯಶಸ್ವಿಯಾದ ಹಲವು ಉದಾಹರಣೆಗಳಿವೆ. ಆದರೆ ಕಂದಗಲ್ಲರ ಮಹಾಭಾರತ ಆಧರಿತ ಎಲ್ಲಾ ನಾಟಕಗಳನ್ನು ಒಳಗೊಳ್ಳುವ ಉದ್ದೇಶದ ಕಾರಣಕ್ಕೆ ಕೈಬಿಡಬಹುದಾಗಿದ್ದ ಭಾಗಗಳನ್ನು ಸೇರ್ಪಡೆಗೊಳಿಸಿಕೊಂಡಿದ್ದು ನಾಟಕಕ್ಕೆ ಕೊಂಚ ಭಾರವೆನಿಸಿತು.

'ಕಂದಗಲ್ಲ ಭಾರತ' ವೃತ್ತಿ ರಂಗಭೂಮಿಯ ಜನಪ್ರಿಯ ಶೈಲಿ ಮತ್ತು ಆಧುನಿಕ ರಂಗಭೂಮಿಯ ರಂಗವಿನ್ಯಾಸಗಳೆರಡನ್ನೂ ಹದವಾಗಿ ಮಿಶ್ರಣ ಮಾಡಿ ಹೊರಹೊಮ್ಮಿದ ವಿಶಿಷ್ಟ ರಂಗಪ್ರಯೋಗ. ಪ್ರಕಾಶ ಗರುಡ ಅವರ ನಿರ್ದೇಶನದಲ್ಲಿ ಮೂಡಿಬಂದ ಈ ರಂಗಪ್ರಯೋಗ ಮುಂದಿನ ಪ್ರಯೋಗಗಳಲ್ಲಿ ಮೀರಬಹುದಾದ ಒಂದೆರೆಡು ಮಿತಿಗಳ ನಡುವೆಯೂ ಪ್ರೇಕ್ಷಕರ ಮನಸ್ಸನ್ನು ಗೆಲ್ಲುವಲ್ಲಿ ಯಶಸ್ವಿಯಾಯಿತು.

ವೇಷಭೂಷಣ (ರಜನಿ ಗರುಡ), ರಂಗಸಜ್ಜಿಕೆ (ಶ್ವೇತಾರಾಣಿ ಎಚ್‌.ಕೆ), ಬೆಳಕು (ಮಧು ಮಳವಳ್ಳಿ), ಹಿನ್ನೆಲೆ ಸಂಗೀತ (ರಾಘವ ಕಮ್ಮಾರ) ಎಲ್ಲವುಗಳಲ್ಲಿ ಪರಿಣಾಮಕಾರಿಯಾಗಿತ್ತು. ಪ್ರತಿಯೊಬ್ಬ ಕಲಾವಿದರು ತಮ್ಮ ಪಾತ್ರಗಳಿಗೆ ಜೀವ ತುಂಬುವಲ್ಲಿ ಯಶಸ್ವಿಯಾದರು. ದ್ರೌಪದಿ (ರೇಖಾ ಹೊಂಗಲ), ಕುಂತಿ (ಇಂದು. ಡಿ), ಕರ್ಣ (ಸುನೀಲ ಲಗಳಿ), ಕೃಷ್ಣ (ಅಕ್ಕಮ್ಮಾ ದೇವರಮನಿ), ಶಕುನಿ (ವಿನೋದ ದಂಡಿನ) ಪಾತ್ರಗಳು ಈ ಕಲಾವಿದರ ಪ್ರತಿಭೆಯ ಜೊತೆಗೆ ಮಹಾಭಾರತದಲ್ಲಿನ ಈ ಪಾತ್ರಗಳ ವಿಶಿಷ್ಟತೆಯ ಕಾರಣಕ್ಕೂ ಗಮನ ಸೆಳೆದವು. ❖



ಹಿರಿಯಜೀವಗಳ ಖುಷಿಯ ಕ್ಷಣ

ಮುಸ್ಸಂಜೆಯಲ್ಲಿ ನೊಂದವರ...

8ನೇ ಪುಟದಿಂದ...

ವರ್ಷಕ್ಕೆ ಎರಡು ಪ್ರವಾಸ

ದಾನಿಗಳ ನೆರವಿನಿಂದ ವರ್ಷಕ್ಕೆ ಎರಡು ಪ್ರವಾಸವನ್ನು ಆಯೋಜಿಸುತ್ತಾರೆ. ದೂರದ ಊರುಗಳಿಗೆ ಹೋಗಲು ದೈಹಿಕವಾಗಿ ಸದೃಢವಿರುವವರಿಗೆ ಮಹಾರಾಷ್ಟ್ರದ ಪಂಢರಪುರ, ಕೊಲ್ಹಾಪುರ, ಗೋವಾ, ಮತ್ತಿತರ ಕಡೆ ಕರೆದೊಯ್ಯುತ್ತಾರೆ. ಆರೋಗ್ಯ ಸಮಸ್ಯೆಯಿಂದ ಬಳಲುತ್ತಿರುವವರಿಗೆ ಸಮೀಪದಲ್ಲೇ ಇರುವ ತಾಣಗಳಿಗೆ ಒಂದು ದಿನದಲ್ಲಿ ಕರೆದುಕೊಂಡು ಹೋಗಿಬರುತ್ತಾರೆ.

'ಸಂಜಯ ಗೋಡಾವತ್ ಗ್ರೂಪ್‌ನವರ ಪ್ರಾಯೋಜಕತ್ವದಲ್ಲಿ ಬೆಳಗಾವಿಯಿಂದ ಮುಂಬೈಗೆ ವಿಮಾನದಲ್ಲಿ ಮೂವತ್ತೆರಡು ಹಿರಿಯರು, ಸಿಬ್ಬಂದಿ ಸೇರಿ ನಲವತ್ತೈದು ಜನರು ಪ್ರವಾಸಕ್ಕೆ ಹೋಗಿದ್ದೆವು. ಮುಂಬೈನ ಉದ್ಯಮಿ ಅನಿಲ ಜೈನ್ ಅವರು, ಮುಂಬೈನಲ್ಲಿ ಆತಿಥ್ಯ ನೋಡಿಕೊಂಡರು. ತಾಜ್ ಹೋಟೆಲ್‌ಗೆ ಕರೆದೊಯ್ದು, ವಿವಿಐಪಿ ಆತಿಥ್ಯ ಕೊಟ್ಟರು. ಈ ವರ್ಷ ದಾನಿಗಳ ನೆರವಿನಿಂದಲೇ ವಿಮಾನದಲ್ಲಿ ಬೆಂಗಳೂರು ಪ್ರವಾಸಕ್ಕೆ ಕರೆದೊಯ್ಯಲು ಯೋಜಿಸಿದ್ದೇವೆ' ಎನ್ನುತ್ತಾರೆ ವಿಜಯ ಮೋರೆ.

'ನಾನು ಮೊದಲ ಬಾರಿ ವಿಮಾನವೇರಿ ಬೆಳಗಾವಿಯಿಂದ ಮುಂಬೈಗೆ ಹೋದೆ. ಅರಮನೆಯಂತಿದ್ದ ತಾಜ್ ಹೋಟೆಲ್‌ನಲ್ಲಿ ಉಪಾಹಾರ, ಊಟ ಮಾಡಿ ಬೀಗಿದೆ. ಗೇಟ್‌ವೇ ಆಫ್ ಇಂಡಿಯಾ, ಸಿದ್ಧಿವಿನಾಯಕ ಮಂದಿರ ಹೀಗೆ... ಒಂದಿಡೀ ವಾರ ಮುಂಬೈ ಸುತ್ತಾಡಿದೆ. ಅದೊಂಥರ ಖುಷಿಕೊಟ್ಟ ಗಳಿಗೆ' ಎನ್ನುವಾಗ ಸುಧಾ ಕಾರೇಕರ ಸಂಭ್ರಮಕ್ಕೆ ಪಾರವೇ ಇರಲಿಲ್ಲ.

ಎರಡೂವರೆ ದಶಕದ ಹಿಂದೆ ಇಬ್ಬರೇ ಹಿರಿಯ ನಾಗರಿಕರಿಂದ ವೃದ್ಧಾಶ್ರಮ ಆರಂಭವಾಗಿತ್ತು. ಈಗ ಅಲ್ಲಿಗೆ ಬಂದು ಸೇರುವವರ ಸಂಖ್ಯೆ ಹೆಚ್ಚುತ್ತಿದೆ. ಸರ್ಕಾರದ ನೆರವಿಗೆ ಎಂದೂ ಕೈಚಾಚದ ಆಶ್ರಮ, ದಾನಿಗಳ ನೆರವಿನಿಂದಲೇ ಮುನ್ನಡೆಯುತ್ತಿದೆ. ಭಾರತ ಮಾತ್ರವಲ್ಲದೆ; ವಿದೇಶದಲ್ಲಿರುವ ದಾನಿಗಳೂ ಆರ್ಥಿಕ ನೆರವು ಒದಗಿಸುತ್ತಿದ್ದಾರೆ.

ನಿತ್ಯ ನೂರಾರು ಜನ ಭೇಟಿ ನೀಡುತ್ತಾರೆ. ತಮ್ಮ ಜನ್ಮದಿನ, ವಿವಾಹ ವಾರ್ಷಿಕೋತ್ಸವ ಮತ್ತು ಸಂಭ್ರಮದ ಕ್ಷಣಗಳನ್ನು ಹಿರಿಯರ ಮಧ್ಯೆಯೇ ಆಚರಿಸಿಕೊಂಡು, ಒಟ್ಟಾಗಿ ಭೋಜನ ಸವಿದು ಖುಷಿಪಡುತ್ತಾರೆ.

ಮೂರೇ ತಿಂಗಳಲ್ಲಿ ಆನಂದವಾಯ್ತು

'ನನಗೆ ವಿವಾಹಿತ ಪುತ್ರಿ ಇದ್ದಾಳೆ. ಪತಿ ಕಾಣೆಯಾದ ಕಾರಣ ದಿಕ್ಕೇ ತೋಚದಂತಾಯಿತು. ಐದೂವರೆ ವರ್ಷದ ಹಿಂದೆ ಆಶ್ರಮಕ್ಕೆ ಬಂದು ಸೇರಿದೆ. ಆರಂಭದಲ್ಲೇ ಮನದಲ್ಲಿ ಸಾಕಷ್ಟು ದುಗುಡ ಇತ್ತು. ಬದುಕೇ ಮುಗಿಯಿತು ಅಂತನಿಸಿದ್ದು ಸುಳ್ಳಲ್ಲ. ಆದರೆ, ಇಲ್ಲಿಗೆ ಬಂದು ಸೇರಿದ ಮೂರೇ ತಿಂಗಳಲ್ಲಿ ಆನಂದವಾಯಿತು. ಈಗ ಮನೆ ನೆನಪಿಗೇ ಬರುತ್ತಿಲ್ಲ' ಎಂದು ಲಕ್ಷ್ಮಿ ದೇಸಾಯಿ ಹೇಳುತ್ತ ಸಂತಸಪಟ್ಟರು.

'ನಾನು ದಂತ ವೈದ್ಯರೊಬ್ಬರ ಬಳಿ ಕೆಲಸ ಮಾಡುತ್ತಿದ್ದೆ. ಗಂಡ ನನ್ನನ್ನು ತೊರೆದು, ಎರಡನೇ ಮದುವೆ ಮಾಡಿಕೊಂಡ. ಆಗ ಬದುಕೇ ನೆಲಕಚ್ಚಿದಂತಾಗಿತ್ತು. ಹದಿನೈದು ವರ್ಷಗಳ ಹಿಂದೆ ಆಶ್ರಮ ಸೇರಿದೆ. ಇಲ್ಲಿ ವಿಜಯ, ಅವರ ಪತ್ನಿ ಮರಿಯಾ ಹಾಗೂ ಇಬ್ಬರೂ ಮಕ್ಕಳು ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದಾರೆ. ಒಂದೇ ಮಾತಿನಲ್ಲಿ ಹೇಳುವುದಾದರೆ, ಗಂಡನ ಜೊತೆಯಲ್ಲಿ ಇದ್ದದಕ್ಕಿಂತ ಹೆಚ್ಚು ಖುಷಿಯಿಂದ ಇದ್ದೇನೆ. ಮನೆಯಲ್ಲಿ ಇಷ್ಟೊಂದು ಪ್ರೀತಿ ಸಿಗುತ್ತಿತ್ತೋ ಇಲ್ಲವೋ ಗೊತ್ತಿಲ್ಲ' ಎಂದು ಭಾವುಕರಾದರು ವಿದ್ಯಾ ದಿವಾನ್.

ಹೇಗಿದೆ ದಿನಚರಿ..

ಬೆಳಿಗ್ಗೆ 6ಕ್ಕೆ ಎದ್ದೇಳುವ ಹಿರಿಯ ನಾಗರಿಕರು ವಾಕಿಂಗ್, ಧ್ಯಾನ ಮಾಡುತ್ತಾರೆ. 7ಕ್ಕೆ ಚಹಾ ಸೇವಿಸಿದ ನಂತರ ಪ್ರಾರ್ಥನೆ ನಡೆಯುತ್ತದೆ. 8.30ಕ್ಕೆ ದಿನಕ್ಕೊಂದು ಬಗೆಯ ಉಪಾಹಾರ ನೀಡಲಾಗುತ್ತದೆ. 11ಕ್ಕೆ ಫಿಜಿಯೊಥೆರಪಿ ಶಿಬಿರ, 12.30ಕ್ಕೆ ಮಧ್ಯಾಹ್ನದ ಊಟ. 2ರಿಂದ 4ರವರೆಗೆ ವಿಶ್ರಾಂತಿ. ಸಂಜೆ 4.30ಕ್ಕೆ ಚಹಾದೊಂದಿಗೆ ಸ್ನ್ಯಾಕ್ಸ್ ಸೇವಿಸಿದ ನಂತರ ಮತ್ತೆ ಪ್ರಾರ್ಥನೆ. ರಾತ್ರಿ 8ಕ್ಕೆ ಊಟ ಮಾಡಿದ ನಂತರ, ಕೆಲಹೊತ್ತು ಟಿ.ವಿ ನೋಡಿ ಮಲಗುತ್ತಾರೆ.

ಪುಣೆ ಮಾದರಿಯಲ್ಲಿ ಆಶ್ರಮ

'ಬದುಕಿನಲ್ಲಿ ದಿಕ್ಕಿಲ್ಲದವರಿಗೆ ನೆರವಾಗಬೇಕು ಎಂಬುದು ನಮ್ಮ ಉದ್ದೇಶವಾಗಿತ್ತು. ಬಾಮನವಾಡಿಯಲ್ಲಿ ಐದಾರು ಎಕರೆ ಜಾಗವೂ ಇತ್ತು. ಹಾಗಾಗಿ ಆಶ್ರಮ ತೆರೆದೆವು. ಅದಕ್ಕೂ ಮುನ್ನ, ಪುಣೆಯಲ್ಲಿರುವ 'ನಿವಾರಾ' ಆಶ್ರಮಕ್ಕೆ ಭೇಟಿ ನೀಡಿದ್ದೆವು. ಅದೇ ಮಾದರಿಯನ್ನು ಇಲ್ಲಿ ಅಳವಡಿಸಿದ್ದೇವೆ. ನಮ್ಮಲ್ಲಿ ಪ್ರವೇಶ ನೀಡುವ ಹಿರಿಯ ನಾಗರಿಕರಿಂದ ಬಿಡಿಗಾಸು ಪಡೆಯುವುದಿಲ್ಲ. ಉದ್ಯಮ ಕ್ಷೇತ್ರದಲ್ಲಿ ನನಗೆ ಸಾಕಷ್ಟು ಆದಾಯ ಬರುತ್ತಿರಬಹುದು. ಆದರೆ, ನಿಜವಾದ ನೆಮ್ಮದಿ ಸಿಕ್ಕಿದ್ದು ಆಶ್ರಮ ಸ್ಥಾಪಿಸಿದ ಕಾಯಕದಲ್ಲೇ' ಎಂದು ಆಶ್ರಮದ ಸಂಸ್ಥಾಪಕ ಅಧ್ಯಕ್ಷ ವಿಜಯ ಪಾಟೀಲ ಹೇಳುತ್ತಾರೆ.

ಹಚ್ಚ ಹಸಿರಿನಿಂದ ನಳನಳಿಸುತ್ತಿರುವ, ಥೇಟ್ ರೆಸಾರ್ಟ್‌ನಂತಿರುವ ಈ ಆಶ್ರಮದ ಒಳಹೊಕ್ಕರೆ ಸಾಕು; ನಗುಮೊಗದಿಂದ ಆಶ್ರಮವಾಸಿಗಳು ಸ್ವಾಗತಿಸುತ್ತಾರೆ. ಆಶ್ರಮ ಸೇರುವ ಮುನ್ನ ಬದುಕಿನಲ್ಲಿ ನೂರೆಂಟು ಕಷ್ಟ ಉಂಡವರು, ಇಲ್ಲಿ ಖುಷಿ ಖುಷಿಯಿಂದಲೇ ದಿನ ಕಳೆಯುತ್ತಿದ್ದಾರೆ.

ಬೇರೆ ಆಶ್ರಮಗಳಂತೆ ಇಲ್ಲಿ ಹಿರಿಯರು ಸುಮ್ಮನೆ ಕೂರುವುದಿಲ್ಲ. ಅಡುಗೆಗೆ ಬೇಕಾಗುವ ಆಹಾರ ಧಾನ್ಯ ಸ್ವಚ್ಛಗೊಳಿಸುತ್ತಾರೆ. ತರಕಾರಿ ಕತ್ತರಿಸುತ್ತಾರೆ. ರೊಟ್ಟಿ, ಚಪಾತಿ ತಯಾರಿಸುವ ಸಿಬ್ಬಂದಿಗೆ ನೆರವಾಗುತ್ತಾರೆ. ಪಾತ್ರೆ ತೊಳೆಯಲು ಕೈಜೋಡಿಸುತ್ತಾರೆ. ಇವೆಲ್ಲ ಕೆಲಸ ಮಾಡಲು ಆಶ್ರಮದಲ್ಲಿ ಸಿಬ್ಬಂದಿಯೂ ಇದ್ದಾರೆ. ಆದರೂ, ಸ್ವಯಂ ಪ್ರೇರಣೆಯಿಂದಲೇ ಹಿರಿಯರು ಕೆಲಸ ಮಾಡುತ್ತ ಲವಲವಿಕೆಯಿಂದ ಇರುತ್ತಾರೆ.

ಬದುಕಿನ ಮುಸ್ಸಂಜೆಯಲ್ಲಿ ಹಣ್ಣು ಹಣ್ಣಾದ ಜೀವಗಳು ನರಳುವುದು, ನೊಂದುಕೊಳ್ಳುವುದು, ಖಿನ್ನತೆಗೆ ಒಳಗಾಗುವುದು ಸಹಜ ಎನ್ನುವಂತಾಗಿದೆ. ಆದರೆ, ಈ ಆಶ್ರಮದ ಜೀವಗಳು ಚೈತನ್ಯದ ಚಿಲುವೆಯಂತೆ, ಜೀವನ್ಮುಖಿಯಾಗಿವೆ. ಇವರು ಮೀಟುವ ವೀಣೆಯಲ್ಲಿ ನೋವಿನ ಬದಲು ನಲಿವಿನ ಹಾಡುಗಳೇ ರಿಂಗಣಿಸುತ್ತವೆ. ❖


ಕಥೆ
ದಿಲೀಪ್ ಎನ್ಕೆ ಅವರ **ಅಂಬಾಸಿಡರ್ ಕಾರು**
prajavani.net/short-story

ಕವನ
ದೊಡ್ಡಿಶೇಖರ ಅವರ **ಬಸ್ಸಿನ ಹವೆಯಲ್ಲಿ ಈಜುತ್ತಿದ್ದಾಗ**
www.prajavani.net/poetry

ಸಾದರ ಸ್ವೀಕಾರ
ಹೊಸ ಪುಸ್ತಕಗಳ ಮಾಹಿತಿಗೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರತಿಕ್ರಿಯೆಗಳನ್ನು ಕಳಿಸಲು
bhanuvara@prajavani.co.in

ಮೊದಲ ಓದು

ತತ್ವಜ್ಞಾನಿ ಚಾರ್ವಾಕನ ಚಿಂತನೆಗಳ ಹರವು



ಚಾರ್ವಾಕ
ಕನ್ನಡಕ್ಕೆ: ಚಂದ್ರಕಾಂತ ಪೋಕಳೆ
ಪ್ರ: ನವಕರ್ನಾಟಕ
ಸಂ: 080–22161900

ಭೌತಿಕವಾದವನ್ನು ಪ್ರತಿಪಾದಿಸುವ ಭಾರತೀಯ ಪ್ರಾಚೀನ ತತ್ವಜ್ಞಾನಿ ಚಾರ್ವಾಕ ಅವರ ತಾರ್ಕಿಕ ವಿಚಾರವನ್ನು ಆಧರಿಸಿ ಮರಾಠಿ ಲೇಖಕ ಸುರೇಶ ದ್ವಾದಶೀವಾರ 'ಚಾರ್ವಾಕ' ಕೃತಿಯನ್ನು ರಚಿಸಿದ್ದಾರೆ. ಅದನ್ನು ಚಂದ್ರಕಾಂತ ಪೋಕಳೆ ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ.

'ಪರಂಪರೆ ಮತ್ತು ಶ್ರದ್ಧೆಯು ಸ್ಥಿತಿವಾದಿಯಾಗಿದ್ದರೆ, ವಿಚಾರ ಮತ್ತು ತರ್ಕವು ಗತಿವಾದಿಯಾಗಿರುತ್ತದೆ' ಎನ್ನುವುದು ಚಾರ್ವಾಕ ಚಿಂತನೆ. ಅಂದರೆ ಸ್ಥಿತಿ ಸ್ಥಿರತೆಯನ್ನು ಬಯಸಿದರೆ, ಗತಿ ಚಲನೆಯನ್ನು ಬಯಸುತ್ತದೆ ಎನ್ನುವುದೇ ಅವರ ಪ್ರತಿಪಾದನೆಯಾಗಿತ್ತು. ಅನುಭವಕ್ಕೆ ದಕ್ಕುವ ಜಗತ್ತೇ ವಾಸ್ತವ ಸತ್ಯ, ದೇವರು ಧರ್ಮ ಮಿಥ್ಯ. ಮುಂದೆ ಮಿಥ್ಯಗಳು ಇಲ್ಲವಾಗುತ್ತವೆ ಎನ್ನುವ ಅಂಶವನ್ನು 'ಆದ್ಯ ಧರ್ಮ ಮತ್ತು ಧಾರ್ಮಿಕ ವ್ಯವಸ್ಥೆ' ಎಂಬ ಲೇಖನದಲ್ಲಿ ದಾಖಲಿಸುತ್ತಾರೆ.

'ಚಾರ್ವಾಕರ ವಿಚಾರಧಾರೆ' ಲೇಖನದಲ್ಲಿ ಪ್ಲೇಟೊ, ಹಾಬ್ಸ್ ಸೇರಿದಂತೆ ಬೇರೆ ಬೇರೆ ಚಿಂತಕರ ವಿಚಾರವನ್ನು ಚರ್ಚೆಗೆ ಒಡ್ಡುತ್ತಾರೆ. ಆ ಮೂಲಕ ಚಾರ್ವಾಕ ವಿಚಾರ ಹೇಗೆ ಭಿನ್ನ ಮತ್ತು ಏಕೆ ಅಗತ್ಯ ಅನ್ನುವುದನ್ನು ಗುರುತಿಸುವ ಮೂಲಕ ಲೇಖಕರು, ಚಾರ್ವಾಕನ 'ಲೋಕಾಯತ ದರ್ಶನ'ವನ್ನು ವಿವರಿಸುತ್ತಾರೆ. ಲೋಕ ಎಂಬ ಪದಕ್ಕೆ ಜಗತ್ತು ಎಂಬ ಅರ್ಥವೂ ಇದೆ. ಅಂದರೆ ಲೋಕಾಯತವು ಜಗತ್ತಿನ ಅಧ್ಯಯನವಾಗಿದೆ ಎನ್ನುವುದು ಚಾರ್ವಾಕ ನಿಲುವು. 'ಲೋಕಾಯತವೆಂದರೆ ಜನರ ತತ್ವಜ್ಞಾನ ಇಲ್ಲವೇ ತಮ್ಮ ಅನುಭವದಿಂದ ನೀಡಿದ ಅವರ ಜ್ಞಾನ' ಎನ್ನವ ಅಂಶವನ್ನು ಇಲ್ಲಿ ನಿರೂಪಿಸಿದ್ದಾರೆ.

ಭೌತವಾದಿ ಚಾರ್ವಾಕ ಸಂಸ್ಕೃತದಲ್ಲಿ ಕಾವ್ಯ ರಚಿಸಿದ್ದಾನೆ ಎನ್ನಲಾಗಿದೆ. ಅವು ಉಪಲಬ್ಧವಾಗಿಲ್ಲ. ಇಂತಹ ಸಂದರ್ಭದಲ್ಲಿ ಅವರ ವಿಚಾರವನ್ನು ಇಟ್ಟುಕೊಂಡು ಬೇರೆ ಬೇರೆ ಲೋಕ ಜ್ಞಾನದ ಜೊತೆ ಲೇಖಕರು ಇಲ್ಲಿ ಮುಖಾಮುಖಿ ಮಾಡಿದ್ದಾರೆ. ಈ ಕೃತಿ 'ನಾವು ಜಗತ್ತು ಮತ್ತು ಚಾರ್ವಾಕ', 'ಧರ್ಮಗಳ ಜನ್ಮಕಥೆ ಮತ್ತು ಚಾರ್ವಾಕ', 'ಸುಖಪ್ರಾಪ್ತಿಯ ವಿಚಾರ ಹಾಗೂ ಚಾರ್ವಾಕ', 'ಕಾಲಕ್ಕೆ ತಕ್ಕಂತೆ ದೇವರಲ್ಲಾದ ಬದಲಾವಣೆ', 'ಬುದ್ಧ ಮತ್ತು ಚಾರ್ವಾಕ', ಮಹಿಳೆಯರ ವರ್ಗ ಮತ್ತು ಚಾರ್ವಾಕ' ಹೀಗೆ 15 ಭಿನ್ನ ಆಯಾಮದ ಲೇಖನಗಳನ್ನು ಒಳಗೊಂಡಿದೆ.

ಪುಟ: 144 ₹190

ಸಿರಿವಂತಿಕೆಯ ರಾಜಮಾರ್ಗಗಳು...



ಮಿಡ್ಲ್ ಕ್ಲಾಸ್ ಟು ರಿಚ್
ಲೇ: ಶರತ್ ಎಂ.ಎಸ್.
ಪ್ರ: ಬಹುರೂಪಿ
ಸಂ: 701918 2729

ಸಾಕಷ್ಟು ಹಣ ಗಳಿಸಬೇಕು ಮತ್ತು ಶ್ರೀಮಂತರಾಗಬೇಕೆಂಬ ಆಸೆ ಎಲ್ಲರದ್ದೂ ಹೌದು. ಈ ನಿಟ್ಟನಲ್ಲಿ ಮಧ್ಯಮ ವರ್ಗದವರ ಕಸರತ್ತು ಹಲವಾರು. ಷೇರು ಮಾರುಕಟ್ಟೆ, ಚಿನ್ನ, ಬೆಳ್ಳಿ, ನಿವೇಶನ, ಮನೆ, ಮ್ಯೂಚುವಲ್ ಫಂಡ್ ಸೇರಿದಂತೆ ಹಲವು ಮಾರ್ಗಗಳನ್ನು ಅನುಸರಿಸುವವರು ಹಲವರು. ಹೀಗಿದ್ದರೂ ಹೂಡಿಕೆ ಕುರಿತು ಗೊಂದಲ ಇರುವುದು ಸಹಜ. ಇದಕ್ಕೆ ಉತ್ತರ ಎಂಬಂತೆ ಲೇಖಕ ಶರತ್ ಎಂ.ಎಸ್. ಅವರು 'ಮಿಡಲ್ ಕ್ಲಾಸ್ ಟು ರಿಚ್' ಎಂಬ ಕೃತಿ ಮೂಲಕ ಸಿರಿವಂತಿಕೆಗೆ ರಾಜಮಾರ್ಗ ಯಾವುದು ಎಂಬುದನ್ನು ವಿವರಿಸುವ ಪ್ರಯತ್ನ ನಡೆಸಿದ್ದಾರೆ.


ಸಂಬಳವನ್ನೇ ನಂಬಿದರೆ ಶ್ರೀಮಂತರಾಗಬಹುದೇ? ಹೊಸ ಕಾರು ಖರೀದಿಸುವ ಮುನ್ನ ಏನೆಲ್ಲಾ ಯೋಚಿಸಬೇಕು? ಕನಸಿನ ಮನೆ ಕಟ್ಟಿಸುವ ಮುನ್ನ, ಆರೋಗ್ಯ ವಿಮೆ ಎಷ್ಟು ಅಗತ್ಯ ಎಂಬ ವಿಷಯಗಳನ್ನು ವಿವರಿಸಿರುವ ಲೇಖಕರು, ಸಿರಿವಂತರ ಯಶಸ್ಸಿನ ಗುಟ್ಟನ್ನೂ ಈ ಕೃತಿಯಲ್ಲಿ ರಟ್ಟು ಮಾಡಿದ್ದಾರೆ.

ಖರ್ಚಿನ ಮೇಲೆ ಹಿಡಿತ ಸಾಧಿಸಲು ಇರುವ ಸೂತ್ರಗಳೇನು? ಉಳಿತಾಯ, ಹಣಕಾಸು ಶಿಕ್ಷಣ ಏಕೆ ಮುಖ್ಯ? ಜೀವನ ಶೈಲಿಯ ಹಣದುಬ್ಬರ ಎಷ್ಟು ದುಬಾರಿಯಾಗಲಿದೆ? ನಿವೃತ್ತಿಯ ನಂತರ ಸ್ವತಂತ್ರ ಜೀವನ ಹೇಗಿರಬೇಕು? ನಿವೃತ್ತರಾದ ನಂತರ ಮಕ್ಕಳನ್ನೇ ಆಶ್ರಯಿಸಬೇಕೇ? ಎಂಬಿತ್ಯಾದಿ ಪ್ರಶ್ನೆಗಳಿಗೆ ಲೇಖಕರು ಉತ್ತರ ನೀಡುವ ಪ್ರಯತ್ನ ಮಾಡಿದ್ದಾರೆ.

ವಿವಿಧ ವಿಷಯಗಳ ಕುರಿತು ಕೃತಿಯಲ್ಲಿರುವ 23 ಲೇಖನಗಳಲ್ಲಿ ಚಿತ್ರಗಳು, ಇನ್ಫೊಗ್ರಾಫಿಕ್ಸ್ ಒಳಗೊಂಡ ಮಾಹಿತಿ ಇವೆ.

ಪುಟ: 184 ₹300

ಹಟ್ಟಿಯೊಳಗಿನಿಂದ ಇಣುಕುವ ಅಮ್ಮನ ನೆನಪು



ರಾಗಿತೆನೆ
ಲೇ: ಜಿ.ಎನ್. ಧನಂಜಯಮೂರ್ತಿ
ಪ್ರ: ಅಹರ್ನಿಶಿ
ಸಂ: 9449174662

'ರಾಗಿತೆನೆ' ಶೀರ್ಷಿಕೆಯಲ್ಲಿಯೇ ಒಂದು ಸೆಳೆತವಿದೆ, ಈಗಷ್ಟೇ ಮಳೆ ಬಿದ್ದು ಹದವಾದ ಮಣ್ಣಿನ ಘಮಲು ಇದೆ. ಪ್ರಾರಂಭದಿಂದ ಕೊನೆತನಕ ಅದೇ ಘಮಲನ್ನು ಪಸರಿಸುವ ಕೃತಿಯಿದು. ಕೃತಿಯ ಲೇಖಕ ಜಿ.ಎನ್. ಧನಂಜಯಮೂರ್ತಿ ಕಂಡ ಅವರ ತಾಯಿಯ ಬದುಕೇ ಇಲ್ಲಿ ಅಕ್ಷರರೂಪಕ್ಕಿಳಿದಿದೆ. ಹಾಗಾಗಿ ಇಲ್ಲಿ ಸಾಹಿತ್ಯಕ್ಕಿಂತ ಭಾವನೆಗಳೇ ಹೆಚ್ಚು ಢಾಳಾಗಿವೆ. ಕೇವಲ ಅವರ ಅಮ್ಮನ ಆತ್ಮಕಥೆಯಾಗದೇ, 80–90ರ ದಶಕದಲ್ಲಿ ತಾಯಿಯಾದ ಹಲವರ ಬದುಕಿನ ಕಥೆಯೂ ಹೌದು.

ಕಡೂರಿನ ಕೆ.ಗೊಲ್ಲರಹಟ್ಟಿಯಲ್ಲಿ ಹುಟ್ಟಿ ಬೆಳೆದ ಬುಡಕಟ್ಟು ಸಮುದಾಯದ ಮಹಿಳೆ ತಿಮ್ಮಮ್ಮನ ಆದಿಯಿಂದ ಅಂತ್ಯದವರೆಗಿನ ಬದುಕನ್ನು ಪುಟ್ಟ, ಪುಟ್ಟ ಅಧ್ಯಾಯಗಳಾಗಿ ಕಟ್ಟಿಕೊಟ್ಟಿದ್ದಾರೆ ಲೇಖಕ. ಅಧ್ಯಾಯ ಎನ್ನುವುದಕ್ಕಿಂದ ಘಟನೆಗಳನ್ನು ಬಿಡಿಬಿಡಿಯಾಗಿ ಬಿಡಿಸಿಟ್ಟಿದ್ದಾರೆ. 'ಅವ್ವನ ಮತ್ತು ಅವಳ ವಾರಿಗೆಯವರ ಜನ್ಮದಿನ ಇವತ್ತಿಗೂ ತೀರ್ಮಾನವಾಗದೆ ಉಳಿದಿರುವ ಕುಮಾರವ್ಯಾಸನ ಕಾಲದಂತೆ. ಅವಳ ಬಾಳು ಮಾತ್ರ ಆತನ ಕಾವ್ಯದಷ್ಟೆ ಉತ್ಕೃಷ್ಟ' ಎಂಬ ಕೃತಿಯ ಮೊದಲ ಸಾಲೇ ಇಡೀ ಕೃತಿಯ ಒಟ್ಟಾರೆ ಸಾರವನ್ನು ತಿಳಿಸಿಬಿಡುತ್ತದೆ. 'ನಾಯಿ ಮುಟ್ಟಿದ್ದನ್ನು ನಾಯಿ ಕೊರಳಿಗೆ ಕಟ್ಟು' ಎಂಬ ಮಾತಿನಂತೆ ಹಟ್ಟಿಯಲ್ಲಿ ನಡೆಯುತ್ತಿದ್ದ ವಿವಾಹ ಪದ್ಧತಿ ಒಂದು ಕಾಲಘಟ್ಟದಲ್ಲಿ ಹೆಣ್ಣನ್ನು ನಡೆಸಿಕೊಳ್ಳುತ್ತಿದ್ದ ಸಮಾಜದ ಚಿತ್ರಣವನ್ನು ನೀಡುತ್ತದೆ.

'ಅವ್ವನ ಫ್ಯಾಷನ್ನುಗಳು' ಕಡುಬಡತನದ ನಡುವೆಯೂ ಅಮ್ಮನ ಕೈಯಿಂದ ಸಿದ್ಧವಾಗುತ್ತಿದ್ದ ಮುದ್ದೆಯ ಸವಿಯನ್ನು ಉಣಿಸುತ್ತದೆ. ತಮ್ಮ ಬದುಕಿನ ಖುಷಿಗಾಗಿ ಹಳ್ಳಿ ಹೆಂಗಸರು ಆಯ್ದುಕೊಳ್ಳುತ್ತಿದ್ದ ಜನಪದ ದಾರಿಗಳನ್ನು ತೆರೆದಿಡುತ್ತದೆ. ಅಪ್ಪನ ಜತೆ ಜಗಳ, ಬಡತನ, ಸಮಾಜದಲ್ಲಿ ಶೋಷಣೆ, ನೋವುಗಳನ್ನೆಲ್ಲ ಸಹಿಸಿಕೊಂಡು ಬದುಕಿನ ಒಂದು ಘಟ್ಟ ತಲುಪಿದ ತಿಮ್ಮಮ್ಮ ಕ್ಯಾನ್ಸರ್‌ಗೆ ತುತ್ತಾಗುತ್ತಾರೆ. ಅಲ್ಲಿಂದ ನಂತರದ ಕಥನ ಇಂದಿನ ವಯೋವೃದ್ಧರ ಬದುಕಿನ ಕನ್ನಡಿಯಂತಿದೆ. ಒಂದು ಗುಕ್ಕಿನಲ್ಲಿ ಓದಿ ಮುಗಿಸಬಹುದಾದಷ್ಟು ಸಣ್ಣ ಗಾತ್ರದ ಕೃತಿಯಿದು. ಎಲ್ಲಿಯೂ, ಯಾವುದನ್ನೂ ವೈಭವೀಕರಿಸಿಲ್ಲ. ನಿರೂಪಣೆಯು ಸರಳ ಶೈಲಿಯಲ್ಲಿದೆ.

ಪುಟ: 124 ₹150

ಕಾಡುವ ‘ಸ್ತ್ರೀ’ ಚಿತ್ರಗಳೂ, ವಿಷಾದದ ಭಾವವೂ...

ಜನವರಿ 29 ರಿಂದ ಆರಂಭವಾಗುವ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ಈ ಬಾರಿಯ ಧ್ಯೇಯವಾಕ್ಯ ‘ಸ್ತ್ರೀ ಅಂದರೆ ಅಷ್ಟೇ ಸಾಕೆ’. ಮಹಿಳಾ ಸಂವೇದನೆ ಮತ್ತು ಸಮಾನತೆಯ ದನಿಯನ್ನು ಗಟ್ಟಿಯಾಗಿ ಸಾರುವ ಚಿತ್ರಗಳು ಚಿತ್ರೋತ್ಸವದಲ್ಲಿ ಗಮನ ಸೆಳೆಯಲಿವೆ.

• ರಶ್ಮಿ ಎಸ್



‘ಸಿನಿಮಾಗಳಲ್ಲಿ ಎರಡೇ ಬಗೆ. ಒಂದು ಒಳ್ಳೆಯದು ಮತ್ತು ಕೆಟ್ಟದ್ದು’– ಯಶ್ ಚೋಪ್ರಾ, ನಿರ್ದೇಶಕ.

‘ಎಲ್ಲ ಸಿನಿಮಾಗಳೂ ಎಲ್ಲರಿಗಾಗಿಯೂ ಅಲ್ಲ, ಪ್ರೇಕ್ಷಕರು ಎಲ್ಲವನ್ನೂ ನಾವೆಣಿಸಿದಂತೆಯೇ ನೋಡುವುದಿಲ್ಲ’– ಸತ್ಯಜಿತ್ ರೇ, ನಿರ್ದೇಶಕ.

ಇವೆರಡೂ ಹೇಳಿಕೆಗಳನ್ನಿರಿಸಿಕೊಂಡು ಭಾರತೀಯ ಸಿನಿಮಾವನ್ನು ನೋಡಿದಾಗ ಅದರಲ್ಲಿಯ ವೈವಿಧ್ಯ, ವೈರುಧ್ಯ ಎರಡೂ ಎದ್ದು ಕಾಣುತ್ತವೆ.

‘Frankly, my dear, I don’t give a damn’ (ಗಾನ್ ವಿತ್ ದ ವಿಂಡ್), ನಿಂದ ಆರಂಭಿಸಿ, ದೀವಾರ್‌ನ ‘ಮೇರೆ ಪಾಸ್ ಮಾ ಹೈ’ ಹಾಗೂ ಬಾಜಿಗರ್‌ನ ‘ಹಾರ್ ಕೆ ಜೀತನೆವಾಲೋಂಕೊ ಬಾಜಿಗರ್ ಕೆಹತೆ ಹೈ’ ಸಂಭಾಷಣೆಗಳೊಂದಿಗೆ ಜೀವನ ವಿಧಾನವನ್ನೇ ನಿರ್ದೇಶಿಸಿವೆ ಸಿನಿಮಾಗಳು. ನಮ್ಮ ಸುತ್ತಲಿನ ಆಗುಹೋಗುಗಳಿಗೆ ಪ್ರಶ್ನಿಸುವ, ಪರಿಹಾರ ನೀಡುವ, ಆಲೋಚನೆಗಳಿಗೆ ಹೊಸ ಹೊಳಹನ್ನು ನೀಡುವ, ಒಪ್ಪುವ, ಒಪ್ಪಿಸಿಕೊಳ್ಳುವ, ಎಲ್ಲ ಧ್ವನಿಗಳನ್ನೂ ಈ ಮಾಧ್ಯಮ ಕಾಲಕ್ಕೆ ತಕ್ಕಂತೆ ಪ್ರಬಲಗೊಳಿಸುತ್ತಲೇ ಹೋಗಿದೆ. ‘ತ್ರೀ ಈಡಿಯಟ್’ನ ಆಲ್ ಈಜ್ ವೆಲ್‌ನಿಂದ ‘ದಿಲ್‌ವಾಲೆ ದುಲ್ಹನಿಯಾ ಲೇ ಜಾಯೆಂಗೆ’ ಸಿನಿಮಾದ ‘ಬಡೆ ಬಡೆ ದೇಶೋಂಮೆ ಛೋಟೊ ಛೋಟೆ ಬಾತೆಂ ಹೋತೆ ರೆಹತೆ ಹೈ’ ಎನ್ನುವ ಸಮಾಧಾನದ ಸಾಲಿನವರೆಗೂ.

ಇಡೀ ಜಗತ್ತಿನಲ್ಲಿ ಸಿನಿಮಾ ತನ್ನ ದೈನಂದಿನ ಬದುಕಿನ ದೃಶ್ಯಗಳನ್ನೇ, ಕತೆಗಳನ್ನೇ ಹೆಕ್ಕಿ, ನಮ್ಮ ಬದುಕನ್ನೂ, ಬಿಂಬವನ್ನೂ ವ್ಯಕ್ತಪಡಿಸುವ ಕೆಲಸಗಳನ್ನೇ ಮಾಡುತ್ತ ಬಂದಿವೆ. ಕೆಲವೊಂದು ಆಯಾ ಕಾಲಕ್ಕಿಂತಲೂ ಬಲು ಮುಂದಿನ ಹೆಜ್ಜೆಯಾಗಿ ಅಭಿವ್ಯಕ್ತಿಯಾಗಿದ್ದರೆ, ಇನ್ನೂ ಕೆಲವು ಕಾಲನ ಹಿಂಚಲನೆಯನ್ನು ತೋರಿಸುತ್ತವೆ. ಹಾಗೆ ತೋರಿಸುವಾಗಲೂ ಸಣ್ಣದೊಂದು ಎಚ್ಚರವನ್ನಿರಿಸಿಕೊಂಡಿರುತ್ತವೆ. ಸುಧಾರಣೆಯೇ ಬದಲಾವಣೆಯ ಧ್ವನಿಯಾಗಲಿ ಎಂಬಂತೆ.

ಇಂಥ ಹಲವು ಚಿತ್ರಗಳನ್ನೂ, ಧ್ವನಿಯನ್ನೂ, ಸಂಗೀತವನ್ನೂ, ದೃಶ್ಯವನ್ನೂ, ಮಾತುಗಳನ್ನೂ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವವು ಚಿತ್ರಪ್ರೇಮಿಗಳಿಗಾಗಿ ತಂದುಣಿಸುತ್ತ ಹದಿನಾರು ವರ್ಷಗಳೇ ಕಳೆದಿವೆ. ಷೋಡಷಿಯಾಗಿದ್ದ ಉತ್ಸವ ಇದೀಗ ಹದಿನೇಳರ ಹರೆಯಕ್ಕೆ ಕಾಲಿಟ್ಟಿದೆ. ಏಷ್ಯನ್ ಸಿನಿಮಾ, ಚಿತ್ರ ಭಾರತಿ ಮತ್ತು ಕನ್ನಡ ವಿಭಾಗದ ಸಿನಿಮಾಗಳಲ್ಲಿ ಚಲನಚಿತ್ರಗಳು ಪ್ರದರ್ಶನ ಕಾಣುತ್ತಿವೆ.



‘ಅ ಪ್ರಗ್ನೆಂಟ್ ವಿಡೊ’ ಉನ್ನಿ ಕೆ. ಆರ್ ನಿರ್ದೇಶನದ ಮಲಯಾಳದ ಚಿತ್ರದಲ್ಲಿ, ದಲಿತ ವರ್ಗಕ್ಕೆ ಸೇರಿದ ಸರ್ಕಾರಿ ನೌಕರ ಅನುಮಾನಾಸ್ಪದವಾಗಿ ಸಾವನ್ನಪ್ಪುತ್ತಾನೆ. ದಿನತುಂಬಿದ ಗರ್ಭಿಣಿ ಅನುಕಂಪದ ಆಧಾರದ ಮೇಲೆ ಕೆಲಸ ಕೇಳಲು ಅಲೆಯುವುದೇ ಚಿತ್ರಕತೆ. ಇಲ್ಲಿ ಸಮಾನತೆ, ಸರ್ವೋದಯ ಎಂಬ ಪದಗಳೆಲ್ಲ ಅದ್ಹೇಗೆ ಸವಕಲಾಗುತ್ತಿವೆ, ಮತ್ತು ಕೆಲವೆಡೆ ನಿಜಕ್ಕೂ ನೆರಳಾಗಿವೆ ಎಂಬ ಎರಡನ್ನೂ ಸಶಕ್ತವಾಗಿ ತೋರಿಸುತ್ತ ಹೋಗುತ್ತದೆ. ಶಿಕ್ಷಣವೇ ಎಲ್ಲದಕ್ಕೂ ಆತ್ಮವಿಶ್ವಾಸ ತುಂಬುತ್ತದೆ ಎಂಬ ಸಂದೇಶವನ್ನು ಆ ಹೆಣ್ಣುಮಗುವಿನ ಗರ್ಭಸ್ಥ ಶಿಶುವಿನೊಂದಿಗೆ ನೋಡುಗರೆಲ್ಲರಿಗೂ ದಾಟಿಸಿಬಿಡುತ್ತದೆ ಈ ಚಿತ್ರ. ಈ ಸಲದ ಚಲನಚಿತ್ರೋತ್ಸವದ ಹೆಣ್ಣೆಂದರೆ ಅಷ್ಟೇ ಸಾಕೆ ಎಂಬ ಧ್ಯೇಯ ವಾಕ್ಯವನ್ನು ಧ್ವನಿಸುವಂತಿದೆ ಈ ಚಿತ್ರ.

ರೋಹನ್ ಪರಶುರಾಮ್ ಕನವಾಡೆ ನಿರ್ದೇಶನದ ಮರಾಠಿಯ ‘ಸಾಬರ್‌ಬಾಂಡಾ’ ಪಾಪಾಸುಕಳ್ಳಿಯ ಫಲ ಎಂಬರ್ಥದ ಈ ಚಿತ್ರದಲ್ಲಿ ಸಲಿಂಗ ಕಾಮದ ನವಿರಾದ ಕಥನವಿದೆ. ಇದನ್ನು ಸಲಿಂಗ ಕಾಮವೆನ್ನಬೇಕೆ? ಪ್ರೇಮವೆನ್ನಬೇಕೆ? ಪ್ರೀತಿ ಎನ್ನಬೇಕೆ? ಅಥವಾ ಕೇವಲ ಸಾಂಗತ್ಯವೆನ್ನಬೇಕೆ? ಸಾಂಗತ್ಯದಲ್ಲಿ ಮಾತ್ರ ಮೈಮನಸುಗಳೆರಡೂ ಅರಳುತ್ತವೆ ಎಂಬುದನ್ನು ಹೇಳುತ್ತಲೇ, ಪಾಲಕರು ಮಕ್ಕಳ ಇಂಥ ಬಾಂಧವ್ಯ ಮತ್ತು ಲೈಂಗಿಕತೆ (sexuality) ಹೇಗೆ ಸ್ವೀಕರಿಸಬಹುದು ಎಂಬುದನ್ನು ಹೇಳುತ್ತದೆ. ಯಾವುದೇ ಶಬ್ದಾಡಂಬರವಿಲ್ಲದ, ಸಂಗೀತದ ಅಬ್ಬರವಿಲ್ಲದ, ಸರಳ ನಿರೂಪಣೆಯ ಚಿತ್ರ ಇದು.


ಕಾರ್ಬಿ ಭಾಷೆಯ ‘ಕಾಂಗ್ರೊ ಅಲೋಟಿ’ ಚಿತ್ರವೂ ತೀವ್ರವಾದ ಮತ್ತು ಸೌಮ್ಯವಾದಗಳ ನಡುವಿನ ಜಿಜ್ಞಾಸೆಯನ್ನು ನಮ್ಮೊಳಗೆ ತಳ್ಳುತ್ತದೆ. ಕಂಜನ್ ಕಿಶೋರನಾಥ ಅವರು ಚಿತ್ರದಲ್ಲಿ ಅರಳುವ ಒಂದು ಮೌನ ನಲುಮೆಯ ನೋವನ್ನೂ ನಮ್ಮೊಳಗಿಳಿಸುತ್ತಾರೆ.

ಜನಪದ ಕಲೆಯನ್ನು ಚುನಾವಣೆಯ ಪ್ರಚಾರಕ್ಕೆ ಬಳಸಿಕೊಳ್ಳುತ್ತ, ಪಾರಂಪರಿಕವಾಗಿ ಹೆಣ್ಣುಮಕ್ಕಳು ಹಾಡದ ಆ ಹಾಡುಗಳನ್ನು ಹೆಣ್ಣುಮಕ್ಕಳೇ ಪ್ರಸ್ತುತಪಡಿಸುವ ಸಶಕ್ತ ಮಹಿಳಾ ಪಡೆಯ ಚಿತ್ರ ‘ಗಣರಾಗ್’. ಸ್ತ್ರೀಶಕ್ತಿ ಇಂಥ ಬಂಡಾಯದಲ್ಲಿ ಮಾತ್ರವಲ್ಲ, ರಾಜಕಾರಣದಲ್ಲಿ ಪಾಲ್ಗೊಳ್ಳುವಿಕೆಯನ್ನೂ ಹೇಳುತ್ತಲೇ ಕ್ಷುಲ್ಲಕ ರಾಜಕಾರಣದ ಎಲ್ಲ ಮಜಲುಗಳನ್ನೂ ದೀಪ್ ಭೂಯಾನ್ ಅಸ್ಸಾಮೀ ಚಿತ್ರದಲ್ಲಿ ತೆರೆದಿಡುತ್ತಾರೆ.

ನಗರೀಕರಣ, ಗುಳೆ ಸಮಸ್ಯೆಯೊಂದಿಗೆ ಊರುಗಳು ಖಾಲಿಯಾಗುತ್ತಿರುವ ಮರಾಠಿಯ ಸರಳ ಚಿತ್ರ ‘ಗಮನ್’.




ಮರಾಠಿ, ಮಲಯಾಳ ಚಿತ್ರಗಳೆಲ್ಲವೂ ಸಿನಿಮಾ ಮಾಧ್ಯಮ ಮಾಡಬೇಕಾದ ಕೆಲಸವನ್ನು ಸಶಕ್ತವಾಗಿ ನಿಭಾಯಿಸುತ್ತವೆ. ಒಂದು ಪ್ರಶ್ನೆಯನ್ನಂತೂ ಹುಟ್ಟುಹಾಕುತ್ತವೆ. ಪರಿಸ್ಥಿತಿಯ ಸ್ಪಷ್ಟ ಚಿತ್ರಣ ನೀಡುವುದರೊಂದಿಗೆ ರಾಜಿಯಾಗಬೇಕೆ? ಪ್ರಶ್ನಿಸಬೇಕೆ? ಬಂಡಾಯವೇಳಬೇಕೆ? ಎಂಬಂಥ ಕಡೆಗೋಲನ್ನು ನೀಡುತ್ತವೆ. ಮರಾಠಿ ಮತ್ತು ಮಲಯಾಳ ಭಾಷೆಯ ಚಿತ್ರಗಳು ಸಮಕಾಲೀನ ಸಮಾಜದ ವೈವಿಧ್ಯಮಯ ಸೂಕ್ಷ್ಮ ಚಹರೆಗಳನ್ನು ಚಿತ್ರರೂಪಕ್ಕೆ ಇಳಿಸಿವೆ. ಚಿತ್ರ ಭಾರತಿ ವಿಭಾಗದಲ್ಲಿ ಸ್ಪರ್ಧೆಗೆ ಬಂದ ಬಹುತೇಕ ಚಿತ್ರಗಳ ವಿಷಯ ಕಾಡು, ಕಾಡಿನ ಜೀವನ, ಕಾಡುಗಳಿಂದ ಜನರನ್ನು ಸ್ಥಳಾಂತರಿಸುವುದು, ಬಡುಕಟ್ಟು ಜನಾಂಗದ ದೈವ, ಭೂತಾರಾಧನೆ, ದೈವ ಯಾವುದು, ಭೂತ ಯಾವುದು ಇಂಥವುಗಳ ಜೊತೆಗೆ ಅಲ್ಲಿಯ ಜಾತಿ ತರತಮ, ಪಾಳೇಗಾರಿಕೆ ಮನೋಭಾವವನ್ನು ವಾಚ್ಯವಾಗಿಸದಂತೆ ತೋರುತ್ತ ಹೋಗುತ್ತಾರೆ.



ಚಿತ್ರದ ಮೊದಲೇ ಆಗಿರುವ ಅಧ್ಯಯನ ಆ ಬಿಗಿಯಾದ ನಿರೂಪಣೆಯಲ್ಲಿ ಎದ್ದು ಕಾಣುತ್ತದೆ. ಆದರೆ ಕನ್ನಡದ ಸಿನಿಮಾದಲ್ಲಿ ನಿರೂಪಕರ ಧ್ವನಿಯೇ ಹಲವೆಡೆ ವಿಜ್ರಂಭಿಸುತ್ತದೆ. (ಈ ಮಾತು, ಈ ವಿಭಾಗದ ಪ್ರವೇಶಕ್ಕೆ ಬಂದ ಸಿನಿಮಾಗಳಿಗೆ ಮಾತ್ರ ಅನ್ವಯವಾಗುತ್ತದೆ) ಜಾತಿ ಪದ್ಧತಿ ಎಂದರೆ ಅಲೆಮಾರಿಗಳಿಗೆ ಮಾತ್ರ ಸಂಬಂಧಿಸಿದ್ದು ಎಂಬಂತೆ. ಔದಾರ್ಯ ತೋರುವ ನೆವದಲ್ಲಿ ಪುರುಷ ಪ್ರಧಾನ ಸಮಾಜದ ತಿಳಿವಳಿಕೆಯನ್ನೇ ಮತ್ತಷ್ಟು ಸಶಕ್ತವಾಗಿ ತೋರುವುದು, ಹೆಣ್ಣುಮಗಳೊಬ್ಬಳು ತನ್ನ ಆಯ್ಕೆಯ ಬದುಕನ್ನು ಹೇಳುವುದೂ ಸಹಜವಾದುದು ಎಂಬುದನ್ನೇ ಸಮಾಜದ ಧಾರಾಳಿತನ ಎಂಬಂತೆ ತೋರಿಸಲಾಗಿದೆ.

ಸ್ವಾತಂತ್ರ್ಯಪೂರ್ವದ ಚಿತ್ರಗಳನ್ನು ಮಾಡುವಾಗ ಆ ಕಾಲದ ರೀತಿ ರಿವಾಜು, ಪದ್ಧತಿಗಳನ್ನು ತಿಳಿಯದೆಯೇ ಚಿತ್ರ ಮಾಡುವುದನ್ನು ಕಂಡಾಗ ಸೋಜಿಗವೆನಿಸುತ್ತದೆ. ಮಕ್ಕಳ ಚಿತ್ರಗಳಂತೂ ಮಕ್ಕಳಿಗಾಗಿಯೇ ಅಥವಾ ಮಕ್ಕಳು ದೊಡ್ಡವರಿಗೆ ಉಪದೇಶ ಕೊಡುವಂಥವೋ ಎಂಬ ಗೊಂದಲವನ್ನು ಉಳಿಸುವಂತೆ ಸಮಾಜದ ಎಲ್ಲ ಸಮಸ್ಯೆಗಳನ್ನೂ ತೋರಿಸಬೇಕು, ಅವುಗಳಿಗೆ ಪರಿಹಾರ ದೊರಕಿಸುವ ಹಟ ತೊಟ್ಟಂತೆ, ಸೂತ್ರವಿಲ್ಲದ ಪಟಗಳಂತೆ ದೃಶ್ಯಗಳು ಹಾರಾಡುತ್ತವೆ. ಪ್ರೇಕ್ಷಕರೇ ಹೊಂದಿಸಿ, ನೋಡಿ, ಅರ್ಥ ಮಾಡಿಕೊಳ್ಳಬೇಕು.



ಸಾಬರ್ ಬಾಂಡಾ ಸಿನಿಮಾದ ದೃಶ್ಯಗಳು

ಕನ್ನಡದ ಒಂದು ಸಿನಿಮಾ ಹಲವಾರು ಉತ್ಸವಗಳಲ್ಲಿ ಪಾಲ್ಗೊಂಡ ಹಿರಿಮೆಯನ್ನು ಟೈಟಲ್ ಕಾರ್ಡಿನಲ್ಲಿ ಹೇಳಿಕೊಂಡಿದೆ. ಉತ್ಸವದಲ್ಲಿ ಬರುವ ಇತರ ಸಿನಿಮಾಗಳನ್ನು ನೋಡಿದ್ದರೆ ಅವರ ಸಂಕಲನ ಎಲ್ಲಿ ತಪ್ಪಿದೆ ಎಂಬುದನ್ನು ಆತ್ಮಾವಲೋಕನ ಮಾಡಿಕೊಳ್ಳಬಹುದಿತ್ತು. ಹಿರಿಮೆ, ಗರಿಮೆ ಎಂಬುದು ಸಂಖ್ಯಾತ್ಮಕವಲ್ಲ, ಗುಣಾತ್ಮಕವಾಗಬೇಕು.

